A.—Sri Kadidal MANJAPPA (Minister for Revenue and Public Works).—

(*a*) and (*b*) Reference is invited to the replies given to Question No. 642 in the last Budget Session of the Assembly.

An alternative proposal to construct a High Level Causeway at a cost of Rs. 21,000 is being examined.

Estimates Committee—Election of Member.

Mr. SPEAKER.—As only one notice of candidature has been received to fill up the vacancy for one seat in the Estimates Committee, I declare Sri G. S. Bomme Gowda duly elected to the Committee.

DISCUSSION ON THE STATES REORGANISATION COMMISSION REPORT.

Mr. SPEAKER.—I appeal to the members to be very brief. I request Hon'ble Members to strictly confine themselves to the time-limit. I will not extend the time-limit beyond 15 minutes. Yesterday I was asking Hon'ble Members to take the opportunity to speak. Since there are a number of Members who wish to speak today, I request speakers to observe the time limit.

Sri J. MOHAMED IMAM (Jagalur).—May I know the time limit for me ?

Sri M. V. RAMA RAO (Tumkur).—If in the general debate, a member has already taken part, will another chance be given to him ?

Mr. SPEAKER.—On the amendment moved by Government yesterday, he wanted to speak.

Sri M. V. RAMA RAO.—Does the Chair propose to give him precedence over Members who wish to speak on the consideration of the general motion ?

Sri J. MOHAMED IMAM.—In deference, I may b given a chance to speak at the end if there is time. I also wish to state that no member on this side has taken part in the debate.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ನಮ್ಮ ಅನೇಕ ಪ್ರಶ್ನೆಗಳಿಗೆ ಇನ್ನೂ ಉತ್ತರಗಳು ಬಂದಿಲ್ಲ. ಸಭೆ ಮುಗಿದ ಮೇಲೆ ಬಂದ ಉತ್ತರಗಳನ್ನು ಸಂಬಂಧ ಪಟ್ಟ ಸದಸ್ಯರಿಗೆ ಮಾತ್ರ ಟೈಪ್ ಮಾಡಿ ಕಳುಹಿಸುತ್ತಾರೆ. ಇದಕ್ಕೆ ಬದಲು ಮುದ್ರಣ ಮಾಡಿಸಿ ಸದಸ್ಯರಿಗೆ ಹಂಚುವ ಏರ್ಪಾಡು ಮಾಡಿದರೆ ಉತ್ತಮ.

ಅಧ್ಯಕ್ಷರು.—ಮೊದಲು ಬಂದಿರುವ ಉತ್ತರಗಳನ್ನು ಮುದ್ರಣ ಮಾಡಿಸಿ ಹಂಚಲಾಗಿದೆ. ಇತ್ತೀಚೆಗೆ ಸರ್ಕಾರದಿಂದ ಬಂದಿರುವ ಉತ್ತರಗಳನ್ನು ಏನು ಮಾಡಬೇಕೆಂಬ ದನ್ನು ಇನ್ನೂ ಯೋಚನೆಮಾಡಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಸ್ವಾಮಿ, ಈಗ ನಾವು ಚರ್ಚೆಮಾಡುತ್ತಿರುವುದು ವಿಶೇಷ ಪ್ರಾಮುಖ್ಯವಾದ ವಿಷಯ; ಮೈಸೂರು ದೇಶದ ಅಳಿವು ಉಳಿವಿನ ಪ್ರಶ್ನೆ. ಹಾಗೂ ಈಗಿರತಕ್ಕ ಶಾಸನ ಸಭೆಯ ಅಳಿವು ಉಳಿವಿನ ಪ್ರಶ್ನೆ ಎನ್ನುವುದನ್ನು ನಾವು ಮನಗಾಣಬೇಕು. ಇಷ್ಟು ಪ್ರಾಮುಖ್ಯವಾದ ಪ್ರಶ್ನೆಯ ವಿಷಯದಲ್ಲೂ ಕೂಡ ನಾವು ನಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸುವುದಕ್ಕೆ ಅಥವಾ ನಮ್ಮ ಅಭಿಮತವನ್ನು ಸ್ವತಂತ್ರವಾಗಿ ಹೇಳುವುದಕ್ಕೆ ಅಡ್ಡಿಯಾಗಿದೆ ಎಂಬುದನ್ನು ಶ್ರೀಮಾನ್ ವೀರಣ್ಣಗೌಡರು ತಿಳಿಸಿದ್ದಾರೆ. ಇಂಥ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ನಮ್ಮ ಅಭಿಪ್ರಾಯವನ್ನು ತಿಳಿಸಬೇಕಾಗಿರುವುದು ನಮ್ಮ ದೌರ್ಭಾಗ್ಯವೆಂದು ಮಾತ್ರ ಹೇಳುತ್ತೇನೆ. ಈ ಅತ್ಯಂತ ಪ್ರಾಮುಖ್ಯ ವಿಷಯದಲ್ಲಿ ದೇಶದ ಸಮಸ್ತ ಪ್ರಜೆಗಳ ಅಭಿಪ್ರಾಯವನ್ನೂ ತೆಗೆದುಕೊಳ್ಳುವುದು ಬಹಳ ಅಗತ್ಯ. ನಮ್ಮ ಅಭಿಪ್ರಾಯ ಮಾತ್ರವಲ್ಲ. ಇದು ಇಷ್ಟು ಪ್ರಾಮುಖ್ಯವಾದ ವಿಷಯವಾದರೂ ಕೂಡ ನಮಗೆ ಸ್ವಾತಂತ್ರ್ಯವಿಲ್ಲದೇ ಹೋಯಿತು. ಪಂಡಿತ ಜವಹರಲಾಲ್ ನೆಹರೂರವರು ಈ ವರದಿ ಪ್ರಕಟವಾಗುವ ಮುನ್ನ ಮೈಸೂರು ಸಂಸ್ಥಾನಕ್ಕೆ ಭೇಟಿಕೊಟ್ಟಾಗ 'ಇದರ ವಿಷಯದಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸಲು ಶಾಸನ ಸಭೆಗಳಿಗೆ ಸಂಪೂರ್ಣ ಅವಕಾಶ ಸಿಕ್ಕುತ್ತದೆ; ಅಷ್ಟೇ ಅಲ್ಲದೆ ಜನರಿಗೂ ಅವರವರ ಅಭಿಪ್ರಾಯವನ್ನು ತಿಳಿಸುವುದಕ್ಕೆ ಅವಕಾಶವಿರುತ್ತದೆ' ಎಂದು ಅಪ್ಪಣೆ ಕೊಡಿಸಿದರು. ಇಷ್ಟು ಸ್ಪಷ್ಟವಾಗಿ ಇಲ್ಲಿ ಮಾತ್ರವಲ್ಲ ಹೇಳಿದ್ದು; ಉತ್ತರ ಪ್ರದೇಶ ಮತ್ತು ಇನ್ನೂ ಕೆಲವು ಕಡೆ ಹೇಳಿದ್ದಾರೆ. ಪ್ರಜೆಗಳಿಗೆ ಅವರ ಅಭಿಪ್ರಾಯವನ್ನು ತಿಳಿಸಲು ಸಾಕಷ್ಟು ಅವಕಾಶ ಕೊಡುತ್ತೇವೆಂದು ಹಲವು ಕಡೆ ಹೇಳಿದ್ದಾರೆ. ಹಾಗಿದ್ದರೂ ಕೂಡ ಕಾಂಗ್ರೆಸ್ ಹೈಕಮ್ಯಾಂಡ್ ನಮ್ಮ ಮುಂದಿಟ್ಟಿರತಕ್ಕ 'ಮ್ಯಾಂಡೇಟ್'ನಿಂದ ನಮ್ಮ ಅಭಿಪ್ರಾಯ ವ್ಯಕ್ತಪಡಿಸುವುದಕ್ಕೆ ಬಹಳ ತೊಂದರೆಯಾಗಿದೆ. ಈ ವಿಷಯವಾಗಿ ನೆಹರೂರವರ ನಾಯಕತ್ವದ ವಿಷಯದಲ್ಲಿ ಹೊರ ದೇಶಗಳ ಪತ್ರಿಕೆಗಳಲ್ಲಿ ಬಹಳ ಟೀಕೆ ಟಿಪ್ಪಣಿಗಳು ಬರುತ್ತಿವೆ. ಈಗ ಅವರ ಸತ್ವ ಪರೀಕ್ಷೆಯ ಕಾಲ ಎಂದು ಟೀಕೆ ಬಂದಿರುವುದಕ್ಕೆ ನಾವು ಗಮನಕೊಟ್ಟು ಅವರ ಪ್ರಾಮುಖ್ಯತೆಯನ್ನು ಕಡಮೆಮಾಡುವುದಕ್ಕೆ ಪ್ರಯತ್ನ ಮಾಡಬಾರದೆಂದು ಕೆಲವು ಸ್ನೇಹಿತರು ಹೇಳಿದ್ದಾರೆ. ಅಷ್ಟು ಸ್ಪಷ್ಟವಾಗಿ 'ಪ್ರಜಾಭಿಪ್ರಾಯಕ್ಕೆ ಮನ್ನಣೆ ಕೊಡುತ್ತೇವೆ, ಪ್ರಜಾಪ್ರಭುತ್ವವನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತೇವೆ' ಎಂದು ಸಾರುತ್ತ ಬಂದ ಕಾಂಗ್ರೆಸ್ ಸಂಸ್ಥೆಗೆ, ಪ್ರಾಮುಖ್ಯ ಸ್ಥಾನವನ್ನು ಪಡೆದಿರುವ ನೆಹರೂರವರ ಮಾತಿಗೆ, ಸ್ವಲ್ಪವೂ ಬೆಲೆಯಿಲ್ಲದೆ ಹೋಗುತ್ತದೆಂಬುದಕ್ಕೆ, ಪ್ರಾಮುಖ್ಯತೆ ಕೊಡಬೇಕೆ ಅಥವಾ ಪರದೇಶಗಳ ಪತ್ರಿಕೆಗಳಲ್ಲಿ ಬಂದಿರುವ ಟೀಕೆ ಟಿಪ್ಪಣಿಗಳಿಗೆ ಬೆಲೆ ಕೊಡುವುದು ಸೂಕ್ತವೆ ಎನ್ನುವುದನ್ನು ನೋಡಬೇಕು. ಇವೊತ್ತು ಪರದೇಶಗಳ ಪತ್ರಿಕೆಗಳಲ್ಲಿ ಬಂದಿರುವ ಟೀಕೆಗೆ ಹೆದರಿ

ನಮ್ಮ ಸ್ವತಂತ್ರಾಭಿಪ್ರಾಯವನ್ನು ಕಿತ್ತುಕೊಳ್ಳುವುದು ನ್ಯಾಯವೆ ಎಂಬುದನ್ನು ಅವರು ಗಮನದಲ್ಲಿಟ್ಟುಕೊಳ್ಳಬೇಕೆಂದು ನಾನು ಪ್ರಾರ್ಥಿಸುತ್ತೇನೆ. ಈ ದಿವಸ ಅವರಿಗಿರುವ ಸ್ಥಾನದಲ್ಲಿ, ಅವರು ಜನಾನುರಾಗಿ ಹೌದೆ ಅಲ್ಲವೆ ಎನ್ನುವುದರ ಪರೀಕ್ಷೆಕಾಲ ಬಂದಿದೆ. ಪರದೇಶಗಳ ಪತ್ರಿಕೆಗಳಲ್ಲಿ ಬಂದಿರುವ ಟೀಕೆಗಳನ್ನು ನೋಡಿದರೆ ಗೊತ್ತಾಗುತ್ತದೆ.

ಕೆಲವು ಸದಸ್ಯರು.—ಯಾವ ಪತ್ರಿಕೆಗಳಲ್ಲಿ ಬಂದಿದೆ?

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಅನೇಕ ಪತ್ರಿಕೆಗಳಲ್ಲಿ ಬಂದಿದೆ, ಅವರೇ ನೋಡಬಹುದು.

(*Interruption*).

ಈ ಸಭೆಯ ಕೆಲವು ಮಾನ್ಯ ಸದಸ್ಯರು ದೆಹಲಿಗೆ ಹೋಗಿ ನಾಲ್ಕು ಜನರ ಸಮಿತಿಯ ಸದಸ್ಯರುಗಳನ್ನು ಕಂಡಾಗ ಅವರು 'ನೀವು ಹೇಳುವುದು ಬರಿಯ sentimental' ಎಂದು ಹೇಳಿದರು. ನಾನೂ ಆ ನಿಯೋಗದ ಸದಸ್ಯನಾಗಿದ್ದೆ. ಅಷ್ಟು ದಿಟ್ಟತನದಿಂದ ಹೇಳತಕ್ಕ ಗೋವಿಂದವಲ್ಲಭ ಪಂತರು ಅವರ ಉತ್ತರ ಪ್ರದೇಶದ ವಿಷಯವನ್ನು ಪ್ರಸ್ತಾಪಮಾಡಿದಾಗ 'No power on earth can change the boundaries of Uttar Pradesh' ಎಂದು ಹೇಳಿದರೆಂದು ಪತ್ರಿಕೆಗಳಲ್ಲಿ ಬಂದಿರುವುದನ್ನು ನಾವು ಓದಿದ್ದೇವೆ. ಹಾಗೆ ಅವರು ಹೇಳುವಾಗ ಅವರಿಗೆ ಹೆಚ್ಚು ಸ್ವಾಭಿಮಾನವೋ ಅಥವಾ ಮೈಸೂರು ದೇಶದಿಂದ ಹೋಗಿದ್ದ ನಿಯೋಗದವರಿಗೆ ಹೆಚ್ಚು ಸ್ವಾಭಿಮಾನವೋ ಎಂದು ಕೇಳುತ್ತೇನೆ.

Mr. SPEAKER.—Now we shall come to the Report.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ವರದಿ ಮೈಸೂರು ದೇಶಕ್ಕೆ ಸಂಬಂಧಪಟ್ಟಹಾಗೆ ಒಂದು ಮುಖವಾಗಿದೆ ಎನ್ನುವುದನ್ನು ನಾವು ಅರಿಯಬೇಕು. ಹೀಗೆ ಒಮ್ಮುಖ ಬರುವುದಕ್ಕೆ ಯಾರು ಕಾರಣರು ಎಂಬುದನ್ನು ಪ್ರಸ್ತಾಪಮಾಡುವುದು ಬಹಳ ಅಗತ್ಯ. ಸರ್ಕಾರದ ಪಕ್ಷವಾಗಿರುವ ಕಾಂಗ್ರೆಸ್ ಪಕ್ಷದವರು ತಾವೇ ಒಂದು 'ಬ್ಯಾನ್' ಹಾಕಿಕೊಂಡರು. ಈ ವಿಷಯದಲ್ಲಿ ನಾವು ಕಮಿಷನ್ ಮುಂದೆ ಹೋಗಿ ನಮ್ಮ ಅಭಿಪ್ರಾಯವನ್ನು ಹೇಳಬಾರದೆಂಬ ನಿರ್ಬಂಧ ಹಾಕಿಕೊಂಡರು.

Sri M. LINGANNA (Nanjangud).—You were the author of it?

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನಾನೋ author ಅಥವಾ ಬೇರೆಯವರೊ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ.

ಈ ರೀತಿ ಒಂದು 'ಬ್ಯಾನ್' ಹಾಕಿಕೊಂಡೆವು. ಇದಕ್ಕೆ ಕಾರಣ, Facts Finding Committee ಮಾಡುತ್ತೇವೆ, ಆ ಸಮಿತಿ ಅಂಕಿಅಂಶಗಳನ್ನೊದಗಿಸಿದ ಮೇಲೆ ಯೋಚನೆ ಮಾಡುವುದು ಸೂಕ್ತ, ಅದಕ್ಕೆ ಮುಂಚೆ ಕಮಿಷನ್ನಿನ ಮುಂದೆ ಅಭಿಪ್ರಾಯವನ್ನು ತಿಳಿಸುವುದು ಸೂಕ್ತವಲ್ಲ ಎಂದು ಹೇಳಿದರು. ಇದಕ್ಕೆ ಮುಖ್ಯವಾಗಿ ಸಭಾ ನಾಯಕರೂ ಪಕ್ಷದ ನಾಯಕರೂ ಆಗಿರುವ ಶ್ರೀಮಾನ್ ಹನುಮಂತಯ್ಯನವರೇ ಕಾರಣ. ಶ್ರೀಮಾನ್ ಬೊಮ್ಮೇಗೌಡರು ಹೇಳಿದಹಾಗೆ ಅವರು ಅನೇಕ ಸದಸ್ಯರಿಗೆ ಒಂದು ಭರವಸೆ ಕೊಟ್ಟರು. ಆ ಭರವಸೆ ಯಾವ ರೂಪದಲ್ಲಿತ್ತೆಂದರೆ, 'ಅಂಕಿಅಂಶಗಳನ್ನು ಒದಗಿಸುವುದರಿಂದ ಏಕೀಕರಣಕ್ಕೆ ವಿರೋಧವಾದ ಅಭಿಪ್ರಾಯ ಬರುತ್ತದೆ. ಆ ಅಂಕಿಅಂಶಗಳೂ ವಿರೋಧವಾಗಿ ಬರುತ್ತವೆ, ಆ ಸಮಿತಿಯಲ್ಲಿರುವ ಸದಸ್ಯರೂ ಏಕೀಕರಣಕ್ಕೆ ವಿರೋಧವಾಗಿ ಕೆಲಸ ಮಾಡುವ ಸದಸ್ಯರಾಗಿದ್ದಾರೆ; ಈ ಸಮಿತಿಯನ್ನು ನೇಮಕ ಮಾಡಿದುದರಿಂದಲೇ ನನ್ನ ಅಭಿಪ್ರಾಯವನ್ನು ತಿಳಿದುಕೊಳ್ಳಬಹುದು' ಎಂದು ಹೇಳಿದರು. ಇಷ್ಟೇ ಅಲ್ಲ, ಈ ಸಭೆಯಲ್ಲಿರುವ ಅನೇಕ ಸದಸ್ಯರಿಗೆ, ಅದರಲ್ಲಿಯೂ ಪ್ರಾಮುಖ್ಯವಾಗಿ ಏಕೀಕರಣವನ್ನು ವಿರೋಧಿಸುವ ಅನೇಕ ಸದಸ್ಯರಿಗೆ ಪ್ರಮಾಣವಚನವನ್ನು ಕೊಟ್ಟಿದ್ದಾರೆಂದು ನಾನು ಹೇಳುತ್ತೇನೆ. ಇದು ನಿಜವೇ ಅಲ್ಲವೇ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಇಲ್ಲಿರತಕ್ಕ ಸದಸ್ಯರಿಗೆ ಅವಕಾಶವಿದೆ. ಅವರು ಈ ರೀತಿ ಪ್ರಮಾಣವನ್ನು ಕೊಟ್ಟರು.

ಶ್ರೀ ಜೆ. ಮಹಮ್ಮದ್ ಇಮಾಂ.—ಯಾರು?

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ಸಭಾ ನಾಯಕರು, ಮುಖ್ಯ ಮಂತ್ರಿಗಳು.

ಅವರು ಈ ಭರವಸೆಯನ್ನು ಕೊಟ್ಟುದರಿಂದಲೇ ಪ್ರಾಂತ ಪುನರ್ವಿಂಗಡಣಾ ಕಮಿಷನ್ನಿನ ಮುಂದೆ ಹೋಗಿ ಸಾಕ್ಷ್ಯಕೊಡುವುದಕ್ಕೆ, ಅಭಿಪ್ರಾಯ ವ್ಯಕ್ತಪಡಿಸುವುದಕ್ಕೆ ಹಿಂಪೆಗೆದರು. ಈ ರೀತಿ ಭರವಸೆ ಕೊಟ್ಟು, ಪಕ್ಷದಲ್ಲಿ ಪ್ರತಿಬಂಧಕ ಹಾಕಿ, ನಮ್ಮ ಅಭಿಪ್ರಾಯವನ್ನು ತಿಳಿಸದೇಯಿರುವ ಹಾಗೆ ಮಾಡಿ, ಒಂದು ಅಪಘಾತ ಮಾಡಿದ್ದಾರೆ. ಸ್ವಾಮಿ, ನಿನ್ನೆ ತಾನೆ ಮುಖ್ಯ ಮಂತ್ರಿಗಳು ಉತ್ತರ ಹೇಳುತ್ತಾ "ನನಗೆ ಐದು ಮುಖಗಳಿವೆ, ಐದು ರೂಪದಲ್ಲಿ ನನ್ನ ವ್ಯಕ್ತಿತ್ವವಿದೆ" ಎಂದು ಹೇಳಿದರು. "ಈ ಐದು ಕಡೆಗಳಲ್ಲಿಯೂ ಅಭಿಪ್ರಾಯವನ್ನು ರೂಢಿಸಿ ಒಮ್ಮತಾಭಿಪ್ರಾಯಕ್ಕೆ ಬರುವುದಕ್ಕೆ, ಸಮಂಜಸವಾದ ಅಭಿಪ್ರಾಯಕ್ಕೆ ಬರುವುದಕ್ಕೆ ಪ್ರಯತ್ನಮಾಡಿದೆ, ಆ ಪ್ರಯತ್ನ ಸಫಲವಾಗಿ ಈ ದಿವಸ ಈ ನಿರ್ಣಯ ಸಭೆಯ ಮುಂದಿದೆ, ಇದು ನನ್ನ ಸೌಭಾಗ್ಯ" ಎಂದು ಹೇಳಿದರು. ಅವರು ಹೇಳಿದ ಐದು ಕಡೆಗಳಲ್ಲಿ ಅವರ ಸ್ವಂತ ವ್ಯಕ್ತಿತ್ವದಲ್ಲಿ ಹೇಗಿದೆ ಎಂಬುದನ್ನು ನಾನು ತಿಳಿದುಕೊಳ್ಳುವುದು ಕಷ್ಟ. ಇನ್ನು ನಾಲ್ಕು ಕಡೆ ಭಿನ್ನಾಭಿಪ್ರಾಯ ವ್ಯಕ್ತವಾಗಿದೆ ಎಂಬುದು ಸ್ಪಷ್ಟ. 'ನಾನು ಇದನ್ನು ಎಲ್ಲ ಕಡೆಯೂ ಸಂಯೋಜಿಸುವುದಕ್ಕೆ ಅವಕಾಶವಾಯಿತು' ಎಂದು ಹೇಳಿದರು. ಅದು ಹೇಗೋ ಅರ್ಥವಾಗುವುದಿಲ್ಲ. ಅವರ ಮನಸಿನಲ್ಲೇ ಗೊಂದಲವಿತ್ತು, ಎಂಬುದಂತೂ ಸ್ಪಷ್ಟವಾಗಿದೆ. ಅದಕ್ಕೆ ಒಂದೊಂದು ಸಂದರ್ಭದಲ್ಲಿ ಒಂದೊಂದು ರೀತಿ ಹೇಳುತ್ತಾ ಬಂದರು. ಕಾಂಗ್ರೆಸ್ ಪಕ್ಷದಲ್ಲಿ ಒಂದು ರೀತಿ, ಈ ಸಭೆಯಲ್ಲಿ ಒಂದು ರೀತಿ, ಮುಖ್ಯ ಮಂತ್ರಿಯಾಗಿ ಒಂದು ರೀತಿ ಭಾಷಣ ಮಾಡುತ್ತಾ ಅವರ ಮನಸ್ಸಿನಲ್ಲಿದ್ದುದನ್ನ ಬದಲಾಯಿಸುವುದಕ್ಕೆ ಸಮಯವನ್ನು ತೆಗೆದುಕೊಂಡರೇ ಹೊರತು ಸದಸ್ಯರನ್ನು ಒಪ್ಪಿಸುವುದಕ್ಕೆ ಈ ಅವಕಾಶವನ್ನು ಉಪಯೋಗಿಸಿಲ್ಲವೆಂದು ಹೇಳಬಹುದು. ಈ ಅಭಿಪ್ರಾಯವನ್ನು ರೂಢಿಸುವುದಕ್ಕೆ ಅವರು lead ಕೊಡಬೇಕಾದುದು ಅಗತ್ಯವೆಂದು ಹೇಳಿದರು. ಹೀಗೆ ಮಾಡುವಾಗ ನಾಯಕನಾದವನ ಕರ್ತವ್ಯವೇನೆಂದರೆ, ತನ್ನ ಕ್ಷೇತ್ರದಲ್ಲಿರುವ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿದುಕೊಂಡು ಅದನ್ನು ಪ್ರತಿಬಿಂಬಿಸುವುದು ಸಾಮಾನ್ಯವಾಗಿ ಮುಖಂಡನ ಕರ್ತವ್ಯ. ಇವರು ಇದಕ್ಕಿಂತ ದೊಡ್ಡ ಮುಖಂಡತನವನ್ನು ವಹಿಸುವುದಕ್ಕೆ ದಕ್ಷರು ಎನ್ನುವುದು ಅನೇಕರ ಭಾವನೆ. ಇಂಥವರು ದೇಶದ ಅಭಿಪ್ರಾಯ ಹೇಗಾದರೂ ಇರಲಿ, ನನ್ನ ಅಭಿಪ್ರಾಯವನ್ನು ರೂಢಿಸುವುದಕ್ಕೆ ಪ್ರಯತ್ನಮಾಡುತ್ತೇನೆ ಎಂದು ಹೊರಟ ಪ್ರಯತ್ನ ತೀರ ಅಸಮರ್ಪವಾಯಿತು. ಇಷ್ಟೇ ಅಲ್ಲದೆ ಜನರ ಅಭಿಪ್ರಾಯಕ್ಕೆ ಮನ್ನಣೆ ಕೊಡದೆ ಬೇರೆ ಬೇರೆ ಸಂದರ್ಭಗಳಲ್ಲಿ ಯಾವ

(ಶ್ರೀ ಎಚ್. ಹುಚ್ಚಮಾಸ್ತಿಗೌಡ.)

ಯಾವ ರೀತಿ ಮಾತನಾಡಿದರೆ ಸರಿಹೋಗುತ್ತದೆಂದು ನೋಡಿ ಆ ರೀತಿ ಮಾತನಾಡಿ ಅವರನ್ನು ಒಲಿಸಿಕೊಳ್ಳುವುದಕ್ಕೆ ಪ್ರಯತ್ನಮಾಡಿ ತಮ್ಮ ಮುಖಂಡತ್ವವನ್ನು ಹಾಳುಮಾಡಿಕೊಂಡಿದ್ದಾರೆ. ಇದರ ಜೊತೆಗೆ, ಈ ದಿವಸ ಏನಾಗಿದೆಯೆಂದರೆ, ನಮ್ಮ ಕಾಂಗ್ರೆಸ್ ಪಕ್ಷದಲ್ಲಿ ಎರಡು ಗುಂಪುಗಳಿರುವ ಕಾಲದಲ್ಲಿ ಇವರಿಗೆ ಸಹಾಯಕರಾಗಿರುವವರ ಬೆಂಬಲವನ್ನೂ ಇವರು ಕಳೆದುಕೊಂಡಿದ್ದಾರೆ. ಇವರು ಎದುರು ಪಕ್ಷದವರ ವಿಶ್ವಾಸವನ್ನೂ ಪಡೆಯುವುದಕ್ಕೆ ಅಸಮರ್ಥರಾಗಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಅವರಿಗೆ ಇವತ್ತು ಮುಖಂಡತನ ಇಲ್ಲವೆಂದು ಹೇಳುತ್ತೇನೆ.

Sri J. MOHAMED IMAM.—On a point of order, Sir. We are discussing the S.R.C. Report in this House. My friend has been narrating about party matters, what happened in the matter and all that. There has been a ruling in this House before. When I raised a similar question, an objection was raised by my friend Sri T. Mariappa a ruling was given that whatever happened in the party, was a private matter and did not concern this House. The history and his bemoaning are not relevant and this is not a place for such discussion.

Mr. SPEAKER.—I entirely agree with the Hon'ble Member and I request Hon'ble Members to take note of it and confine themselves to the S.R.C. Report.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸ್ವಾಮಿ, ಈ ವಿಷಯವನ್ನು ಶ್ರೀಮಾನ್ ವೀರಣ್ಣಗೌಡರು ಮತ್ತು ಇನ್ನೂ ಅನೇಕರು ಪ್ರಸ್ತಾಪ ಮಾಡಿದ್ದಾರೆ. ಆಡಳಿತ ನಡೆಸತಕ್ಕ ಕಾಂಗ್ರೆಸ್ ಸಂಸ್ಥೆಯಲ್ಲಿ, ಕಾಂಗ್ರೆಸ್ ಪಕ್ಷದಲ್ಲಿ ನಡೆದಿರತಕ್ಕ ವಿಷಯಗಳನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದೂ ಅಗತ್ಯವೆಂದು ಹೇಳಿ ಅವರು ಮಾತನಾಡಿದುದಕ್ಕೆ ತಾವು ಮನ್ನಣೆ ಕೊಟ್ಟಿದ್ದರಿಂದ ನಾನೂ ಕೂಡ. . .

Mr. SPEAKER.—It was only a reference. not a discussion.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನಾನೂ ಕೂಡ ಪ್ರಾಸಂಗಿಕವಾಗಿ ಹೇಳುತ್ತಾ ಬಂದು ಸ್ಥೂಲವಾಗಿ ಕೆಲವು ಅಂಶಗಳನ್ನು ಹೇಳಿದೆನೇ ಹೊರತು ವಿವರಗಳನ್ನು ಹೇಳಲಿಲ್ಲ.

ಸ್ವಾಮಿ, ಶ್ರೀಮಾನ್ ಪಟ್ಟಾಭಿರಾಮನ್ ಅವರು ಭಾಷಣ ಮಾಡುತ್ತಾ ಕೆಲವು ವಿಷಯಗಳನ್ನು ಹೇಳಿದರು. ಅವರು 'ನನ್ನ ರಾಜಕೀಯಾನುಭವದಲ್ಲಿ ಶ್ರೀಮಾನ್ ಚಂಗಲರಾಯರೆಡ್ಡಿಯವರು, ಶ್ರೀಮಾನ್ ಹನುಮಂತಯ್ಯನವರ ಆಡಳಿತವನ್ನು ನೋಡಿದ ಮೇಲಂತೂ ಮೈಸೂರು ಮೈಸೂರಾಗಿಯೇ ಉಳಿಯಬಾರದೆಂದೆನಿಸಿದೆ'ಯೆಂದು ಹೇಳಿದರು. ಇದರ ಒಳಾರ್ಥವನ್ನು ನಾವು ಸ್ವಲ್ಪ ನೋಡುವುದಾದರೆ, ಅವರು ವಿಶಾಲ ಮನೋಭಾವದಿಂದ ಹೇಳಿದ ಮಾತುಗಳೇ ಇವು ಅಥವಾ ಇನ್ನಾವುದಾದರೂ ಮನೋಭಾವದಿಂದ ಹೇಳಿದ ಮಾತುಗಳೇ ಎಂಬುದು ಅರ್ಥವಾಗುತ್ತದೆ. ಇದೇ ಮಾತನ್ನು ಶ್ರೀಮಾನ್ ಹನುಮಂತಯ್ಯನವರೂ ಪ್ರಸ್ತಾಪ ಮಾಡಿದರು. "ಮೈಸೂರು ವಿಶಾಲವಾಗುವುದು ಅಗತ್ಯ; ಅದರಲ್ಲೂ ಈಗಿರತಕ್ಕ ರಾಜಕೀಯ ವಾತಾವರಣ ಬದಲಾಗುವುದು ಅಗತ್ಯ" ಎಂದು ಹೇಳಿದರು. ಇದಕ್ಕೆ ಮುಖ್ಯ ಕಾರಣ, ನಾನು ತಿಳಿದುಕೊಂಡಿರುವ ಮಟ್ಟಿಗೆ, ಈಗ ಅವರಿಗಿದ್ದಂಥ ಪಕ್ಷದ ಬೆಂಬಲದಲ್ಲಿ ಕುಂದಕವುಂಟಾಗಿರುವುದೇ ಎಂದು ನಾನು ಹೇಳಬಲ್ಲೆ. ಈ ಅಪಘಾತವನ್ನು ತಡೆಗಟ್ಟಬೇಕಾದರೆ ಮೈಸೂರು ವಿಶಾಲವಾಗಬೇಕು, ಆಗ್ಗೆ ಹೊರಗಿನವರ ಬೆಂಬಲವಾದರೂ ಸಿಕ್ಕಿ ತಾವು ಈ ಸ್ಥಾನದಲ್ಲಿಯೇ ಇರಬಹುದೋ ಎಂಬ ಭಾವನೆಯಿಂದ ಹೇಳಿದ್ದರೂ ಹೇಳಿರಬಹುದು, ಎಂದು ನಾನು ಊಹೆ ಮಾಡುತ್ತೇನೆ. ಈ ದೃಷ್ಟಿಯಿಂದ ನೋಡುವುದಾದರೆ ಅವರು ವಿಶಾಲ ಮನೋಭಾವನೆಯಿಂದ ಮಾತನಾಡಿದರೇ ಅಥವಾ ಸ್ವಾರ್ಥದಿಂದ ಮಾತನಾಡಿದರೇ ಎಂಬುದನ್ನು ಮಾನ್ಯ ಸದಸ್ಯರು ಯೋಚನೆ ಮಾಡಬಹುದು.

ಇನ್ನು ಪಟ್ಟಾಭಿರಾಮನ್‌ರವರು ಹೇಳಿದ ಒಂದು ವಾಕ್ಯವನ್ನು ಸಭೆಯವರ ಗಮನಕ್ಕೆ ತರಬಯಸುತ್ತೇನೆ. "We must protect people from the people" ಎಂದು ಹೇಳಿದರು. ಗಾಂಧಿ ತತ್ವಗಳಲ್ಲಿ ಭಕ್ತಿಯುಳ್ಳವರೂ, ಗಾಂಧಿ ಅನುಯಾಯಿಗಳೂ ಆದ ಅವರು ಈ ಮಾತು ಹೇಳಿದರಲ್ಲಾ! ಈ ಮಧ್ಯೆ ಅವರು, "ನಾನು ಆಗಾಗ್ಗೆ ತತ್ವಗಳನ್ನು ಬದಲಾವಣೆ ಮಾಡುವ ಮನುಷ್ಯನಲ್ಲ, ಅಂಥ ಮನುಷ್ಯನಾಗಿದ್ದರೆ ಟ್ರೆಜರಿ ಬೆಂಚಿನಲ್ಲಿರುತ್ತಿದ್ದೆ" ಎಂದು ಕೂಡ ಹೇಳುತ್ತಿದ್ದರು. ಗಾಂಧಿ ತತ್ವಾನುರಾಗಿಗಳಾಗಿ, ಗಾಂಧಿ ಅನುಯಾಯಿಗಳಾಗಿ, ಅವರು ಹೇಳತಕ್ಕ ಮಾತೇ ಇದು ಅಥವಾ ಸರ್ವಾಧಿಕಾರಿಗಳು ಹೇಳತಕ್ಕ ಮಾತೇ ? "We will protect the people" ಎನ್ನುವ ಪದಗಳು ಹಿಟ್ಲರ್, ಮುಸೋಲಿನಿಗಳಂಥ ಸರ್ವಾಧಿಕಾರಿಗಳು ಉಪಯೋಗಿಸುತ್ತಿದ್ದಂಥ ಪದಗಳು. ಅಂಥ ಮಾತುಗಳು ಇವರ ಬಾಯಲ್ಲಿ ಬಂತಲ್ಲ ಎಂದು ನನಗೆ ವಿಷಾದವಾಗುತ್ತದೆ. ಕಾಂಗ್ರೆಸ್ ಅಧ್ಯಕ್ಷರಾದ ಢೇಬರ್‌ರವರು ಈ ವಿಷಯವನ್ನು ಸಂತೆಗೆ ತೆಗೆದುಕೊಂಡು ಹೋಗಬೇಡಿ ಎಂದು ಹೇಳಿದರೆಂದು ಹೇಳಿ ಅವರೂ ಅದೇ ವಿಷಯವನ್ನು ಪುಷ್ಟೀಕರಿಸಿ ಮಾತನಾಡಿದರು. ಹೀಗೆ ಪ್ರಜಾಪ್ರಭುತ್ವಕ್ಕಾಗಿ ಸತತವಾಗಿ ಹೋರಾಡಿರುವವರು ಜನಾಭಿಪ್ರಾಯಕ್ಕೆ ಮನ್ನಣೆ ಕೊಡದೆ ಹೇಗೋಹಾಗೆ ಮುಖಂಡತ್ವದ ಮಟ್ಟದಲ್ಲೇ ತೇಲಿಸಿಕೊಂಡು ಹೋಗಿ ಪರಿಹಾರ ಪಡೆಯಬೇಕೆಂಬುದಕ್ಕೆ ಇಷ್ಟು ದಿವಸ ಗಾಂಧಿ ತತ್ವವನ್ನು ಒಪ್ಪಿದವರಿಗೆ ಮನಸ್ಸು ಹೇಗೆ ಒಪ್ಪಿತೋ ನಾನು ಕಾಣೆ.

ಒಬ್ಬ ಸದಸ್ಯರು.—ಅವರು ಲಾಯರೆಂದು ಅವರೇ ಹೇಳಿಕೊಂಡರು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಲಾಯರಾಗಿ ವಾದಿಸುವಾಗ ಅಷ್ಟಾಗಿ ಗಾಂಧಿ ತತ್ವಗಳನ್ನು ಪರಿಪಾಲಿಸಬೇಕಾದ ಅಗತ್ಯವಿಲ್ಲವೆಂದು ಕಾಣುತ್ತದೆ. ಅದೇ ರೀತಿ ಅವರು ನಾಗಯ್ಯರೆಡ್ಡಿಯವರ ಸ್ನೇಹವನ್ನು ಪ್ರಸ್ತಾಪ ಮಾಡಿ ಹೇಳಿದರು. ನಾಗಯ್ಯರೆಡ್ಡಿಯವರಿಗೂ ಪಟ್ಟಾಭಿರಾಮನ್‌ರವರಿಗೂ ಇರತಕ್ಕ ಸ್ನೇಹವೆಷ್ಟೆಂಬುದು ನನಗೆ ಗೊತ್ತು. ಎಣ್ಣೆ-ಸೀಗೇಕಾಯಿ ಇದ್ದಹಾಗಿದೆ ಅವರ ಸ್ನೇಹ. ಅಂಥ ಸ್ನೇಹಿತರು ಆಡಿದ ಮಾತನ್ನು ತಿಳಿದುಕೊಳ್ಳುವುದಕ್ಕೆ ಮನಸ್ಸು ಮಾಡಿದ ನನ್ನ ಮಿತ್ರರು, ಅದರಲ್ಲೂ ಇತರರ ಹೃದಯವನ್ನು ಮೀಟುವಷ್ಟು ಬುದ್ಧಿವಂತರಾದ ಅವರು, ಎಂ.ಪಿ.ಸಿ.ಸಿ. ಮೀಟಿಂಗಿನಲ್ಲಿ ನಡೆದ ವಿಷಯವನ್ನು

ತಿಳಿದುಕೊಳ್ಳುವುದಕ್ಕೆ ಪ್ರಯತ್ನಪಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಅದನ್ನೇಕೆ ಅವರು ಪ್ರಯತ್ನ ಮಾಡಲಿಲ್ಲವೋ ಗೊತ್ತಿಲ್ಲ.

ಶ್ರೀಮಾನ್ ಹನುಮಂತಯ್ಯನವರು ಮಾತನಾಡುತ್ತಾ ಪ್ರಜಾಭಿಪ್ರಾಯಗಳನ್ನು ತಿಳಿದುಕೊಳ್ಳುವುದಕ್ಕೆ ಅನೇಕ ಶಿಷ್ಟ ಮಾರ್ಗಗಳನ್ನು ಸೂಚಿಸಿದರು. ಆದರೆ ಗ್ರಾಮ ಪಂಚಾಯಿತಿಯ ತೀರ್ಮಾನವೇ ಆಗಲಿ, ಮುನಿಸಿಪಾಲಿಟಿಗಳ ತೀರ್ಮಾನವೇ ಆಗಲಿ ಅಥವಾ ಇನ್ನಾವ ಸಭೆಗಳೇ ನಡೆದು ಅವುಗಳ ತೀರ್ಮಾನವಾಗಲಿ, ಅಥವಾ ಶಾಸನಸಭೆ, ಎಂ.ಪಿ.ಸಿ.ಸಿ. ಪಕ್ಷದ ಸಭೆಗಳು ಸೇರಿ ಮಾಡಿದ ತೀರ್ಮಾನಗಳಾಗಲಿ ಇನ್ನೂ ನಮ್ಮ ಮುಂದಿಲ್ಲ. ಆದ್ದರಿಂದ ಈ ವಿಷಯದಲ್ಲಿ ಪ್ರಜಾಭಿಪ್ರಾಯವನ್ನು ತಿಳಿಸುವುದಕ್ಕೆ ಸಾಕಷ್ಟು ಅವಕಾಶವೇ ಇರಲಿಲ್ಲವೆಂದು ನನ್ನ ಭಾವನೆ. ಈ ವರದಿಯು ಪ್ರಕಟಣೆಯಾದ ಮೇಲಂತೂ ಪ್ರಜೆಗಳಿಗೆ ತಮ್ಮ ಅಭಿಪ್ರಾಯವನ್ನು ತಿಳಿಸುವುದಕ್ಕೆ ಕಾಲಾವಕಾಶ ಸಿಕ್ಕಿಲ್ಲ. ಈ ಅಂಶವನ್ನು ತಿಳಿದುಕೊಂಡು ಆದಷ್ಟು ಕಾಲಾವಕಾಶ ಕೊಟ್ಟು ಅನಂತರ ಜಾರಿಗೆ ಕೊಡುವುದನ್ನು ಕೇಂದ್ರ ಸರ್ಕಾರದವರು ಆಲೋಚನೆ ಮಾಡಬೇಕು, ಆತುರ ಆತುರವಾಗಿ ಯಾವ ತೀರ್ಮಾನವನ್ನೂ ತೆಗೆದುಕೊಳ್ಳುವುದು ಸೂಕ್ತವಲ್ಲವೆಂದು ನನ್ನ ಭಾವನೆ.

ಇನ್ನು ಹಣಕಾಸಿನ ವಿಚಾರದಲ್ಲಿ ಶ್ರೀಮಾನ್ ಹನುಮಂತಯ್ಯನವರು ಬಡ್ಜೆಟ್ ಅಧಿವೇಶನದಲ್ಲಿ ಭಾಷಣ ಮಾಡುವಾಗ ಎದುರು ಪಕ್ಷದವರಿಗೆ ಉತ್ತರ ಕೊಡುತ್ತಾ ಹೇಳುವ ಅವರ ವಾಗ್ವೈಖರಿಯೇ ಬೇರೆ. ನಮ್ಮ ಹಣಕಾಸಿನ ಪರಿಸ್ಥಿತಿ ಚೆನ್ನಾಗಿದೆ; ಅದನ್ನು ಉತ್ತಮಪಡಿಸಿಕೊಳ್ಳುವುದಕ್ಕೆ ಬೇಕಾದಷ್ಟು ಅವಕಾಶವಿದೆ, ನಾವು ಧೈರ್ಯವಾಗಿರಬಹುದು ಎಂದು ಹೇಳುವಾಗ ಅವರ ಮಾತಿನ ರೀತಿಯೇ ಒಂದಾಗಿರುತ್ತದೆ. ಇವೊತ್ತು ಏಕೀಕರಣದಮೇಲೆ ಮಾತನಾಡಿ ಹಣಕಾಸಿನ ಸ್ಥಿತಿಯನ್ನು ವಿವರಿಸುತ್ತಾ, ಏನೋ ಕಲಶ ಬಿದ್ದುಹೋಗಿದೆ, ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ತೂಗಿಸುವುದಕ್ಕೇ ಸಾಧ್ಯವಿಲ್ಲ, ಅಖಂಡ ಕರ್ಣಾಟಕವಾದರೆ ಮಾತ್ರ ಈ ಆಡಳಿತ ನಡೆಯುವುದಕ್ಕೆ ಸಾಧ್ಯ ಎನ್ನುವಂತೆ ಮಾತನಾಡಿದರು. ಆದರೆ ನಿಜಾಂಶವನ್ನು ಹೇಳುವುದಾದರೆ, ಫೈನಾನ್‌ಷಿಯಲ್ ಎಕ್ವೈರಿ ಕಮಿಟಿಯ ಸದಸ್ಯನಾಗಿ ಅಲ್ಲಿ ನನಗೆ ತಿಳಿದು ಬಂದಿರುವ ಅಂಕಿ ಅಂಶಗಳ ಆಧಾರದ ಮೇಲೆ ಹೇಳುವುದಾದರೆ, ನಮಗೆ ಮುಂದಿನ ಐದು ವರ್ಷಗಳಲ್ಲಿ 25 ಕೋಟಿ ರೂಪಾಯಿಗಳು ನಮ್ಮ ಖರ್ಚು ಬಾಬುಗಳಿಗೆ ಬೇಕಾಗುತ್ತವೆ; ಇದರಲ್ಲಿ 11 ಕೋಟಿ ರೂಪಾಯಿಗಳನ್ನು ರೆವಿನ್ಯೂ ಬಾಬಿನಿಂದ ಪಡೆಯಬಹುದು, 13 ಕೋಟಿ ರೂಪಾಯಿಗಳನ್ನು ಸಾಲದ ರೂಪದಲ್ಲಿ ಪಡೆಯಬಹುದು; ಈ ಪ್ರಕಾರ 25 ಕೋಟಿ ರೂಪಾಯಿಗಳನ್ನು ಆ ಅವಧಿಯಲ್ಲಿ ಬರತಕ್ಕ ಆದಾಯದಮೇಲೆ ಸರಿತೂಗಿಸುವುದಕ್ಕೆ ಸಾಧ್ಯವಾಗುತ್ತದೆಂದು ತಿಳಿಸಿದ್ದಾರೆ.

Sri H. SIDDAVEERAPPA (Minister for Home).—A point of order, Sir. The Hon'ble Member is referring to a Committee in which he is a member. That Committee is enquiring about the financial conditions in the State. Before the report is given, would it be right on the part of the Hon'ble Member to make use of that information, whatever it may be, on the floor of the House? That is my point of order, Sir.

Sri Mulka GOVINDA REDDY (Chitaldrug).—There is no point of order.

Mr. SPEAKER.—Everybody knows and it is common knowledge that before the Report is out, no information should be given. That, every parliamentarian knows.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನಮಗೀಗ ಪಂಚವಾರ್ಷಿಕ ಯೋಜನೆ ಆಗುವಂಥ ಖರ್ಚನ್ನು ಪೂರೈಕೆ ಮಾಡಿ ಅದನ್ನು ಸಂಪೂರ್ಣವಾಗಿ ಕಾರ್ಯಗತ ಮಾಡುವುದಕ್ಕೆ ಎಷ್ಟು ದುಡ್ಡು ಬೇಕೆಂಬ ಬಗ್ಗೆ ಅಂಕಿ ಅಂಶಗಳು ನಮ್ಮ ಮುಂದಿವೆ. ಆ ಅಂಕಿ ಅಂಶಗಳನ್ನು ನೋಡಿದರೆ ನಮಗೆ ಸುಮಾರು 25 ಕೋಟಿ ರೂಪಾಯಿಗಳು ಬೇಕಾಗುತ್ತವೆಂಬುದು ಗೊತ್ತಾಗುತ್ತದೆ. ಇಷ್ಟು ಹಣವನ್ನೂ ನಮಗಿರತಕ್ಕ ಆಸ್ತಿಯಿಂದಲೇ ಬರಮಾಡಿಕೊಳ್ಳಬಹುದು. ಹೀಗಿದ್ದರೂ ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಹಣಕಾಸಿನ ಪರಿಸ್ಥಿತಿ ತೀರಾ ತೊಂದರೆಗೀಡಾಗಿರುವಂತೆ ಹೇಳಿದ್ದು ನನಗೆ ಆಶ್ಚರ್ಯವನ್ನುಂಟು ಮಾಡಿದೆ. ಅವರ ಬಡ್ಜೆಟ್ ಭಾಷಣವನ್ನು ಕೇಳಿದಂಥ ನಮಗಂತೂ ಇದ್ದಕಿದ್ದಹಾಗೆ ಈ ವ್ಯತ್ಯಾಸವೇಕೋ ನನಗೆ ಅರ್ಥವಾಗುವುದಿಲ್ಲ.

ಆಮೇಲೆ, ಭಾಷಾವಾರು ಪ್ರಾಂತಕ್ಕೆ ಹೋರಾಡತಕ್ಕವರು ದೇಶದ್ರೋಹಿಗಳು ಎಂದು ಶ್ರೀ ಹನುಮಂತಯ್ಯನವರು ಒಂದುಸಾರಿ ಹೇಳಿದ್ದಾರೆ. ಅಂಥಾದ್ದರಲ್ಲಿ ಅವರು ನಮ್ಮ ಮುಂದಿಟ್ಟಿರತಕ್ಕ ತಿದ್ದುಪಡಿಯನ್ನು ಮಂಡಿಸುವಾಗ ಮಾಡಿದ ಭಾಷಣದಲ್ಲಿ ಎಲ್ಲೆಲ್ಲಿ ಕನ್ನಡ ಮಾತನಾಡತಕ್ಕ ನಾಲ್ಕು ನಾಲ್ಕು ಹಳ್ಳಿಗಳಿವೆಯೋ ಅಲ್ಲಿನ ಪ್ರಜೆಗಳು ಮೈಸೂರಿಗೆ ಸೇರುತ್ತೇವೆಂದು ತಮ್ಮ ಅಭಿಪ್ರಾಯವನ್ನು ಸೂಚಿಸಿದರೆ ಹಾಗ ಸೇರಿಸಿಕೊಳ್ಳುತ್ತೇವೆನ್ನುವ ಹಾಗೆ ಭಾಷಣ ಮಾಡಿದರು. ಆ ಮಾತುಗಳನ್ನು ಕೇಳಿದರೆ ಭಾಷಾವಾರು ಪ್ರಾಂತ್ಯಕ್ಕೆ ಹೋರಾಡುತ್ತಿರುವ ಅವರು ಸಮ್ಮಿಶ್ರ ಸರ್ಕಾರ ಇದು ಎಂದು ಹೇಳುವುದು ಸತ್ಯಕ್ಕೆ ದೂರವಾದ ವಿಚಾರವೆಂದು ನಾನು ಹೇಳಬಯಸುತ್ತೇನೆ. ಈ ವರದಿಯಲ್ಲಿಯೂ ಕೂಡ ಭಾಷಾವಾರು ಪ್ರಾಂತ್ಯಗಳಾಗಲ್ಲದೆ ಸಮ್ಮಿಶ್ರ ಪ್ರಾಂತ್ಯಗಳಾಗಿ ವಿಂಗಡಿಸುತ್ತಿದ್ದೇವೆಂದು ಸಮಿತಿಯವರು ಹೇಳುತ್ತಿರುವುದೂ 16 ಆಣೆಯ ಪಾಲು ಸತ್ಯಕ್ಕೆ ದೂರವಾದ ವಿಷಯವೆಂದು ಧಾರಾಳವಾಗಿ ಹೇಳಬಹುದಾಗಿದೆ. ಹೀಗಿರುವಾಗ ಇಂಥ ಪ್ರಾಂತ್ಯಕ್ಕೆ ಹೋರಾಟ ಮಾಡುವ ಮುಖ್ಯ ಮಂತ್ರಿಗಳಿಗೆ ದೇಶದ್ರೋಹಿಗಳೆಂಬ ಪದ ಅನ್ವಯವಾಗುತ್ತದೆಯೋ ಬೇರೆಯವರಿಗೆ ಅನ್ವಯವಾಗುತ್ತದೆಯೋ ಎಂಬುದನ್ನು ಸಭೆಯವರು ಯೋಚನೆ ಮಾಡಬೇಕು.

ಶ್ರೀ ಜೆ. ಮಹಮ್ಮದ್ ಇಮಾಂ.—ದೇಶದ್ರೋಹಿಗಳು ಎಂದು ಮುಖ್ಯ ಮಂತ್ರಿಗಳು ಎಲ್ಲಿ ಹೇಳಿದ್ದಾರೆ?

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಹೊಸಪೇಟೆಯಲ್ಲಿ ಕಾಂಗ್ರೆಸ್ ಪಕ್ಷದ ಒಂದು ಸಭೆಯಲ್ಲಿ ಸ್ಪಷ್ಟವಾಗಿ ಭಾಷಾವಾರು ಪ್ರಾಂತ್ಯಕ್ಕೆ ಹೋರಾಟ ನಡೆಸತಕ್ಕದ್ದು ದೇಶದ್ರೋಹ ಎಂದು ಅವರು ಹೇಳಿರುವುದು ಪತ್ರಿಕೆಯಲ್ಲಿ ಬಂದಿದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಆ ಪತ್ರಿಕೆ ಎಲ್ಲಿದೆ?

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಇನ್ನೂ ಇದೇ ರೀತಿ ಅನೇಕ ಸಂದರ್ಭಗಳಲ್ಲಿ ಅವರು ಆಡಿರುವಂಥ ಮಾತುಗಳನ್ನಾಗಲಿ, ಅವರ ನಡೆವಳಿಕೆಯನ್ನಾಗಲಿ ನೋಡಿದರೆ ನಮಗೆಲ್ಲರಿಗೂ ಬಹಳ ಅಸಮಾಧಾನ ಉಂಟಾಗಿರುವುದಷ್ಟೇ ಅಲ್ಲ, ದೇಶಕ್ಕೆ ಅಪಘಾತವೆಸ

(ಶ್ರೀ ಎಚ್. ಹುಚ್ಚಮಾಸ್ತಿಗೌಡ.)

ಗಿದ್ದಾರೆ. ದೇಶದ ಮುಖಂಡರಾಗಿ, ಈ ಸಭಾನಾಯಕರಾಗಿ ಹಾಗೂ ದೇಶದ ಮುಖ್ಯ ಮಂತ್ರಿಯಾಗಿ ಜನಗಳನ್ನು ಸರಿಯಾದ ದಾರಿಯಲ್ಲಿ ನಡೆದುಕೊಂಡು ಹೋಗುವಂತೆ ಮಾಡುವುದು ಅವರ ಕರ್ತವ್ಯವಾಗಿತ್ತು. ಹಾಗೆ ಮಾಡದೆ, ಈ ಸಭೆಯ ಮಾನ್ಯ ಸದಸ್ಯರಿಗೆ ಕೊಟ್ಟ ಪ್ರಮಾಣ ವಚನದಂತೆ ನಡೆದುಕೊಳ್ಳದಿರತಕ್ಕಂಥ ಪರಿಸ್ಥಿತಿಯನ್ನು ಯೋಚನೆ ಮಾಡುವುದಾದರೆ ಅವರು ನಿಜವಾಗಿಯೂ ದೇಶಕ್ಕೆ ಕಳಂಕ ತರುವ ರೀತಿಯಲ್ಲಿ, ತಮಗೂ ಕಳಂಕ ತರುವ ರೀತಿಯಲ್ಲಿ, ನಡೆದುಕೊಂಡಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಇದರ ಪರಿಣಾಮವಾಗಿಯೇ ಈ ದಿವಸ ಅಖಂಡ ಕರ್ಣಾಟಕವಾಗಬೇಕೆಂಬ ವರದಿ ನಮ್ಮ ಮುಂದೆ ಬಂದಿದೆ. ಆದರೂ ಈ ರಿಪೋರ್ಟು ನನ್ನ ಮನಸ್ಸಿಗೆ ಅಷ್ಟೇನೂ ಪರಮಪವಿತ್ರವಾದದ್ದಲ್ಲ. ಇಂಥ ಅನೇಕ ರಿಪೋರ್ಟುಗಳು ನಮ್ಮ ಮುಂದೆ ಬಂದಿವೆ. ಆ ರಿಪೋರ್ಟ್‌ಗಳಲ್ಲಿ ಕೆಲವನ್ನು ಜಾರಿಗೆ ಕೊಟ್ಟಿರುವುದೂ, ಕೆಲವಲ್ಲಿ ಕೆಲವು ಭಾಗಗಳನ್ನು ಮಾತ್ರ ಜಾರಿಗೆ ಕೊಟ್ಟಿರುವುದೂ, ಇನ್ನೂ ಕೆಲವನ್ನು ಜಾರಿಗೆ ಕೊಡದಿರುವುದೂ ಇದೆ. ಸಂಪೂರ್ಣವಾಗಿ ವರದಿಗಳನ್ನು ತಳ್ಳಿಹಾಕಿರುವ ನಿದರ್ಶನಗಳೂ ಇವೆ. ಆದ್ದರಿಂದ ರಾಜ್ಯಾಂಗ ಶಾಸನವನ್ನೇ ಬದಲಾಯಿಸುವುದಕ್ಕೆ ಅಧಿಕಾರ ಹೊಂದಿರುವ ಪಾರ್ಲಿಮೆಂಟು ಈ ವರದಿಗೇನೂ ಹೆಚ್ಚಿನ ಮನ್ನಣೆ ಕೊಟ್ಟು ಪರಮಪವಿತ್ರವೆಂದು ಭಾವಿಸಿ ಅದನ್ನು ಕಾರ್ಯರೂಪಕ್ಕೆ ತರಬೇಕಾದ ಅಗತ್ಯವೇನಿಲ್ಲ. ಈ ರೀತಿಯಾಗಿ ದೇಶದಲ್ಲಿ ಈ ವರದಿಗೆ ಅಡ್ಡಿಯಿರುವುದನ್ನು ತಿಳಿಸಿದ್ದೇನೆ. ಹಾಗೂ ಕೇಂದ್ರ ಸರ್ಕಾರದವರಾಗಲಿ ಪಾರ್ಲಿಮೆಂಟಿನವರೇ ಆಗಲಿ ನಮ್ಮ ಮೇಲೆ ಒಂದು ತೀರ್ಮಾನವನ್ನು ಹೊರಿಸುವುದಾದರೆ ಜನಗಳ ಮೇಲೆ ಬಲವಂತದಿಂದ ಹೊರಿಸಿದಂತಾಗುತ್ತದೆ. ಅದೇನೂ ಶಾಶ್ವತವಾಗಿ ಉಳಿಯುವುದಿಲ್ಲ. ಈಗ ಬಂದು ವೇಳೆ ಜಾರಿಗೆ ಬಂದರೂ ಕೂಡ ಮತ್ತೆ ಸ್ವಲ್ಪ ಕಾಲದಲ್ಲೇ ಮೈಸೂರು ಮೈಸೂರಾಗಿಯೇ ಉಳಿಯಲೆಂಬ ಅಭಿಪ್ರಾಯವನ್ನು ತಿಳಿಸುವುದಕ್ಕೆ ಧೈರ್ಯವಾಗಿ ಮುಂದೆ ಬರುತ್ತಾರೆ. ಅಂಥ ಪ್ರಸಂಗ ಬರದಿರುವಂತೆ, ಈಗಲೇ ಮೈಸೂರು ಮೈಸೂರಾಗಿಯೇ ಉಳಿಯುವುದಕ್ಕೆ ಬತ್ತಾಯಮಾಡಿ, ಈ ಮಾನ್ಯ ಸಭೆಯ ಸದಸ್ಯರು ಈ ವರದಿಗೆ ಮನ್ನಣೆ ಕೊಡದೆ, ಈ ವರದಿಯನ್ನು ಜಾರಿಗೆ ಕೊಡುವುದನ್ನು ತಡೆಗಟ್ಟಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಹಾಗೂ ಇದನ್ನು ನಮ್ಮ ಮೇಲೆ ಹೊರಿಸಿದರೆ, ನಮ್ಮ ಅಭಿಪ್ರಾಯಗಳನ್ನು ತಿಳಿಸುವುದಕ್ಕೆ ಇಕ್ಕಟ್ಟಿರುವ ಸನ್ನಿವೇಶದಲ್ಲಿ ಜಾರಿಗೆ ಕೊಟ್ಟಂಥ ದೋಷಕ್ಕೆ ಅವರು ಗುರಿಯಾಗುತ್ತಾರೆ. ಆದ್ದರಿಂದ ಮೊಟ್ಟಮೊದಲನೆಯದಾಗಿ ಮೈಸೂರು ಮೈಸೂರಾಗಿಯೇ ಉಳಿಸಿಕೊಳ್ಳುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡಲಿ. ಅದು ಸಾಧ್ಯವಿಲ್ಲದೆ ಹೋದರೆ ಅನಿರ್ದಿಷ್ಟ ಕಾಲದವರೆಗಾದರೂ ಮುಂದೆ ಹಾಕುವುದಕ್ಕೆ ಪ್ರಯತ್ನಮಾಡಿ, ನಮ್ಮನ್ನು ಪ್ರತಿನಿಧಿಯಾಗಿ ಕಳುಹಿಸಿರತಕ್ಕ ಜನಗಳ ಆಶೋತ್ತರಗಳನ್ನು ಈಡೇರಿಸುವುದಕ್ಕೆ ಪ್ರಯತ್ನಮಾಡಲೆಂದು ಪ್ರಾರ್ಥನೆ ಮಾಡುತ್ತೇನೆ.

The House adjourned for Lunch at Fifteen Minutes past Ten of the Clock and reassembled at Forty-seven Minutes past Ten of the Clock.

[MR. SPEAKER in the Chair.]

ಶ್ರೀಮತಿ ಲಕ್ಷ್ಮಿದೇವೀ ರಾಮಣ್ಣ (ಆನೆಕಲ್—ಹೊಸಕೋಟೆ).—ಮಾನ್ಯ ಸಭಾಧ್ಯಕ್ಷರೇ, ಈ ದಿವಸ ಈ ಮಾನ್ಯ ಸಭೆಯಲ್ಲಿ ಚರ್ಚೆಯಾಗುತ್ತಿರುವ ರಾಜ್ಯಗಳ ಪುನರ್ವಿಂಗಡಣೆಯ ಕಮಿಷನರವರ ವರದಿಯನು ನಾನು ಸ್ಥೂಲವಾಗಿ ಸ್ವಾಗತಿಸುತ್ತ ಈ ಬಗ್ಗೆ ನನ್ನ ಅಭಿಪ್ರಾಯಗಳೇನಿರುತ್ತವೆಂಬುದನ್ನು ತಿಳಿಸಲು ನಾನೀಗ ಇಚ್ಛೆಪಟ್ಟಿದ್ದೇನೆ.

ಈ ದಿವಸ ಹಾಲಿ ವಿಭಾಗ ಮಾಡಿರತಕ್ಕ ರಾಜ್ಯ ವಿಭಾಗಗಳಲ್ಲಿ ಮೂರು ತೆರನಾದ ಪ್ರಾಂತ್ಯಗಳಿರುತ್ತವೆ. ಅವುಗಳಾವುವೆಂದರೆ 'ಎ' 'ಬಿ' ಮತ್ತು 'ಸಿ' ಪ್ರಾಂತ್ಯಗಳೆಂಬವು. 'ಎ' ಭಾಗಕ್ಕೆ ಸೇರಿರತಕ್ಕ ರಾಜ್ಯಗಳು 9 ಇವೆ; 'ಬಿ' ಭಾಗಕ್ಕೆ ಸೇರಿರತಕ್ಕ ರಾಜ್ಯಗಳು 8 ಇವೆ; ಮತ್ತು 'ಸಿ' ಭಾಗಕ್ಕೆ ಸೇರಿರತಕ್ಕ ರಾಜ್ಯಗಳು 10 ಇವೆ. ಆದರೆ, ಈ ರೀತಿಯಾಗಿ ರಾಜ್ಯಗಳು ವಿಭಾಗವಾಗಿರುವುದಕ್ಕಾದರೂ ಇದಕ್ಕೆ ಯಾವ ಒಂದು ಹಿನ್ನೆಲೆಯೂ ಇಲ್ಲ; ಇವು ಯಾವ ಒಂದು ತತ್ವದ ಮೇಲೂ ವಿಭಾಗವಾಗಿಲ್ಲ. ಆದುದರಿಂದಲೇ ಭಾರತ ಸರ್ಕಾರದವರು ಈ ಹೊತ್ತು ಈ ನಾನಾ ಕಾರಣಗಳನ್ನು ಮನಗಂಡು ರಾಜ್ಯಗಳನ್ನು ಒಂದು ಆಧಾರಕ್ಕನುಸಾರವಾಗಿ ಪುನರ್ವಿಂಗಡಣೆ ಮಾಡಬೇಕೆಂಬ ಒಂದು ನಿರ್ಧಾರಕ್ಕೆ ಬಂದರು. ಹೀಗೆ ಅವರು ಒಂದು ನಿರ್ಧಾರಕ್ಕೆ ಬಂದ ತಕ್ಷಣವೇ ಈ ಉದ್ದೇಶಕ್ಕಾಗಿ ಸಂಬಂಧಪಟ್ಟ ಎಲ್ಲ ವಿಷಯಗಳನ್ನೂ ಪರಿಶೀಲನೆ ಮಾಡಲು ಒಂದು ಸಮಿತಿಯನ್ನು ನೇಮಿಸುವುದಾಗಿ 1953 ನೆಯ ಇಸವಿ ಡಿಸೆಂಬರ್ 22 ನೆಯ ತಾರೀಖಿನಲ್ಲಿ ಒಂದು ಘೋಷಣೆಯನ್ನು ಹೊರಡಿಸಿದ ಒಂದು ವಾರದೊಳಗಾಗಿಯೇ ಒಂದು ಸಮಿತಿಯನ್ನು ರಚನೆ ಮಾಡಿದರು. ಹಾಗೆ ರಚಿಸಲ್ಪಟ್ಟಂಥ ಆ ಸಮಿತಿಯವರು ತಮ್ಮ ಈ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸತಕ್ಕ ಕಡೆಯ ಘಳಿಗೆವರೆಗೂ ಸಹ ಭಾರತದಾದ್ಯಂತದಿಂದಲೂ ಈ ಸಮಿತಿಯವರು 1,52,250 ಮೆಮೊರಾಂಡಂ ಅಪ್ಲಿಕೇಷನ್‌ಗಳನ್ನು ಸ್ವೀಕಾರ ಮಾಡಿದ್ದಾರೆಂದು ತಿಳಿಸಿದ್ದಾರೆ. ಈ ಪೈಕಿ ಚೆನ್ನಾಗಿ ಆಲೋಚನೆ ಮಾಡಿ ನಿರ್ದಿಷ್ಟವಾದ ಅಂಕಿಅಂಶಗಳು ಮತ್ತು ನಕ್ಷೆಗಳೊಂದಿಗೆ ಕಳುಹಿಸಿದ್ದಂಥ 2,000 ಮನವಿಗಳನ್ನು ಪರೀಶಿಲನೆ ಮಾಡಿರುವುದಾಗಿ ತಿಳಿಸಿರುತ್ತಾರೆ. ಮೂವತ್ತೆಂಟು ಸಾವಿರ ಮೈಲಿಗಳಷ್ಟು ಪ್ರವಾಸವನ್ನೂ ಸಹ ಕೈಗೊಂಡು 104 ಸ್ಥಳಗಳಿಗೆ ಭೇಟಿಕೊಟ್ಟು ಸುಮಾರು 9,000 ಕ್ಕೂ ಮೇಲ್ಪಟ್ಟ ಜನರಿಗೆ ವಿಚಾರ ವಿನಿಮಯದ ಬಗ್ಗೆ ಭೇಟಿಕೊಟ್ಟಿದ್ದಾಗಿ ಈ ವರದಿಯಲ್ಲೇ ತಿಳಿಸಲಾಗಿದೆ. ಆದಕಾರಣ ನಾವೀದಿವಸ ಈ ವರದಿಯನ್ನು ನಿಷ್ಪಕ್ಷಪಾತವಾದ ಭಾವನೆಯಿಂದ ಅವಲೋಕಿಸುವುದಾದರೆ ಇದನ್ನು ಆ ಸಮಿತಿಯವರು ಯಾವ ಒಂದು ಭಾಗದ ಪರವಾಗಿ ಆಗಲಿ ಅಥವಾ ವಿರೋಧವಾಗಿ ಆಗಲಿ ತಯಾರಿಸಿಲ್ಲ ಎನ್ನುವುದು ಮೇಲೆದ್ದು ಕಾಣುತ್ತದೆ. ಈ ದಿವಸ ಭಾರತದಲ್ಲಿರತಕ್ಕಂಥ ಈ ನಾನಾ ರೀತಿಯಲ್ಲಿರುವ 27 ಪ್ರಾಂತಗಳನ್ನು ಹದಿನಾಲ್ಕು ವಿಭಾಗವಾಗಿ ಮಾಡಲು ಹೊರಟಿರತಕ್ಕ ಮಾರ್ಗದಲ್ಲಿ ಅವರು ಭಾಷೆಯನ್ನೂ ಕೂಡ ಒಂದು ಮುಖ್ಯಾಂಶವಾಗಿ ಪರಿಗಣಿಸಿ ಅಷ್ಟೆ ಪ್ರಾಮುಖ್ಯತೆಯನ್ನು ಇನ್ನೂ 3-4 ವಿಚಾರಗಳಿಗೆ ಕೊಟ್ಟು ಆ ಎಲ್ಲಾ ಅಂಶಗಳನ್ನೂ ಸಹ ವಿಶದವಾಗಿ ಈ ವರದಿಯಲ್ಲಿ ವಿಮರ್ಶೆ ಮಾಡಿರುತ್ತಾರೆ. ಈ ಸಮಿತಿಯವರು ಹೆಚ್ಚಿನ ಪ್ರಾಮುಖ್ಯತೆಯನ್ನೂ ಮತ್ತು ತಮ್ಮ ಪ್ರಥಮ ದೃಷ್ಟಿಯನ್ನೂ ಇಡೀ ಭಾರತದ

ರಕ್ಷಣೆ ಮತ್ತು ಅದರ ಸುಭದ್ರತೆಯ ಮೇಲಿಟ್ಟಿದ್ದಾರೆ, ಎರಡನೆಯ ಪ್ರಾಮುಖ್ಯತೆಯನ್ನು ಭಾಷಾವಾರು ತತ್ವಕ್ಕೆ ಕೊಟ್ಟಿದ್ದಾರೆ. ಮೂರನೆಯದಾಗಿ, ಭೌಗೋಳಿಕ ಸಂಪರ್ಕ ಮತ್ತು ಚಾರಿತ್ರಿಕ ಹಿನ್ನೆಲೆಗಳಿಗೆ ಪ್ರಾಮುಖ್ಯತೆಯನ್ನು ಕೊಟ್ಟುಕೊಂಡು ಮುಂದೆ ರಚಿತವಾಗಲಿರತಕ್ಕ ಪ್ರಾಂತ್ಯಗಳ ಸರ್ವತೋಮುಖವಾದ ಅಭಿವೃದ್ಧಿಗೆ ಅವಶ್ಯಕವಾದ ಪ್ರಕೃತಿ ಸೌಲಭ್ಯಗಳ ಆಧಾರಕ್ಕನುಗುಣವಾದ ಹೊಸ ಪ್ರಾಂತ್ಯಗಳ ರಚನೆ ಹೇಗೆ ಆಗಬೇಕೆಂಬುದನ್ನು ಈ ವರದಿಯಲ್ಲಿ ಸೂಚಿಸಿದ್ದಾರೆ.

ನಾನಾದರೋ ಈವರೆಗೂ ಈ ಮೈಸೂರು ಮೈಸೂರಾಗಿಯೇ ಉಳಿಯಬೇಕೆಂದು ವಾದ ಮಾಡಿರತಕ್ಕಂಥ ನನ್ನ ಎಲ್ಲಾ ಸಹೋದರ ಮತ್ತು ಸಹೋದರಿಯರ ಭಾಷಣಗಳನ್ನೂ ಬಹಳ ಎಚ್ಚರಿಕೆಯಿಂದ ಆಲಿಸಿದೆನು. ಆದರೆ ಅವರೆಲ್ಲರೂ ಈ ಮೈಸೂರು—ಮೈಸೂರಾಗಿಯೇ ಉಳಿಯಲಿ ಎಂದು ಹೇಳತಕ್ಕ ಬಗ್ಗೆ ಕೊಟ್ಟಿರತಕ್ಕ ಕಾರಣಗಳೆಂದರೆ—ನಮಗೆ ಇಲ್ಲಿಯವರೆಗೂ ಇದ್ದಂಥ ಆಡಳಿತ ಸೌಕರ್ಯ ತಪ್ಪಿ ಹೋಗುತ್ತದೆ; ನಾವು ಇನ್ನು ಮುಂದಕ್ಕೆ ರಾಜ್ಯವನ್ನು ದೊಡ್ಡದನ್ನಾಗಿ ಮಾಡುವುದರಿಂದ ಕೇಂದ್ರದವರ ನೆರವಿಗಾಗಿ ಹೆಚ್ಚು ಆಶ್ರಯ ಮಾಡಬೇಕಾಗುತ್ತದೆ ಎಂದು ಹೇಳಿದ್ದೇ ಅವರೆಲ್ಲರ ಭಾಷಣಗಳ ಮುಖ್ಯಾಂಶವಾಗಿದೆ. ಹೀಗೆ ನಾವು ಈ ದಿವಸ ಈ ಆಡಳಿತ ಸೌಕರ್ಯ ದೃಷ್ಟಿಯೊಂದರಿಂದಲೇ ಈ ಪ್ರಶ್ನೆಯನ್ನು ವಿಚಾರ ಮಾಡುತ್ತಾ ಹೋದರೆ ಈ ಪ್ರಾಂತ್ಯಗಳ ಪುನರ್ವಿಂಗಡಣೆಯ ವಿಚಾರ ಯಾವ ಮಟ್ಟಕ್ಕೆ ಹೋಗುತ್ತದೆಂದರೆ ನಮ್ಮ ಭಾರತದಲ್ಲಿರುವ 42 ಕೋಟಿ ಜನಸಂಖ್ಯೆಗೂ 42 ಸಂಸ್ಥಾನಗಳನ್ನೇ ಏರ್ಪಡಿಸಬೇಕೆಂದು ಹೇಳಿದ ಹಾಗಾಗುತ್ತದೆ. ಹೀಗೆ 72 ಸಾವಿರ ಚದರ ಮೈಲಿಗೆ ಒಂದು ಪ್ರಾಂತ್ಯದಂತೆ ಮಾಡುತ್ತಾ ಹೋದರೆ ನಮ್ಮ ಭಾರತದಲ್ಲಿ 40-42 ಸಂಸ್ಥಾನಗಳೂ, ಈ ಪ್ರತಿಯೊಂದು ಪ್ರಾಂತ್ಯದಲ್ಲೂ ಒಂದೊಂದು ಶಾಸನ ಸಭೆ, ಒಬ್ಬೊಬ್ಬರು ಮುಖ್ಯ ಮಂತ್ರಿಗಳು, ಒಂದೊಂದು ಹೈಕೋರ್ಟು, ಒಂದೊಂದು ಸೆಕ್ರೆಟೇರಿಯೆಟ್ ಇರಬೇಕೆಂದು ಅವುಗಳನ್ನೆಲ್ಲಾ ಸ್ಥಾಪನೆ ಮಾಡುತ್ತಾ ಹೋದರೆ ಈ ಬಡತನದಲ್ಲಿರತಕ್ಕ ಭಾರತಕ್ಕೆ ಇದೂ ಸಹ ಒಂದು ಹೊರಲಾರದಂಥ ಹೊರೆಯಾಗುವುದಿಲ್ಲವೇ ಎಂದು ನಾನು ಅವರನ್ನು ಕೇಳುತ್ತೇನೆ. ಆದಕಾರಣ ಅವರೆಲ್ಲರೂ ಅವರ ಅಭಿಪ್ರಾಯವನ್ನು ಈ ಒಂದು ದೃಷ್ಟಿಯಿಂದಲೂ ಸಹ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಈ ದಿವಸ ಈ ಸಮಿತಿಯವರು ಇಂಡಿಯಾ ದೇಶವನ್ನು 14 ವಿಭಾಗಗಳನ್ನಾಗಿ ವಿಂಗಡಿಸತಕ್ಕ ಬಗ್ಗೆ ಹೆಚ್ಚಿನ ಕಾರಣಗಳನ್ನು ಕೊಟ್ಟಿರುವುದೇ ಅಲ್ಲದೆ ಡೆಲ್ಲಿ, ಮಣಿಪುರ ಮತ್ತು ಅಂಡಮಾನ್‌ಗಳನ್ನು ಪ್ರತ್ಯೇಕವಾಗಿ ಉಳಿಸಬೇಕಾದುದರ ಕಾರಣಗಳನ್ನೂ ಸಹ ಅವರು ಕೊಟ್ಟಿದ್ದಾರೆ. ಈಗ ಈ ಸಮಿತಿಯವರು ಸಲಹೆ ಮಾಡಿರತಕ್ಕಂಥ 14 ಹೊಸ ಪ್ರಾಂತ್ಯಗಳಲ್ಲಿ ಈ ಕರ್ನಾಟಕ ಪ್ರಾಂತ್ಯವೂ ಒಂದಾಗಿದೆ. ಈ ಭಾವೀ ಕರ್ನಾಟಕ ಪ್ರಾಂತ್ಯದ ವಿಚಾರಗಳನ್ನು ವಿಮರ್ಶೆಮಾಡುತ್ತ ಇಲ್ಲಿಗೆ ಸೇರತಕ್ಕಂಥ 2 ಕೋಟಿ ಜನ ಸಂಖ್ಯೆ ಇದರ ವಿಸ್ತೀರ್ಣ ಇತ್ಯಾದಿ ವಿಷಯಗಳನ್ನೆಲ್ಲಾ ಗಣನೆಗೆ ತೆಗೆದುಕೊಂಡು ಇದು ಅತಿ ಚಿಕ್ಕದೂ ಅಲ್ಲ, ಅತಿ ದೊಡ್ಡದೂ ಅಲ್ಲ, ಇದೊಂದು ಮಧ್ಯಮ ವರ್ಗದ ಪ್ರಾಂತ್ಯವಾಗುತ್ತದೆ ಎಂದು ಹೇಳಿದ್ದಾರೆ. ಇಷ್ಟೇ ಅಲ್ಲದೆ ಈ ಕರ್ನಾಟಕ ಪ್ರಾಂತದಲ್ಲಿ ಸಂಪದ್ಯುಕ್ತವಾದ ಹೆಚ್ಚಿನ ಪ್ರಕೃತಿ ಸೌಲಭ್ಯಗಳಿರುವುದರಿಂದ ಈ ಪ್ರಾಂತ್ಯ ಮುಂದೆ ಇನ್ನೂ ಹೆಚ್ಚಿನ ಉತ್ತಮ ಸ್ಥಿತಿಗೆ ಬಂದು ಇಡೀ ಭಾರತಕ್ಕೇ ಒಂದು ರಾರಾಜಿಸತಕ್ಕಂಥ ಪ್ರಾಂತ್ಯವಾಗುತ್ತದೆಂದು ಹೇಳಿದ್ದಾರೆ. ಹೀಗೆ ಅವರು ಹೇಳಿರತಕ್ಕದ್ದೆಲ್ಲಾ ನಿಷ್ಪಕ್ಷಪಾತ ಭಾವನೆಯಿಂದಲೇ ಎನ್ನುವುದು ಈ ವಿಚಾರಗಳಿಂದಲೇ ಎದ್ದು ಕಾಣುತ್ತಿದೆ. ಈ ದಿವಸ ಆಂಧ್ರ, ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು ಇತ್ಯಾದಿಗಳೆಲ್ಲವೂ ಸ್ಥಾಪನೆ ಆಗುವುದು ಈ ಭಾಷಾವಾರು ತತ್ವದ ಮೇಲೆಯೇ ಹೊರತು ಮತ್ತೆ ಯಾವುದೂ ಅಲ್ಲ. ಆದುದರಿಂದ ಇನ್ನು ಮುಂದೆ ಈ ಪ್ರಾಂತ್ಯಗಳಲ್ಲಿ ಉಳಿಯುವಂಥ ಮೈನಾರಿಟಿ ಭಾಷಾ ಜನರಿಗೆ ದೊರೆಯಬೇಕಾದ ಸೌಲಭ್ಯಗಳು ಮತ್ತು ಅವರ ಅಭಿವೃದ್ಧಿ ಇತ್ಯಾದಿ ವಿಚಾರಗಳಿಗೆ ಸಂಬಂಧಿಸಿದ ವಿಷಯಗಳನ್ನೂ ಕೂಡ ಈ ವರದಿಯಲ್ಲೇ ಪ್ರಸ್ತಾಪ ಮಾಡಿದ್ದಾರೆ. ಅಲ್ಲದೆ ಈ ಭಾಷಾ ಅಭಿವೃದ್ಧಿಯ ವಿಚಾರದಲ್ಲಿ ಕೂಡ ಸೂಕ್ತ ಅಭಿಪ್ರಾಯಗಳನ್ನು ಅಳವಡಿಸಿದ್ದಾರೆ. ಯಾವ ಪ್ರದೇಶದಲ್ಲಿ ಶೇಕಡ 70ಕ್ಕೂ ಮೇಲ್ಪಟ್ಟು ಒಂದೇ ಭಾಷೆಯನ್ನಾಡತಕ್ಕ ಜನರಿದ್ದಾರೋ ಅಂಥ ಪ್ರದೇಶದ ಭಾಷೆ ಉಳಿಯಲು ಅದನ್ನು ಒಂದು ಏಕ ಭಾಷಾ ಪ್ರದೇಶವೆಂದು ಪರಿಗಣಿಸಬೇಕೆಂದೂ, ಎಲ್ಲಿ ಶೇಕಡ 30 ರಷ್ಟು ಅಲ್ಪ ಸಂಖ್ಯಾತ ಭಾಷೆಗಳವರಿರುತ್ತಾರೋ ಅಂಥ ಪ್ರಾಂತ್ಯವನ್ನು ಬೈಲಿಂಗ್ವಲ್ ಪ್ರದೇಶವನ್ನಾಗಿ ಅಂದರೆ 2 ಭಾಗಗಳನ್ನಾಗಿ ವಿಂಗಡಿಸಬೇಕೆಂದೂ ಈ ವರದಿಯಲ್ಲೇ ಉಲ್ಲೇಖಿಸಿದ್ದಾರೆ. ಇನ್ನೂ ಮುಂದೆ ಹೋಗುತ್ತಾ ಅವರು ಏನು ಹೇಳಿರುತ್ತಾರೆಂದರೆ—ಮುಂದೆ ರಚಿತವಾಗಲಿರುವ ಕರ್ನಾಟಕ ಪ್ರಾಂತ್ಯದಲ್ಲಿ ಯಾವ ಒಂದು ಜಿಲ್ಲೆಯಲ್ಲಿ ತೆಲುಗು ಭಾಷೆಯಾಗಲಿ ಅಥವಾ ಇನ್ನಾವುದೇ ಭಾಷೆಯಾಗಲಿ ಶೇಕಡ 70ರಷ್ಟಿದೆಯೋ ಆ ಪ್ರದೇಶದಲ್ಲಿ ಆ ಭಾಷೆಯನ್ನೇ ಅಫಿಷಿಯಲ್ ಲಾಂಗ್ವೇಜ್ ಅನ್ನಾಗಿ ಮಾಡಬೇಕೆಂದು ಕೂಡ ಹೇಳಿದ್ದಾರೆ. ಇನ್ನುಳಿದ ಭಾಗಗಳಲ್ಲಿ ಎಲ್ಲೆಲ್ಲಿ ಶೇಕಡ 15 ಮತ್ತು 20 ಇರತಕ್ಕಂಥ ಅಲ್ಪ ಸಂಖ್ಯಾತ ಕೋಮುಗಳ ಜನರಿರುತ್ತಾರೋ ಅಂಥ ಪ್ರದೇಶದಲ್ಲಿ ಕನ್ನಡ ಮತ್ತು ಆ ಮೈನಾರಿಟಿ ಜನರ ಭಾಷೆ ಎರಡರಲ್ಲೂ ಪ್ರತಿಯೊಂದು ಸರ್ಕಾರಿ ಕಾಗದ ಪತ್ರಗಳನ್ನೂ ಪ್ರಕಟಣೆ ಹೊರಡಿಸಬೇಕೆಂದು ಒಂದು ದೊಡ್ಡ ಸುರಕ್ಷತೆಯನ್ನು ಒದಗಿಸಿ ಕೊಟ್ಟಿದ್ದಾರೆ. ಇನ್ನು ಈ All-India level ನಲ್ಲಿ ದೇಶಗಳು ಈಗ ಪುನರ್ವಿಂಗಡಣೆಯಾಗುತ್ತಿರುವುದರಿಂದ ಉತ್ತರ ಇಂಡಿಯಾದವರು ದಕ್ಷಿಣ ಇಂಡಿಯಾದವರ ಭಾಷೆಯನ್ನು ಕಲಿಯಬೇಕೆಂದು ಒತ್ತಾಯವನ್ನು ಹಾಕಿರುವುದರ ದೆಸೆಯಿಂದಲೇ ಈ ದಿವಸ ದಕ್ಷಿಣ ಇಂಡಿಯಾದವರು ಉತ್ತರ ಇಂಡಿಯಾದವರ ಹಿಂದೀ ಭಾಷೆಯನ್ನೂ ಕಲಿಯಲು ಇದೂ ಒಂದು ಕಾರಣವಾಗಿದೆ ಎಂದು ತೋರಿಸಿದ್ದಾರೆ. ಈಗಾಗಲೇ ಹೈದರಾಬಾದಿನಲ್ಲಿರತಕ್ಕ ಉಸ್ಮಾನಿಯ ವಿಶ್ವವಿದ್ಯಾನಿಲಯದಲ್ಲಿ ಹಿಂದೀ ಭಾಷೆಯಲ್ಲಿ ಪಾಠ ಪ್ರವಚನಗಳನ್ನು ನಡೆಸಲು ಪ್ರಾರಂಭಿಸಿರುತ್ತಾರೆ. ಇದೇ ರೀತಿ ಉತ್ತರ ಇಂಡಿಯಾದವರೂ ಕೂಡ ದಕ್ಷಿಣ ಇಂಡಿಯಾದವರ ಭಾಷೆಯನ್ನು ಕಲಿಯಲು ಅಲ್ಲಿಯೂ ಅವಕಾಶವನ್ನು ಕಲ್ಪಿಸಿರುತ್ತಾರೆ. ಹೀಗೆ ಪ್ರತಿಯೊಂದು ಭಾಗದವರೂ ಒಂದು ಪರಸ್ಪರ ರೀತಿಯಲ್ಲಿ ಎಲ್ಲ ಭಾಗಗಳ ಭಾಷೆಗಳನ್ನು ಕಲಿಯಲೇಬೇಕಾದಂಥ ಅವಕಾಶ ಒದಗಿದೆ. ಇವಕ್ಕೆ ಅನುಕೂಲವಾದ ವಾತಾವರಣಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ಈಗಾಗಲೇ ಆಲಿಂಡಿಯಾ ಸರ್ವಿಸ್ ವಿಚಾರದಲ್ಲಿ ಎಲ್ಲಾ ಪ್ರಾಂತ್ಯಗಳಿಂದಲೂ ಶೇಕಡ 50 ರಷ್ಟು ಅಧಿಕಾರಗಳನ್ನು ಕೇಂದ್ರಾಡಳಿತಕ್ಕೆ ತೆಗೆದುಕೊಳ್ಳಬೇಕೆಂದು ತೀರ್ಮಾನವಾಗಿದೆ. ಆ

(ಶ್ರೀಮತಿ ಲಕ್ಷ್ಮೀದೇವಿರಾಮಣ್ಣ).

ರೀತಿ ಕೇಂದ್ರ ಸರ್ಕಾರಕ್ಕೆ ಮತ್ತೊಮ್ಮೆ ಸೂಚನೆಯನ್ನು ಈ ಸಮಿತಿಯವರು ಕೊಟ್ಟಿದ್ದಾರೆ. ಇಲ್ಲಿಯವರೆಗೂ ಆ ಕೇಂದ್ರ ಸರ್ಕಾರದ ಉದ್ಯೋಗಗಳಲ್ಲಿ ಕೇವಲ ರೆವಿನ್ಯೂ ಮತ್ತು ಪೋಲೀಸ್ ಬಾಬುಗಳಿಗೆ I.A.S. ಮತ್ತು I.P.S. ಎಂದು ತೆಗೆದುಕ್ಕೊಳ್ಳುವ ವಾಡಿಕೆಯಿದೆ. ಇನ್ನು ಮುಂದಕ್ಕೆ ಕೇಂದ್ರ ಸರ್ಕಾರದ ನೌಕರಿಗಳಿಗೆ ಅಂದರೆ ಇದೇ ರೀತಿಯಾಗಿ ವೈದ್ಯ ಬಾಬಿಗೂ, ಇಂಜನೀಯರಿಂಗ್ ಬಾಬಿಗೂ ಪ್ರತಿಯೊಂದು ಪ್ರದೇಶದಿಂದಲೂ ಶೇಕಡ 50ರಷ್ಟು ಜನರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದೂ ಇನ್ನುಳಿಯುತಕ್ಕ ಸ್ಥಾನಗಳಿಗೆ ಆಯಾ ಪ್ರದೇಶಗಳಲ್ಲಿರತಕ್ಕ ಜನರನ್ನು ನೇಮಕ ಮಾಡಬೇಕೆಂದು ಹೇಳಿದ್ದಾರೆ. ಹೀಗೆ ಮುಂದೆ ರಾಜ್ಯಗಳು ಪುನರ್ವಿಂಗಡಣೆಯಾದ ನಂತರ ಯಾವ ದೇಶದ ಜನರೇ ಆಗಲಿ ತಮ್ಮ ತಮ್ಮ ದೇಶಗಳಲ್ಲೇ ಅಲ್ಲದೆ ಇಡೀ ಭಾರತದಲ್ಲಿ ಎಲ್ಲ ಕಡೆಗಳಲ್ಲೂ ಕೆಲಸ ಮಾಡತಕ್ಕಂಥ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಹೀಗೆಲ್ಲಾ ಅನೇಕ ವಿಷಯಗಳನ್ನು ಆ ವರದಿಗಾರರು ಇದರಲ್ಲಿ ಪ್ರಸ್ತಾಪ ಮಾಡಿರುವುದರಿಂದ ಈ ವರದಿಯು ಸಾಮಾನ್ಯವಾಗಿ ಒಂದು ಸರ್ವಸಮರ್ಪಕವಾದಂಥ ವರದಿಯಾಗಿದೆ ಎಂದು ಹೇಳಿದ್ದರೆ ಕೆಲವರು ಇದು ಪೂರಾ ಸಮರ್ಪಕವಾದಂಥ ವರದಿಯಲ್ಲ ಎಂದು ಹೇಳಬಹುದು. ಈ ಅಂಶವನ್ನು ಕೂಡ ಆ ಸಮಿತಿಯವರು ಸೂಕ್ಷ್ಮವಾಗಿ ತಿಳಿಸಿದ್ದಾರೆ. ಆದರೆ ದೇಶದಲ್ಲೇ ಅತ್ಯಂತ ಪರಿಣತರೂ, ರಾಜಕೀಯ ತಜ್ಞರೂ, ಹೆಚ್ಚಿನ ಮೇಧಾವಿಗಳೂ ಆದಂಥವರೆಲ್ಲಾ ಸೇರಿ ಈಗ ತಯಾರಿಸಿರತಕ್ಕಂಥ ಈಗಿನ ನಮ್ಮ ಈ ರಾಜ್ಯಾಂಗದಲ್ಲಿ ಕೂಡ ದಿನ ದಿನಕ್ಕೂ ಬದಲಾವಣೆಗಳಾಗುತ್ತಿರುವುದು ನಮ್ಮೆಲ್ಲರಿಗೂ ತಿಳಿದಿರತಕ್ಕಂಥ ವಿಷಯವೇ ಆಗಿದೆ. ಈ ದಿವಸ ಇಡೀ ಇಂಡಿಯಾ ದೇಶದ ಭೂಪಟವನ್ನೇ ಬದಲಾವಣೆ ಮಾಡತಕ್ಕ ಒಂದು ಮಹತ್ಕಾರ್ಯದಲ್ಲಿ ಅಲ್ಲಿ ಇಲ್ಲಿ ಕೆಲವು ಚಿಕ್ಕ ಪುಟ್ಟ ಲೋಪದೋಷಗಳು ಕಂಡುಬರುವುದು ಸ್ವಾಭಾವಿಕ. ಆದಕ್ಕಾಗಿಯೇ ಈ ನಮ್ಮ ಸಭಾನಾಯಕರು ಅಂಥ ಕೈತಪ್ಪಿನಿಂದ ಬಿಟ್ಟುಹೋಗಿರತಕ್ಕಂಥ ನಮ್ಮ ಅಕ್ಕಪಕ್ಕದ ಕೆಲವು ಕನ್ನಡ ಭಾಗಗಳನ್ನು ಕರ್ಣಾಟಕಕ್ಕೆ ಸೇರಿಸಿ ಕೊಡಬೇಕೆಂಬ ಒಂದು ತಿದ್ದುಪಡಿಯನ್ನಾಗಲೇ ಸಭೆಯ ಮುಂದೆ ಮಂಡಿಸಿದ್ದಾರೆ. ಆದರೆ ಈವರೆಗೂ ಮಾತನಾಡಿ ಮೈಸೂರು ಮೈಸೂರಾಗಿಯೇ ಉಳಿಯಬೇಕೆಂದು ವಾದಿಸಿದ ಕೆಲವು ಮಾನ್ಯ ಸದಸ್ಯರು ನಮ್ಮ ಮೈಸೂರಿನ ವೈಶಿಷ್ಟ್ಯತೆ ಮತ್ತು ವ್ಯಕ್ತಿತ್ವಗಳೆಲ್ಲಾ ಕರ್ಣಾಟಕ ಪ್ರಾಂತ್ಯವಾದರೆ ಅಳಿದು ಹೋಗುತ್ತವೆಂದು ಹೇಳಿದ್ದಾರೆ. ಆದರೆ ಇದೆಲ್ಲಾ ಕೇವಲ ಒಂದು ಲೋಕರೂಢಿಯ ಮಾತಾಯಿತು. ಅಷ್ಟೇನೆ. ಈ ಮೈಸೂರಿಗೆ ಈಗ ತಾವು ಹೇಳುತ್ತಿದ್ದಂಥ ವೈಶಿಷ್ಟ್ಯ ವ್ಯಕ್ತಿತ್ವಗಳೆಲ್ಲಾ ಇದ್ದವು. ಆದರೆ ಯಾವಾಗ? 1947ಕ್ಕೆ ಹಿಂದೆ ಇದ್ದವು. ಆದರೆ 1947 ರಿಂದ ಇತ್ತೀಚೆಗೆ ಈ ಎಲ್ಲಾ ವೈಶಿಷ್ಟ್ಯತೆಗಳನ್ನೂ ನಾವು ಭಾರತ ಸರ್ಕಾರಕ್ಕೆ ಬಿಟ್ಟು ಕೊಟ್ಟಿದ್ದೇವೆ. ನಮ್ಮ ರಾಜರು ಹೋದರು; ಮೈಸೂರಿನ ಬಾವುಟ ಹೋಯಿತು; ನಮ್ಮ ರಾಷ್ಟ್ರೀಯಗೀತೆ ಹೋಯಿತು; ರಶೀತಿ ಸ್ಟಾಂಪುಗಳ ಮೇಲೆ ನಮ್ಮ ಮಹಾರಾಜರ ಗುರ್ತು ಇರುತ್ತಿದ್ದುದು ಹೋಯಿತು. ಆದುದರಿಂದ ಆ ನಮ್ಮ ವೈಶಿಷ್ಟ್ಯಗಳೆಲ್ಲಾ ಈ ಹೊತ್ತೇನೂ ಹೋಗುತ್ತಿಲ್ಲ; ಇವುಗಳೆಲ್ಲಾ ಹೋಗಿ ಎಷ್ಟೋ ವರ್ಷಗಳಾದವು. ಆದರೆ ಈ ದಿವಸ ಹಾಗೆ ಕೈಬಿಟ್ಟು ಹೋದ ವಿಚಾರಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಎಂದೋ ಹಾಗಿತ್ತು ಹೀಗಿತ್ತು ಎಂದು ಹೇಳಿಕೊಂಡು ಈಗಲೂ ನಮ್ಮ ಮೈಸೂರು ಹೀಗೆಯೇ ಉಳಿಯಲಿ ಎಂದು ಹೇಳುವುದಕ್ಕೆ ಅವಕಾಶವಿಲ್ಲ. ಇದು ಸಾಧ್ಯವೂ ಇಲ್ಲ. ನಾವು ಮೊದಲೇನೋ ದೇಶಸೇವೆಯನ್ನು ನಿಸ್ವಾರ್ಥತೆಯಿಂದ ನೆರವೇರಿಸುತ್ತೇವೆ ಎಂದು ರಾಜಪ್ರಮುಖರಿಗೆ ಪ್ರಮಾಣ ವಚನವನ್ನು ಕೊಟ್ಟಿದ್ದೆವು. ಈ ದಿವಸ ಇಂಡಿಯಾ ದೇಶದ ಅಧ್ಯಕ್ಷರಿಗೆ ಆ ಪ್ರಮಾಣ ವಚನ ಕೊಡುತ್ತೇವೆ. ಆದರೆ ಏನೋ ಒಂದು ಸಾಂಪ್ರದಾಯಿಕವಾಗಿ ನಡೆಯಬೇಕಾದಂಥ ವಿಚಾರಕ್ಕಾಗಿ ರಾಜಪ್ರಮುಖರ ಮುಂದೆ ನಾವು ಪ್ರಮಾಣ ವಚನ ಸ್ವೀಕಾರ ಮಾಡಿದ್ದರೆ ಆ ಒಂದು ನೆಪದ ಮೇಲೆ ಈ ದಿವಸ ಮೈಸೂರು ಹೀಗೆಯೇ ಉಳಿಯಬೇಕೆಂದು ವಾದಿಸತಕ್ಕದ್ದು ಸರಿಯಾದದ್ದಲ್ಲವೆಂದು ನನ್ನ ಭಾವನೆ. ಈ ದಿವಸ ಬಂದಿರತಕ್ಕಂಥ ಈ ರಾಜ್ಯಗಳ ಪುನರ್ವಿಂಗಡಣೆ ಪ್ರಶ್ನೆ ಇಡೀ ಭಾರತಕ್ಕೆಲ್ಲಾ ಅನ್ವಯಿಸುವುದಾಗಿದೆಯೇ ಹೊರತು ಕೇವಲ ನಮ್ಮ ಮೈಸೂರಿಗೆ ಮಾತ್ರ ಅನ್ವಯಿಸುವಂಥಾದ್ದಲ್ಲ. ಇನ್ನು ರಾಜಪ್ರಮುಖರ ಪ್ರಶ್ನೆಯನ್ನು ತೆಗೆದುಕೊಂಡರೆ ಮಹಾರಾಜರಿರುವುದು ಕೇವಲ ಈ ನಮ್ಮ ಮೈಸೂರು ಒಂದರಲ್ಲೇ ಅಲ್ಲ. ಹೈದರಾಬಾದಿನಲ್ಲೂ ರಾಜಪ್ರಮುಖರಿದ್ದಾರೆ. ಈ ವರದಿಯಲ್ಲಿಯೂ ಕೂಡ ಈಗಿನ ರಾಜ್ಯಾಂಗ ವ್ಯವಸ್ಥೆಗನುಗುಣವಾಗಿ ರಾಜಪ್ರಮುಖರುಗಳು ಇರುವುದಕ್ಕೆ ಅವಕಾಶವಿಲ್ಲವೆಂಬ ಅಂಶವನ್ನು ವ್ಯಕ್ತಪಡಿಸಿದ್ದಾರೆ. ಕಳೆದ ತಿಂಗಳು ಡೆಲ್ಲಿಯಲ್ಲಿ ನಡೆದ ಮುಖ್ಯ ಮಂತ್ರಿಗಳ ಸಮ್ಮೇಳನದಲ್ಲಿ ಕೂಡ ಈ ವಿಚಾರ ತೀರ್ಮಾನವಾಗಿ ಹೋಗಿದೆ. ಈಗಿನ ಕಾಲಕ್ಕನುಗುಣವಾಗಿ, ಇಂದಿನ ಪರಿಸ್ಥಿತಿಗನುಸಾರವಾಗಿ ರಾಜಪ್ರಮುಖರು ಇರತಕ್ಕದ್ದು ಸಮಂಜಸವಾಗಿಲ್ಲ ಎನ್ನುವುದನ್ನು ಆ ಮೀಟಿಂಗಿನಲ್ಲಿ ಎಲ್ಲರೂ ವ್ಯಕ್ತಪಡಿಸಿದ್ದಾರೆ. ಆದರೆ ನಾನು ಈ ಸಂದರ್ಭದಲ್ಲ ಹೀಗೆ ಹೇಳುತ್ತಿರುವುದರಿಂದ ನಮ್ಮ ಶ್ರೀಮನ್ಮಹಾರಾಜರ ಬಗ್ಗೆ ನನಗೆ ಭಕ್ತಿ ಗೌರವಗಳು ಇಲ್ಲ ಎಂದು ಯಾರೂ ಭಾವಿಸಬಾರದು. ನಾನು ಅವರ ವಿಚಾರದಲ್ಲಿ ಯಾವಾಗ್ಯೂ ಯಾವ ಅನುಮಾನವೂ ಇಲ್ಲದೆ ನಿರ್ಭಯವಾಗಿ ನನ್ನ ಭಕ್ತಿ ಗೌರವಪೂರ್ವಕವಾದ ಅಭಿಪ್ರಾಯಗಳನ್ನು ಸೂಚಿಸತಕ್ಕವಳಾಗಿದ್ದೇನೆ. ಅಂಥ ಮಹನೀಯರು ನಮಗೆ ದೊರೆತಿರುವುದು ನಮ್ಮೆಲ್ಲರ ಒಂದು ಸುದೈವ. ಅವರ ಆಶೀರ್ವಾದದಿಂದ ನಮ್ಮ ಮೈಸೂರಿಗೊಂದು ಹೆಚ್ಚಿನ ಗೌರವ ಲಭಿಸಿದೆ. ಇಡೀ ಇಂಡಿಯಾದಲ್ಲೇ ಅಲ್ಲ ಇವರು ಇಡೀ ಪ್ರಪಂಚದಲ್ಲೇ ಒಂದು ಅಗ್ರಸ್ಥಾನವನ್ನು ಪಡೆದುಕೊಂಡಿದ್ದಾರೆ. ಇಂಥ ಮಹನೀಯರೂ ಕೂಡ ಈ ದಿವಸ ದೇಶದ ಏಳಿಗೆಗಾಗಿ ಮತ್ತು ದೇಶದ ಒಗ್ಗಟ್ಟಿಗಾಗಿ ಅವರ ರಾಜಪದವಿಯನ್ನು ಬಿಟ್ಟುಕೊಡುವುದಕ್ಕೆ ಮುಂದೆ ಬಂದಿದ್ದಾರೆ. ಜನರ ಕ್ಷೇಮಾಭಿವೃದ್ಧಿಗಳಿಗೆ ಅವರು ಅಡ್ಡಿಬರತಕ್ಕವರಲ್ಲ. ಆದರೆ ಈ ಹಿಂದೆ ನಾವು ರಾಜಪ್ರಮುಖರ ಮುಂದೆ ಪ್ರಮಾಣವಚನ ಕೈಗೊಂಡಿರುವುದರಿಂದ ನಾವು ಈ ದಿವಸ ಮಾಡುತ್ತಿರುವ ಕಾರ್ಯದಿಂದ ವಚನಭ್ರಷ್ಟರಾಗಿದ್ದೇವೆ ಎಂದು ಹೇಳುವುದು ಸರಿಯಲ್ಲ. ಈ ವರದಿಯಲ್ಲಿ ತಿಳಿಸಿದ್ದಾರೆ. ರಾಜಪ್ರಮುಖರಿಗೆ ಹಿಂದಿನ ಮಹಾರಾಜರುಗಳು ಆಗಿದ್ದಾಗ ಯಾವ ಒಂದು ಅನುಕೂಲ ಸೌಲಭ್ಯಗಳನ್ನು ಕಲ್ಪಿಸಿದ್ದರೋ, ಈ ರಾಜಪ್ರಮುಖರ ಸ್ಥಾನವನ್ನು ರದ್ದು ಮಾಡುವುದರಿಂದ ಯಾವ ಒಂದು ಅನುಕೂಲ ಸೌಲಭ್ಯಗಳಿಗೂ ಕೊರತೆಯುಂಟಾಗುವುದಿಲ್ಲ. ಅವು ಅದೇ ರೀತಿ ಮುಂದೆಯೂ ನಡೆದುಕೊಂಡು ಬರುತ್ತವೆ. ರಾಜಪ್ರಮುಖರಾಗಿ ಪಡೆಯುತ್ತಿದ್ದಂಥ ಸೌಲಭ್ಯಗಳು ಏನು

ಇರುತ್ತವೋ ಅವುಗಳು ಮಟ್ಟಿಗೆ ತಪ್ಪಿಹೋಗುತ್ತವೆ. ರಾಜಪ್ರಮುಖರು ತಾವಿದ್ದ ಪ್ರದೇಶದಲ್ಲೇ ಇರಕೂಡದು, ಬೇರೆ ಪರದೇಶಗಳಿಗೆ ಹೋಗಬೇಕು ಎಂದಿದೆ. ಅದಕ್ಕೆ ಕಾರಣಗಳನ್ನು ಕೊಟ್ಟಿದ್ದಾರೆ. ಆ ಕಾರಣಗಳು ನಮ್ಮ ದೇಶಕ್ಕೆ ಅನ್ವಯಿಸುವುದಿಲ್ಲ. ರಾಜಪ್ರಮುಖರು ಮೈಸೂರಿಗೆ ಈಗ ಇದ್ದರೆ, ಮುಂದೆ ಇಡೀ ಕರ್ಣಾಟಕಕ್ಕೆ ರಾಜಪ್ರಮುಖರು ಆಗಬಹುದು. ಮೈಸೂರು ದೇಶ ವಿಶಾಲವಾಗಿ ಇಂಡಿಯಾದಲ್ಲಿ ಒಂದು ಅಗ್ರಸ್ಥಾನವನ್ನು ಪಡೆಯುವುದರಿಂದ ಕರ್ಣಾಟಕ ಎಂಬ ಹೆಸರಿಗೆ ಬದಲಾಗಿ ಮೈಸೂರು ಸಂಸ್ಥಾನವೆಂದು ಕರೆಯುವುದು ಸಾಧುವಾದುದು. ಇದೇ ರೀತಿ ಕರೆಯಬೇಕು ಎಂದು ನನ್ನ ಅಭಿಪ್ರಾಯವೂ ಕೂಡ ಆಗಿದೆ. ಮೈಸೂರು ದೇಶವನ್ನು ವಿಸ್ತರಿಸಬೇಕೇ ಅಥವಾ ಹೀಗೆಯೇ ಇಡಬೇಕೇ ಎಂಬ ವಿಷಯದಲ್ಲಿ ರಾಜಪ್ರಮುಖರ ಅಭಿಪ್ರಾಯ ಏನೆಂಬುದನ್ನು ನಾನು ಸ್ವಂತವಾಗಿ ತಿಳಿದುಕೊಳ್ಳಲು ಅವಕಾಶ ದೊರಕಲಿಲ್ಲ. ಆದರೆ ಈ ಸಂಬಂಧವಾಗಿ ನಡೆದಿರುವ ಘಟನೆಗಳನ್ನು ನೋಡಿದರೆ ರಾಜಪ್ರಮುಖರಿಗೆ ಮೈಸೂರು ದೇಶ ವಿಸ್ತಾರವಾಗಲಿ ಎನ್ನುವ ಮನಸ್ಸು ಇದೆ ಎನ್ನುವುದಕ್ಕೆ ನಿದರ್ಶನಗಳಿವೆ. 1938ನೇ ಇಸವಿಯಲ್ಲಿ ಮೈಸೂರು ದೇಶದಲ್ಲಿ ಡಾ|| ಗೋಪಾಲಸ್ವಾಮಿಯವರು ಆಕಾಶವಾಣಿಯನ್ನು ಸ್ಥಾಪಿಸುವಾಗ ಹೇಳಿದ "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎಂಬ ಗೀತೆಯನ್ನು ಪ್ರತಿ ದಿವಸವೂ ಬೆಳಿಗ್ಗೆ ಸುಪ್ರಭಾತದಲ್ಲಿ ಹಾಡುತ್ತಿಲ್ಲವೆ? 1949ನೇ ಇಸವಿಯಲ್ಲಿ ಆಕಾಶವಾಣಿ ಮೈಸೂರು ಸರ್ಕಾರದವರ ಕೈವಶವಾದಮೇಲೆ ರಾಜಪ್ರಮುಖರಾದ ಶ್ರೀಮನ್ಮಹಾರಾಜರು ತಾವೇ ರಾಜ್ಯಾಡಳಿತ ನಡೆಸುವಾಗ 1944 ರಿಂದ ಪ್ರತಿದಿನ ಬೆಳಿಗ್ಗೆ ಸುಪ್ರಭಾತದಲ್ಲಿ 1947ರ ವರೆಗೆ "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎಂಬ ಗೀತೆಯನ್ನು ನಾವೆಲ್ಲರೂ ರೇಡಿಯೋ ಮುಖಾಂತರ ಕೇಳಿದ್ದೇವೆ. ಕಾವೇರಿ, ಗೋದಾವರಿ, ಕೃಷ್ಣಾದವರೆಗೆ ಮೈಸೂರು ವಿಸ್ತಾರವಾಗಲಿ ಎನ್ನುವ ಅಂಶವನ್ನು ಆ ಗೀತೆ ಒಳಗೊಂಡಿದೆ. ಈ ಹಾಡು ಹಾಡುವುದರಲ್ಲಿ significance ಇಲ್ಲದೆ ಹೋದರೆ ಅದೇ ಹಾಡನ್ನು ಪ್ರತಿದಿನ ಬೆಳಿಗ್ಗೆ ಹಾಡುವ ಪ್ರಮೇಯ ಏನು ಇತ್ತು ಎಂದು ನನ್ನ ಮನಸ್ಸಿಗೆ ಹೊಳೆಯುತ್ತದೆ. All-India Radioನಲ್ಲಿ 1947 ರಿಂದ 1950ನೇ ಇಸವಿಯವರೆಗೆ ಮೂರು ವರ್ಷಗಳು ಅದೇ ಹಾಡನ್ನು ಪ್ರತಿದಿನ ಬೆಳಿಗ್ಗೆ ಕೇಳಿದ್ದೇವೆ. ಆದ್ದರಿಂದ ಪ್ರತ್ಯಕ್ಷವಾಗಿಲ್ಲದೆ ಇದ್ದರೂ ಕೂಡ ಪರೋಕ್ಷವಾಗಿ ರಾಜಪ್ರಮುಖರಿಗೆ ಮೈಸೂರು ದೇಶ ವಿಸ್ತಾರವಾಗಬೇಕು ಎನ್ನುವ ಅಭಿಪ್ರಾಯ ಇರುವುದು ಗೊತ್ತು ಎಂದು ನಾನಾದರೂ ಕೂಡ ಆಲೋಚನೆ ಮಾಡುತ್ತಿದ್ದೇನೆ.

ಒಟ್ಟಿನಲ್ಲಿ ಈ ವರದಿಯು ನಾನಾ ಅಂಶಗಳನ್ನೊಳಗೊಂಡು ಇಡೀ ಇಂಡಿಯಾ ದೇಶದ ಹಿತದೃಷ್ಟಿಯಿಂದ ರಚಿಸಿರತಕ್ಕ ಒಂದು ಪವಿತ್ರವಾದ ಗ್ರಂಥ, ಒಂದು ಉತ್ತಮ ಗ್ರಂಥ ಎಂದು ನನ್ನ ಭಾವನೆ. ಆದ್ದರಿಂದ ಈ ಮಾನ್ಯ ಸಭೆಯ ಸದಸ್ಯರು ಎಲ್ಲರೂ ಕೂಡ ಒಮ್ಮತದಿಂದ ಈ ವರದಿಯನ್ನು ಸ್ವಾಗತಿಸಬೇಕು, ಜೊತೆಗೆ ಭಾಷಾವಾರು ಪ್ರಾಂತಕ್ಕೆ ಹೆಚ್ಚು ಪ್ರಾಧಾನ್ಯ ಕೊಡದೆ ಈ ವರದಿಯನ್ನು ತಯಾರಿಸಿದ್ದಾರೆ ಎಂದು ಹೇಳುವುದಕ್ಕೆ ಹೆಚ್ಚು ತೆಲುಗರು ಇರತಕ್ಕ ಕೋಲಾರವನ್ನು ನಮಗೆ ಸೇರಿಸಿರುವುದು, ಮತ್ತು ಕನ್ನಡಿಗರೇ ಹೆಚ್ಚಾಗಿರತಕ್ಕ ಬಳ್ಳಾರಿಯನ್ನು ಪ್ರತ್ಯೇಕಿಸಿ ಕೊಟ್ಟಿರತಕ್ಕದ್ದು ನಿದರ್ಶನಗಳಾಗಿವೆ. ಅದು ಏನೇ ಇರಲಿ. ಒಟ್ಟಿನಲ್ಲಿ ಈ ಭಾಗಗಳು ಮೈಸೂರಿನಲ್ಲಿ ಉಳಿಯಬೇಕು ಎನ್ನುವುದು ನಮ್ಮ ಹೆಬ್ಬಯಕೆಯಾಗಿರುವುದರಿಂದ ಬಳ್ಳಾರಿ ಮತ್ತು ಸುತ್ತಮುತ್ತಲಿರುವ ಪ್ರದೇಶಗಳು ಇಲ್ಲಿಗೆ ಸೇರಬೇಕು ಎಂದು ಹೇಳಿ ನಮ್ಮ ಮುಂದೆ ಇಟ್ಟಿರತಕ್ಕ ಈ ತಿದ್ದುಪಡಿಯಲ್ಲಿರುವಂತೆ ಈ ವರದಿಯನ್ನು ನಾವೆಲ್ಲರೂ ಸ್ವಾಗತಿಸಿ ಹೃತ್ಪೂರ್ವಕವಾದ ಬೆಂಬಲವನ್ನು ಕೊಟ್ಟು ಒಮ್ಮತದಿಂದ ಇದನ್ನು ಕೇಂದ್ರ ಸರ್ಕಾರದವರಿಗೆ ಕಳುಹಿಸಿಕೊಡಬೇಕೆಂದು ಹೇಳಿ ಈ ಸಭೆಯ ಮೂಲಕ ಪ್ರಾರ್ಥನೆ ಮಾಡುತ್ತಿದ್ದೇನೆ. ಇನ್ನು ಭಾಷಣಗಳನ್ನು ಇಲ್ಲಿ ಮಾಡುವಾಗ ಉದ್ವೇಗಕ್ಕೆ ಅವಕಾಶಕೊಟ್ಟು ಲಿಂಗಾಯಿತರು, ಒಕ್ಕಲಿಗರು ಎಂಬ ಇಬ್ಬರ ಜಗಳ ಇದೆಯೋ ಎನ್ನುವ ರೀತಿ ಈ ಸಭೆಯಲ್ಲಿ ಭಾಷಣವನ್ನು ಕೇಳುತ್ತಾ ಇರುವವರಿಗೆ ತಾನಾಗಿಯೇ ವೇದ್ಯವಾಗುತ್ತಿದೆ. ಏಕೆಂದರೆ ಈ ವಿಷಯದಲ್ಲಿ ಹೇಳುವುದಾದರೆ, 1941ನೇ ಇಸವಿಯ ಸೆನ್ಸಸ್ ಪ್ರಕಾರ ಮೈಸೂರು ಸಂಸ್ಥಾನದಲ್ಲಿರತಕ್ಕ 14½ ಲಕ್ಷ ಒಕ್ಕಲಿಗರು, 8½ ಲಕ್ಷ ಲಿಂಗಾಯಿತರು, ಒಟ್ಟು 23 ಲಕ್ಷ ಪ್ರಜಾ ಸಂಖ್ಯೆಯನ್ನು ಮೈಸೂರು ಸಂಸ್ಥಾನದ ಒಟ್ಟು 73 ಲಕ್ಷ ಪ್ರಜಾ ಸಂಖ್ಯೆಯಲ್ಲಿ ಕಳೆಯುವುದಾದರೆ 45 ಕೋಮುಗಳಿಗೆ ಸೇರಿದ 50 ಲಕ್ಷ ಅಲ್ಪಸಂಖ್ಯಾತ ಜನರು ಇದ್ದಾರೆ ಎಂಬುದನ್ನು ನಾವು ಯಾರೂ ಮರೆಯಬಾರದು. ಈ ಎರಡು ಜನಾಂಗದವರು ಮೈಸೂರು ದೇಶಕ್ಕೆಲ್ಲಾ ಮುಖ್ಯ ಕಾರಣರು. ಈ ಎರಡು ಜನಾಂಗಗಳ ಜನರೇ ಮೈಸೂರು ದೇಶದಲ್ಲಿದ್ದಾರೆ ಎಂಬ ಭ್ರಾಂತಿ ಸಲ್ಲದು. ಅದು ಸರಿಯಲ್ಲ. ಉಳಿದ 50 ಲಕ್ಷ ಪ್ರಜಾ ಸಂಖ್ಯೆಗೂ ಕೂಡ ಮಾತನಾಡತಕ್ಕ ಅವಕಾಶವಿದೆ, ಅರ್ಹತೆ ಇದೆ ಎನ್ನುವುದನ್ನು ಗಮನಿಸಿ ದೇಶದ ಹಿತದೃಷ್ಟಿಯಿಂದ ಈ ಕಾರ್ಯಕ್ಕೆ ಎಲ್ಲರೂ ಬೆಂಬಲ ಕೊಡಬೇಕೆಂದು ಹೇಳಿ ಪ್ರಾರ್ಥಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಕೆ. ಲಕ್ಕಪ್ಪ (ಚನ್ನರಾಯಪಟ್ಟಣ).—ಸ್ವಾಮಿ, ನಮಗೆ ಸ್ವಾತಂತ್ರ್ಯಬಂದಮೇಲೆ, ಎಂಟು ವರ್ಷಗಳ ಅವಧಿಯಲ್ಲಿ ನಮ್ಮ ದೇಶದ ಭೂಪಟ ಬಹಳವಾಗಿ ಬದಲಾವಣೆ ಹೊಂದಿದೆ. ಮೊದಲನೆಯದಾಗಿ ಸ್ವಾತಂತ್ರ್ಯ ಬಂದಕೂಡಲೆ ಪಾಕಿಸ್ತಾನ, ಮತ್ತು ಇಂಡಿಯಾ ಎಂದು ಎರಡು ಭಾಗಗಳಾಗಿ ನಮ್ಮ ಭೂಪಟ ಬದಲಾವಣೆ ಆಯಿತು. ಅದು ಆದ ಕೆಲವು ದಿವಸಗಳಲ್ಲಿ ಇನ್ನೂ ಕೆಲವು ಬದಲಾವಣೆಗಳು ಆದುವು. ನಮಗೆಲ್ಲರಿಗೂ ಗೊತ್ತಿರುವಹಾಗೆ, ಇಂಡಿಯಾದೇಶದಲ್ಲಿ ಅನೇಕ ಸಣ್ಣಪುಟ್ಟ ಮಹಾರಾಜರುಗಳೂ ಸಂಸ್ಥಾನಗಳೂ ಇದ್ದುದು ತಮಗೆ ಗೊತ್ತಿದೆ. ಅದರಿಂದ ದೇಶದ ಐಕ್ಯತೆಗೆ ಮತ್ತು ಭದ್ರತೆಗೆ ಅನಾನುಕೂಲ ಇದೆ ಎನ್ನುವ ಅಭಿಪ್ರಾಯದಿಂದ, ಈ ಸಣ್ಣಪುಟ್ಟ ರಾಜ್ಯಗಳನ್ನೆಲ್ಲಾ ಒಂದುಗೂಡಿಸುವ ಪ್ರಯತ್ನ ನಡೆಯಿತು. ಅದು ಬಹಳ ಯಶಸ್ವಿಯಾಗಿ ನಡೆಯಿತು. ಅದಕ್ಕೆ ಕಾರಣವಾದರೂ ಇಷ್ಟು. ಆ ಸಂದರ್ಭದಲ್ಲಿ ರಾಜಮಹಾರಾಜರುಗಳು ಸ್ವಲ್ಪ ಪ್ರತಿಭಟನೆ ಮಾಡಿದರೇ ಹೊರತು ಸಂಸ್ಥಾನದಲ್ಲಿರತಕ್ಕ ಜನಗಳೆಲ್ಲರಿಂದಲೂ ಈ ರೀತಿ ಸಂಘಟನೆಗೆ ಒಮ್ಮತವಾದ ಬೆಂಬಲ ದೊರೆಯಿತು. ಆ ಕಾರಣದಿಂದ ಆ ರೀತಿ ಆಗ ಪುನರ್ವಿಂಗಡಣೆ ನಡೆಸುವುದಕ್ಕೆ ಬಹಳ ಅನುಕೂಲವಾಯಿತು ಮತ್ತು ಸುಸೂತ್ರವಾಗಿ ಯಾವ ಗಲಭೆಯೂ ಇಲ್ಲದೆ ಆಗುವುದಕ್ಕೆ ಸಾಧ್ಯವಾಯಿತು. ಹೀಗೆ ಸಣ್ಣಪುಟ್ಟ ರಾಜ್ಯಗಳನ್ನು ವಿಲೀನ ಮಾಡಿದ ಕಾಲದಲ್ಲಿ ಕಾಶ್ಮೀರ, ಹೈದರಾಬಾದ್, ಮೈಸೂರು ಈ ದೇಶಗಳನ್ನು ಅವು ಯಾವರೀತಿಯಲ್ಲಿ ಇದ್ದುವೋ ಅದೇರೀತಿಯಲ್ಲಿ ಉಳಿಸಿದರು. ಅದನ್ನು ನಾವು ಈ ಸಂದರ್ಭದಲ್ಲಿ ಹೆಚ್ಚಿಗೆ ಗಮನಿಸಬೇಕಾದ್ದು ನಮ್ಮ ಕರ್ತವ್ಯ.

(ಶ್ರೀ ಕೆ. ಲಕ್ಕಪ್ಪ.)

ಯಾವ ದೃಷ್ಟಿಯಿಂದ ಈ ಸಂದರ್ಭದಲ್ಲಿ ಈ ಮೂರು ಸಂಸ್ಥಾನಗಳನ್ನು ಹೀಗೆ ಉಳಿಸಿದರು ಎನ್ನುವುದನ್ನು ನಾವು ಈಗ ಯೋಚಿಸಬೇಕು. ನಮ್ಮ ಇಂಡಿಯಾ ದೇಶದಲ್ಲಿರುವ ಇತರ ಪ್ರಾಂತಗಳಿಗೆ 'A' States ಎಂದು ಕರೆಯುತ್ತಾರೆ. ಆ ಸ್ಟೇಟ್‌ಗಳಿಗೆ ಸರಿ ಸಮಾನವಾದ ರೀತಿಯಲ್ಲಿ ದಕ್ಷತೆಯಿಂದ, ಆರ್ಥಿಕ ಭದ್ರತೆಯಿಂದ ರಾಜ್ಯವನ್ನು ನಡೆಸಿಕೊಂಡು ಹೋಗತಕ್ಕ ಅನುಕೂಲವಿದೆ. ಈ ಮೂರು ಸಂಸ್ಥಾನಗಳಲ್ಲಿಯೂ ಆ ಅನುಕೂಲ ಇದೆ ಎನ್ನುವ ಅಭಿಪ್ರಾಯದಿಂದ ಆ ಮೂರು ಸಂಸ್ಥಾನಗಳನ್ನು ಹೀಗೆಯೇ ಉಳಿಸಿಕೊಂಡು ಬಂದರು. ಆದರೂ A B C Stateಗಳು ಎಂದು ಮೂರು ತರಹವಾಗಿ ಕರೆದರು. 'B' Statesಗೆ ಮತ್ತು 'A' Statesಗೆ ಇರುವ ಬಹಳ ಮುಖ್ಯ ವ್ಯತ್ಯಾಸ ಎಂದರೆ 'B' Statesಗಳಲ್ಲಿ ರಾಜಪ್ರಮುಖರಿದ್ದಾರೆ. ಅಷ್ಟಾಗಿ ವಿನಾ A B ಸ್ಟೇಟ್‌ಗಳಿಗೆ ಬೇರೆ ಯಾವ ಬಹಳ ಬಲವಾದ ವ್ಯತ್ಯಾಸಗಳೂ ಇರಲಿಲ್ಲ. ಇದ್ದಕಿದ್ದಹಾಗೆ ರಾಜ ಮಹಾರಾಜರುಗಳನ್ನು ತೆಗೆಯುವುದು ಸೂಕ್ತವಲ್ಲ ಎಂದು ಅವರುಗಳನ್ನು ರಾಜಪ್ರಮುಖರೆಂದು ಕರೆದು ಅವರನ್ನು ಉಳಿಸಿಕೊಂಡು ಬಂದರು. ಈ ಒಂದು ಕಾರಣದಿಂದ ಇವು 'B' States ಗಳಾಗಿ ಉಳಿದಿವೆಯೇ ಹೊರತು A B Statesಗೆ ಇನ್ನಾವ ಅಂತರವೂ ಇರಲಿಲ್ಲ. ಅದಾದಮೇಲೆ ಈಗ ಪುನಃ ರಾಜ್ಯಗಳ ಪುನರ್ವಿಂಗಡಣೆ ಪ್ರಶ್ನೆ ದೇಶದ ಮುಂದೆ ಬಂದಿದೆ. ಮೂರನೆಯ ಸಾರ್ತಿ ಪುನರ್ವಿಂಗಡಣೆ ಮಾಡತಕ್ಕ ಸನ್ನಿವೇಶ ಬಂದಿರುವ ಕಾಲದಲ್ಲಿ ಯಾವ S.R.C. ರಿಪೋರ್ಟ್ ಇದೆಯೋ ಆ ರಿಪೋರ್ಟ್ ಸರ್ವ ಸಮನ್ವಯವಾಗಿಲ್ಲ, ಎಲ್ಲ ಜನಗಳ ಅಭಿಪ್ರಾಯಕ್ಕೆ ಸೂಕ್ತವಾಗಿಲ್ಲ ಎಂದು ಯಾವಯಾವ ಪ್ರಾಂತಗಳಲ್ಲಿ ಕಂಡುಬರುತ್ತದೋ, ಆ ಪ್ರಾಂತಗಳಲ್ಲೆಲ್ಲಾ ದೊಡ್ಡ ಗೊಂದಲಕ್ಕೆ ಇಟ್ಟುಕೊಂಡಿದೆ. ಅಲ್ಲಿ ಪ್ರಬಲವಾದ ಪ್ರತಿಭಟನೆಗಳು ನಡೆಯುತ್ತಾ ಇವೆ. ಎಲ್ಲರಿಗೂ ಒಪ್ಪಿಗೆಯಾಗುವ ರೀತಿಯಲ್ಲಿ ಈ S.R.C ರಿಪೋರ್ಟ್ ಇದ್ದ ಪಕ್ಷದಲ್ಲಿ ಖಂಡಿತವಾಗಿ ಈ ರೀತಿಯಾದಂಥ ಗೊಂದಲಕ್ಕೆ ಅಥವಾ ಚರ್ಚೆಗೆ ಅವಕಾಶವಿರುತ್ತಿರಲಿಲ್ಲ. ಇದೇರೀತಿ ಮೈಸೂರು ಮತ್ತು ಇತರ ಕನ್ನಡ ಭಾಗಗಳು ಸೇರಿಕೊಂಡು ಕರ್ಣಾಟಕವಾಗಬೇಕು, ಆಗುವುದು ನ್ಯಾಯ, ಆದ್ದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆ, ನಮಗೂ ಒಳ್ಳೆಯದಾಗುತ್ತದೆ ಎನ್ನುವ ಮನೋಭಾವನೆಯು ಎಲ್ಲ ಜನಗಳಲ್ಲಿಯೂ ಇದ್ದ ಪಕ್ಷದಲ್ಲಿ ಖಂಡಿತವಾಗಿಯೂ ಈ ರೀತಿಯಾದಂಥ ಪ್ರತಿಭಟನೆ ಬರುತ್ತಿರಲಿಲ್ಲ. ಈ ರೀತಿಯಾಗಿ ಪುನರ್ವಿಂಗಡಣೆ ಮಾಡುವುದರಲ್ಲಿ ಬಹಳ ಅನಾನುಕೂಲಗಳಿವೆ, ನಮ್ಮ ಪ್ರಗತಿಗೆ ಧಕ್ಕೆ ಬರತಕ್ಕ ಅವಕಾಶವಿದೆ, ಇದು ಇಡೀ ಇಂಡಿಯಾ ದೇಶದ ಹಿತದೃಷ್ಟಿಯಿಂದಲೂ ಸಹ ಸೂಕ್ತವಾದುದೂ ಅಲ್ಲ, ಒಳ್ಳೆಯದೂ ಅಲ್ಲ ಎಂಬ ಮನವರಿಕೆ ಅನೇಕ ಜನಗಳಿಗಾಗಿರುವುದರಿಂದ ಅದಕ್ಕೆ ಪ್ರತಿಭಟನೆ ಬಂದಿದೆ. ಆ ಪ್ರತಿಭಟನೆಯನ್ನು ಕಡಮೆಮಾಡುವುದಕ್ಕೆ ಅಥವಾ ಅವರ ಮನಸನ್ನು ಒಲಿಸಿಕೊಳ್ಳುವುದಕ್ಕೆ ನಾನಾರೀತಿಯಾದಂಥ ಪ್ರಯತ್ನಗಳು ನಡೆದರೂ ಸಹ ಇವತ್ತು ಮೈಸೂರು ದೇಶದಲ್ಲಿ ಬಲವಾದ ಪ್ರತಿಭಟನೆ ಇದ್ದೇ ಇದೆ. ಇದಕ್ಕೆ ಅಷ್ಟು ಪ್ರಬಲವಾದ ಸಕಾರಣವಾದ ಕಾರಣಗಳು ಇಲ್ಲದೇಇದ್ದ ಪಕ್ಷದಲ್ಲಿ ಈ ಪ್ರತಿಭಟನೆ ಯಾವಾಗಲೋ ನಿಂತು ಹೋಗುತ್ತಿತ್ತು. ಅನೇಕ ಪ್ರಬಲವಾದ ಕಾರಣಗಳು ಇರುವುದರಿಂದ ಇವತ್ತು ಹಾಗೆ ನಿಂತಿದೆ. ಅದು ಈಗಲೇ ಪೂರ್ಣವಾಗಿ ಶಮನವಾಗುತ್ತದೆಯೋ ಅಥವಾ ಮುಂದೆ ಅದ ಯಾವ ರೂಪವನ್ನು ತಾಳುತ್ತದೆ ಎಂದು ಹೇಳುವ ಸ್ಥಿತಿಯಲ್ಲಿ ಇಲ್ಲದ ರೀತಿ ಒಂದು ಪ್ರತಿಭಟನೆ ಉಳಿದೇ ಇದೆ. ಅದು ನಮ್ಮ ಮೈಸೂರು ದೇಶದ ಬಹುಭಾಗದ ಜನರ ಅಭಿಪ್ರಾಯಕ್ಕೆ ಸರಿಹೋಗಿದ್ದ ಪಕ್ಷದಲ್ಲಿ ಖಂಡಿತವಾಗಿಯೂ ಈ ಪ್ರತಿಭಟನೆ ಬರುತ್ತಾ ಇರಲಿಲ್ಲ, ನಾನಾದರೂ ಎಳ್ಳಷ್ಟೂ ಈ ಸಂದರ್ಭದಲ್ಲಿ ಪ್ರತಿಭಟನೆ ಮಾಡುವುದಕ್ಕೆ ಕಾರಣವೂ ಇರಲಿಲ್ಲ. ಮೈಸೂರು ದೇಶದ ಬಹು ಭಾಗದ ಜನರ ಅಭಿಪ್ರಾಯಕ್ಕೆ ಈ ಏಕೀಕರಣ ವಿರೋಧವಾಗಿದೆ ಎನ್ನುವ ಖಚಿತವಾದ ಅಭಿಪ್ರಾಯ ಇವತ್ತುಕೂಡ ನನಗೆ ಇದ್ದೇ ಇದೆ. ಅನೇಕ ಜನ ಕರ್ಣಾಟಕವಾದಿಗಳು ನಾನಾರೀತಿಯಾದಂಥ ವಾದವಿವಾದಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅಂಕಿಅಂಶಗಳನ್ನು ಇಟ್ಟಿದ್ದಾರೆ. ಒಂದು ರೀತ್ಯಾ ಪ್ರತಿಬಂಧಕ ಸಹ ಬಂದಿದೆ. ಇಷ್ಟಾದರೂ ನನಗೆ ಇದರಿಂದ ನಮ್ಮ ಮೈಸೂರು ಸಂಸ್ಥಾನಕ್ಕೆ ಒಳ್ಳೆಯದು ಆಗುತ್ತದೆ ಎಂದು ಇವತ್ತಿನವರೆಗೂ ನನ್ನ ಮನಸ್ಸಿಗೆ ನಾಟಿಲ್ಲ. ಅದಕ್ಕೆ ಬಹು ಮುಖ್ಯವಾದ ಕಾರಣ ಮೈಸೂರುದೇಶದಲ್ಲಿ ಬಹು ಭಾಗದ ಜನರ ಅಭಿಪ್ರಾಯ ಏಕೀಕರಣಕ್ಕೆ ವಿರೋಧವಾಗಿದೆ ಎನ್ನುವುದೇ ಆಗಿದೆ. ಮೈಸೂರು ದೇಶದ ಬಹುಜನರ ಅಭಿಪ್ರಾಯ ಕರ್ಣಾಟಕ ಒಂದೇ ರಾಜ್ಯವಾಗಬೇಕೆಂದು ಇದೆ ಎಂದು S.R.C. ಕಮಿಷನ್ನರವರು ರಿಪೋರ್ಟಿನಲ್ಲಿ ಹೇಳಿದ್ದಾರೆ. ಅವರು ಹಾಗೆ ಹೇಳುವುದಕ್ಕೆ ಬಹುಮಟ್ಟಿಗೆ ಕಾರಣವಿದ್ದರೂ ಇರಬಹುದು. ಅವರು ಜನಾಭಿಪ್ರಾಯವನ್ನು ಯಾವ ರೀತಿ ಶೇಖರಣೆ ಮಾಡಿದ್ದಾರೋ ಅದರಲ್ಲಿ ನಿಜವಾದ ದೇಶದ ಜನಾಭಿಪ್ರಾಯವನ್ನು ಶೇಖರಣೆ ಮಾಡುವ ಕ್ರಮವನ್ನು ಅನುಸರಿಸಿಲ್ಲ. S.R.C. ಕಮಿಷನ್‌ರವರು ಮೈಸೂರು ಸಂಸ್ಥಾನಕ್ಕೆ ಬಂದಾಗ, ನನಗೆ ಗೊತ್ತಿರುವಹಾಗೆ ರಾಜಕೀಯಕ್ಷೇತ್ರದಲ್ಲಿರುವ ಕೆಲವು ಪ್ರಮುಖರಿಗೆ ಈ ರೀತಿಯಾಗಿ ಅಭಿಪ್ರಾಯ ಶೇಖರಣೆ ಮಾಡುತ್ತಾರೆಂದು ಗೊತ್ತಾಯಿತೇ ಹೊರತು ದೇಶದ ಬಹು ಭಾಗದ ಜನರಿಗೆ ಈ ರೀತಿಯಾಗಿ ಅಭಿಪ್ರಾಯವನ್ನು ಶೇಖರಣೆ ಮಾಡುತ್ತಾರೆ ಎಂದು ಸಹ ಗೊತ್ತಿರಲಿಲ್ಲ. ಹಾಗೆ ಬಂದವರನ್ನು ಕೇಳಿಕೊಂಡು ಹೋದರೆ, ದೇಶಾಭಿಪ್ರಾಯ ಹೀಗೆ ಎಂದು ಖಚಿತವಾಗಿ ಅಭಿಪ್ರಾಯ ಕೊಡುವುದಕ್ಕೆ ಅದು ಸರಿಯಾದ ಮಾರ್ಗವಲ್ಲ. ಸರಿಯಾದ ಮಾರ್ಗವೆಂದರೆ ಪ್ಲೆಬಿಸ್ಸೈಟ್. ಆದರೆ ಈ ಪ್ಲೆಬಿಸ್ಸೈಟ್ ತೆಗೆದುಕೊಳ್ಳುವುದು ಸೂಕ್ತವೇ ಎನ್ನುವುದನ್ನು ಸ್ಥೂಲವಾಗಿ ನಾವು ಯೋಚನೆಮಾಡಬೇಕು.

ನನ್ನ ಅಭಿಪ್ರಾಯದಲ್ಲಾದರೂ ಈಗಿನ ಸನ್ನಿವೇಶದಲ್ಲಿ ಪ್ಲೆಬಿಸ್ಸೈಟ್ ತೆಗೆದುಕೊಳ್ಳುವುದಕ್ಕೆ ಬಹಳ ಕಷ್ಟವಾಗುತ್ತದೆ. ಇದಕ್ಕೆ ಅನೇಕ ತೊಂದರೆಗಳಿವೆ. ಅಪಾರ ಹಣ ಖರ್ಚಾಗುತ್ತದೆ. ಇದನ್ನು ಮಾಡುವುದಕ್ಕೆ ಸಾಧ್ಯವಿಲ್ಲದೇ ಹೋದರೂ ಜನರ ಪ್ರತಿನಿಧಿಗಳಾಗಿರುವ ಶಾಸನಸಭೆಗಳ ಸದಸ್ಯರ ಪೂರ್ಣ ಅಭಿಪ್ರಾಯವನ್ನು ತೆಗೆದುಕೊಳ್ಳುವುದಕ್ಕೆ ಒಂದು ಕಾರ್ಯಕ್ರಮವನ್ನನುಸರಿಸಿ ಅವರು ಒಂದು ನಿರ್ಧಾರಕ್ಕೆ ಬಂದಿದ್ದರೆ ಖಂಡಿತವಾಗಿ ಇದಕ್ಕೆ ವಿರೋಧಾಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಅವಕಾಶವಿರಲಿಲ್ಲ. ಒಂದುವೇಳೆ ನಮ್ಮ ಮನಸ್ಸು ಒಪ್ಪದೇಇದ್ದರೂ ಪ್ರಜಾಪ್ರಭುತ್ವತತ್ವವನ್ನು ಒಪ್ಪಿಕೊಂಡು ನಾವು ನಿಯಮಗಳಿಗನುಸಾರವಾಗಿ ನಡೆಯಬೇಕಾದ ಪದ್ಧತಿ ನಮ್ಮಲ್ಲಿದೆ ಎನ್ನುವುದನ್ನರಿತು ನಾವು ಹೆಚ್ಚು ಜನರ ಅಭಿಪ್ರಾಯಕ್ಕೆ ತಲೆಬಾಗಲೇ ಬೇಕಾಗುತ್ತದೆ. ಆ ರೀತಿಯ ಕ್ರಮವನ್ನು ಕೂಡ ಈ ದಿವಸ ಅನುಸರಿಸುತ್ತಿಲ್ಲ. ಶಾಸನಸಭೆ ನಡೆಯುತ್ತದೆ. ಆದರೆ ನಾವು

ಸ್ವತಂತ್ರವಾಗಿ, ಯಾವ ಭಯವೂ ಇಲ್ಲದೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೂ ಆತಂಕಗಳನ್ನು ತಂದೊಡ್ಡಿ ಒಂದು ನಿರ್ಬಂಧವನ್ನಿಟ್ಟು ನಮ್ಮ ಮುಂದೆ ನಮ್ಮ ಅಭಿಪ್ರಾಯವನ್ನು ಶೇಖರಣೆ ಮಾಡತಕ್ಕ ಸನ್ನಿವೇಶ ಬಂದಿದೆ. ಇದು ಬಹಳ ವಿಷಾದಕರವಾದುದು. ಅದೂ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ತತ್ವವನ್ನೊಪ್ಪಿಕೊಂಡು, ಪ್ರಜಾಪ್ರಭುತ್ವ ಪದ್ಧತಿಯ ಸರ್ಕಾರವಿರತಕ್ಕ ಈ ಸನ್ನಿವೇಶದಲ್ಲಿ ಈ ರೀತಿ ಪ್ರಜಾಭಿಪ್ರಾಯಕ್ಕೆ ಮನ್ನಣೆ ಕೊಡದೆಯಿರುವ ಧೋರಣೆ ತೋರಿರುವುದು ಖಂಡಿತ ಸರಿಯಲ್ಲ. ಇದು ಪ್ರಜಾಪ್ರಭುತ್ವ ರಾಜ್ಯಗಳ ಗೌರವಕ್ಕೂ ಕೂಡ ಒಳ್ಳೆಯದಲ್ಲವೆಂದು ನಾನು ಸೂಚಿಸಬೇಕಾಗಿದೆ. ಕೆಲವು ಕಡೆ ಯಾವ ವಿರೋಧವೂ ಇಲ್ಲದೆ ಈ ಪ್ರಾಂತ ಪುನರ್ವಿಂಗಡಣಾ ಸಮಿತಿಯವರು ಮಾಡಿರತಕ್ಕ ತೀರ್ಮಾನವನ್ನು ಒಪ್ಪಿಕೊಂಡಿದ್ದಾರೆ. ಉದಾಹರಣೆಗೆ ಬೀಹಾರ್, ಉತ್ತರ ಪ್ರದೇಶದವರು ಈ ವರದಿಯಲ್ಲಿರುವ ಸಲಹೆಗಳನ್ನು ಬಹಳಮಟ್ಟಿಗೆ ಒಪ್ಪಿ ನಿರ್ಧಾರ ತೆಗೆದುಕೊಂಡಿದ್ದಾರೆ. ಅದಕ್ಕೆ ಕಾರಣವಾದರೂ ಇಷ್ಟೆ; ಅಲ್ಲಿ ಬಹು ಜನರ ಅಭಿಪ್ರಾಯ ಇದಕ್ಕನುಕೂಲವಾಗಿರುವುದರಿಂದ ಆ ರೀತಿ ತೀರ್ಮಾನ ತೆಗೆದುಕೊಂಡಿದ್ದಾರೆಂದು ನಾವು ಹೇಳಬಹುದು. ಆದರೆ ಅದೇ ರೀತಿ ಬಹುಮತಾಭಿಪ್ರಾಯವನ್ನು ಇತರ ಪ್ರಾಂತಗಳಲ್ಲಿ ತೆಗೆದುಕೊಳ್ಳುವುದಕ್ಕೆ ಏಕೆ ಪ್ರಯತ್ನಪಡಲಿಲ್ಲ? ಇನ್ನೊಂದು ಸಂಗತಿ ನಮ್ಮಲ್ಲಿ ಬಹಳ ವಿಷಾದವನ್ನುಂಟುಮಾಡಿದೆ. ಇದು ಸಾಮಾನ್ಯ ಪ್ರಶ್ನೆಯಲ್ಲ. ಇದು ಸಂಸ್ಥಾನದ ಜನರ ಆಗುಹೋಗುಗಳಿಗೆ ಸಂಬಂಧಪಟ್ಟ ಪ್ರಶ್ನೆ. ಇಂಥ ಪ್ರಶ್ನೆ ನಮ್ಮ ಮುಂದಿರುವಾಗ ಪ್ರಜಾಭಿಪ್ರಾಯವನ್ನು ಸರಿಯಾದ ರೀತಿಯಲ್ಲಿ ಕ್ರೋಢೀಕರಿಸುವುದಕ್ಕೆ ಪ್ರಯತ್ನ ಮಾಡಬೇಕಾಗಿತ್ತು. ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಎರಡು ವಿಧವಾದ ಮಾರ್ಗಗಳನ್ನನುಸರಿಸುವುದು ಸ್ವಾಭಾವಿಕವಾದ ಪದ್ಧತಿ. ಇಂಥ ನ್ಯಾಯವಿಧಾಯಕ ಸಭೆಯಲ್ಲಿ ಬಹುಮತಾಭಿಪ್ರಾಯ ತೆಗೆದುಕೊಳ್ಳುವುದು, ಕೆಲವು ಸಂದರ್ಭಗಳಲ್ಲಿ ಮೂರನೆಯ-ಎರಡು ಭಾಗದಷ್ಟು ಸಂಖ್ಯೆಯ ಸದಸ್ಯರ ಅಭಿಪ್ರಾಯದಂತೆ ನಡೆಯುವುದು, ಸಾಧಾರಣವಾಗಿ ಈ ಎರಡು ಕ್ರಮಗಳನ್ನು ಅನುಸರಿಸುತ್ತಾರೆ. ಸಾಮಾನ್ಯವಾದ ಪ್ರಶ್ನೆಯಾಗಿದ್ದರೆ ಬಹುಮತಾಭಿಪ್ರಾಯದಂತೆ ನಾವು ಒಪ್ಪುತ್ತೇವೆ. ಅಂದರೆ simple majority. ಬಹಳ ಮುಖ್ಯವಾದ ಪ್ರಶ್ನೆ ಇರುವ ಕಾಲದಲ್ಲಿ ಕೊನೆಯಪಕ್ಷ ಮೂರನೆಯ ಎರಡು ಭಾಗದಷ್ಟು ಪ್ರತಿನಿಧಿಗಳ ಅಭಿಪ್ರಾಯವಾದರೂ ಇರಬೇಕೆಂದು, ವಿಶೇಷ ಸಂದರ್ಭಗಳಲ್ಲಿ ಈ ಪದ್ಧತಿಯನ್ನನುಸರಿಸಿಕೊಂಡು ಹೋಗುತ್ತೇವೆ. ಈ ಹೊತ್ತು ನಮ್ಮ ಮುಂದಿರತಕ್ಕ ಪ್ರಶ್ನೆಯಾದರೂ ವಿಶೇಷ ರೀತಿಯ ಪ್ರಶ್ನೆ. ನಮ್ಮ ಮೈಸೂರು ಶಾಸನಸಭಾ ಸದಸ್ಯರಲ್ಲಿ ಮೂರನೆಯ ಎರಡು ಭಾಗದಷ್ಟು ಜನರು ಮೈಸೂರಿಗೆ ಇತರ ಭಾಗಗಳನ್ನು ಸೇರಿಸಿಕೊಳ್ಳಿ ಎಂದುಅಭಿಪ್ರಾಯಪಡುವುದಾದರೆ ಖಂಡಿತವಾಗಿ ಯಾವ ವಿರೋಧವನ್ನೂ ತೋರಿಸದೆ ತಲೆಬಾಗುವುದಕ್ಕೆ ಸಿದ್ಧವಾಗಿರುತ್ತೇವೆ. ಸಾಧಾರಣ ಸಂದರ್ಭಗಳಲ್ಲಿ simple majority ಪದ್ಧತಿಯನ್ನನುಸರಿಸುತ್ತೇವೆ. ಆದರೆ ಇದು ಅಂಥ ಸಾಧಾರಣ ವಿಚಾರವಲ್ಲ. ಮೂರನೆಯ ಎರಡು ಭಾಗ ಸದಸ್ಯರ ಅಭಿಪ್ರಾಯವನ್ನು ತೆಗೆದುಕೊಳ್ಳುವುದು ಈ ಸಂದರ್ಭದಲ್ಲಿ ನ್ಯಾಯವೆಂದು ಹೇಳುತ್ತೇನೆ. ಇದನ್ನು ಎಲ್ಲ ಕಡೆಯೂ ಅನುಸರಿಸುತ್ತಿದ್ದಾರೆ. ಪ್ರಾಂತಪುನರ್ವಿಂಗಡಣಾ ಸಮಿತಿಯವರು ಕೂಡ ಇದನ್ನು ಸೂಚಿಸಿದ್ದಾರೆ. ಹೈದರಾಬಾದನ್ನು ವಿಭಾಗಮಾಡಿ ತೆಲಂಗಾಣ ಪ್ರಾಂತವಾಗುವ ಸಂದರ್ಭದಲ್ಲಿ ಇದನ್ನು ಸೂಚಿಸಿದ್ದಾರೆ. ಅವರ ಒಂದುವೇಳೆ ಆಂಧ್ರದಲ್ಲಿ ಸೇರಬೇಕೆಂದೂ ವಿಶಾಲಾಂಧ್ರವಾಗಬೇಕೆಂದೂ ಇದ್ದರೆ, ಶಾಸನಸಭಾ ಸದಸ್ಯರಲ್ಲಿ ಮೂರನೆಯ ಎರಡು ಭಾಗದಷ್ಟು ಜನ ಒಪ್ಪಿದರೆ ಆಗಬಹುದೆಂದು ಸೂಚನೆ ಕೊಟ್ಟಿದ್ದಾರೆ. ಈ ರೀತಿ ಕೊಡುವುದಕ್ಕೆ ಕಾರಣವೇನೆಂದರೆ, ಇಂಥ ಮಹತ್ತರವಾದ ಪ್ರಶ್ನೆ ಮುಂದಿರುವಾಗ, ಅದಕ್ಕೆ ಹೆಚ್ಚು ಜನರ ಅಭಿಪ್ರಾಯ ಅನುಕೂಲವಾಗಿರಬೇಕೆಂದು ಅವರ ಉದ್ದೇಶ. ಈ ಕ್ರಮವನ್ನು ಇಲ್ಲಿ ಅನುಸರಿಸದೆ, ನಮ್ಮ ಶಾಸನಸಭೆ ನಡೆಯುವ ಕಾಲದಲ್ಲಿ, ಮಧ್ಯದಲ್ಲಿ ನಮ್ಮ ಮೇಲೆ ಒಂದು ನಿರ್ಬಂಧವನ್ನು ಹೊರಿಸಿ ಅಭಿಪ್ರಾಯ ಶೇಖರಣೆ ಮಾಡಿದ್ದು ಖಂಡಿತ ನ್ಯಾಯವಲ್ಲ. ಇದು ಕೇವಲ ಬಲವಂತದಿಂದ ಕಟ್ಟತಕ್ಕ ರಾಜ್ಯವೇ ಹೊರತು ಬಹುಭಾಗ ಜನರ ಒಮ್ಮತಾಭಿಪ್ರಾಯದಿಂದಾಗುತ್ತದೆಂದು ಒಪ್ಪುವುದಕ್ಕಾಗುವುದಿಲ್ಲ. ಈ ರೀತಿ ಆಗಬಾರದೆಂದು ತುಂಬ ವಿಷಾದದಿಂದ ಹೇಳುತ್ತೇನೆ.

ಎರಡನೆಯದಾಗಿ, ರಾಜ್ಯಗಳನ್ನು ಪುನರ್ವಿಂಗಡಣೆ ಮಾಡತಕ್ಕ ಕಾಲದಲ್ಲಿ ಇಡೀ ಇಂಡಿಯಾ ದೇಶಕ್ಕೆ ಅನ್ವಯವಾಗುವ ರೀತಿಯಲ್ಲಿ ಒಂದು ತತ್ವವನ್ನನುಸರಿಸಿ ಅದರ ಪ್ರಕಾರ ಎಲ್ಲರಿಗೂ ಸರಿಹೋಗುವ ರೀತಿಯಲ್ಲಿ ಮತ್ತು ಒಂದೇ ಸಮನಾದ ತತ್ವದ ಆಧಾರದ ಮೇಲೆ ಇಂಡಿಯಾ ದೇಶವನ್ನು ವಿಭಾಗಮಾಡಿದ್ದಾರೆಯೇ ಎಂದರೆ, ಈ ಕಮಿಷನ್ನಿನವರು ಆ ರೀತಿ ಮಾಡಿಲ್ಲ. ಅಂದ ಮಾತ್ರಕ್ಕೇ ಆ ಸದಸ್ಯರ ವ್ಯಕ್ತಿತ್ವ, ದೇಶಾಭಿಮಾನದ ವಿಷಯವಾಗಿ ನಾನು ಟೀಕೆಮಾಡುವುದಿಲ್ಲ. ನಮ್ಮ ಸಭೆಯಮುಂದೆ ಬಿಲ್ಲುಗಳು ಬಂದಾಗ ಅನೇಕ ಸಂದರ್ಭಗಳಲ್ಲಿ ನಮ್ಮ ಸದಸ್ಯರಲ್ಲಿ ಕೆಲವರನ್ನೊಳಗೊಂಡ ಸೆಲೆಕ್ಟ್ ಕಮಿಟಿಗಳೆಂದು ಮಾಡಿ, ಆ ಬಿಲ್ಲುಗಳನ್ನು ಪರಿಶೀಲನೆ ಮಾಡಿ ಸಭೆಗೆ ವರದಿಮಾಡುವ ಕೆಲಸವನ್ನು ಅವರಿಗೆ ವಹಿಸುತ್ತೇವೆ. ಆ ಸಮಿತಿಯವರು ತಮ್ಮ ವರದಿಯನ್ನು ನಮ್ಮ ಮುಂದಿಡುತ್ತಾರೆ. ಅಂದ ಮಾತ್ರಕ್ಕೇ ಅವರು ಎಲ್ಲರಿಗಿಂತ ಬುದ್ಧಿಶಾಲಿಗಳು, ಎಲ್ಲವನ್ನೂ ಸರಿಯಾಗಿ ತೂಕಮಾಡಿ ವರದಿಯನ್ನು ಕೊಟ್ಟಿದ್ದಾರೆ, ಅವರು ಮಾಡಿದ ಸಲಹೆಗಳೆಲ್ಲವೂ ಸರಿ ಎಂದು ಯಾರೂ ಹೇಳುವುದಿಲ್ಲ, ಒಪ್ಪುವುದಿಲ್ಲ. ಅದರಲ್ಲಿ ಏನಾದರೂ ಬದಲಾವಣೆ ಮಾಡುವುದಿದ್ದರೆ ಮಾಡಿಕೊಂಡು ಅನಂತರ ಜಾರಿಗೆ ತರುತ್ತೇವೆ. ಇದು ಎಲ್ಲ ಕಡೆಯೂ ಇರುವ ಪದ್ಧತಿ. ಹಾಗೆಯೇ ಅವರ ಈ ವರದಿಯನ್ನು ನಮ್ಮ ಮುಂದಿಟ್ಟಿದ್ದಾರೆ. ಇದು ಎಲ್ಲರಿಗೂ ಅನ್ವಯಿಸುವ ಸರಿಯಾದ ರೀತಿಯಲ್ಲಿಲ್ಲವೆಂದು ಕಂಡುಬರುತ್ತದೆ. ನಾನು ಮೊದಲೇ ಹೇಳಿದಹಾಗೆ, ಇಂಡಿಯಾ ದೇಶದ ರಾಜ್ಯಗಳನ್ನು ಪುನರ್ವಿಂಗಡಣೆ ಮಾಡುವ ಕಾಲದಲ್ಲಿ ಎಲ್ಲ ಪ್ರಾಂತಗಳಿಗೂ ಅನ್ವಯಿಸುವ ರೀತಿ ತತ್ವಗಳ ಮೇಲೆ ಮಾಡಿಲ್ಲವೆಂದು ವಿಷಾದದಿಂದ ಹೇಳುತ್ತೇನೆ. ಇಡೀ ಇಂಡಿಯಾ ದೇಶವನ್ನು ಸಮವಾಗಿ ಭಾಗಗಳಾಗಿ ಮಾಡಿ ಸ್ವಲ್ಪ ಹೆಚ್ಚು ಕಡಮೆ ವಿಸ್ತೀರ್ಣ, ಜನಸಂಖ್ಯೆ, ಆರ್ಥಿಕಸ್ಥಿತಿ ಎಲ್ಲವನ್ನೂ ನೋಡಿ ಸಮನಾದ ರೀತಿಯಲ್ಲಿ ಎಲ್ಲವನ್ನೂ ಪುನರ್ವಿಂಗಡಣೆ ಮಾಡಿದ್ದರೆ, ಖಂಡಿತವಾಗಿ ಯಾವ ಜನರಿಂದಲೂ ಇದಕ್ಕೆ ವಿರೋಧ ಬರುತ್ತಿರಲಿಲ್ಲ. ಉತ್ತರಪ್ರದೇಶವನ್ನು 6 ಕೋಟಿ 30 ಲಕ್ಷ ಪ್ರಜಾ ಸಂಖ್ಯೆಯುಳ್ಳ ಪ್ರಾಂತವಾಗಿ ಮಾಡಿದ್ದಾರೆ, ನಾಲ್ಕು ಕೋಟಿ, ಎರಡು ಕೋಟಿ ಜನಸಂಖ್ಯೆ ಇರುವ ಬೀಹಾರ್, ಮಧ್ಯ ಪ್ರದೇಶಗಳನ್ನು ಮಾಡಿದ್ದಾರೆ. ಇನ್ನು ಕೆಲವು ಕಡಮೆ ಜನ

(ಶ್ರೀ ಕೆ. ಲಕ್ಕಪ್ಪ.)

ಸಂಖ್ಯೆ ಇರುವುದನ್ನು ಮಾಡಿದ್ದಾರೆ, ವಿದರ್ಭ, ತೆಲಂಗಣ, ಕೊಚ್ಚಿ, ಕರ್ಣಾಟಕ ಇವೆಲ್ಲವನ್ನೂ ಕಡಿಮೆ ಜನ ಸಂಖ್ಯೆ ಇರುವ ರಾಜ್ಯಗಳಾಗಿ ಮಾಡಿದ್ದಾರೆ. ಈ ರೀತಿ ಮಾಡಿರುವುದರಿಂದ ಅವರು ಒಂದು ತತ್ವವನ್ನನುಸರಿಸಿದ್ದಾರೆಂದು ಹೇಳುವ ಹಾಗಿಲ್ಲ. ಈ ರೀತಿ ವಿಂಗಡಣೆ ಮಾಡುವಾಗ ಒಬ್ಬೊಬ್ಬರು ಒಂದೊಂದು ವಾದವನ್ನು ಮುಂದಿಟ್ಟಿದ್ದಾರೆ. ಈ ಕಮಿಷನ್ನಿನವರೂ ಆ ರೀತಿ ವಾದವನ್ನಿಟ್ಟಿದ್ದಾರೆ. ಪ್ರಾಂತ ವಿಶಾಲವಾಗಿದ್ದ ಪಕ್ಷದಲ್ಲಿ ಅದರಿಂದ ಆರ್ಥಿಕ ಸ್ಥಿತಿ ಅಭಿವೃದ್ಧಿಯಾಗಬಹುದು, ಖರ್ಚು ವೆಚ್ಚ ಕಡಮೆಯಾಗಬಹುದು, ಚೆನ್ನಾಗಿ ಬೆಳೆಯುವುದಕ್ಕವಕಾಶವಿದೆ ಎಂದು ಕೆಲವು ಸಂದರ್ಭಗಳಲ್ಲಿ ಸೂಚನೆ ಮಾಡಿದ್ದಾರೆ. ಆದರೆ ಇನ್ನು ಕೆಲವು ಪ್ರಾಂತಗಳನ್ನು ವಿಂಗಡಣೆ ಮಾಡುವಾಗ ಈ ವಾದವನ್ನು ಬದಲಾಯಿಸಿದ್ದಾರೆ. ಅವರಲ್ಲಿ ಒಬ್ಬ ಸದಸ್ಯರು ಉತ್ತರ ಪ್ರದೇಶದ ವಿಚಾರದಲ್ಲಿ ಬೇರೆ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಹೀಗೆ ಬೇರೆ ರೀತಿ ಅಭಿಪ್ರಾಯವನ್ನು ವ್ಯಕ್ತಪಡಿಸುವ ಕಾಲದಲ್ಲಿ ಅವರು ವಿಶಾಲವಾದ ಸಂಸ್ಥಾನವನ್ನು ಮಾಡುವುದರಿಂದ ಬಹಳ ಅನಾನುಕೂಲವಿದೆ ಎನ್ನುವುದನ್ನು ಎತ್ತಿ ಎತ್ತಿ ತೋರಿಸಿದ್ದಾರೆ. ಒಂದು ದೇಶ ಕೇವಲ ವಿಶಾಲವಾಗಿದ್ದ ಮಾತ್ರಕ್ಕೇ ಅದು ಬಹಳ ಶಕ್ತಿಯುತವಾದ ರಾಜ್ಯವಾಗುತ್ತದೆ ಎಂದು ಹೇಳುವ ಹಾಗಿಲ್ಲವೆಂದು ಈ ವರದಿಯ 270ನೆಯ ಪ್ಯಾರಾದಲ್ಲಿ ಹೇಳಿದ್ದಾರೆ. ಇದೇರೀತಿ ಒಂದು ರಾಜ್ಯವನ್ನು ನಿರ್ಮಾಣ ಮಾಡುವ ಕಾಲದಲ್ಲಿ ಅದು ಹೆಚ್ಚು ವೆಚ್ಚ ಮಾಡುವ ಸ್ಥಿತಿಯಲ್ಲಿದ್ದ ಮಾತ್ರಕ್ಕೇ ಅದು ಬಲಯುತ ರಾಜ್ಯವಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ, ಎಂದು ಹೇಳಿ ಇದನ್ನು ಸಮರ್ಥಿಸಲು ಅನೇಕ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಹೀಗೆ ಅವರು ವಿಂಗಡಣೆ ಮಾಡುವ ಕಾಲದಲ್ಲಿ ಒಂದೊಂದು ಪ್ರಾಂತವನ್ನು ಮಾಡುವಾಗ ಒಂದೊಂದು ರೀತಿಯ ವಾದವನ್ನು ನಮ್ಮ ಮುಂದಿಟ್ಟುಕೊಂಡು ಹೋಗಿದ್ದಾರೆ. ಆದುದರಿಂದ ಅವರು ಹೇಳುವ ಮಾತನ್ನು ಎಲ್ಲಾ ಸಂದರ್ಭಗಳಲ್ಲಿಯೂ ಸಾಧುವೆಂದು ನಾವು ಯಾರೂ ಒಪ್ಪುವುದಕ್ಕಾಗುವುದಿಲ್ಲ. ನನ್ನ ಅಭಿಪ್ರಾಯವಾದರೂ, ಅತಿ ವಿಶಾಲವಾದ ದೇಶ ಅಥವಾ ಅತಿ ಚಿಕ್ಕದಾದ ದೇಶ ಎರಡರಲ್ಲೂ ಪ್ರಗತಿಗೆ ಕುಂದಕವಿದೆ. ಇದನ್ನು ನಾವು ಕಣ್ಣಾರೆ ನೋಡುತಿದ್ದೇವೆ. ಈ ಹೊತ್ತು ಬೊಂಬಾಯಿ ಪ್ರಾಂತದಲ್ಲಿರುವ ಕನ್ನಡನಾಡ ಸಹೋದರರು ನಮ್ಮ ಮೈಸೂರಿಗೆ ಬಂದು ಸೇರಿಕೊಳ್ಳಬೇಕೆಂದು ಆಶೆಪಡುತ್ತಿದ್ದರೆ ಅದಕ್ಕೆ ಅನೇಕ ಕಾರಣಗಳಿವೆ. ಬೊಂಬಾಯಿ ಬಹಳ ವಿಶಾಲವಾದ ದೇಶ. ಈ ದೇಶದ ಒಂದು ಮೂಲೆಯಲ್ಲಿ ದಕ್ಷಿಣದ ಕೊನೆಯಲ್ಲಿ ಕನ್ನಡ ಸಹೋದರರು ಸೇರಿಕೊಂಡಿದ್ದಾರೆ. ಬೊಂಬಾಯಿ ವಿಶಾಲವಾದ ರಾಜ್ಯವಾಗಿರುವುದರಿಂದ ಆ ಸರ್ಕಾರ ಅವರ ಕಡೆ ಸಾಕಷ್ಟು ಗಮನವನ್ನು ಕೊಟ್ಟು ಅವರ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯವಿಲ್ಲವಾಗಿದೆ. ಈ ಕಾರಣದಿಂದ ಅವರು ನಮ್ಮ ಮೈಸೂರು ದೇಶಕ್ಕೆ ಸೇರುತ್ತೇವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದಾರೆಂದು ಹೇಳುವುದರಲ್ಲಿ ಯಾವ ಆಕ್ಷೇಪಣೆಯೂ ಇಲ್ಲ. ಉತ್ತರ ಪ್ರದೇಶದ ವಿಚಾರದಲ್ಲಿಯೂ ಇದೇ ರೀತಿಯಾಗಿದೆಯೆಂದು ಅನೇಕ ಮಿತ್ರರು ಅಲ್ಲಿ ಹೋಗಿ ನೋಡಿಕೊಂಡು ಬಂದಿರುವವರು ಹೇಳುತ್ತಾರೆ. ಅಲ್ಲಿ ದೊಡ್ಡ ದೊಡ್ಡ ಪಟ್ಟಣಗಳನ್ನು ಬಿಟ್ಟರೆ, ಗ್ರಾಮಾಂತರಗಳಲ್ಲಿ ಸಾಮಾನ್ಯವಾಗಿ ಜನರು ಬಹಳ ಹಿಂದೆ ಬಿದ್ದಿದ್ದಾರೆಂದು ಹೇಳುತ್ತಾರೆ. ವಿದ್ಯಾ ಪ್ರಗತಿಯ ವಿಚಾರದಲ್ಲಿ ಅಂಕಿ ಅಂಶಗಳನ್ನು ನೋಡಿದರೆ, ಶೇಕಡ 12 ರಷ್ಟು ಮಾತ್ರ ವಿದ್ಯಾವಂತರಾಗಿದ್ದಾರೆ. ಅಷ್ಟು ವಿಶಾಲವಾಗಿರುವುದರಿಂದಲೇ ಆ ರಾಜ್ಯ ಅಷ್ಟು ಹಿಂದಿದೆ ಎನ್ನುವುದು ಕಾಣುತ್ತದೆ. ಒಂದು ದೇಶ ಸಾಧ್ಯವಾದ ಮಟ್ಟಿಗೂ ಒಂದು ರೀತಿಯಲ್ಲಿದ್ದ ಪಕ್ಷದಲ್ಲಿ ಅದು ಎಲ್ಲಾ ಕ್ಷೇತ್ರಗಳಲ್ಲಿಯೂ ಮುಂದೆ ಬರುವುದಕ್ಕೆ ಅವಕಾಶ ಬಹಳವಾಗಿದೆ ಎನ್ನುವುದು ನನ್ನ ಖಚಿತವಾದ ಅಭಿಪ್ರಾಯ. ಈ ಕಾರಣದಿಂದಲೇ ನಮ್ಮ ಮೈಸೂರು ದೇಶ ಇಂಡಿಯಾ ದೇಶದಲ್ಲಿ ಅಗ್ರಸ್ಥಾನವನ್ನು ಗಳಿಸಿ ಖ್ಯಾತಿಗೆ ಬರುವುದಕ್ಕವಕಾಶವಾಯಿತು. ಮೈಸೂರು ಮೈಸೂರಾಗಿಯೇ ಉಳಿಯಬೇಕೆಂಬುದು ನಮ್ಮೆಲ್ಲರ ಅಭಿಪ್ರಾಯವಾಗಿದೆ. ನಮ್ಮ ಕನ್ನಡ ಸಹೋದರರನ್ನು ಬೇರೆ ಕನ್ನಡ ಪ್ರಾಂತದಲ್ಲಿರುವವರನ್ನು ನಮ್ಮಲ್ಲಿ ಸೇರಿಸಬಾರದೆಂಬ ಅಭಿಪ್ರಾಯ ಯಾರಲ್ಲಿಯೂ ಇಲ್ಲ. ಕನ್ನಡ ಅಭಿಮಾನದಿಂದಲಾದರೂ ಅವರು ನಮ್ಮ ಸಹೋದರರೆಂದು ನಮ್ಮ ಜೊತೆಯಲ್ಲಿ ಸೇರಿಸಿಕೊಂಡರೆ ಅನಾನುಕೂಲವಾಗಬಹುದೆಂಬ ಶಂಕೆ ಮಾತ್ರ ನಮ್ಮನ್ನು ಬಾಧಿಸುತ್ತಿದೆ.

11-30 A.M.

ನಮ್ಮ ಸಹೋದರರು ಹೇಗೂ ನಮ್ಮ ಸಂಸಾರದಿಂದ ಹೊರಗಡೆಯಿದ್ದಾರೆ. ಅವರು ಉತ್ತರ ಕರ್ಣಾಟಕದಲ್ಲಿ ಆಸ್ತಿಪಾಸ್ತಿಗಳನ್ನಿಟ್ಟುಕೊಂಡು ಸುಖವಾಗಿ ಬಾಳುತ್ತಿದ್ದಾರೆ. ಹೇಗೂ ಪ್ರತ್ಯೇಕ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೇವೆ. ಇಲ್ಲಿಯೂ ಕೂಡ ಒಂದೇ ಜಂಟಿ ಕುಟುಂಬದಲ್ಲಿರುವ ಒಡಹುಟ್ಟಿದ ಸಹೋದರರೂ ಸಹ ಪ್ರತ್ಯೇಕ ಪ್ರತ್ಯೇಕವಾಗಿ ವಾಸಮಾಡುವುದಕ್ಕೆ ಇಷ್ಟಪಡುತ್ತಾರೆ. ಇದಕ್ಕೆ ಕಾರಣವಿಷ್ಟೆ. ಒಟ್ಟಿನಲ್ಲಿದ್ದರೆ ಅನೇಕ ತೊಂದರೆಗಳ ದೆಶೆಯಿಂದ ಅವರವರ ಪ್ರಗತಿಗೆ ಚ್ಯುತಿಬರಬಹುದು ಎಂಬ ಭಾವನೆಯಿದೆ. ಅಲ್ಲದೆ, ಒಂದುವೇಳೆ ನಾವೇನೋ ಸೋದರಭಾವನೆಯಿಂದ ಒಟ್ಟಿಗೆ ಇರಬೇಕೆಂದು ಹೇಳಿದರೂ ನಮ್ಮ ಹೆಂಡಿರು ಮಕ್ಕಳು ಒಟ್ಟಿಗಿರಲು ಇಷ್ಟಪಡದೆ ಜಗಳವಾಡುತ್ತಾರೆ. ಹೀಗಾಗಿ ತಮ್ಮ ಏಳಿಗೆ ಸಾಧನೆಯಾಗುವುದಿಲ್ಲವೆಂಬ ದೃಷ್ಟಿಯಿಂದ ಬೇರೆಬೇರೆ ಇರುವುದು ಸ್ವಾಭಾವಿಕ. ಅದೇ ಪ್ರಕಾರ, ಇವತ್ತೇನೋ ನಮ್ಮ ಕನ್ನಡಿಗರು ತೊಂದರೆಯಲ್ಲಿದ್ದಾರೆ, ಕಷ್ಟದಲ್ಲಿದ್ದಾರೆಂದು ನಾವೇನೋ ಸೇರಿಸಿಕೊಳ್ಳೋಣವೆಂದು ಮನಸ್ಸು ಮಾಡಿದರೂ ನಮ್ಮ ಅಣ್ಣತಮ್ಮಂದಿರು, ಹೆಂಡಿರು ಮಕ್ಕಳು ಜಗಳವಾಡುವುದಕ್ಕೆ ಶುರುಮಾಡಿ ಇನ್ನೆಲ್ಲಿಯ ತೊಂದರೆ ಬಂದೀತೋ ಎಂಬ ಶಂಕೆ ನನ್ನನ್ನು ಬಾಧಿಸುತ್ತಿದೆ. ಗಂಡ ಹೆಂಡರಿಗೆ ಪೂರ್ಣ ಒಪ್ಪಿಗೆಯಿಲ್ಲದ ಒಂದು ಸಂಸಾರವನ್ನು ಕಟ್ಟಿದರೆ, ಆ ಸಂಸಾರದಲ್ಲಿ ಯಾವತ್ತೂ ಒಡಕಿರುತ್ತದೆಂಬುದು ಸ್ವಾಭಾವಿಕ. ಅದು ಎಂದೆಂದಿಗೂ ಕಲುಷಿತ ಸಂಸಾರವಾಗಿಯೇ ಉಳಿಯುತ್ತದೆ ಅಲ್ಲದೆ ಪ್ರಗತಿಗೂ ಧಕ್ಕೆ ತರುವಂಥಾದ್ದಾಗಿರುತ್ತದೆ. ಆದ್ದರಿಂದ ನಮ್ಮ ಸಹೋದರರು ತಮ್ಮದೇ ಒಂದು ಸಂಸ್ಥಾನವನ್ನು ಸ್ಥಾಪನೆ ಮಾಡಿಕೊಂಡು ಎಲ್ಲಾ ರೀತಿಯಲ್ಲೂ ಪ್ರಗತಿ ಹೊಂದುವುದಕ್ಕೆ ಸಾಧ್ಯವಿದೆ. ಮೈಸೂರು ಸಂಸ್ಥಾನದಂತೆ ಅದೊಂದು Viable State ಆಗುವುದಿಲ್ಲವೆಂದು ನಮ್ಮ ಮಿತ್ರರಾದ ಸಿದ್ದವೀರಪ್ಪನವರೇನೋ ಹೇಳಿದರು. ಆ ಅಭಿಪ್ರಾಯಕ್ಕೆ ಕಾರಣವಿಲ್ಲ. ಅವರಲ್ಲಿಯೂ ನಮ್ಮಂತೆಯೇ ಜನಸಂಖ್ಯೆಯಿದೆ. ಯಾವ ರೀತಿಯಲ್ಲಿಯೂ ಪ್ರಗತಿ ಹೊಂದಿಲ್ಲವೆಂದು ಹೇಳುವಂತಿಲ್ಲ. ವಿಸ್ತೀರ್ಣ ಕೂಡ ನಮಗಿಂತಲೂ ಹೆಚ್ಚಾಗಿದೆ. ನಮ್ಮಷ್ಟೇ ಆ ಜನರೂ ಬುದ್ಧಿವಂತರು. ಇಷ್ಟೆಲ್ಲಾ ಅನುಕೂಲವಿರುವಾಗ ಅವರೂ ಬೇರೆಯಾಗಿ ಸುಖ

ವಾಗಿ ಬಾಳಲೆಂಬುದೇ ನಮ್ಮ ಆಶಯ. ದೇಶಕ್ಕೂ ಒಳ್ಳೆಯದಾಗುತ್ತದೆ.

ಅದು ಬಿಟ್ಟು ನಮ್ಮೊಡನೆ ಸೇರಿಸಿ ಒಂದೇ ಸಂಸ್ಥಾನ ಮಾಡುವುದರಿಂದ ಖಂಡಿತವಾಗಿ ಮೈಸೂರು ದೇಶದ ಪ್ರಗತಿಗೆ ಧಕ್ಕೆ ಬರುತ್ತದೆ. ಕೊನೆಯ ಪಕ್ಷ ಇನ್ನು 25 ವರ್ಷಗಳ ಕಾಲದವರೆಗೆ ನಾವೀಗ ಯಾವ ರಾಷ್ಟ್ರಾಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿದ್ದೇವೋ ಅದರಲ್ಲಿ ಮುಂದುವರಿಯುವುದಿಲ್ಲ. ಆ ನಮ್ಮ ರಾಷ್ಟ್ರನಿರ್ಮಾಣ ಕಾರ್ಯಗಳು ಕುಂಠಿತವಾಗುತ್ತವೆ. ನಾವೀಗ ಹೋಗುತ್ತಿರುವ ವೇಗದಲ್ಲಿ ಇನ್ನು ಮುಂದೆ ಹೋಗುವುದಿಲ್ಲವೆಂಬುದು ಖಂಡಿತ. ಒಂದು ವೇಳೆ ಕರ್ಣಾಟಕ ರಾಜ್ಯವಾಗುವುದರಿಂದ ಎಲ್ಲರೂ ಉನ್ನತ ಮಟ್ಟಕ್ಕೆ ಬರುವುದಾದರೆ, ಸಂತೋಷ. ಹಾಗಿಲ್ಲದೆ ಹೋದರೆ ಮೈಸೂರನ್ನು ಮೈಸೂರಾಗಿಯೇ ಉಳಿಸುವುದಕ್ಕ, ಮೈಸೂರಿನ ಪ್ರಗತಿಯನ್ನು ಕುಂಠಿತಗೊಳಿಸದಿರುವುದಕ್ಕೆ ಎಲ್ಲರೂ ಪ್ರಯತ್ನ ಪಡುತ್ತಾರೆಂದು ನಂಬಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

Sri T. MARIAPPA (Mysore City North).—Mr. Speaker, Sir, I would like to make a few preliminary observations before I take up the Report of the States Reorganisation Commission for consideration.

Sir, we are meeting at a very momentous period of this country's history. This country, unfortunately, had to meet three most critical periods. The first was, when we had to face the partition of India. I may recall on this occasion that at that time nobody ever thought that it would become a *fait accompli*, as the whole country was against partition. The leaders were against partition; the great Indian National Organisation to which I have the honour to belong, was also against partition and the uncrowned leader of this country, Mahatma Gandhi, was also against partition. When the leaders found that the circumstances were so overwhelming that there was no other alternative except civil war, they consented to partition though very reluctantly.

Sir, in the wake of partition, the country had to undergo great difficulties and tribulations, almost a crore of population had to turn as refugees. The very foundation of this country was shaken. Sir, there were some prophets who foresaw the disintegration of this great country, who then saw nothing but chaotic condition setting in and some, Sir, who were very inimical to the great organisation even stated openly that they would work for the annulment of partition. All those have proved false prophets.

After the after-effects of the partition had gone, after peace and order was established, people settled themselves and began to work for their own improvement. Today, we find great friendliness towards Pakistan which was once hostile, after the passions have cooled down.

Sir, the second great critical period was at the time of integration of these 600 and odd Indian States. This House is aware that the people of these States had no hand whatever in settling this question of integration. As soon as the Britishers decided to withdraw, they declared that these States would become independent after the lapse of paramountcy. The Princes were free either to accede or to remain independent. One can now in a calmer mood visualise what has happened. Did these 600 small principalities keep aloof? Sir, I have some knowledge of the circumstances prevailing then. One or two conspired to accede to Pakistan. The great leaders of India had to cajole some, persuade some, even apply pressure against some to accede to the Indian Union. I must also pay a handsome compliment to all those patriotic princes who acceded to the Indian Union. I may on this occassion with pride mention that Mysore was the first to accede to the Indian Union and to facilitate the unification of this great country. At that period we wishfully said that we would welcome the accession of the States into the Indian Union. I was then a member of the then Legislative Council and even raised a question whether the people were consulted. The people of the State were never consulted because the residuary or the sovereignty as it were called then, vested only with the Princes; the people peactically had no hand in shaping the destiny of those States. Sir, when once integration took place and the Rulers surrendered their limited sovereignty to the national Government of the day, the power in the State came into the hands of the people.

Sir, till 26th January 1950, we had our own individual citizenship. It

(SRI T. MARIAPPA.)

was only after the promulgation of the Constitution of India, (after the Democratic Republic of India was established) that we got the citizenship of India. We are no longer citizens of Mysore. We are all citizens of India and we have got a right now to shape the destiny of this country. Therefore, we are not only concerned in this Report so far as it relates to Mysore State but we have got the right to determine whether the recommendations in the Report are well conceived in the best interests of India.

Sir, we are facing this critical situation in India for the third time. The first two, when compared or considered in the present context of things, were not so far-reaching because the recommendations are for reorganisation of almost all the parts of India. The other two occasions which I cited just now related only to certain parts of India. But in the present juncture in which almost every part of India is affected, naturally, Sir, passions are roused, and feelings run high. Every question has got two sides; opinions, both for and against, are canvassed either in support or against a single proposition. Therefore, when we consider the recommendations of this Commission, we must bring to bear a detached outlook. We must consider them in a very dispassionate and objective manner. It is only then we will be able to unders and whether the recommendation are conceived in the best interests of the country.

Sir, let us examine whether there was need for reorganisation of the States. Some friends said that this kind of reorgani ation could have been put off; there was no need at all; the country was progressing satisfactorily and the leaders have brought this situation upon themselves. Everyone agrees that there is need for the reorganisation of the States. In fact, it has come not too soon. Even at the time of framing of the Constitution itself this question was debated upon. That is the reason why the Dar Committee was appointed. The Dar Committee r commended that this questoin could be considered in the context of the then prevailing conditions. The country then had to face very serious problems—problems of partition, the question of refugees, the integration of States, and things like that had not yet settled down. Therefore, they stated that it was too early to think of the reorganisation of the States on a very comprehensive basis. Again, there was on insistent demand that this question should be taken up. Even before the ink of the Dar Committee dried up, the J.V.P. Committee was constituted to go into this question. The J.V.P. Committee went into this problem because the clamour for redistribution of the States or carving out linguistic provinces gained ground. Sir, even during the British regime, there was a feeling that it was necessary to rationalise the boundaries of Provinces in this country. Sir, a mention is made as early as 1918 that the present distribution of provinces in India was not based on any logical principle. The Montague-Chelmsford Report makes a mention that the Government of India should make an attempt to redistribute the Provinces on some rational basis, because the Provinces then were merely the result of historical accident or of military exigencies. The Simon Commission Report also makes a mention that for the proper governance of a country the Provinces have to be re-distributed according to natural affinities or linguistic homogeneity. The British also had to contend with the insistent demand of the people and to bring about a balance betwen one set of people and another. There, as early as 1936 Orissa and Sindh, were created. Therefore we should not fight shy of these linguistic Provinces, for there are linguistic Provinces already existing in India. Take for example Bengal, Orissa, Bihar, and Rajastan; they are all linguistic Provinces. The Commission, I may state at the very outset, has not followed any one principle, for in the Report, they canvassed all the reasons both for and against and finally came to a conclusion where they took into consideration the totality of

factors and a balanced approach so that they could apply to each region a certain principle. So far as the party to which I belong is concerned, it had committed itself to the question of linguistic Provinces.

Mr. SPEAKER.—One point. They have applied one principle for the States above Vindya Pradesh and another principle for the formation of States below Vindhya Pradesh. Is it not so ?

Sri T. MARIAPPA.—It is not so. As the Commission itself states—I will just read that particular paragraph :

Para 162 :

> "We now summarise our final views on the role of language as a factor bearing on the reorganisation of States. After a full consideration of the problem in all its aspects, we have come to the conclusion that it is neither possible nor desirable to reorganise States on the basis of the single test of either language or culture, but that a balanced approach to the whole problem is necessary in the interests of our national unity."

Para 169 again :

> "In these circumstances, we are disinclined to attach too much importance to cultural distinctiveness as a factor independent of the linguistic needs of the people."

Then again para-235 makes it abundantly clear that they have not gone by any one consideration.

> "Before we conclude our examination of the principles which should govern the solution of the problem of reorganisation, it remains for us to indicate how the different principles proposed by us can be applied to each case. The problems of reorganisation vary from region to region. It has to be kept in mind that the interplay for centuries of historical, linguistic, geographical, economic and other factors has produced peculiar patterns in different regions. Each case, therefore, has its own background. Besides, the problems of reorganisation are so complex that it would be unrealistic to determine any case by a single test alone. All the committees and commissions which have previously gone into the matter such as the Dar Commission and the J.V.P. Committee have rightly expressed themselves against a monistic approach to the problem. We have, accordingly, examined each case on its own merits and in its own context and arrived at conclusions after taking into consideration the totality of circumstances and on an overall assessment of the solutions proposed."

It is therefore necessary that we should take into consideration the totality of factors in considering the recommendations of this Commission.

May I say on this occasion a few words with regard to the remarks or the dig made at the three great men who happened to be members of this Commission ? I need not defend them on he floor of this House. My friend Sri Pattabhiraman has made it very eloquently. I leave at this and only say that it is not good taste to attack these three great men who were selected not for any party affiliations but for their experience, their patriotism and their great qualities. These three men have been drawn from different spheres of national activity and they have no axe to grind. Therefore their recommendations, I emphatically state, are impartial and they have been made in the best interests of this country and with a faith that their recommendations should be accepted in the spirit in which they have been given. Let us bear in mind that we are attemping a most stupendous task in undertaking this task of reorganisation. Therefore, unless all of us co-operate with the leaders, unless all of us create a co-operative atmosphere in this country, it would be very difficult to make the task easier. One almost a tragic fact which I see today is this, namely, that all other parties have accepted this Report almost without a comment.

(SRI T. MARIAPPA.)

The Praja Socialist Party and the Communist Party have gone one step further and have sworn by the linguistic principle and they certainly support the re-grouping of States on linguistic basis. For very weighty reasons the Commission has not merely stated its own view of the lingnistic principle in view of the historical growth in certain areas but they have also examined how far the linguistic principle could be applied in re-arranging the map of India. No doubt they have given great importance to the linguistic principle because that was one binding force which keeps people together and also it is conducive to the administrative convenience. In that view alone they have applied this principle. In all other respects they have adopted the economic consideration, financial viability and other incidental factors, namely, the wishes of the people of that area.

Another factor which I would like to mention is this, that while the Legislature of a country considers a report of this kind, it is not correct that we should bring in other matters, namely, advice, mandate or decision which a political party issues to its own members. That is purely for our guidance. It is after all a private matter. As the Home Minister of the Government of India has been pleased to state the other day in the Parliament, it is the Parliament that is the ultimate authority to take a decision on such questions and once a decision is taken in the Parliament, the Government of India would certainly implement it. The working of democracy makes it possible for political parties also to play their part and political parties are controlled by the hierarchy of the organisation and it is but meet that the leaders of that party should advise the members of their own party so that they could pave way for smooth working of not only the party but also to accept the recommendations in their entirety or with such modifications as they think fit to make.

Some members happened to remark that the division or re-grouping of this country would spell disaster. I entirely disagree with that proposition. There are other countries where linguistic principle has been applied with great success and nothing untoward has happened in those countries. This principle has been applied to its logical extent in the countries of U.S.S.R. and Yugoslavia, and the linguistic units in those countries have not developed any fissiparous tendencies. Even in India take, for example, Bengal and Orissa—the older linguistic States. They have not developed any fissiparous tendencies. After the creation of Andhra what do we see in that State ? We see a very calm atmosphere. The old agitation has ceased and the energies of the people have been d rected into constructive channels of the First Five-Year and Second Five-Year Plans. Some doubt the very wisdom of the Government of India in appointing a Commission of this kind at this particular juncture. Let us bear in mind the insistence of the people on the one hand for a rational reorganisation of the States and insistence on the other that they have to push through the development of the country through the First, Second and Third Five-Year Plans. We must also bear in mind the disparate units of the federal structure in which we are working. At the time of the framing of the Constitution it would have been better if the units were sovereign, and of the same status. Unfortunately in the conditions prevailing it was not possible to have units of the same status. Therefore, most unwillingly the disparate units had to enter into the federal structure. It was only a transitional arrangement ; it was not a final arrangemeut. Therefore, Part A, Part B and Part C States had to be created with a view to fit into this federal structure. It was also due to historical reasons. Even before, we had the Governors' Provinces, Lieut.-Governors' Provinces and Chief Commissioners' Provinces. Therefore they could not get over the initial difficulty, but, even on that occassion, it was said that a most opportune time should be sought to re-draw the map of India. Very recently, perhaps

at Madras, Sardar Panikkar, who was one of the members of this Commission, said "The day has not come too soon for the reorganisation of the States." He particularly mentioned the cases of Part B and Part C States where usually vested interests get deeper roots and it would become very difficult to reorganise States later. Therefore, I consider that it is the most opportune time; it is better that we go deeper, it is better that we reorganise States or re-draw the map of India comprehensively once and for all.

I will now close with a few remarks with regard to carving out Karnataka State.

Mr. SPEAKER.—One important point was raised: "why not they form two States?"

Sri T. MARIAPPA.—I will come to that. I will leave the other arguments aside. It is possible to advance arguments both for and against the creation of one or two States. Some very credulously adduced the argument, namely, that Mysore is going to expand or other territories are going to be added on to Mysore. Let me make it very clear that we are not adding anything to Mysore. We are only trying to reorganise and form States. Therefore, every one in this country is entitled to pronounce his opinion with regard to the re-formation of States.

12 NOON.

It is not an expansion of one territory; it is not a question of rebuilding greater Mysore or greater Karnataka. I want my colleagues to examine this question in this context. Arguments may be advanced both for and against Because Mysore has been administered well and has been existing for a long time, it is quite natural that the protagonists of Mysore claim Mysore to be left severely alone. But it is a question which has to be considered from the All-India angle. That is why the Reorganisation Commission was appointed by the Government of India. The Leaders of the Congress did not attempt to reorganise the country on their own initiative; they wanted to know exactly what the conditions are. If you read the chapters of the Report, you will notice the causes of the change, small States versus bigger States, financial liability, have all been discussed and even in the Terms of Reference, all these factors have been mentioned. Therefore, Sir, we can only consider this question in the context of all-India. The Commission themselves have examined this question. One significant factor which applies to Mysore is mentioned in paragraph 7:

> "We made every effort to get a complete cross-section of public opinion. Care was taken to see that all those who represent public opinion were heard unless they were themselves averse to expressing any views."

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ನಮ್ಮನ್ನು ಯಾರೂ ಕೇಳಲಿಲ್ಲ.

Sri T. MARIAPPA.—Unfortunately, in Mysore a peculiar thing happened. Some people were not able to come before the Commission. They have examined every piece of evidence and all those that were pleased to give their opinions; they have heard everybody; therefore, they were in a better position to take a decision and in the light of that decision we have to see whether Mysore should remain severely alone. They have given very good reasons for their decision.

ಶ್ರೀ ಬಿ. ವೈ. ನೀಲೇಗೌಡ (ಪಾಂಡವಪುರ).—ಸ್ವಲ್ಪ ಸರಿಯಾಗಿದೆ, ಸ್ವಲ್ಪ ಸರಿಯಾಗಿಲ್ಲ ಎಂತಲೋ!

Sri T. MARIAPPA.—The Government of India appointed the three best men and they have produced a Report to the best of their ability. You may say that they could have given a different Report. Where is the finality then for such an argument? Certainly arguments both for and against could be advanced. One of my Hon'ble friends said that if they had taken a dispassionate view, they would have come to a different decision and they had applied one principle to one region and another principle to another region. I would like to read para 322 of the Report for his information:

> "With the reorganisation of States becoming a live political

(SRI T. MARIAPPA.)

issue, however, some differences of opinion have recently arisen about the territorial set-up of the proposed Karnataka State. These differences relate principally to two matters, namely, the financial prospects of the Karnataka State and the desirability of integrating in the proposed Karnataka State, the State of Mysore which claims to have a distinct administrative and cultural tradition."

So, these ideas were before them. It has not escaped their notice. It is no longer assumed, for instance, in the Nehru Committee Report, they said that Karnataka State of Bombay alone was viable, that Karnataka areas outside Mysore will be financially self-sufficient or that they will have surplus of revenue over expenditure. What did we do? Whether willingly or unwillingly, we were parties to the setting up of Seshadri Committee Report. It was supposed to be a Fact Finding Committee. Anyway, I had my own disagreement with regard to the setting up of that Committee. They wasted Rs. 30,000. They furnished first class argument for the formation of Karnataka. If the Committee had said that Karnataka was financially viable, the authors of the Report would have then to seek different reasons. We ourselves furnished them a handle to say that Karnataka is not financially viable, therefore it could only be viable along with Mysore. That is the whole tragedy of the situtlon.

SRI D. DEVARAJ URS (Hunsur).—The Hon'ble Member says that he disagrees with the Committee's Report. How are we then to depend upon it?

SRI T. MARIAPPA.—I disagreed with the appointment of the Committee. May I say at this juncture that I scrupulously stood aloof during this controversy. I never participated in the discussion over this question. I did not sign any memorandum.

SRI H. K. VEERANNA GOWDH.—There is no meaning in that. The Hon'ble Member is bound by the majority opinion because he belongs to a party. All the while being in the same party, how do you say that?

SRI T. MARIAPPA.—I have got very great respect for my Hon'ble friend Sri H. K. Veeranna Gowdh. He was the President of the Mysore Pradesh Congress Committee and I was the General Secretary then. The A.I.C.C. had given freedom to each member. I did not accept the decision of a subordinate Committee. How could I accept the decision of a subordinate Committee? I said on the floor of the Party meeting that it did not bind me. I did go before the Commission. The President of the M.P.C.C. was not also bound because a higher body had given permission. The Congress saw the wisdom of allowing freedom to each Member. They knew there was difference of opinion. On such a vital matter, they did not prevent us from placing all the materials, and all the facts before the Commission because it is only once in a century or two that such commissions are appointed; I knew the Report would be coming. I therefore kept aloof from all controversies. I never canvassed either for or against; I never signed a document either for or against Karnataka. I wanted to know what exactly the Report of the Commission would be, how they would canvass matters, how they would advance reasons for and against. Sir, the Report is out. I had the privilege of reading it more than once and I had also the privilege of knowing the general sense of the country and the advice of the leaders. Sir, now, I have taken a decision. In the larger interests of the country, in the interest of the well-being of this country and in the interest of the well-being of the future Karnataka State, where all of us have to live amicably, peacefully and participate in the great adventure of rebuilding India, we have to accept the recommendations contained in this Report with goodwill and in a very hopeful spirit. Let us have faith in the future; let us have faith in the destiny of the country. Sir, India has already achieved a very significant place in the comity of Nations; let us try to keep it up; let

us not import any other considerations at this juncture; let us wait and see whether things will not improve by a co-operative and common effort. Sir, if things go wrong, people are always at liberty to agitate for a thing which they want. Now, that time has not yet come. I respectfully appeal to my friends not to strike a note of discord; let us now unite together and agree for the formation of Karnataka; let us work together. When we find things do not work smoothly, when things which are not to our liking happen, then will be the time to take action.

Sri H. SIDDAVEERAPPA.—That time will never come.

Sri T. MARIAPPA.—Yes, let us hope that that time will never come. Sir, I would certainly throw myself on the side which would work for bettering the conditions of the country, for, after all, it is we that have to work out the destiny of the country. It is no longer possible for any feudal relics to work for our salvation. In this connection, I do not want to go into detail because enough has been said both for and against. I make this fervent appeal: let us all try to see the recommendations of the Commission in its proper perspective. Now we have the advice of our Leaders. If it is bad, let us not accept it; but, if it is good, let us accept it. The consensus of opinion is in favour of the recommendations; can we not see that all others except the party which appointed the Commission are going to accept this decision? That is the tragedy of our public life today. I see the Opposition here itself is supporting the recommendations of this Commission. When we find that the recommendations are in the best interests of the country, let us accept them and work them for some time. Then there will be time enough to think differently. Let us not even advance such an argument lest it should disturb the fraternal feelings that are desired now. That is the sum total of my prayer and I commend the recommendations of the Commission for the acceptance of this House.

ಶ್ರೀ ಬಿ ಪಿ. ನಾಗರಾಜಮೂರ್ತಿ (ಮಳವಳ್ಳಿ).—ಮಾನ್ಯ ಸಭಾಧ್ಯಕ್ಷರೇ, ರಾಜ್ಯ ಪುನರ್ವಿಂಗಡಣಾ ಕಮಿಷನ್ನಿನವರ ವರದಿ ಮತ್ತು ಈ ಸಭಾ ನಾಯಕರು ಇಟ್ಟಿರತಕ್ಕ ತಿದ್ದುಪಡಿ, ಇವೆರಡರ ಮೇಲೂ ಕೂಡ ಈಗಾಗಲೇ ಮಾನ್ಯ ಸದಸ್ಯರನೇಕರು ಪರವಾಗಿ ಮತ್ತು ವಿರೋಧವಾಗಿ ಅವರ ವಾದವನ್ನು ಮುಂದಿಟ್ಟಿದ್ದಾರೆ. ಈ ರಾಜ್ಯಗಳ ಪುನರ್ವಿಂಗಡಣಾ ಕಮಿಷನ್‌ರವರ ವರದಿ ಮೇಲೆ ಈ ಸಭೆಯ ನಾಯಕರೂ, ನಮ್ಮ ಪಕ್ಷದ ನಾಯಕರೂ, ಶ್ರೀಮಾನ್ ಪಟ್ಟಾಭಿರಾಮನ್‌ರವರೂ, ಏನೇನು ಅದರ ಪರವಾಗಿ ವಾದಿಸಬಹುದೋ ಅದನ್ನೆಲ್ಲಾ ಸಂಪೂರ್ಣವಾಗಿ ಈ ಸಭೆಯಮುಂದೆ ಇಟ್ಟಿದ್ದಾರೆ. ಈ ವರದಿಯ ವಿರೋಧವಾಗಿ ಮಾತನಾಡಿದ ಶ್ರೀಮಾನ್ ವೀರಣ್ಣಗೌಡರೂ, ಶ್ರೀಮಾನ್ ವಿ. ವೆಂಕಟಪ್ಪನವರೂ, ಮತ್ತು ಇನ್ನು ಕೆಲವು ಸದಸ್ಯರುಗಳೂ ಅವರ ವಾದವನ್ನೂ ಈ ಸಭೆಯಮುಂದೆ ಇಟ್ಟಿದ್ದಾರೆ. ಯಾವ ಸಮಸ್ಯೆಯನ್ನು ಚರ್ಚೆಗೆ ತೆಗೆದುಕೊಂಡರೂ ಕೂಡ ಅದರ ಪರವಾಗಿ ಮತ್ತು ವಿರೋಧವಾಗಿ ವಾದ ಮಾಡುವುದಕ್ಕೆ ಅವಕಾಶ ಇದ್ದೇ ಇದೆ. ಅದೇ ಒಂದು ತತ್ವದಮೇಲೆ ಇವತ್ತಿನ ದಿವಸ ವಾದ ವಿವಾದಗಳನ್ನು ನಾವು ಇಲ್ಲಿ ಕೇಳುತ್ತಾ ಇದ್ದೇವೆ. ಕೆಲವು ಮಾನ್ಯ ಸದಸ್ಯರು ಈ ರಾಜ್ಯಗಳ ಪುನರ್ವಿಂಗಡಣಾ ಕಮಿಷನ್ ವರದಿಯಮೇಲೆ ವಿರೋಧವಾಗಿ ವಾದಮಾಡಿ ತಕ್ಕ ಸಮಯದಲ್ಲಿ ಮೈಸೂರು ಸಂಸ್ಥಾನ ಒಂದು ಸ್ವತಂತ್ರ ರಾಷ್ಟ್ರವಾಗಿರುವ ಹಾಗೆಯೂ ಮತ್ತು ಬೇರೆ ಯಾವುದೋ ಒಂದು ಸ್ವತಂತ್ರ ರಾಷ್ಟ್ರದವರು ಮೈಸೂರು ಸಂಸ್ಥಾನದ ಮೇಲೆ ಧಾಳಿಮಾಡಿ ಅವರ ಆಸ್ತಿಪಾಸ್ತಿಗಳನ್ನೂ ಮನೆ ಮಠಗಳನ್ನೂ ಕಸಿದುಕೊಂಡು ಹೋಗುತ್ತಾರೆ ಎಂದು ಭೀತಿಯನ್ನು ಹುಟ್ಟಿಸುವಂಥ ಧಾಟಿಯಲ್ಲಿ ಅವರ ವಾದವನ್ನು ಹೂಡಿದರು. ಇದುವರೆಗೆ ಮಾತನಾಡಿದ ಶ್ರೀ ಹುಚ್ಚಮಾಸ್ತಿಗೌಡರು ಈ ಸಮಸ್ಯೆ ಮೈಸೂರು ದೇಶದ ಅಳಿವು ಉಳಿವಿನ ಪ್ರಶ್ನೆ ಮತ್ತು ಈ ಶಾಸನ ಸಭೆಯ ಅಳಿವು ಉಳಿವಿನ ಪ್ರಶ್ನೆ ಎಂದು ಹೇಳಿದರು. ಅವರು ಇದು ಹೇಗೆ ಅಳಿವು ಉಳಿವಿನ ಪ್ರಶ್ನೆಯಾಗುತ್ತದೆ ಎಂದು ಸಮರ್ಥಿಸಲಿಲ್ಲ. ಅಂತಹ ಭಯಕ್ಕೆ ಯಾವ ವಿಧವಾದ ಕಾರಣವೂ ಇಲ್ಲ. ಶ್ರೀಮಾನ್ ಟಿ. ಮರಿಯಪ್ಪನವರು ಇದು ಒಂದು ಇಂಡಿಯಾದ ಸಮಸ್ಯೆಯಾಗಿ ಪರಿಣಮಿಸಿರುವಾಗ ಇಡೀ ಇಂಡಿಯಾ ದೇಶ ಯಾವ ದೃಷ್ಟಿಯಿಂದ ಈ ಸಮಸ್ಯೆಯನ್ನು ಅವಲೋಕಿಸುತ್ತದೆ ಎಂಬುದನ್ನು ನೋಡಿಕೊಂಡು ವಿಷಯಗಳನ್ನು ಚರ್ಚೆ ಮಾಡುವುದು ಒಳ್ಳೆಯದು ಎಂದು ಹೇಳಿದರು. ಭಾಷಾವಾರು ಆಧಾರದ ಮೇಲೆ ಪ್ರಾಂತಗಳನ್ನು ನಿರ್ಮಾಣ ಮಾಡುವುದಿಲ್ಲವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಯಾವ ಪ್ರಾಂತವನ್ನೂ ಕೇವಲ ಭಾಷಾ ಆಧಾರ ಒಂದರ ಮೇಲೆ ನಿರ್ಮಾಣ ಮಾಡುವುದು ಅಸಾಧ್ಯವೆಂದು ಎಲ್ಲರೂ ಒಪ್ಪಬೇಕಾದ ವಿಷಯ. ಏತಕ್ಕೆಂದರೆ ಯಾವ ಒಂದು ಸಂಸ್ಥಾನವಾಗಲಿ, ಯಾವ ಒಂದು ತಾಲ್ಲೂಕನ್ನು ತೆಗೆದುಕೊಂಡರೂ ಒಂದು ತಾಲ್ಲೂಕಿನಲ್ಲಿ ಒಂದೇ ಭಾಷೆಯಾಡುವ ಜನ ಸಿಕ್ಕುವುದಿಲ್ಲ. ಕೇವಲ ಭಾಷೆಯ ಆಧಾರದಮೇಲೆ ಪ್ರಾಂತಗಳನ್ನು ಮಾಡುವುದು ಸಾಧ್ಯವಿಲ್ಲ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನೋಡಿದರೆ ಪ್ರತ್ಯಕ್ಷವಾಗಿ ಮತ್ತು ಅಪ್ರತ್ಯಕ್ಷವಾಗಿ ಯಾವ ಪ್ರಜೆಯೂ ಕೂಡ ಕೇವಲ ಒಂದೇ ಭಾಷೆಯನ್ನು ಮಾತನಾಡುತ್ತಾನೆಂದು ಹೇಳುವುದಕ್ಕಾಗುವುದಿಲ್ಲ. ತಿಳಿದೂ ತಿಳಿಯದೆಯೂ ಕನ್ನಡ ಭಾಷೆ, ಆಂಗ್ಲಭಾಷೆ, ಮತ್ತು ತಮಿಳು ಭಾಷೆ ಬೆರೆಸಿಕೊಂಡು ಮಾತನಾಡುತ್ತಾರೆ. ಆದ್ದರಿಂದ ಕೇವಲ ಭಾಷೆಯ ಆಧಾರದ ಮೇಲೆ ಪ್ರಾಂತ ನಿರ್ಮಾಣ ಮಾಡಲು ಈ ವರದಿಯಲ್ಲಿ ಶಿಫಾರ್ಸು ಮಾಡಿದ್ದಾರೆಂಬ ವಾದವನ್ನು ಒಪ್ಪುವುದಕ್ಕಾಗುವುದಿಲ್ಲ. ಇನ್ನು

(ಶ್ರೀ ಬಿ. ಪಿ. ನಾಗರಾಜಮೂರ್ತಿ.)

324ನೆಯ ಪ್ಯಾರಾದಲ್ಲಿ ಕೆಲವು ಕೋಮುಗಳ ವಿಷಯದಲ್ಲಿ ಅಂಕಿ ಅಂಶಗಳನ್ನು ಚರ್ಚೆಮಾಡಿ ಕೆಲವು ಮಾನ್ಯ ಸದಸ್ಯರ ಮನಸ್ಸು ನೋಯುವ ರೀತಿಯಲ್ಲಿ ವಾದ ಮಾಡಿದ್ದೂ ಕೂಡ ಅನಾವಶ್ಯಕ. ಅದನ್ನು ಮತ್ತೆ ಪ್ರಸ್ತಾಪ ಮಾಡುವುದೂ ಸಹ ಅನಾವಶ್ಯಕ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನಿಮ್ಮನ್ನು ಆಕರ್ಷಿಸುವ ರೀತಿಯಲ್ಲಿ ಮಾತನಾಡಿದ್ದು.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಶ್ರೀ ಹುಚ್ಚಮಾಸ್ತಿಗೌಡರು ಈಗ ನನಗೆ ಜ್ಞಾಪಕ ಕೊಟ್ಟರು. ನನ್ನ ಬಂಧುಗಳಾಗಿದ್ದಂಥ ಶ್ರೀಮಾನ್ ವೀರಣ್ಣ ಗೌಡರು ಒಂದು ಸಂತೋಷದ ಸುದ್ದಿಯನ್ನು ತಿಳಿಸಿದ್ದಾರೆ. ಅದನ್ನು ನಾನು ಬಹಳ ಸಂತೋಷದಿಂದ ಸ್ವಾಗತಿಸುತ್ತೇನೆ. ಅವರು ಪುರಾಣದಲ್ಲಿ ಯಾವುದೋ ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ಅದೇ ರೀತಿ ಮಹಾಭಾರತದಲ್ಲಿ ಒಂದು ದೃಶ್ಯ ನನ್ನ ಕಣ್ಣು ಮುಂದೆ ಬರುತ್ತದೆ. ಅಪ್ರತಿಮವೀರ ಕರ್ಣಯಾರು ಎಂದು ಗೊತ್ತಿಲ್ಲದೆ ಇದ್ದಾಗ ಶ್ರೀ ಕೃಷ್ಣಪರಮಾತ್ಮ ಕರ್ಣ ಕುಂತಿಯ ಮಗ ಎಂದು ಹೇಳಿದಾಗ ಕುಂತಿಗೆ ಯಾವರೀತಿ ಆನಂದವುಂಟಾಯಿತೋ ಅದೇ ರೀತಿ ಮೈಸೂರು ಕಾಂಗ್ರೆಸ್ಸಿನ ಹಿರಿಯ ನಾಯಕರಲ್ಲಿ ಒಬ್ಬರಾದ ಮತ್ತು ಮೈಸೂರು ಕಾಂಗ್ರೆಸ್ ಸಂಸ್ಥೆಯ ಮಾಜಿ ಅಧ್ಯಕ್ಷರಾದ ಶ್ರೀ ವೀರಣ್ಣಗೌಡರು ನನ್ನ ಬಂಧು ಎಂದು ತಿಳಿಸಿದ ಮೇಲೆ ನಾನು ಸಂತೋಷ ಪಡದೆ ಮತ್ತೇನು ಮಾಡಬೇಕು ?

ಸ್ವಾಮಿ, ಅವರು ತಾವುಕೂಡ ಲಿಂಗಾಯಿತರಾಗಿದ್ದೇವೆಂದು ಹೇಳಿದರು. ಬಹಳ ಸಂತೋಷದಿಂದ ಒಪ್ಪಿಕೊಳ್ಳುತ್ತೇನೆ. ಅದರೆ ಇನ್ನೊಂದು ವಿಷಯ ಹೇಳಿದರು. 'ವೀರಕ್ಷಾಮ ಬಂತು, ಆಗ ಆಹಾರಾಭಾವದಿಂದ ಕೆರೆಗೆ ಹೋಗಿ ಮೀನು ತಿನ್ನುವುದಕ್ಕೆ ಹೋದರು. ಅವರು ಹಾಗೆ ತಿಂದದ್ದು ನೋಡಿ ಶುದ್ಧವಾಗಿದ್ದ ವೀರಶೈವರು ಆ ಊರನ್ನು ಬಿಟ್ಟು ಮಳವಳ್ಳಿ ತಾಲ್ಲೂಕು ರಾಗಿಬೊಮ್ಮನಹಳ್ಳಿಗೆ ಹೊರಟುಹೋದರು' ಎಂದು ಹೇಳಿದರು. ಕೇವಲ ಜಿಹ್ವಾಚಾಪಲ್ಯದಿಂದ ಉದರ ಪೋಷಣೆಗಾಗಿ, ಯಾವ ವ್ರತವನ್ನು ಹಿಡಿದಿದ್ದರೋ ಅದನ್ನು ಕೆಡಿಸಿಕೊಂಡರು. ಇದನ್ನು ನೋಡಿ ಮನನೊಂದು ನಮ್ಮ ಪೂರ್ವಿಕರು ಬೇರೆ ಗ್ರಾಮಕ್ಕೆ ಹೋಗಿದ್ದರೂ ಇರಬಹುದು. ನನ್ನ ಬಂಧುಗಳಾದ ಶ್ರೀಮಾನ್ ವೀರಣ್ಣಗೌಡರು ಒಂದುಸಾರಿ ಯಾವ ವ್ರತವನ್ನು ಹಿಡಿದಿದ್ದರೋ ಅದನ್ನು ಜಿಹ್ವಾಚಾಪಲ್ಯದಿಂದ ಬಿಟ್ಟುಬಿಟ್ಟರು. ಈ ಹೊತ್ತು ಕಾಂಗ್ರೆಸ್ಸಿಗರಾಗಿ ಅದರ ನಿಯಮಗಳನ್ನು ಪಾಲಿಸುವ ವ್ರತವನ್ನು ಹಿಡಿದಿದ್ದಾರೆ. ಇಡೀ ಭಾರತದಲ್ಲೇ ದೊಡ್ಡ ಸಂಸ್ಥೆಯಾದ ಕಾಂಗ್ರೆಸ್‌ನ ಉದಾತ್ತ ಧ್ಯೇಯಗಳನ್ನು ನಂಬಿ ಪರಿಪಾಲಿಸುವ ವ್ರತವನ್ನು ಆ ಬಂಧುಗಳು ಇಟ್ಟುಕೊಂಡಿದ್ದಾರೆ. ಈಗಲೂ ಅವರು ಈ ವ್ರತವನ್ನು ಬಿಟ್ಟು ಬೇರೆ ದಾರಿಯನ್ನು ಹಿಡಿಯುವುದಿಲ್ಲ, ಹಾಗೆ ಹಿಡಿಯಬಾರದೆಂದು ಮನವಿ ಮಾಡಿಕೊಂಡು, ಈಗಲಾದರೂ ನಾಯಕರು ಇಟ್ಟಿರುವ ತಿದ್ದುಪಡಿಯನ್ನು ಒಪ್ಪುತ್ತಾರೆಂದು ನಂಬಿ, ಈ ಕಮಿಷನ್ನಿನ ವರದಿಯನ್ನೂ ಸಭಾ ನಾಯಕರು ಸಭೆಯ ಮುಂದಿಟ್ಟಿರುವ ತಿದ್ದುಪಡಿಯನ್ನೂ ಸಂಪೂರ್ಣವಾಗಿ ಸ್ವಾಗತಿಸುತ್ತೇನೆ.

ಶ್ರೀ ಎ. ಮುನಿಯಪ್ಪ (ಹಿರಿಯೂರು).—ಸ್ವಾಮಿ, ಪ್ರಾಂತ ಪುನರ್ವಿಂಗಡಣಾ ಸಮಿತಿಯವರು ತಯಾರು ಮಾಡಿರತಕ್ಕ ವರದಿಯನ್ನು ನಮ್ಮ ನಾಯಕರು ಸಭೆಯ ಪರಿಶೀಲನೆಗೆ ಒಪ್ಪಿಸುತ್ತಾ ಈ ವರದಿಯಲ್ಲಿರುವ ಅಂಶಗಳ ಬಗ್ಗೆ ಪರಿಶೀಲಿಸಿ ಸಾಧಕ ಬಾಧಕಗಳನ್ನು ವಿವರಿಸಿದ್ದಾರೆ. ಮತ್ತು ಈ ವರದಿಯ ಮೇಲೆ ಅವರು ಕೆಲವು ತಿದ್ದುಪಡಿಗಳನ್ನೂ ಸೂಚನೆ ಮಾಡಿ ಒಂದು ನಿರ್ಣಯವನ್ನು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಮಾನ್ಯ ಸದಸ್ಯರು ಕೆಲವರೂ ಕೆಲವು ತಿದ್ದುಪಡಿಗಳನ್ನು ನಿರ್ಣಯದ ಮೇಲೆ ಸೂಚಿಸಿ ಸಭೆಯ ಮುಂದಿಟ್ಟಿದ್ದಾರೆ. ಇವುಗಳೆಲ್ಲದರಮೇಲೆ ನಾನು ಕೆಲವು ಅಭಿಪ್ರಾಯಗಳನ್ನು ನನಗಿರುವ ಸ್ವಲ್ಪ ಕಾಲಾವಕಾಶದಲ್ಲಿ ಸೂಕ್ಷ್ಮವಾಗಿ ವ್ಯಕ್ತಪಡಿಸುತ್ತೇನೆ. ಈ ನಿರ್ಣಯ ಮತ್ತು ತಿದ್ದುಪಡಿಯ ಮೇಲೆ ಈ ಸಭೆಯ ಹಿರಿಯ ಸದಸ್ಯರೂ ನಾಯಕರೂ ದೀರ್ಘಭಾಷಣಗಳನ್ನು ಮಾಡಿ ಪರ ಮತ್ತು ವಿರೋಧಾಭಿಪ್ರಾಯಗಳನ್ನು ಸಭೆಯ ಗಮನಕ್ಕೆ ತಂದಿದ್ದಾರೆ. ಆದುದರಿಂದ ನಾನು ಏನು ಹೇಳಿದರೂ ಅದು ಪುನರುಕ್ತಿಯಾಗುತ್ತದೆಯೆಂದು ಭಾವಿಸುತ್ತೇನೆ. ಆದರೂ ನನ್ನ ಕೆಲವು ಅಭಿಪ್ರಾಯಗಳನ್ನು ಹೇಳುವುದು ಸೂಕ್ತವೆಂದು ತಿಳಿದುಕೊಂಡಿದ್ದೇನೆ. ಈ ವರದಿಯನ್ನು ಪರಿಶೀಲನೆ ಮಾಡುವ ಸಂದರ್ಭದಲ್ಲಿ ಇದರ ಅವಶ್ಯಕತೆಯೇನಿತ್ತು, ಈ ವರದಿಯನ್ನೇಕೆ ತಯಾರು ಮಾಡಬೇಕಾಯಿತು, ಈ ಸಮಿತಿಯನ್ನೇಕೆ ರಚನೆಮಾಡಬೇಕಾಯಿತು ಎಂಬುದನ್ನೆಲ್ಲಾ ಶ್ರೀಮಾನ್ ಮರಿಯಪ್ಪನವರು ಬಹಳ ಚೆನ್ನಾಗಿ ಹೇಳಿದ್ದಾರೆ. ನಾನಾದರೂ ಅದೇ ಅಭಿಪ್ರಾಯವುಳ್ಳವನಾಗಿದ್ದೇನೆ. ಕೇಂದ್ರ ಸರ್ಕಾರದವರು ಅನಾವಶ್ಯಕವಾಗಿ ಯಾವುದೋ ಒತ್ತಾಯಕ್ಕೊಳಗಾಗಿ ಅಥವಾ ತಾವೀ ಯೋಚನೆ ಮಾಡಿ ಇಂಥ ಒಂದು ಸಮಿತಿಯನ್ನು ರಚಿಸಲಿಲ್ಲ. ಈ ವರದಿಯನ್ನು ತಯಾರುಮಾಡಿ ದೇಶದಲ್ಲಿ ಗೊಂದಲವೆಬ್ಬಿಸಬೇಕೆಂಬ ಉದ್ದೇಶದಿಂದ ಮಾಡಲಿಲ್ಲ. ಪ್ರಾಂತ ಪುನರ್ವಿಂಗಡಣೆಯಾಗಬೇಕು, ಕೆಲವು ಪ್ರದೇಶಗಳ ಜನರು ಭಾಷೆ ಮತ್ತು ಆಡಳಿತ ತೊಂದರೆಗಳಿಗೆ ಸಿಕ್ಕಿ ಬಹಳ ದಿವಸಗಳಿಂದ ಕಷ್ಟನಷ್ಟಗಳನ್ನನುಭವಿಸುತ್ತಿದ್ದಾರೆ, ಅದನ್ನು ಪರಿಹಾರ ಮಾಡುವುದು ಸರ್ಕಾರದ ಕರ್ತವ್ಯ ಎಂಬ ಕೂಗು ಜನತೆಯಲ್ಲಿ ಸ್ವಾತಂತ್ರ್ಯ ಬರುವುದಕ್ಕೆ ಮುಂಚೆಯೂ ಬಂದಮೇಲೂ ಬಹುಕಾಲದಿಂದ ಇದ್ದೇ ಇದೆ. ಜನತೆಯ ಈ ಕೂಗನ್ನು ಮನಸ್ಸಿಗೆ ತೆಗೆದುಕೊಂಡು ಅವರ ಕಷ್ಟಗಳನ್ನು ನಿವಾರಣೆ ಮಾಡುವುದು ಸ್ವಾತಂತ್ರ್ಯಗಳಿಸಿದ ಮತ್ತು ಆಡಳಿತ ಜವಾಬ್ದಾರಿ ಹೊತ್ತ ಸರ್ಕಾರದ ಕರ್ತವ್ಯ. ಇದನ್ನು ಪರಿಪಾಲಿಸಿ ಜನರ ಕೂಗಿಗೆ ಮನ್ನಣೆಕೊಟ್ಟು ಒಂದು ಸಮಿತಿಯನ್ನು ರಚನೆ ಮಾಡಿದರು. ಇದು ಎಲ್ಲರೂ ಒಪ್ಪತಕ್ಕ ಅಂಶ. ಆದುದರಿಂದ ಈ ವರದಿಯನ್ನು ತಯಾರಿಸಿರುವುದು ದೇಶದಲ್ಲಿ ಇಲ್ಲದ ಗೊಂದಲವನ್ನೆಬ್ಬಿಸಿ ಜನತೆಯ ಮನಸ್ಸಿನಲ್ಲಿ ನೋವು ಅಥವಾ ಅವರಿಗೆ ತೊಂದರೆಯನ್ನುಂಟುಮಾಡುವುದು ಸರ್ಕಾರದ ಉದ್ದೇಶವಾಗಿರಲಿಲ್ಲ. ಒಂದು ಮಹತ್ತರವಾದ ಉದ್ದೇಶವಿತ್ತು ಎಂದು ತಿಳಿದುಕೊಳ್ಳಬೇಕು. ಇಡೀ ಭಾರತದ ಹಿತದೃಷ್ಟಿಯಿಂದ, ಭಾರತದ ನಾನಾ ಭಾಗಗಳಲ್ಲಿರುವ ಜನರಿಗಿದ್ದ ತೊಂದರೆಗಳನ್ನು ನಿವಾರಿಸುವುದು ಆ ಉದ್ದೇಶ. ಈ ಹಿನ್ನೆಲೆಯಿಂದ ಈ ವರದಿಯನ್ನು ಪರಿಶೀಲಿಸುವುದಾದರೆ, ಬಹುಮಟ್ಟಿಗೆ ಭಿನ್ನಾಭಿಪ್ರಾಯ ನಿವಾರಣೆಯಾಗುವುದೆಂದು ಭಾವಿಸುತ್ತೇನೆ. ಈ ದೃಷ್ಟಿಯಿಂದ ಈ ವರದಿಯನ್ನು ನಾವು ಪರಿಶೀಲನೆ ಮಾಡಿ ನೋಡಿದರೆ, ಇದು ಸಂಪೂರ್ಣವಾಗಿ ಸ್ವಾಗತಾರ್ಹವಾಗಿದೆಯೆಂದು ಸಂತೋಷದಿಂದ ಹೇಳಬೇಕಾಗಿದೆ. ನಾನೂ ಕೆಲವು ಸಂದರ್ಭಗಳಲ್ಲಿ ಕೆಲವಾರು ಅಂಶಗಳ ಬಗ್ಗೆ ಭಿನ್ನಾಭಿಪ್ರಾಯವುಳ್ಳವನಾಗಿದ್ದೆ. ಮಾನ್ಯ ಶ್ರೀ ವೆಂಕಟಪ್ಪನವರೂ, ವೀರಣ್ಣಗೌಡರೂ ಇತರ ಸದಸ್ಯರೂ ಕೆಲವು ಲೋಪದೋಷಗಳನ್ನು ವ್ಯಕ್ತಪಡಿಸಿ, ಕೆಲವು

ಅಂಕಿಅಂಶಗಳನ್ನು ಮುಂದಿಟ್ಟಾಗ, ನ್ಯಾಯವೋ ಏನೋ ಎನ್ನುವ ಅಭಿಪ್ರಾಯ ನನ್ನ ಮನಸ್ಸಿನಲ್ಲಿ ಮೂಡಿತ್ತು. ಆದರೆ ನಾನು ಇನ್ನಷ್ಟು ದೀರ್ಘವಾಗಿ ಯೋಚನೆ ಮಾಡಿದಮೇಲೆ ಮತ್ತು ಶ್ರೀ ಪಟ್ಟಾಭಿರಾಮರ್‌ರವರ ಭಾಷಣವನ್ನು ಕೇಳಿದಮೇಲೆ, ಯಾವುದರಲ್ಲಿ ಭಿನ್ನಾಭಿಪ್ರಾಯ ತಾಳಬೇಕೆಂದು ಮಾಡಿದ್ದೆನೋ ಆ ಧೋರಣೆ ಸರಿಯಲ್ಲ, ಇಡೀ ಭಾರತದ ರಕ್ಷಣೆ, ಭದ್ರತೆ, ಶಾಂತಿ, ನೆಮ್ಮದಿಯ ದೃಷ್ಟಿಯಿಂದ ಈ ವರದಿ ಒಳ್ಳೆಯ ಅಭಿಪ್ರಾಯದಿಂದ ಕೂಡಿದೆ ಎನ್ನಿಸಿತು. ಉತ್ತರ ಭಾರತದಲ್ಲಿ ಕೆಲವು ದೊಡ್ಡದೊಡ್ಡ ಸಂಸ್ಥಾನಗಳನ್ನು ರಚನೆಮಾಡಿದ್ದಾರೆ, ದಕ್ಷಿಣ ಭಾರತದಲ್ಲಿ ಕೆಲವು ಸಣ್ಣಸಣ್ಣ ಸಂಸ್ಥಾನಗಳನ್ನು ರಚನೆಮಾಡಿದ್ದಾರೆ. ಇದುವರೆಗೆ ಎ, ಬಿ, ಸಿ, ಸಂಸ್ಥಾನಗಳೆಂದು ವರ್ಗವಿಭೇದವಿತ್ತು. ಅದನ್ನು ರದ್ದುಮಾಡಿ ಸರ್ವರಿಗೂ ಸಮಾನಸ್ಥಾನ ಮತ್ತು ಹಕ್ಕು ಬಾಧ್ಯತೆಗಳನ್ನು ಕೊಡಬೇಕೆಂದು ಸಲಹೆಮಾಡಿದ್ದಾರೆ. ಪ್ರಮಾಣದಲ್ಲಿ, ಆರ್ಥಿಕ ಪರಿಸ್ಥಿತಿಯಲ್ಲಿ ವ್ಯತ್ಯಾಸವಿರುವಂತೆ ಮಾಡಿದ್ದಾರೆ ಇದೇನು ವಿರೋಧಾಭಾಸ ಎಂಬ ಭಾವನೆ ನನ್ನ ಮನಸ್ಸಿನಲ್ಲಿ ಮೂಡಿತ್ತು. ಆದರೆ ಈಚೆನೆ ನಾನು ಕೂಲಂಕಷವಾಗಿ ಯೋಚನೆ ಮಾಡಿದ್ದರಲ್ಲಿ ಈ ಅನುಮಾನ ನಿವಾರಣೆಯಾಯಿತು. ಗಡಿ ಪ್ರದೇಶಗಳಲ್ಲಿ ದೇಶದ ಭದ್ರತೆಯ ದೃಷ್ಟಿಯಿಂದ ಕೆಲವು ವಿಶಾಲವಾದ ಮತ್ತು ಹೆಚ್ಚು ಜನಸಂಖ್ಯೆಯುಳ್ಳ ಸಂಸ್ಥಾನಗಳಿರುವುದು ಆವಶ್ಯಕ ಎಂಬ ತೀರ್ಮಾನವನ್ನು ಸಮಿತಿಯವರು ಗಣನೆಗೆ ತೆಗೆದುಕೊಂಡಿದ್ದಾರೆ. ಇದು ಬಹಳ ಮುಖ್ಯವಾದುದು. ಎಲ್ಲರಿಂದಲೂ ಮಾನ್ಯತೆ ಪಡೆಯಬೇಕಾದ ಅಭಿಪ್ರಾಯ.

ಎರಡನೆಯದಾಗಿ, ಹಣಕಾಸಿನ ಸ್ಥಿತಿಯ ದೃಷ್ಟಿಯಿಂದ, ಹಾಗೂ ಭಾಷಾವಾರು ದೃಷ್ಟಿಯಿಂದ ನೋಡುವುದಾದರೆ, ಒಂದುಕಡೆ ಒಂದು ಕಾರಣ ಕೊಟ್ಟಿದ್ದಾರೆ, ಇನ್ನೊಂದು ಕಡೆ ಇನ್ನೊಂದು ಕಾರಣ ಕೊಟ್ಟಿದ್ದಾರೆ. ಇದರಿಂದ ಭಿನ್ನಾಭಿಪ್ರಾಯ ಬರುವಂತೆ ಈ ವರದಿಯಲ್ಲಿ ಕೆಲವು ಕಡೆ ಕಾಣುತ್ತದೆ. ಆದರೆ, ಕೊನೆಯಲ್ಲಿ ಅವರು ನಿರ್ಧಾರ ತೆಗೆದುಕೊಂಡಿರುವ ಭಾಗವನ್ನು ನೋಡಿದರೆ, ಬಹಳ ಚೆನ್ನಾಗಿ ನಿಷ್ಪಕ್ಷಪಾತ ದೃಷ್ಟಿಯಿಂದ ವಿಮರ್ಶಿಸಿ ಸರಿಯಾದ ತೀರ್ಮಾನಕ್ಕೆ ಬಂದಿದ್ದಾರೆಂಬುದು ಮನದಟ್ಟಾಗುತ್ತದೆ. ಶ್ರೀ ಪಟ್ಟಾಭಿರಾಮರ್ ರವರೂ ಇತರ ಕೆಲವರೂ ಹೇಳಿದಹಾಗೆ, ನಾವು obj ctive view ತೆಗೆದುಕೊಂಡು ತೀರ್ಮಾನಕ್ಕೆ ಬರುವುದು ಸೂಕ್ತ. ಯಾವುದೇ ಪಕ್ಷಪಾತಕ್ಕೊಳಗಾಗದೇಯಿರುವ ಅಭಿಪ್ರಾಯವನ್ನು ತೆಗೆದುಕೊಳ್ಳುವುದು ಸೂಕ್ತವೆಂದು ಭಾವಿಸಿ ಸಲಹೆ ಮಾಡಿದ್ದಾರೆ. ಇದಕ್ಕೆ ನಿದರ್ಶನಗಳು ಈ ವರದಿಯಲ್ಲಿ ಕಾಣುತ್ತವೆ. ಎಲ್ಲ ಪ್ರಾಂತಗಳಿಗೂ ಒಂದೇರೀತಿ ನೀತಿಯನ್ನು ಅವರು ಅನುಸರಿಸಿಲ್ಲ. ಆಯಾ ಪ್ರಾಂತದ ಸನ್ನಿವೇಶ, ಅಲ್ಲಿನ ಜನ, ಅಲ್ಲಿನ ಆರ್ಥಿಕಸ್ಥಿತಿ, ಭಾಷೆ, ಭೌಗೋಲಿಕಸ್ಥಿತಿ ಎಲ್ಲವನ್ನೂ ಗಣನೆಗೆ ತೆಗೆದುಕೊಂಡು ಒಂದೊಂದು ಕಡೆಗೂ ಅಲ್ಲಿಗೆ ತಕ್ಕಂತೆ ಒಂದೊಂದು ಮಾರ್ಗವನ್ನನುಸರಿಸಬೇಕಾದ ಸಂದರ್ಭದಲ್ಲಿ ಆ ರೀತಿ ಅನುಸರಿಸಿಕೊಂಡು ನಿರ್ಧಾರಕ್ಕೆ ಬಂದು ಆ ಸಲಹೆಯನ್ನು ನಮ್ಮ ಮುಂದಿಟ್ಟಿದ್ದಾರೆ. ಇಂಥಾ ಒಂದು ವಿಚಾರದಲ್ಲಿ ಅಮೆರಿಕಾ ಅಥವಾ ಬೇರೆ ದೇಶದ ಉದಾಹರಣೆಯನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇಂಡಿಯಾದೇಶ ಒಂದು ವಿಶೇಷ ಪರಿಸ್ಥಿತಿಯನ್ನು ಹೊಂದಿದೆ. ಇದನ್ನು ಪ್ರಪಂಚದ ಬೇರೆ ದೇಶಗಳಿಗೆ ಹೋಲಿಸುವುದಕ್ಕೆ ಸಾಧ್ಯವಿಲ್ಲ. ಇದೇ ಕಾರಣದಿಂದಲೇ ಮಹಾತ್ಮಾ ಗಾಂಧಿಯವರು ಬೇರೆ ಮಾರ್ಗವನ್ನನುಸರಿಸಿದ್ದು. ಬೇರೆ ದೇಶಗಳಲ್ಲಿ ಯುದ್ಧ ಯಂತ್ರೋಪಕರಣಗಳನ್ನುಪಯೋಗಿಸಿ ಸ್ವಾತಂತ್ರ್ಯವನ್ನು ಸಾಧಿಸಿದರು. ಆದರೆ ಇಂಡಿಯಾ ದೇಶ ಒಂದು ವೈಶಿಷ್ಟ್ಯತೆಯಿಂದ ಕೂಡಿದ ದೇಶ, ಇಲ್ಲಿ ಹಿಂಸಾ ಮಾರ್ಗದಿಂದ ಸ್ವಾತಂತ್ರ್ಯಗಳಿಸಲು ಸಾಧ್ಯವಿಲ್ಲ ಎಂದು ಭಾವಿಸಿ ಅಹಿಂಸಾ ಮಾರ್ಗವನ್ನನುಸರಿಸಿದರು. ಹಾಗೆ, ನಮ್ಮ ದೇಶಕ್ಕನುಗುಣವಾಗಿ ನಮ್ಮ ರಾಜ್ಯಗಳ ಪುನರ್ವಿಂಗಡಣೆ ಮಾಡುವುದಕ್ಕೆ ಸಾಧ್ಯವೇ ಹೊರತು ಬೇರೆ ದೇಶಗಳ ನೀತಿಯನ್ನನುಸರಿಸಿ ಮಾಡುವುದು ಸೂಕ್ತವಲ್ಲ.

ಇನ್ನು ಪುನರ್ವಿಂಗಡಣೆ ಮಾಡಬೇಕಾದ ಕಾಲ ಸನ್ನಿಹಿತವಾಗಿದೆಯೆ ಎಂಬ ಪ್ರಶ್ನೆ ಬಂತು. ಈ ಸಭೆಯಲ್ಲಿ ಮಾತನಾಡಿದವರ, ಅದರಲ್ಲಿಯೂ ಇದನ್ನು ವಿರೋಧಿಸಿದವರ ಬಾಯಲ್ಲಿ ಬಂದಿರುವ ಮಾತುಗಳನ್ನು ಕೇಳಿದಮೇಲೆ ಈ ಪುನರ್ವಿಂಗಡಣೆ ಮಾಡುವುದರಲ್ಲಿ ಏನೂ ಅಭ್ಯಂತರವಿಲ್ಲ, ಒಂದು ಕರ್ಣಾಟಕವಾಗುವುದರಲ್ಲಿ ಏನೂ ಅಭ್ಯಂತರವಿಲ್ಲವೆಂದು ಕಂಡು ಬಂತು. ಆದರೆ ಇದಕ್ಕೆ ಕಾಲ ಸನ್ನಿಹಿತವಾಗಿಲ್ಲ, ಇನ್ನೂ ಸ್ವಲ್ಪ ಕಾಲವಾದಮೇಲೆ ಮಾಡಬಹುದೆಂಬ ಅಭಿಪ್ರಾಯವೂ ಬಂತು. ಜೆ. ವಿ. ಪಿ. ಕಮಿಷನ್ ಮತ್ತು ಧಾರ್ ಕಮಿಷನ್‌ನವರು ಆಯಾ ಸಂದರ್ಭದಲ್ಲಿ, ಅಯಾಕಾಲದ ಪರಿಸ್ಥಿತಿಯನ್ನು ಗಮನಿಸಿ ಆಗ ಇದಕ್ಕೆ ಕಾಲ ಸರಿಯಾಗಿಲ್ಲ, ಇನ್ನೂ ಸ್ವಲ್ಪಕಾಲ ಇದನ್ನು ಮುಂದೆ ಹಾಕಬಹುದೆಂದು ಹೇಳಿದ್ದಾರೆ. ಆಗ ದೇಶದಲ್ಲಿದ್ದ ಸನ್ನಿವೇಶವನ್ನು ಗಣನೆಗೆ ತೆಗೆದುಕೊಂಡರೆ ಸಾಧಾರಣ ಮನುಷ್ಯನಿಗಾದರೂ ಅವರು ಹಾಗೇಕೆ ಹೇಳಿದರೆಂಬುದು ಗೊತ್ತಾಗುತ್ತದೆ. ಆಗಿದ್ದ ವಿರಸ ವಾತಾವರಣದಲ್ಲಿ ಇಂಥ ಮಹಾಕಾರ್ಯಕ್ಕೆ ಕೈಹಾಕಿದ್ದರೆ ದೇಶದ ಹಿತಕ್ಕೆ ಧಕ್ಕೆ ಬರುವ ಸಂಭವವಿತ್ತು. ಆದರೆ ಈ ದಿವಸ ನಾವು ಭಾರತದಲ್ಲಿ ನೆಮ್ಮದಿಯಿಂದ, ಶಾಂತಿಯಿಂದ ಆಡಳಿತವನ್ನು ನಡೆಸುವುದಕ್ಕೆ ಶಕ್ತರಾಗಿದ್ದೇವೆ. ಪಾಕಿಸ್ತಾನದಲ್ಲಿರುವಂತೆ ಆಡಳಿತದಲ್ಲಿ ಗೊಂದಲವಾಗಿ ಆಗಾಗ ಬದಲಾವಣೆಯಾಗುವ ಪರಿಸ್ಥಿತಿ ನಮ್ಮಲ್ಲಿಲ್ಲ. ಅಂಥ ಯಾವ ವಿವಾದಗಳೂ ಇಲ್ಲದೆ ರಾಷ್ಟ್ರವನ್ನು ನೆಮ್ಮದಿಯಿಂದ ನಡೆಸಬಹುದಾಗಿದೆ. ಅಂತರರಾಷ್ಟ್ರ ಪ್ರಶ್ನೆ, ಆಹಾರ ಪ್ರಶ್ನೆ, ನಿರಾಶ್ರಿತರ ಪ್ರಶ್ನೆ ಮುಂತಾದ ದೊಡ್ಡದೊಡ್ಡ ಸಮಸ್ಯೆಗಳು ಪರಿಹಾರವಾಗಿವೆ. ಈಗ ನಮ್ಮಲ್ಲಿ ಆರ್ಥಿಕ ಭದ್ರತೆಯ ಪ್ರಶ್ನೆ ಉಳಿದಿದೆಯೇವಿನಾ ಇನ್ನಾವುದೂ ಇಲ್ಲ. ಈ ದಿವಸ ನಮ್ಮ ನಮ್ಮ ಸ್ಥಾನಮಾನಗಳು ಹೆಚ್ಚಿವೆ. ನಮ್ಮ ರೀತಿ ನೀತಿಗಳು ಮೆಚ್ಚಿಗೆ ಪಡೆದಿವೆ. ನಮ್ಮ ನಾಯಕರಿಂದ ಭಾರತಕ್ಕೆ ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ದೊಡ್ಡ ಸ್ಥಾನ ದೊರೆತಿದೆ. ಇದನ್ನುಳಿಸಿಕೊಂಡು ಹೋಗುವುದು ಆವಶ್ಯಕ. ಈ ಎಲ್ಲ ಅಂಶಗಳನ್ನೂ ಈ ಪ್ರಾಂತ ಪುನರ್ವಿಂಗಡಣಾ ಸಮಿತಿಯವರು ಗಣನೆಗೆ ತೆಗೆದುಕೊಂಡಿದ್ದಾರೆಂದು ನನಗೆ ಸಂಪೂರ್ಣ ನಂಬಿಕೆ ಇದೆ. ಇಂಥ ಒಂದು ಶಾಂತ ಪರಿಸ್ಥಿತಿಯಲ್ಲಿ ಈ ಪುನರ್ವಿಂಗಡಣೆಯ ಪ್ರಶ್ನೆಯನ್ನು ತೆಗೆದುಕೊಳ್ಳದಿದ್ದರೆ ಇನ್ನಾವಾಗ ತೆಗೆದುಕೊಳ್ಳುವುದು ?

ಇನ್ನೊಂದು ವಿಷಯ. ಎರಡನೆಯ ಪಂಚವಾರ್ಷಿಕ ಯೋಜನೆ ನಮ್ಮ ಮುಂದೆ ಬರುವುದಾಗಿದೆ. ಅನೇಕ ಗಡಿ ಪ್ರಶ್ನೆಗಳು, ಅಂತರ ಪ್ರಾಂತಗಳಲ್ಲಿ ಬರತಕ್ಕ ಜಲಾಶಯಗಳ ಪ್ರಶ್ನೆಗಳು, ವಿದ್ಯುಚ್ಛಕ್ತಿ ಯೋಜನೆಗಳು, ದೊಡ್ಡದೊಡ್ಡ ಕೈಗಾರಿಕೆ ಪ್ರಶ್ನೆಗಳು ಮುಂತಾದುವನ್ನು ಇತ್ಯರ್ಥಮಾಡಿ, ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕಾಗಿದೆ. ಈ ವಿಷಯಗಳಲ್ಲಿ ಭಿನ್ನಾಭಿಪ್ರಾಯ ವೈಮನಸ್ಯಗಳು ಬಂದು ಸುಲಭವಾಗಿ ತೀರ್ಮಾನಕ್ಕೆ ಬಾರದೇಯಿರುವ

(ಶ್ರೀ ಎ. ಮುನಿಯಪ್ಪ.)

ಸನ್ನಿವೇಶಗಳು ಉದ್ಭವಿಸಬಹುದು. ಇದನ್ನು ಗಮನಿಸಿ ಎರಡನೆಯ ಪಾಂಚವಾರ್ಷಿಕ ಯೋಜನೆಯನ್ನು ಕಾರ್ಯಗತಮಾಡುವುದರಲ್ಲಿ ಯಾವ ವಿಧವಾದ ತಕರಾರುಗಳೂ ಬಾರದಂತೆ, ಈ ಯೋಜನೆಯ ಎಲ್ಲ ಉದ್ದೇಶಗಳೂ ಯಶಸ್ವಿಯಾಗಿ ಈಡೇರಿ ಸಂಪೂರ್ಣ ಫಲ ಎಲ್ಲ ಪ್ರಾಂತಗಳ ಜನರಿಗೂ ದೊರೆಯುವಂತಾಗ ಬೇಕಾದರೆ ಪ್ರಾಂತಗಳ ಪುನರ್ವಿಂಗಡಣೆಯಾಗಬೇಕು. ಯಾವ ಯಾವ ಪ್ರಾಂತಗಳಿಗೆ ಏನೇನು ಅನುಕೂಲತೆ ಗಳಾಗಬೇಕು, ಯಾವ ಯಾವ ಸಮಸ್ಯೆಗಳು ಪರಿಹಾರ ವಾಗಬೇಕು ಎಂಬುದನ್ನು ಇತ್ಯರ್ಥಮಾಡಿ ಈ ಯೋಜನೆಯನ್ನು ಯಶಸ್ವಿಯಾಗಿ ಜಾರಿಗೆ ತರತಕ್ಕ ಕಾಲ ಇದು ಬಹಳ ಪ್ರಾಮುಖ್ಯವಾಗಿರತಕ್ಕ ಸನ್ನಿವೇಶ. ಇಂಥ ಸಂದರ್ಭದಲ್ಲಿ Reorganisation ನನ್ನು ಕೈಕೊಂಡಿರತಕ್ಕದು ಕೂಡ ಕೇವಲ ಸೂಕ್ತವಾಗಿದೆ.

12-30 P.M.

ಇಷ್ಟು, ಪೀಠಿಕೆಯಾಗಿ ಹೇಳಿ, ಇನ್ನು ಈ ಸಮಿತಿ ಯವರು ಕೊಟ್ಟಿರತಕ್ಕ ವರದಿಯ ವಿಚಾರದಲ್ಲಿ ಒಂದೆರಡು ಮಾತು. ಈ ವರದಿ ಬಹಳ ಚೆನ್ನಾಗಿದೆ. ಇದರಲ್ಲಿರತಕ್ಕ ಯಾವ ಅಂಶಗಳನ್ನೂ ಕಡೆಗಾಣಿಸು ವಂತಾಗಲಿ ಅಲಕ್ಷ್ಯಮಾಡುವಂತಾಗಲಿ ಇಲ್ಲ.

ಇನ್ನು ಈ ತಿದ್ದುಪಡಿಯ ಮತ್ತು ಆರ್ಥಿಕ ಭದ್ರ ತೆಯ ವಿಷಯದಲ್ಲಿ ಹೇಳುವುದಾದರೆ, ನಮ್ಮ ಮುಖ್ಯ ಮಂತ್ರಿಗಳು ಹಾಗೂ ಹಣಕಾಸಿನ ಮಂತ್ರಿಗಳು ತಮ್ಮ ಮೊದಲನೆಯ ಭಾಷಣದಲ್ಲೇ ನಮ್ಮ ಆರ್ಥಿಕ ಸ್ಥಿತಿ ಹೇಗಿಗೆಯೆಂಬುದನ್ನು ಬಹಳ ವಿಶದವಾಗಿ ಹೇಳಿ ದ್ದಾರೆ. ಅಂದಮಾತ್ರಕ್ಕೆ ಮೈಸೂರು ಸಂಸ್ಥಾನದ ಹಣಕಾಸಿನ ಪರಿಸ್ಥಿತಿ ಬಹಳ ಹೀನಸ್ಥಿತಿಯಲ್ಲಿದೆ ಯೆಂದೇನೂ ಹೇಳುವುದಿಲ್ಲ; ಅಷ್ಟೇನೂ ಮೇಲು ಮಟ್ಟ ದಲ್ಲಿದೆಯೆಂದೂ ನಾನು ಭಾವಿಸಲಾರೆ. ಈಗಿನ ಸಮಸ್ಯೆಯೇನಿದ್ದರೂ ಈಗಿರುವ ಸ್ಥಿತಿಯಲ್ಲಿ ಇನ್ನೂ ಮೇಲುಮಟ್ಟಕ್ಕೆ ಹೋಗುವುದು ಹೇಗೆಂಬುದೇ ಹೊರತು ಕೆಳಮಟ್ಟಕ್ಕೆ ಹೋಗುವ ಪ್ರಶ್ನೆಯೇ ಬರು ವುದಿಲ್ಲ. ಈ ದಿವಸ ನಮ್ಮ ಸಂಸ್ಥಾನದಲ್ಲಿ ನೋಡುವು ದಾದರೆ, ವಿದ್ಯಾಭ್ಯಾಸದಲ್ಲಾಗಲಿ ಇತರ ವಿಷಯ ಗಳಲ್ಲೇ ಆಗಲಿ ನಮಗೆ ಕೇಂದ್ರ ಸರ್ಕಾರದವರ ಬೆಂಬಲ ಮತ್ತು ಸಹಾಯ ಬಹಳವಾಗಿದೆಯೆಂದು ಮಾನ್ಯ ಸಚಿವರೇ ತಿಳಿಸಿದ್ದಾರೆ. ಅಂದಮೇಲೆ ನಮಗೆ ಆರ್ಥಿಕ ವಿಷಯದಲ್ಲಿ ಸ್ವಾತಂತ್ರ್ಯವಿರುವ ಕಾಲ ಹೋಗಿದೆ. ಪ್ರತಿಯೊಂದನ್ನೂ ಕೇಂದ್ರ ಸರ್ಕಾರ ದವರೇ ನೋಡಬೇಕಾಗಿದೆ. ನಾವು ಕೇಳಲಿ, ಕೇಳ ದಿರಲಿ ಅವರು ನಮ್ಮ ಸಹಾಯಕ್ಕೆ ಬಂದೇ ಬರುತ್ತಾರೆ.

ಎರಡನೆಯದಾಗಿ, ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇಂಡಿಯಾ ದೇಶದ ¾ ಭಾಗದಲ್ಲಿ ನ್ಯಾಷನಲ್ ಎಕ್ಸ್ಟೆನ್ಷನ್ ಸರ್ವಿಸ್‌ಗಳೂ, ಕಮ್ಯೂನಿಟಿ ಪ್ರಾಜೆಕ್ಟುಗಳೂ ಬರಲಿವೆ. ಕಮ್ಯೂನಿಟಿ ಪ್ರಾಜೆಕ್ಟು ಗಳು, ನ್ಯಾಷನಲ್ ಎಕ್ಸ್ಟೆನ್ಷನ್ ಸರ್ವಿಸ್ಸುಗಳು ಏನು ಎಂಬ ಅನುಭವ ಜನರಿಗೆ ಈಗಾಗಲೇ ಗೊತ್ತಿದೆ. ಇಡೀ ಗ್ರಾಮಗಳ ಸಮಗ್ರ ಅಭಿವೃದ್ಧಿಗೆ ಇವು ಸಾಧಕ ವಾಗಿವೆ. ಈ ದಿವಸ ನಮ್ಮಲ್ಲಿ ಎರಡು ಕರ್ನಾಟಕಗಳ ಕಡೆ ಮನಸ್ಸು ಮತ್ತು ವಾದ ಹರಿದಿದೆಯೇ ಹೊರತು ಗ್ರಾಮಗಳ ಅಭಿವೃದ್ಧಿಯ ಕಡೆಗೆ ಮನಸ್ಸು ಹೋಗಿಲ್ಲ. ಈಗ ಎಲ್ಲ ಕಡೆಗಳಲ್ಲೂ ಕೇಂದ್ರ ಸರ್ಕಾರದವರು ಕಮ್ಯೂನಿಟಿ ಪ್ರಾಜೆಕ್ಟ್‌ಗಳನ್ನೂ ನ್ಯಾಷನಲ್ ಎಕ್ಸ್ಟೆನ್ಷನ್ ಸರ್ವಿಸ್‌ಗಳನ್ನೂ ಏರ್ಪಡಿಸುವ ಮನಸ್ಸು ಮಾಡಿದ್ದಾರೆ. ಆದ್ದರಿಂದ ಒಂದು ಕರ್ಣಾಟಕವಿದ್ದ ರೇನು, ಎರಡು ಕರ್ಣಾಟಕವಿದ್ದರೇನು ದೇಶ ಮುಂದೆ ಬಂದೇ ಬರುತ್ತದೆ. ಅಂತೆಯೇ ದೊಡ್ಡ ಕಾಮಗಾರಿ ಗಳ ವಿಚಾರ ಯೋಚನೆಮಾಡಬೇಕಾದ್ದಿಲ್ಲ. ಆದ್ದರಿಂದ ಒಂದೇ ಸಂಸ್ಥಾನವಾದರೆ ನಮ್ಮ ಪ್ರಗತಿಗೆ ಅಡ್ಡಿ ಬರುತ್ತದೆ, ಹಣಕಾಸಿನ ವಿಚಾರ ನಮ್ಮನ್ನು ಬಾಧಿಸು ತ್ತದೆ ಅಥವಾ ಬೇರೆಯವರು ನಮ್ಮ ಮೇಲೆ ಬಂದು ಆಡಳಿತ ನಡೆಸುತ್ತಾರೆ ಎಂಬ ಶಂಕೆಗಳಿಗೆಲ್ಲಾ ಎಡ ಯಿಲ್ಲ. ರಾಜಧಾನಿಯ ವಿಚಾರ ಒಬ್ಬರು ಪ್ರಸ್ತಾಪ ಮಾಡಿದರು. ಅದರ ಬಗ್ಗೆ ನಾನೇನೂ ಹೆಚ್ಚಾಗಿ ಹೇಳಬೇಕಾಗಿಲ್ಲ. ಏಕೆಂದರೆ ಒಂದು ಪಟ್ಟಣ ರಾಜ ಧಾನಿಯಾಗಬೇಕಾದರೆ ಅನೇಕ ಸನ್ನಿವೇಶಗಳನ್ನು ಅದು ಅವಲಂಬಿಸಿರುತ್ತದೆ. ಕೆಲವಾರು ಜನರ ಒತ್ತಾಯದ ಮೇಲಾಗಲಿ, ಬೆಂಬಲದ ಮೇಲಾಗಲಿ, ಅದು ಹೋಗುವುದಿಲ್ಲ. ಆದ್ದರಿಂದ ನಮ್ಮ ರಾಜ ಧಾನಿಯನ್ನು ಎಲ್ಲಿ ಬದಲಾಯಿಸಬೇಕಾಗುತ್ತದೋ ಎಂಬ ಸಂಶಯಕ್ಕೆ ಸಕಾರಣಗಳಿಲ್ಲ.

ಇನ್ನು ಬಳ್ಳಾರಿ ಜಿಲ್ಲೆಯಲ್ಲಿ ವಾದಕ್ಕೊಳಗಾಗಿರುವ ಕೆಲವು ತಾಲ್ಲೂಕುಗಳ ಬಗ್ಗೆ ಐದು ನಿಮಿಷ ಹೇಳು ತ್ತೇನೆ ಅಷ್ಟೆ. ಈ ತಿದ್ದುಪಡಿಯಲ್ಲಿ ಸೂಚಿತವಾಗಿರ ತಕ್ಕ ಆಲೂರು, ಆದೋನಿ, ರಾಯದುರ್ಗಗಳ ಮಟ್ಟಿಗೆ ನಾನು ಹೇಳುತ್ತೇನೆ. ಇವುಗಳ ವಿಷಯ ಬಹುಮಟ್ಟಿಗೆ ಈ ಪ್ರಕಾರ ತಿದ್ದುಪಡಿಯಾಗಿ ಸೂಚಿತವಾಗಬೇಕಾ ಗಿಯೇ ಇರಲಿಲ್ಲ. ಏಕೆಂದರೆ, ಆಂಧ್ರ ಸರ್ಕಾರ ಯಾವಾಗ ರಚಿತವಾಯಿತೋ ಆ ದಿವಸವೇ ಕೇಂದ್ರ ಸರ್ಕಾರದ ವರು ತಿಳಿಸಿದ್ದಾರೆ. ಇವು ಗಡಿ ವಿವಾದಕ್ಕೆ ಸಂಬಂಧ ಪಟ್ಟ ಪ್ರಶ್ನೆಗಳು. ಆಂಧ್ರ ಸರ್ಕಾರದವರೂ ಮೈಸೂರು ಸರ್ಕಾರದವರೂ ಸರ್ವಸಮ್ಮತವಾದ ತೀರ್ಮಾನಕ್ಕೆ ಬರುವುದಿಲ್ಲವಾದರೆ, ಯಾವ ಯಾವ ಪ್ರದೇಶಗಳು ಮೈಸೂರಿಗೆ ಸೇರಬೇಕು, ಯಾವ ಯಾವವು ಆಂಧ್ರಕ್ಕೆ ಸೇರಬೇಕು ಎಂಬುದನ್ನು ಬೌಂಡರಿ ಕಮಿಷನ್ನೋ ಅಥವಾ ಇಂಟರ್ ಸ್ಟೇಟ್ ನೆಗೋಷಿ ಯೇಷನ್ ಸಮಿತಿಯೋ ತೀರ್ಮಾನಮಾಡಬಹುದೆಂದು ಹೇಳಿದ್ದಾರೆ. ನನಗೆ ತಿಳಿದಮಟ್ಟಿಗೆ ಈ ವಿಚಾರದಲ್ಲಿ ಮೈಸೂರು ಸರ್ಕಾರದವರು ಈ ಪ್ರಶ್ನೆಯನ್ನು ಆಂಧ್ರ ಸರ್ಕಾರದವರ ಮುಂದೆ ಇಟ್ಟಿಲ್ಲದಿರುವುದರಿಂದ ಈ ವಿಚಾರ ಹಾಗೆಯೇ ನಿಂತಿದೆ. ಆದ್ದರಿಂದ ನಮ್ಮ ಸರ್ಕಾರದವರು ಈಗಲೂ Inter State Negotiationನ್ನನ್ನು ಪ್ರಾರಂಭಮಾಡಿದರೆ ಒಳ್ಳೆಯದು.

ಆಮೇಲೆ ಮಡಕಶಿರ ಮತ್ತು ಹೊಸೂರುಗಳ ವಿಚಾರ ಬಹಳ ಮುಖ್ಯವಾದುದು. ಭೂಪಟವನ್ನು ನೋಡಿದರೆ ಈ ಪ್ರದೇಶಗಳು ಒಂದು ಕೊಲ್ಲಿಯಹಾಗೆ ಉಳಿದಿವೆ. ಈ ವರದಿಗೆ ಕೊಟ್ಟಿರುವ Background ನಲ್ಲಿ ಕೂಡ ಈ ವಿಷಯವನ್ನು ಪ್ರಸ್ತಾಪಿಸಿ ಮೈಸೂರು ಸಂಸ್ಥಾನದಲ್ಲಿ ಸೇರುವುದು ಅಗತ್ಯವೆಂದು ಹೇಳಿ ಸಕಾರಣಗಳಿಂದ ಸಮರ್ಥಿಸಿದ್ದಾರೆ. ಕೊನೆಗೆ ಏಕೋ conclusion ಬರೆಯುವಾಗ ಇದನ್ನು ಬೌಂಡರಿ ಕಮಿಷನ್ ಇತ್ಯರ್ಥಮಾಡಲಿ ಎಂದುಬಿಟ್ಟರು ಅಷ್ಟೆ. ಹಿಂದೆಯೇ enclaves ಪ್ರಶ್ನೆ ಬಂದಾಗ ಇದನ್ನು ಮಾಡಬೇಕಾಗಿತ್ತು. ಅಲ್ಲದೆ ಮಡಕಶಿರದಲ್ಲಿ ಶೇಕಡ 62 ರಷ್ಟು ಕನ್ನಡಿಗರೂ, ಶೇಕಡ 30ರಷ್ಟು ತೆಲುಗರೂ ಇದ್ದಾರೆಂದು ಈ ವರದಿಯವರೇ ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಎಲ್ಲೋ ಒಂದೆರಡು ಹೋಬಳಿಗಳಲ್ಲಿ ಮಾತ್ರ ತೆಲುಗರು ಹೆಚ್ಚಾಗಿದ್ದಾರೆ ಅಷ್ಟೆ. ಒಟ್ಟು ತಾಲ್ಲೂಕನ್ನು ಒಂದು ಸಂಸ್ಥಾನಕ್ಕೆ ಸೇರಿಸುವಾಗ ಆ ಎರಡು ಹೋಬಳಿಗಳನ್ನು ಮಾತ್ರ ಬೇರೆ ಕಡೆಗೆ ಸೇರಿಸಿ ದರೆ ಅವರಿಗೆ ಸಂಬಂಧಪಟ್ಟ ರಿಕಾರ್ಡ್ ಮುಂತಾದುವು

ಗಳೆಲ್ಲಾ ಬೇರೆ ಬೇರೆ ಕಡೆಗೆ ಸೇರಿ ನಾನಾ ಸಮಸ್ಯೆಗಳು ಉದ್ಭವಿಸಿ ಇಬ್ಬರಿಗೂ ತೊಂದರೆಯಾಗುತ್ತದೆ. ಆ ದೃಷ್ಟಿಯಿಂದ ಇಡೀ ತಾಲ್ಲೂಕನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸುವುದು ಉತ್ತಮವೆಂದು ನನ್ನ ಅಭಿಪ್ರಾಯ.

ನನ್ನ ಮಾನ್ಯ ಸ್ನೇಹಿತರಾದ ಶ್ರೀ ನಾರಾಯಣ ರೆಡ್ಡಿಯವರು ಒಂದೆರಡು ತಿದ್ದುಪಡಿಗಳನ್ನು ಕೊಟ್ಟು ಚಿತ್ರದುರ್ಗದ ಜಿಲ್ಲೆಯ ಚಳ್ಳಕೆರೆ, ಹಿರಿಯೂರು ತಾಲ್ಲೂಕುಗಳ ಪೂರ್ವ ಭಾಗಗಳು ಆಂಧ್ರಕ್ಕೆ ಸೇರಬೇಕೆಂದು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ನಾನು ಹಿರಿಯೂರು, ಚಳ್ಳಕೆರೆ ತಾಲ್ಲೂಕುಗಳ ಪ್ರತಿನಿಧಿಯಾಗಿ ಬಂದವನಾಗಿ, ಈ ವಿಷಯದಲ್ಲಿ ಸರಿಯಾದ ಅಭಿಪ್ರಾಯ ಸೂಚಿಸದೆ ಹೋದರೆ ನಾನು ಕರ್ತವ್ಯಲೋಪಮಾಡಿದಂತಾಗುತ್ತದೆಂದು ತಿಳಿಸಿದ್ದೇನೆ. ಈ ತಿದ್ದುಪಡಿಯ ಪ್ರಕಾರ ಚಿತ್ರದುರ್ಗ-ಬೆಂಗಳೂರು ರಸ್ತೆಯ ಪೂರ್ವ ಭಾಗವೆಲ್ಲಾ ಹೋಗಬೇಕಾಗುತ್ತದೆ. ಮಾನ್ಯ ಸೂಚಕರು ಮಾಡಿರುವ ವಿಂಗಡಣೆಯ ರೀತಿ ಬಹಳ ತಮಾಷೆಯಾಗಿದೆಯೆಂದು ಹೇಳಬೇಕು. ಏಕೆಂದರೆ ಹಿರಿಯೂರು ಮತ್ತು ಚಳ್ಳಕೆರೆಯ ಪೂರ್ವ ಭಾಗಗಳಲ್ಲಿ ನಾನು ಬಹುಮಟ್ಟಿಗೆ ಸಂಚಾರಮಾಡಿ ನೋಡಿದ್ದೇನೆ. ಅಲ್ಲಿ 90 ಭಾಗ ಜನ ಕನ್ನಡ ಮಾತನಾಡುವವರಾಗಿದ್ದಾರೆ. ತೆಲುಗು ಮಾತನಾಡುವವರಿಗೂ ಕನ್ನಡ ಬರುತ್ತದೆ.

ಶ್ರೀ ಮುಲ್ಕ ಗೋವಿಂದರೆಡ್ಡಿ (ಚಿತ್ರದುರ್ಗ).—ಸೆನ್ಸಸ್ ರಿಪೋರ್ಟನ್ನು ತಾವು ತೆಗೆದುನೋಡಿ. ಅಲ್ಲಿ language basis ಮೇಲೆ ಪಟ್ಟಿ ಕೊಟ್ಟಿದ್ದಾರೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಸ್ವಾಮಿ, ಅಲ್ಲಿ ತೆಲುಗು ಮಾತನಾಡುವವರೂ ಮಾತನಾಡುವುದು ತೆಲುಗಲ್ಲ; ಕನ್ನಡ ತೆಲುಗು.

ಶ್ರೀ ವಿ. ಮಸಿಯಪ್ಪ.—ಕಣ್ಣಾರೆ ನೋಡಿ ಹೇಳುತ್ತಿರುವವನು ನಾನು. ಕಾಗದದ ಮೇಲಿರುವುದನ್ನು ನೋಡಿ ನಂಬುವುದು ಸರಿಯಲ್ಲ. ಇವತ್ತಿಗೂ ಅಲ್ಲಿ ಹೋಗಿ ನೋಡಲಿ. ಯಾರು ಹೆಚ್ಚಾಗಿದ್ದಾರೆಂದು ಹೇಳಲಿ.

Sri Mulka GOVINDA REDDY.—Because we had the misfortune to remain in Mysore State, we have been forced to learn that Kannade language.

ಶ್ರೀ ವಿ. ಮಸಿಯಪ್ಪ.—ಅಲ್ಲದೆ, ಆ ಭಾಗದ ಜನ ಯಾವತ್ತು ಆಂಧ್ರಕ್ಕೆ ಹೋಗಬೇಕೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೋ ಕಾಣೆ. ಕನಸು ನೆನಸಿನಲ್ಲಿಯೂ ಅವರು ಆರೀತಿ ನಿರ್ಣಯಿಸಿಲ್ಲ. ಅಂಥದರಲ್ಲಿ ನಾವು ಈ ರೀತಿಯಾಗೆಲ್ಲಾ ಹೇಳಿ ತಪ್ಪು ಭಾವನೆಗಳನ್ನು ತುಂಬಿ ಏಕೆ ಅವರ ಮನಸ್ಸು ಕೆಡಿಸಬೇಕೋ ಗೊತ್ತಿಲ್ಲ. ಹಿರಿಯೂರು, ಚಳ್ಳಕೆರೆ, ತಾಲ್ಲೂಕಿನವರಾರೂ ಆಂಧ್ರಕ್ಕೆ ಹೋಗಬೇಕೆಂದು ಹೇಳಿಲ್ಲ. ಅಲ್ಲದೆ, ಮೈನಾರಿಟಿ, ಮೆಜಾರಿಟಿ, Progressive—retrogressive ಎಂಬವುಗಳೆಲ್ಲಾ comparative terms ಅಷ್ಟೆ. ಅವನ್ನೇ ಒಂದು demarcation line ಎಂದು ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಇವತ್ತೇ ನಾವು ಮುಂದುವರಿದ ದೇಶವೆಂದು ಹೇಳಿಕೊಳ್ಳಬಹುದು. ನಾನು ಮೊನ್ನೆ ಬಕ್ರಾ-ನಂಗಲ್ ಪ್ರಾಜೆಕ್ಟನ್ನು ನೋಡುವುದಕ್ಕೆ ಹೋಗಿದ್ದೆ. ಅದನ್ನು ನೋಡಿದಮೇಲೆ ಇನ್ನು ಒಂದೆರಡು ವರ್ಷಗಳಲ್ಲೇ ವಿದ್ಯುತ್ ಉತ್ಪಾದನೆಯ ವಿಷಯದಲ್ಲಿ ನಮ್ಮ ಸ್ಥಾನ ಎಷ್ಟನೆಯದಾಗುತ್ತದೋ ಎಂಬುದನ್ನು ನೋಡಬೇಕು. ನಾವು ವಿದ್ಯುಚ್ಛಕ್ತಿಯಲ್ಲಿಯೂ ಕೂಡ ಬಹಳ ಹಿಂದುಳಿದಿದ್ದೇವೆಂತಲೇ ಹೇಳಬೇಕು. ಆದ್ದರಿಂದ ನಮ್ಮದು Progressive State ಅಥವಾ Retrogressive State ಎಂದು ಹೇಳಿಕೊಳ್ಳುವ ಪ್ರಶ್ನೆಯೇ ಬರುವುದಿಲ್ಲ. ಅಷ್ಟೇಕೆ, ಇನ್ನು ಕ್ರಮಕ್ರಮೇಣ ಜನಾಂಗದಲ್ಲಿ ಮೇಲು ಕೀಳು ಎಂಬ ಭಾವನೆಗಳು ಹೋಗಿ ಬಹುಶಃ Educated—Uneducated ಅಥವಾ Rich and Poor ಎಂಬ ಬಗೆಯ ಸಾಮಾಜಿಕ ಪಂಗಡಗಳು ಉದ್ಭವಿಸಬಹುದು ಅಷ್ಟೆ. ಆದ್ದರಿಂದ ಈ ರೀತಿ Majority—Minority, Progressive Retrogressive ಎಂಬವುಗಳೆಲ್ಲಾ ಸಮಾಜದಲ್ಲಿ ಒಂದೇ ರೀತಿಯಿರದೆ ಬದಲಾವಣೆಗೊಳ್ಳುತ್ತಿರುತ್ತವೆ. They are changing features. ಆದರಿಂದ ಇವುಗಳ ವಿಷಯದಲ್ಲಿ ಇಂದಿನ ಪರಿಸ್ಥಿತಿಯನ್ನೇ ನೋಡಿ ನಾವು ಯಾರೂ ಹೆದರಬೇಕಾದ್ದಿಲ್ಲ. ಅಲ್ಲದೆ ಆಯಾ ಸಂದರ್ಭಗಳಲ್ಲಿ ಯಾವ ಯಾವ ರೀತಿಯ ಮೈನಾರಿಟಿ ಗುಂಪುಗಳಿರುತ್ತವೋ ಅವಕ್ಕೆ ತಕ್ಕ ರಕ್ಷಣೆ ಕೊಡುವ ವಿಚಾರವನ್ನೂ ಈ ವರದಿಯಲ್ಲಿ ಮರೆತಿಲ್ಲ. ಎಲ್ಲರಿಗೂ ಸೌಲಭ್ಯ ಕಲ್ಪಿಸಿ ಕೊಡುವುದೇ ಈ ವರದಿಕಾರರ ಉದ್ದೇಶವಾಗಿದೆ. ಆದ್ದರಿಂದ ಈ ವರದಿಯನ್ನು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಇಟ್ಟಿರುವ ತಿದ್ದುಪಡಿಯನ್ನು ಎಲ್ಲರೂ ಒಪ್ಪಬಹುದಾಗಿದೆ. ಪ್ರತಿಯೊಬ್ಬರೂ ಸಂತೋಷದಿಂದ ಇದಕ್ಕೆ ಒಪ್ಪಿ ಬೆಂಬಲ ಕೊಡಬೇಕೆಂದು ನನ್ನ ಪ್ರಾರ್ಥನೆ.

The House adjourned at Forty-five Minutes past Twelve of the Clock and re-assembled at Three of the Clock.

[MR. SPEAKER in the Chair]

ಶ್ರೀ ಕೆ. ಸಿಂಗಾರಿಗೌಡ (ನಾಗಮಂಗಲ).—ಸ್ವಾಮಿ, ಈ ರಾಜ್ಯಗಳ ಪುನರ್ವಿಂಗಡಣೆಯ ವರದಿಯ ಬಗ್ಗೆ ಈ ಸಭೆಯಲ್ಲಿ ಬಹಳ ಚರ್ಚೆಗಳು ನಡೆದಿವೆ. ಹಿಂದೆಯೂ ಕೂಡ ಅನೇಕ ವರ್ಷಗಳ ವರೆಗೆ ದೇಶದಲ್ಲಿ ಈ ಭಾಷಾವಾರು ಪ್ರಾಂತ್ಯಗಳನ್ನು ರಚನೆಮಾಡತಕ್ಕ ಬಗ್ಗೆ ಒಂದು ಕೂಗು ಎದ್ದಿತು. ಆ ಕಾಲದಲ್ಲಿಯೂ ಸಹ ಈಗಿನಂತೆ ಕೇಂದ್ರ ಸರ್ಕಾರ ಅನೇಕ ಕಮಿಷನ್‌ಗಳನ್ನು ರಚನೆಮಾಡಿತ್ತು. ಹಾಗೆ ರಚನೆಮಾಡಲಾಗಿದ್ದಂಥ ಆ ಧಾರ್ ಸಮಿತಿ, ಜೆ.ವಿ.ಪಿ. ಸಮಿತಿಗಳೆಲ್ಲಾ ಈ ಅಂಶವನ್ನು ಚೆನ್ನಾಗಿ ಪರಿಶೀಲಿಸಿ ಹೀಗೆ ಭಾಷಾವಾರು ತತ್ವದ ಮೇಲೆ ರಾಜ್ಯಗಳನ್ನು ಪುನರ್ವಿಂಗಡಣೆ ಮಾಡುವುದು ಅಷ್ಟು ಸೂಕ್ತವಾದದ್ದಲ್ಲ ಎಂದು ಸರ್ಕಾರಕ್ಕೆ ಆ ಸಮಿತಿಗಳು ಒಪ್ಪಿಸಿದಂಥ ವರದಿಗಳ ಪ್ರಕಾರ ಆಗಿದ್ದ ಸರ್ಕಾರ ಆ ವರದಿಗಳಲ್ಲಿ ಅಡಕವಾಗಿದ್ದ ಅಭಿಪ್ರಾಯಗಳನ್ನು ಗಮನಕ್ಕೆ ತೆಗೆದುಕೊಂಡು ಅವು ನ್ಯಾಯವಾಗಿದ್ದುದರಿಂದ ಆಗಲೇ ಈ ವಿಚಾರವನ್ನು ಕೈಬಿಟ್ಟರು. ಆದರೆ ಈ ದಿವಸ ಅದೇ ಅಭಿಪ್ರಾಯದ ಬಗ್ಗೆ ಕೇಂದ್ರ ಸರ್ಕಾರಕ್ಕೆ ಆ ಫಜ್ಲಾಲಿ ಸಮಿತಿಯವರು ಒಪ್ಪಿಸಿರತಕ್ಕಂಥ ಈಗ ನಮ್ಮ ಸಭೆಯ ಮುಂದಿರುವ ವರದಿಯ ಮೇರೆಗೆ ನಮ್ಮ ಕೇಂದ್ರ ಸರ್ಕಾರ ಈ ದಿವಸ ರಾಜ್ಯಗಳನ್ನು ಭಾಷಾವಾರು ತತ್ವದ ಮೇಲೆ ಪುನರ್ವಿಂಗಡಣೆ ಮಾಡಬೇಕೆಂಬ ಅಭಿಪ್ರಾಯಕ್ಕೆ ಬಂದಿದ್ದಾರೆ.

ಆದರೆ ಈ ಹಿಂದೆ 5-6 ವರ್ಷಗಳ ಕೆಳಗೆ ಆ ಜೆ.ವಿ.ಪಿ. ಸಮಿತಿಯನ್ನು ನೇಮಕಮಾಡಿದಂಥ ಕಾಲದಲ್ಲಿ ದೇಶದಲ್ಲಿ ಏನೊಂದು ಪರಿಸ್ಥಿತಿಯಿತ್ತೋ ಮತ್ತು

(ಶ್ರೀ ಕೆ. ಸಿಂಗಾರಿ ಗೌಡ.)

ಈ ದಿವಸ ಈ ಭಾಷಾವಾರು ಪ್ರಾಂತ್ಯಗಳ ರಚನೆಗೆ ಏನೇನು ಅಡ್ಡಿ-ಅಡಚಣೆಗಳಿದ್ದವೋ ಅವುಗಳೆಲ್ಲಾ ಭಾರತದ ಹಿತದೃಷ್ಟಿಯಲ್ಲಿ ಬಹಳ ಅಪಾಯಕರವಾದುವುಗಳಾಗಿದ್ದುದರಿಂದ ಆಗ ಈ ಪ್ರಶ್ನೆಯನ್ನು ದೇಶದ ಹಿತದೃಷ್ಟಿಯಿಂದ ಮುಂದಕ್ಕೆ ಹಾಕಲಾಯಿತು. ಆದರೆ ಹಾಗೆ ಆ ದಿವಸ ಈ ಪ್ರಶ್ನೆಯನ್ನು ಯಾವ ಕಾರಣಗಳಿಗಾಗಿ ಮುಂದಕ್ಕೆ ಹಾಕಲಾಯಿತೋ ಅಂಥ ಕಾರಣಗಳೆಲ್ಲಾ ಈ ದಿವಸ ದೇಶದಲ್ಲಿ ಮಾಯವಾಗಿವೆ ಎಂದು ಹೇಳುವುದಕ್ಕೆ ಕಾರಣವಿಲ್ಲ. ನಮ್ಮ ಇಂಡಿಯಾ ದೇಶದ ಗಡಿಸರಹದ್ದುಗಳಲ್ಲಿ ಗಲಭೆಗಳಿನ್ನೂ ನಿಂತಿಲ್ಲ. ಕೇಂದ್ರ ಸರ್ಕಾರದ ಹಣಕಾಸಿನ ಪರಿಸ್ಥಿತಿ ಕೂಡ ಯಾವ ರೀತಿಯಿಂದಲೂ ಅಂಥ ಒಂದು ಸುಭದ್ರ ಸ್ಥಿತಿಯ ಮೇಲೆ ನಿಂತಿರುವುದಿಲ್ಲ. ಈ ಕಾರಣಗಳಿಂದ ಈಗ ನಮ್ಮ ಮುಂದಿರತಕ್ಕ ವರದಿಯಲ್ಲಿ ಹೇಳಿರುವ ಪ್ರಕಾರ ಈ ರಾಜ್ಯಗಳ ಪುನರ್ವಿಂಗಡಣೆಗೆ ಅಷ್ಟರಮಟ್ಟಿಗೆ ಆ ಕೇಂದ್ರ ಸರ್ಕಾರವಾಗಲಿ ಅಥವಾ ಆ ನಮ್ಮ ಪಾರ್ಲಿಮೆಂಟಾಗಲಿ ಅನುಮತಿ ಕೊಡುವುದಕ್ಕೆ ಅವಕಾಶಗಳಿರುವುದಿಲ್ಲ. ಹಾಗಿದ್ದರೂ, ಈ ವರದಿಯಲ್ಲಿ ಸೂಚಿಸಿರುವುದಕ್ಕನುಸಾರವಾಗಿ ಈ ರಾಜ್ಯಗಳ ಪುನರ್ವಿಂಗಡಣೆಯನ್ನು ಒಂದು ಕಾರ್ಯರೂಪಕ್ಕೆ ತರುವ ಅಭಿಲಾಷೆಯಿಂದ ಮುಂದೆ ರಚಿತವಾಗತಕ್ಕಂಥ ಆ ಕರ್ಣಾಟಕ ಪ್ರಾಂತ್ಯದ ವಿಚಾರದಲ್ಲಿ ಸಮಿತಿಯವರು ಈ ವರದಿಯಲ್ಲಿ ಏನು ಹೇಳಿದ್ದಾರೆ ಎನ್ನುವ ಬಗ್ಗೆ ನಾನೀಗ ಎರಡು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ.

ಈ ಹಿಂದೆ ಮಾತನಾಡಿದಂಥ ಶ್ರೀ ಟಿ. ಮರಿಯಪ್ಪನವರು ಈ ವಿಚಾರದ ಬಗ್ಗೆ ಅಷ್ಟಾಗಿ ಜನರ ಅಭಿಪ್ರಾಯವೇನಿದೆ ಎನ್ನುವುದನ್ನು ತಿಳಿದುಕೊಳ್ಳಬೇಕಾದುದಿಲ್ಲ ಎಂದು ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಆ ಜೆ.ವಿ.ಪಿ. ವರದಿಯಲ್ಲಿ ಹೇಳಿರತಕ್ಕಂಥ ವಿಚಾರಗಳಲ್ಲಿ ಎಲ್ಲಕ್ಕೂ ಮಿಗಿಲಾದುದೆಂದರೆ ಇಂಥ ಯಾವ ಒಂದು ಪ್ರಾಮುಖ್ಯವಾದ ವಿಚಾರದ ಬಗ್ಗೆ ಆಯಾಯ ಪ್ರದೇಶದಲ್ಲಿರತಕ್ಕಂಥ ಜನರ ಅಭಿಪ್ರಾಯವೇನಿದೆಯೋ ಅದಕ್ಕೆ ಹೆಚ್ಚಿನ ಮನ್ನಣೆ ಕೊಡಬೇಕೆಂದು ಹೇಳಿದ್ದಾರೆ. ಆದರೆ ಈಗ ಬಂದಿರತಕ್ಕಂಥ ಪ್ರಶ್ನೆ ಇಡೀ ಭಾರತದ ಒಕ್ಕೂಟಕ್ಕೆ ಸಂಬಂಧಪಟ್ಟಂಥ ವಿಚಾರ. ಆದುದರಿಂದ ಇಂಥ ಪ್ರಾಮುಖ್ಯವಾದ ವಿಷಯದಲ್ಲಿ ಭಾರತದಾದ್ಯಂತವೂ ಯಾವ ಯಾವ ಪ್ರದೇಶದಲ್ಲಿ ಜನರ ಅಭಿಪ್ರಾಯ ಯಾವಯಾವ ರೀತಿಯಿದೆ ಎನ್ನುವುದನ್ನು ತಿಳಿದುಕೊಳ್ಳಬೇಕಾದುದು ಬಹಳ ಮುಖ್ಯವಾದಂಥ ಅಂಶವಾಗಿದ್ದಾಗ್ಯೂ ಈ ಮಾನ್ಯ ಸದಸ್ಯರು ಈ ವಿಚಾರದಲ್ಲಿ ಜನಾಭಿಪ್ರಾಯವನ್ನೇನೂ ಪಡೆಯಬೇಕಾಗಿಲ್ಲ ಎಂದು ಹೇಳಿದುದು ಅಷ್ಟು ಸಮರ್ಪಕವಾಗಿಲ್ಲ ಎಂದು ಹೇಳುತ್ತೇನೆ. ಈ ರಾಜ್ಯಗಳ ಪುನರ್ವಿಂಗಡಣೆಯ ವಿಚಾರವಾಗಿ ನಾನಾ ಕಡೆಗಳಲ್ಲಿ ವಿರೋಧವಾಗಿ ಚಳವಳಿಗಳು ನಡೆಯುತ್ತಿವೆ. ಹೀಗೆ ಚಳವಳಿಗಳು ನಡೆಯುತ್ತಿರುವುದರಿಂದ ಆಯಾ ಪ್ರಾಂತ್ಯಗಳ ಜನಾಭಿಪ್ರಾಯವೇನಿದೆ ಎನ್ನುವುದನ್ನು ಜಾಗ್ರತೆ ಸಂಗ್ರಹಿಸಬಹುದು. ಗಲಭೆಗಳು ಎದ್ದಿರುವಂಥ ಪ್ರದೇಶಗಳಲ್ಲಿರತಕ್ಕ ಜನರ ಆರ್ಥಿಕಸ್ಥಿತಿ, ಮತ್ತು ಅವರಿಗಿರತಕ್ಕ ಆಡಳಿತ ಸೌಲಭ್ಯಗಳೆಲ್ಲ ಹೀಗಿರುತ್ತವೆ ಎನ್ನುವುದರ ಬಗ್ಗೆ ಅವರ ಅಭಿಪ್ರಾಯಗಳನ್ನು ತಿಳಿದುಕೊಳ್ಳಲು ಅವಕಾಶವಿದೆ. ಹೀಗೆಲ್ಲಾ ಜನಾಭಿಪ್ರಾಯಕ್ಕೆ ಈ ಪ್ರಜಾಪ್ರಭುತ್ವಾಡಳಿತದಲ್ಲಿ ಒಂದು ಹೆಚ್ಚಿನಮನ್ನಣೆಯಿದ್ದಾಗ್ಯೂ ಅದಕ್ಕೆ ಗಮನ ಕೊಡದೆ ಈ ವರದಿಯಲ್ಲಿ ಏನು ಸಿಫಾರ್ಸು ಮಾಡಲಾಗಿದೆಯೋ ಅದಕ್ಕೆ ನೀವೆಲ್ಲರೂ ತಲೆ ಬಾಗಬೇಕೆಂದು ಹೇಳುತ್ತಿರುವುದು ಆ ಪ್ರಜಾಪ್ರಭುತ್ವದಲ್ಲಿರತಕ್ಕಂಥ ತತ್ವಗಳನ್ನೆಲ್ಲಾ ಇದಕ್ಕೆ ಬಲಿಕೊಟ್ಟ ಹಾಗೆ ಆಯಿತು. ಆದುದರಿಂದ ಈ ಸಂಬಂಧವಾಗಿ ಶ್ರೀಯುತ ಕೆ. ಪಟ್ಟಾಭಿರಾಮರ್ರರವರೂ ಮತ್ತು ಶ್ರೀ ಟಿ. ಮರಿಯಪ್ಪನವರೂ ಸಹ ಅವರು ಹೇಳಿರತಕ್ಕದ್ದನ್ನು ಒಂದು ಜಿಗುಪ್ಸೆ ಮನೋಭಾವದಿಂದ ವ್ಯಕ್ತಪಡಿಸಿದ್ದಾರೆ. ಇವರೆಲ್ಲರೂ ಹೇಳಿರತಕ್ಕದ್ದು ದೂರದ ಬೆಟ್ಟ ನುಣ್ಣಗೆ ಕಾಣುತ್ತದೆಂದು ಹೇಳುತ್ತಿರುವಹಾಗಿದೆ. ಆದರೆ ಆ ಬೆಟ್ಟದ ಹತ್ತಿರಹತ್ತಿರಕ್ಕೆ ಹೋಗುತ್ತಾ ಬಂದಂತೆಲ್ಲಾ ಅದರ ನಿಜಸ್ವರೂಪವು ಮತ್ತು ಅದರ ವಾಸ್ತವಾಂಶಗಳೂ ಕಾಣುತ್ತ ಬಂದು ಕೊನೆಗೆ ಅದರ ಹತ್ತಿರಕ್ಕೆ ಹೋದಾಗ ತಮಗೇ ತಮ್ಮ ವಾದದ ನಿಜಾಂಶ ತಿಳಿಯುತ್ತದೆ. ಒಂದು ಆಡಳಿತಕ್ಕೆ ಸಿಕ್ಕಿರತಕ್ಕ, ಒಂದು ಚೌಕಟ್ಟಿನಲ್ಲಿರತಕ್ಕಂಥ ಜನರು ಇದಕ್ಕೆ ವಿರೋಧಿಸುತ್ತಿರುವಾಗ ತಾವು ಜನರ ಅಭಿಪ್ರಾಯವನ್ನು ಕ್ರೋಡೀಕರಿಸದೆ ಮಾಡತಕ್ಕದ್ದು ಸರಿಯಾದದ್ದಲ್ಲ. ಮೈಸೂರು ಮೈಸೂರಾಗಿಯೇ ಉಳಿಯಬೇಕೆಂದು ಎತ್ತಿರುವ ಕೂಗು ಜನಜನಿತವಾಗಿದೆ. ಆದರೆ ಈ ಮೈಸೂರು ಜನರ ಅಭಿಪ್ರಾಯಕ್ಕೆ ವಿರೋಧವಾಗಿರತಕ್ಕ ರೀತಿಯಲ್ಲಿ ಆ ಸಮಿತಿಯವರು ತಮ್ಮ ವರದಿಯನ್ನು ತಯಾರಿಸಿದ್ದಾರೆಂಬುದಾಗಿ ಈ ವರದಿಯಿಂದಲೇ ವ್ಯಕ್ತಪಡುತ್ತದೆ. 1947ರಲ್ಲಿದ್ದ ಆ ಜೆ.ವಿ.ಪಿ. ಸಮಿತಿಯ ವರದಿಯಲ್ಲಾದರೂ ಏನಿದೆ ಅಂದರೆ ಆ ಮೈಸೂರಿನ ಹೊರಗಡೆಯಿರತಕ್ಕಂಥ ಕರ್ಣಾಟಕ ಪ್ರದೇಶದವರು ಈ ಮೈಸೂರಿಗೆ ಸೇರಲು ಇಷ್ಟವುಳ್ಳವರಾಗಿರುತ್ತೇವೆಂದು ಏನೂ ಹೇಳಿಲ್ಲ ಎಂದು ಆ ವರದಿಯಲ್ಲಿ ನಮೂದಾಗಿದೆ. ಇದೇ ಕಾಂಗ್ರೆಸ್ ಸಮಿತಿ ಆ ಕಾಲದಲ್ಲಿ ಆ ಜೆ.ವಿ.ಪಿ. ಸಮಿತಿಯ ವರದಿಯಲ್ಲಿ ಸೂಚಿಸಿದ್ದಂಥ ಅಭಿಪ್ರಾಯಗಳಿಗೂ ಕೂಡ ಮನ್ನಣೆ ಕೊಟ್ಟಿದ್ದಾರೆ. ಆದರೆ ಈಗ ಈ ಫಜಲ್ಲಾಲಿ ಸಮಿತಿಯವರು ಒಪ್ಪಿಸಿರತಕ್ಕಂಥ ವರದಿಯಲ್ಲಿರುವ ಅಭಿಪ್ರಾಯಗಳು ಆ ಜೆ.ವಿ.ಪಿ. ವರದಿಯ ಅಭಿಪ್ರಾಯಗಳಿಗಿಂತಲೂ ಮೇಲಾದವುಗಳೆಂದು ಏನೂ ಹೇಳಿಲ್ಲ. ಅವರು ಕಲವು ವರ್ಷಗಳ ಹಿಂದೆ ದೇಶದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುತ್ತಿದ್ದಂಥ ಕಾಲದಲ್ಲಿ ಯಾವುದೋ ದೃಷ್ಟಿಯಿಂದ ಈ ಕನ್ನಡ ಜನರೆಲ್ಲಾ ಒಂದು ಕಡೆ ಸೇರಿ ಒಗ್ಗಟ್ಟಾಗಿರುವಂತೆ ಮಾಡಬೇಕು ಎನ್ನುವಂಥ ಒಂದು ಅಭಿಪ್ರಾಯವನ್ನೇನೋ ವ್ಯಕ್ತಪಡಿಸಿದ್ದರು. ಆ ಜೆ. ವಿ. ಪಿ. ಸಮಿತಿಯವರ ವರದಿಯಲ್ಲೂ ಈ ಬಗ್ಗೆ ಒಂದು ಮಾತನ್ನು ಹೇಳಿಯೇ ಇದ್ದಾರೆ. ಆದರೆ ಈ ಹಿಂದೆ ಆ ಕಾಂಗ್ರೆಸ್‌ನವರಾದರೂ ಈ ಭಾಷಾವಾರು ಪ್ರಾಂತ್ಯಗಳ ನಿರ್ಮಾಣದ ಬಗ್ಗೆ ಏನು ಹೇಳಿದ್ದಾರೆ ಎನ್ನುವುದನ್ನು ನಾವು ಸ್ವಲ್ಪ ಈಗ ವಿವೇಚನೆಮಾಡಿ ನೋಡಬೇಕಾಗಿದೆ. ಅವರಾದರೂ ಹೀಗೆ ರಾಜ್ಯಗಳನ್ನು ಭಾಷಾವಾರು ತತ್ವದ ಮೇಲೆ ವಿಂಗಡಣೆ ಮಾಡಬೇಕಾಗಿದ್ದರೂ ಆಯಾ ಪ್ರದೇಶಗಳ ಆರ್ಥಿಕಸ್ಥಿತಿ, ಹಣಕಾಸಿನ ಪರಿಸ್ಥಿತಿ, ಆಡಳಿತ ಸೌಕರ್ಯ ಇತ್ಯಾದಿ ಅಂಶಗಳನ್ನೆಲ್ಲಾ ಗಣನೆಗೆ ತೆಗೆದುಕೊಂಡು ಇದನ್ನು ಮಾಡಬೇಕಾದುದು ಅತ್ಯವಶ್ಯಕ ಎಂದು ಹೇಳಿದ್ದಾರೆ. ಆದರೆ ಈ ದಿವಸ ಕೆಲವರು ಹೇಳುತ್ತಿರುವಂಥ ವಾದಗಳನ್ನು ನೋಡಿದಲ್ಲಿ ಈ ಮೈಸೂರಿನೊಂದಿಗೆ ಬೊಂಬಾಯಿ ಪ್ರಾಂತ್ಯದ ಕೆಲವು ಭಾಗಗಳೂ, ಹೈದರಾಬಾದಿನ ಕೆಲವು ಭಾಗಗಳೂ, ಆ ಕೊಡಗು ಮತ್ತು ಮದ್ರಾಸ್ ಪ್ರಾವಿನ್ಸಿನಲ್ಲಿ ಕೆಲವು ಭಾಗಗಳೂ ಹೀಗೆ ಐದು ಬೇರೆ ಬೇರೆ ವಿಭಾಗಗಳಲ್ಲಿ ಅಡಕವಾಗಿರುವಂಥ ಪ್ರಾಂತ್ಯಗಳನ್ನು ಈ ದಿವಸ ಒಟ್ಟುಗೂಡಿಸಬೇಕೆಂದು ಹೇಳುತ್ತಿದ್ದಾರೆ.

ಆದರೆ ಈ ಐದು ಭಾಗಗಳಲ್ಲೂ ಹಣಕಾಸಿನ ಪರಿಸ್ಥಿತಿ
ಒಂದೇ ಆಗಿದೆಯೇ ; ನಮ್ಮ ದೇಶದಲ್ಲಿರತಕ್ಕಂಥ ಎಲ್ಲ
ಸೌಲಭ್ಯಗಳೂ ಆ ಇತರ ಪ್ರದೇಶಗಳಲ್ಲಿವೆಯೇ ;
ಈಗ ಏನೊಂದು ಕೂಗು ದೇಶದಲ್ಲಿ ಎದ್ದಿದೆಯೋ
ಆದರ ಪ್ರಕಾರ ನಿಜವಾಗಿಯೂ ನಾವು ಈ ಎಲ್ಲಾ
ಪ್ರದೇಶಗಳ ಜನರ ಆರ್ಥಿಕ ಮಟ್ಟವನ್ನು ಮೇಲಕ್ಕೆ
ಎತ್ತಲು ಸಾಧ್ಯವಿದೆಯೇ; ಅವರಿಗೆ ಬೇಕಾದಂಥ
ಸೌಲಭ್ಯಗಳನ್ನೆಲ್ಲಾ ಒದಗಿಸಲು ನಮಗೆ ಸಾಧ್ಯ
ವಿದೆಯೇ ; ಈ ಪ್ರತಿಯೊಂದು ಭಾಗದಲ್ಲಿ ಏನೇನು
ವೈಶಿಷ್ಟ್ಯತೆಗಳಿವೆಯೋ ಅವುಗಳನ್ನೆಲ್ಲಾ ನಡೆಸಿ
ಕೊಂಡು ಹೋಗತಕ್ಕಂಥ ಒಂದು ದೊಡ್ಡ ಜವಾಬ್ದಾರಿ
ಯನ್ನು ಈ ಪ್ರಾಂತ್ಯ ಹೊರುವುದಕ್ಕೆ ಸಾಧ್ಯವಾಗುತ್ತ
ದೆಯೇ ಎನ್ನತಕ್ಕ ಈ ನಾನಾ ಅಂಶಗಳನ್ನೂ ನಾವೀಗ
ಪರ್ಯಾಲೋಚನೆ ಮಾಡಬೇಕಾಗಿದೆ. ಈ ನಾನಾ ಅಭಿ
ಪ್ರಾಯಗಳ ಬಗ್ಗೆ ಈ ಫಜ್ಲಾಲಿ ಸಮಿತಿಯವರು ಒಂದು
ವರದಿಯನ್ನು ತಯಾರಿಸಿರುವಂತೆ ಈ ಹಿಂದೆ ನಮ್ಮ
ಮೈಸೂರು ಸರ್ಕಾರದವರು ನೇಮಿಸಿದಂಥ ಆ
ಶೇಷಾದ್ರಿ ಸಮಿತಿಯವರೂ ಸಹ ಈ ಪ್ರದೇಶಗಳ ಬಗ್ಗೆ
ಅಂಕಿಅಂಶಗಳನ್ನು ಶೇಖರಣೆ ಮಾಡಿ ಒಂದು
ವರದಿಯನ್ನೊಪ್ಪಿಸಿದ್ದಾರೆ. ಆ ಸಮಿತಿಯವರು
ಅವರ ವರದಿಯಲ್ಲಿ ಈ ಮೈಸೂರನ್ನು ಹೀಗೇ
ಪ್ರತ್ಯೇಕವಾಗಿಟ್ಟುಕೊಂಡು ಇದರ ಆಡಳಿತವನ್ನು
ಮುಂದುವರಿಸುವುದು ಒಳ್ಳೆಯದೆಂಬುದಾಗಿ ತಿಳಿಸಿ
ದ್ದಾರೆ. ಈ ದಿವಸ ನಮ್ಮ ಹಣಕಾಸಿನ ಸಚಿ
ವರೂ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.
ಅವರು ತಮ್ಮ ಭಾಷಣದಲ್ಲಿ "ಈ ದಿವಸ ನಾವೇನೋ
ನಮ್ಮ ಹಣ-ಕಾಸಿನ ವಿಚಾರದಲ್ಲಿ ಸ್ವಪರಿಪೂರ್ಣತೆ
ಯನ್ನು ಗಳಿಸಿಕೊಂಡಿದ್ದೇವೆ ಎಂದು ನಮ್ಮಷ್ಟಕ್ಕೆ
ನಾವು ಹೇಳಿಕೊಳ್ಳಬಹುದು, ಅಷ್ಟೇ ಶಿವಾಯ ಇದ
ರಲ್ಲಿ ಅಂಥ ತಿರುಳೇನೂ ಇಲ್ಲ, ಕೇಂದ್ರದವರು ಪ್ರತಿ
ಯೊಂದಕ್ಕೂ ನಮಗೆ ಸಹಾಯ ನೀಡಬೇಕು—ನಾವು
ಅದನ್ನು ತೆಗೆದುಕೊಳ್ಳಬೇಕು ; ಅಂಥ ಪರಿಸ್ಥಿತಿಯಲ್ಲಿ
ನಾವು ಇರುತ್ತೇವೆ" ಎಂದು ಹೇಳಿದ್ದಾರೆ. ಆದರೆ
ಇವರು ಇಂಥ ಒಂದು ಅಭಿಪ್ರಾಯವನ್ನು ಈ ಹಿಂದೆ
ಯಾವಾಗಲಾದರೂ ಹೊರಗೆಡವಿದ್ದರೇ ಎನ್ನುವುದು
ನನಗಂತೂ ಗೊತ್ತಿಲ್ಲ. ಈಗ ನಮ್ಮ ಹಣಕಾಸಿನ
ಪರಿಸ್ಥಿತಿ ಅಷ್ಟು ಚೆನ್ನಾಗಿಲ್ಲವೆಂದು ವಾದವಿದೆ.
ಇದರಲ್ಲೂ ಕೂಡ ಹೆಚ್ಚಿಗೆ ಕೇಂದ್ರವನ್ನು ಅವಲಂಬಿಸಿ
ಕೊಂಡಿರುವುದು ಬಹಳ ತಪ್ಪು. ನಮಗೆ ಹೆಚ್ಚು ಸೌಲಭ್ಯ
ಗಳು ಬೇಕು ಎಂದು ಹೇಳಿ ಗ್ರ್ಯಾಂಟನ್ನಾಗಲಿ ಸಾಲ
ವನ್ನಾಗಲಿ ಕೇಳುವ ಪ್ರಮೇಯವಿದ್ದರೂ ಕೂಡ,
ನಮ್ಮ ಸರ್ಕಾರ ವ್ಯವಹಾರ ನಡೆಸಬೇಕಾದರೆ ವರ್ಷಂ
ಪ್ರತಿ ಆದಾಯ ವೆಚ್ಚವನ್ನು ಸರಿದೂಗಿಸಿದ ಪಕ್ಷದಲ್ಲಿ
ಈಗ ಏನು ನಾವು ಒಂದು ಆಡಳಿತವನ್ನು ನಡೆಸಿ
ಕೊಂಡು ಬರುತ್ತಿದ್ದೇವೊ ಆ ರೀತಿ ಮುಂದುವರೆಸಿ
ಕೊಂಡು ಹೋಗಬಹುದು. ಫಸಲಾಲಿ ಸಮಿತಿಯವರು
ಒಂದೂವರೆಯಿಂದ ಎರಡು ಕೋಟಿ ರೂಪಾಯಿಗಳವ
ರೆಗೆ ಖೋತಾ ಆಗುತ್ತದೆ ಎಂದು ಹೇಳಿದ್ದಾರೆ.
ನಾನು ಮೇಲೆ ಹೇಳಿದ ಒಂದು ದೃಷ್ಟಿಯಿಂದ
ಮೈಸೂರು ಈ ದಿವಸ ಇರತಕ್ಕ ಆಡಳಿತವನ್ನು ನಿರ್ವ
ಹಣೆ ಮಾಡಿದ ಪಕ್ಷದಲ್ಲಿ ನಮಗಿರುವ ಹಣಕಾಸಿನ
ಸೌಲಭ್ಯದಿಂದ ಸರ್ವತೋಮುಖವಾಗಿ ಆಯವ್ಯಯ
ವನ್ನು ಸರಿದೂಗಿಸಿಕೊಂಡು ಬರುವುದಕ್ಕೆ ಸಾಧ್ಯವಿದೆ
ಮತ್ತು ನಮ್ಮ ಹಣಕಾಸಿನ ಪರಿಸ್ಥಿತಿಯಲ್ಲಿ ಏರುಪೇರು
ಆಗದೆ ಜನರಲ್ಲಿ ನಂಬಿಕೆ ಉಂಟುಮಾಡಿಕೊಂಡು ಬರು
ವುದಕ್ಕೆ ಸಾಧ್ಯವಾಗುತ್ತದೆ ಎಂದು ನನ್ನ ಅಭಿಪ್ರಾಯ.
ಶೇಷಾದ್ರಿ ಸಮಿತಿಯ ವರದಿ ಪ್ರಕಾರ ಬೆಂಗಳೂರಿನಲ್ಲಿ
ರಾಜಧಾನಿ ಇದ್ದರೆ 600—700 ಮೈಲಿಗಳ ದೂರ
ವಿರುವ ಜನರ ಆಗುಹೋಗುಗಳನ್ನು ನೋಡಿಕೊಳ್ಳಲು,
ಅವರಿಗೆ ಇರಬಹುದಾದ ಕಷ್ಟ ಸುಖಗಳು ಏನೆಂಬು
ದನ್ನು ತಿಳಿದುಕೊಳ್ಳಲು ಆಡಳಿತವರ್ಗದವರಿಗೆ ಕಷ್ಟ
ವಾಗುತ್ತದೆ. ಒಂದು ರಾಜ್ಯದಲ್ಲಿ ಸರ್ಕಾರ ನಡೆಸ
ತಕ್ಕ ಆಡಳಿತವರ್ಗ ಜನಸಮುದಾಯದೊಡನೆ ನಿಕಟ
ಬಾಂಧವ್ಯ ಇಟ್ಟುಕೊಂಡು ಅವರ ಕಷ್ಟ ಸುಖಗಳ
ವಿಚಾರ ವಿನಿಮಯಮಾಡಿಕೊಳ್ಳದೇ ಇದ್ದ ಪಕ್ಷದಲ್ಲಿ,
ಸರ್ಕಾರದ ಆಡಳಿತ ನಡೆಸತಕ್ಕವರಿಗೆ ಒಂದು ಭಾಗದ
ಕುಂದುಕೊರತೆಗಳೇನೆಂಬುದನ್ನು ತಿಳಿದುಕೊಳ್ಳುವ
ಶಕ್ತಿ ಇಲ್ಲದೆ ಹೋದ ಪಕ್ಷದಲ್ಲಿ, ಆ ಆಡಳಿತ ಕುಸಿದು
ಬೀಳುವುದಕ್ಕೆ ಅವಕಾಶವಾಗುತ್ತದೆ. ಎರಡನೆದಾಗಿ
ಸ್ವಾತಂತ್ರ್ಯ ಪಡೆದ ಮೇಲೆ ಜನ ಮುಂದೆ ಬರಬೇಕು,
ಸ್ವಾವಲಂಬಿಗಳಾಗಬೇಕು, ಜನ ಆದಷ್ಟು ಮಟ್ಟಿಗೆ
ತನ್ನ ವರಮಾನವನ್ನು ಹೆಚ್ಚಿಸಿಕೊಳ್ಳಬೇಕು ಎನ್ನುವ
ದೃಷ್ಟಿಯಿಂದ ಕೇಂದ್ರ ಸರ್ಕಾರ ಮತ್ತು ಪ್ರಾಂತಗಳ
ಸರ್ಕಾರದವರು ವಿಧವಿಧವಾಗಿ ಯೋಜನೆಗಳನ್ನು
ಜನತೆಯ ಮುಂದೆ ಇಡುತ್ತಿದ್ದಾರೆ. ಇಲ್ಲಿ ಜನರ
ಸಹಕಾರವಿಲ್ಲದೆ ಹೋದ ಪಕ್ಷದಲ್ಲಿ ಆ ಯೋಜನೆ
ಗಳನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯ
ವಾಗುವುದಿಲ್ಲ. ಈ ಒಂದು ದೃಷ್ಟಿಯಿಂದಲೂ ಕೂಡ
ವಿಶಾಲ ಕರ್ಣಾಟಕ ಪ್ರಾಂತ ಮಾಡಬೇಕು ಎಂದು
ಏನು ಸಮಿತಿಯವರು ಸೂಚಿಸಿದ್ದಾರೋ ಅದು ಸಾಧು
ವಲ್ಲ. ಮೈಸೂರು ಪ್ರಾಂತ ಈಗ ಇರುವ ಹಾಗೆ ಇರ
ಬೇಕು ಎಂಬುದು ನನ್ನ ಮನವಿ. ಒಕ್ಕೂಟದಿಂದ
ಆರ್ಥಿಕ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು
ಯೋಚನೆಮಾಡೋಣ. ಇನ್ನು ಜನತೆಯ ಆಶೆ
ಆಕಾಂಕ್ಷೆಗಳು ಬಹುಮಟ್ಟಿಗೆ ಹೆಚ್ಚುತ್ತಿವೆ. ಸೌಲಭ್ಯ
ಗಳನ್ನು ಹೆಚ್ಚಿಸಬೇಕೆಂದು ಜನಗಳು ಕೇಳಿಕೊಳ್ಳುತ್ತಿ
ದ್ದಾರೆ. ಅವರ ಆಶಾಕಾಂಕ್ಷೆಗಳನ್ನು ಈಡೇರಿಸುವು
ದಕ್ಕೂ, ಮತ್ತು ಸೌಲಭ್ಯಗಳನ್ನು ಒದಗಿಸುವುದಕ್ಕೂ
ಸರ್ಕಾರ ಈ ದಿವಸ ಸಾಕಷ್ಟುಮಟ್ಟಿಗೆ ಧನ ಸಹಾಯ
ವನ್ನು ಕೊಡಲು ಅಶಕ್ತವಾಗಿದೆ ಎಂದು ನಾನು ಭಾವಿ
ಸುತ್ತೇನೆ. ಆದ್ದರಿಂದ ಇನ್ನು ಹೆಚ್ಚಿನ ಪ್ರಗತಿಯನ್ನು
ಗಳಿಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ.
ಆಗ ಸಮಾಜವಾದ ದೇಶದಲ್ಲಿ ಹರಡುವುದಕ್ಕೆ ಅವಕಾಶ
ಕೊಟ್ಟಂತಾಗುತ್ತದೆ ಎಂದು ನನಗನಿಸುತ್ತದೆ. ಈ
ಎಲ್ಲಾ ದೃಷ್ಟಿಯಿಂದಲೂ ಮೈಸೂರು ಮೈಸೂರಾ
ಗಿಯೇ ಉಳಿದುಕೊಂಡು ಬಂದ ಪಕ್ಷದಲ್ಲಿ ಜನತೆಗೆ ಬಹು
ಮಟ್ಟಿಗೆ ಕ್ಷೇಮ ಆಗುತ್ತದೆ ಎಂದು ಹೇಳುತ್ತೇನೆ.

*ಶ್ರೀ ಬಿ. ರಾಚಯ್ಯ (ಯಳಂದೂರು—ಅನುಸೂಚಿತ
ಜಾತಿಗಳು).—ಸ್ವಾಮಿ, ಈ ರಾಜ್ಯಗಳ ಪುನರ್ವಿಂಗಡ
ಣೆಯ ವರದಿಯ ಮೇಲೆ ಚರ್ಚೆಯಾಗುತ್ತಾ ಇರುವು
ದನ್ನು ನಾನು ಬಹಳ ಸಂತೋಷದಿಂದ ಕೇಳಿದೆ. ಇದ
ರಲ್ಲಿ ಒಂದೇ ಕರ್ಣಾಟಕ ಆಗಬೇಕೇ ಅಥವಾ ಎರಡು
ಕರ್ಣಾಟಕ ಆಗುವುದರಿಂದ ನಮಗೆ ಹೆಚ್ಚಿನ ಅನು
ಕೂಲವಾಗುತ್ತದೆಯೇ ಎನ್ನುವ ಒಂದು ಧಾಟಿಯಲ್ಲಿ
ಭಾಷಣಗಳಾಗುತ್ತಿವೆ. ಹೀಗೆ ಭಾಷಣಗಳು ಆಗು
ವಾಗ ಒಂದು ಕರ್ಣಾಟಕವಾಗಬೇಕು ಎಂದು ಹೇಳ
ತಕ್ಕವರು ಕೂಡ ಯಾವ ವಿಧವಾದ ಒಂದು ಸ್ವಾರ್ಥ
ವನ್ನಾಗಲಿ ಎರಡು ಕರ್ಣಾಟಕವಾಗಬೇಕು ಎನ್ನುವ
ಭಾಷಣಕಾರರಲ್ಲಿ ಯಾವ ವಿಧವಾದ ಅಪಾರ್ಥವನ್ನಾ
ಗಲಿ ನಾನು ಕಾಣಲಿಲ್ಲ. ಇದಕ್ಕೆ ಕಾರಣವಿಷ್ಟೇ.
ರಾಜ್ಯಗಳನ್ನು ಪುನರ್ವಿಂಗಡಣೆ ಮಾಡುವಾಗ ಇದು
ಸಾಮಾನ್ಯವಾಗಿ 10 ವರ್ಷಕ್ಕೆ 20 ವರ್ಷಕ್ಕೊಂದು
ಸಾರಿ ಬರುವುದಿಲ್ಲ, 100—200 ವರ್ಷಗಳಿಗೊಮ್ಮೆ
ಇಂತಹ ಸಂದರ್ಭಗಳು ಬರುತ್ತವೆ ಎಂದು ಈ ನಿರ್ಣಯ

(ಶ್ರೀ ಬಿ. ರಾಚಯ್ಯ.)

ವನ್ನು ಮಂಡಿಸುವಾಗ ಹೇಳಿದರು. ಇಡೀ ಇಂಡಿಯಾ ದೇಶದ ಒಂದು ನಕ್ಷೆಯನ್ನು ಬದಲಾಯಿಸುವಾಗ ನಮ್ಮ sentiments ಏನಿವೆಯೋ ಅವನ್ನು ಬದಿಗೊತ್ತಿ ಇಡೀ ರಾಷ್ಟ್ರದ ಹಿತದೃಷ್ಟಿಯಿಂದ ಈಗ ಈ ವರದಿಯಲ್ಲಿ ನಿರೂಪಿಸಿರತಕ್ಕ ಪ್ರಾಂತಗಳು, ಪ್ರಾಂತಗಳ ಅಭಿವೃದ್ಧಿ ಮತ್ತು ಇಂಡಿಯಾ ದೇಶದ ಒಂದು ಭದ್ರತೆಗೆ ಧಕ್ಕೆ ಬಾರದ ರೀತಿಯಲ್ಲಿ ಇದನ್ನು ನೋಡಬೇಕಾಗಿದೆ ಎಂದು ಹೇಳಿದರು. ಎರಡು ಕರ್ಣಾಟಕ ಬೇಕು. ಆಡಳಿತ ದೃಷ್ಟಿಯಿಂದ ಅದು ಬಹಳ ಅನುಕೂಲವಾಗಿದೆ ಮತ್ತು ಹಣಕಾಸಿನ ಪರಿಸ್ಥಿತಿಯಲ್ಲೂ ಕೂಡ ಅನುಕೂಲವಾಗಿದೆ. ಮುಂದೆ ಬರತಕ್ಕ ಕರ್ಣಾಟಕದಲ್ಲಿ ಹಣಕಾಸಿಗೆ ಕಷ್ಟವಾಗುತ್ತದೆ, ಆಡಳಿತ ಸಲುವಾಗಿ, ಬಹಳವಾಗಿ ಅಷ್ಟರಮಟ್ಟಿಗೆ ನಡೆಯುವುದಿಲ್ಲ ಎಂದು ಅವರು ಮುಂದೆ ಬರತಕ್ಕ ಕರ್ಣಾಟಕದಲ್ಲಿ ಆಗಬಹುದಾದ ಒಂದು ಮುನ್ ಸೂಚನೆಯನ್ನು ಕೊಟ್ಟಿರುವುದು ನಿಜವಾಗಿಯೂ ದೇಶಭಕ್ತಿಯನ್ನು ತೋರಿಸುತ್ತದೆ ಎಂದು ತಿಳಿದುಕೊಂಡಿದ್ದೇನೆ. ಏತಕ್ಕೆಂದರೆ ಮುಂದೆ ಕರ್ಣಾಟಕವಾಗಬೇಕು. ಆಗಿಯೇ ಆಗುತ್ತದೆ ಎಂಬುದು ಗೊತ್ತಿದೆ. ಈ ವಿಷಯದಲ್ಲಿ ಕಾಂಗ್ರೆಸ್ ಹೈಕಮ್ಯಾಂಡ್ whip ಕೂಡ ಕೊಟ್ಟಿರುವುದರಿಂದ ಮುಂದೆ ಯಾವ ರೀತಿಯಲ್ಲಿ ಆಗಬಹುದೋ ಅದು ಆಗಿಯೇ ಆಗುತ್ತದೆ. ಕೇಂದ್ರ ಸರ್ಕಾರದ ನೆರವು ಇಲ್ಲದೆ ಯಾವ ಪ್ರಾಂತಗಳೂ ಇರುವುದಕ್ಕೆ ಸಾಧ್ಯವಿಲ್ಲ. ಪ್ರಾಂತಗಳ ಪುನರ್ವಿಂಗಡಣೆ ಆದ ಮೇಲೆ ಆಯಾ ಪ್ರಾಂತಗಳ ನೆರವಿಗೆ ಕೇಂದ್ರ ಸರ್ಕಾರ ಇದ್ದೇ ಇದೆ. ಈಗಲೇ ನಾವು ಅವರಿಗೆ ಎಚ್ಚರಿಕೆ ಕೊಟ್ಟರೆ, ಮುಂದೆ ಆಗತಕ್ಕ ಕರ್ಣಾಟಕಕ್ಕೆ ಸಾಧ್ಯವಾದಷ್ಟು ಕೇಂದ್ರ ಸರ್ಕಾರದವರು ನೆರವಾಗುವುದಕ್ಕೆ ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಅವರು ಹೇಳಿದ್ದಾರೆ ಮತ್ತು ಅವರೂ ಕೂಡ ಕರ್ಣಾಟಕವಾಗುವುದಕ್ಕೆ ಬೆಂಬಲ ಕೊಡುತ್ತಿದ್ದಾರೆಂದು ಭಾವಿಸುತ್ತೇನೆ. ಕರ್ಣಾಟಕ ಪ್ರಾಂತ ಇಷ್ಟು ಬೇಗನೆ ಏತಕ್ಕೆ ಆಗಬೇಕಾಗಿದೆ? ಕೆಲವಾರು ವರ್ಷಗಳು ಕಾಯುವುದಕ್ಕೆ ಸಾಧ್ಯವಿಲ್ಲವೇ? ಹೀಗೆ 1913ನೇ ಇಸವಿಯಿಂದಲೂ ಕೂಡ ಎಷ್ಟೋ ಕಮಿಟಿಗಳು ಆಗುತ್ತಾ ಬಂದಿವೆ. ಮಾಂಟೆಗೂ ಚೆಲ್ಮ್ಸ್‌ಫರ್ಡ್, ದಾರ್ ಕಮಿಷನ್, Statutory Commission, J.V.P. ಕಮಿಟಿ ಮುಂತಾದುವು ಈ ವಿಷಯದಲ್ಲಿ ವರದಿಮಾಡಿವೆ. ಆ ವರದಿಯ ಶಿಫಾರಸುಗಳನ್ನು ಕಾರ್ಯಗತ ಮಾಡದೆ ಸ್ವಲ್ಪ ಕಾಲ ದೂಡಿದರು. ಉತ್ತರ ಇಂಡಿಯಾವನ್ನು ನೋಡಿದ್ದೇ ಆದರೆ ಪ್ರತಿಯೊಂದು ಪ್ರಾಂತವನ್ನೂ ಕೂಡ ಹೆಚ್ಚು ಕಡಿಮೆ ಭಾಷಾವಾರು ಆಧಾರದ ಮೇಲೆ ರಚಿಸಿಕೊಂಡು ಬಂದಿದ್ದಾರೆ. ಅಂದ ಮಾತ್ರಕ್ಕೆ ಏಕ ಭಾಷೆ (Unilingual State) ಎಂದು ತಿಳಿದುಕೊಂಡು ಹೇಳುತ್ತಿಲ್ಲ. ಹೆಚ್ಚು ಕಡಿಮೆ ಒಂದು ಪ್ರಾಂತ್ಯದಲ್ಲಿರತಕ್ಕ ಜನರು ಹೆಚ್ಚಾಗಿ ಯಾವ ಭಾಷೆಯನ್ನು ಮಾತನಾಡುತ್ತಾರೋ ಅದರಲ್ಲಿ ಆಡಳಿತ ನಡೆಯಬೇಕು ಎನ್ನುವ ದೃಷ್ಟಿಯಿಂದ ಉತ್ತರ ಇಂಡಿಯಾದಲ್ಲಿರುವ ಪ್ರಾಂತಗಳೂ ಕೂಡ ಸ್ವಲ್ಪ ಹೆಚ್ಚು ಕಡಿಮೆ ಭಾಷೆಯ ಆಧಾರದ ಮೇಲೆ ನಡೆದುಕೊಂಡು ಬಂದಿವೆ. ದಕ್ಷಿಣ ಇಂಡಿಯಾದಲ್ಲಿ 1953ನೇ ಇಸವಿ ಅಕ್ಟೋಬರ್ ಒಂದರವರೆಗೂ ನಾವು ಭಾಷಾವಾರು ಪ್ರಾಂತಗಳಿಗೆ ಬೆಂಬಲ ಕೊಡುವುದನ್ನು ಮುಂದಕ್ಕೆ ಹಾಕಿದ್ದೆವು. ಯಾವಾಗ ಆಂಧ್ರ ಪ್ರಾಂತವನ್ನು ನೀವು ಒಪ್ಪಿ ಆಂಧ್ರಪ್ರಾಂತ ಮಾಡಿ, ತೆಲುಗು ಮಾತನಾಡುವವರಿಗೆ ಒಂದು ಪ್ರಾಂತ, ತಮಿಳು ಮಾತನಾಡುವವರಿಗೆ ಉಳಿದಿರತಕ್ಕ ಮದ್ರಾಸ್ ಪ್ರಾಂತ ಎಂದು ಮಾಡಿದಿರೋ, ಇನ್ನುಳಿದಿರತಕ್ಕದ್ದು ಮಲೆಯಾಳೀ ಭಾಷೆ ಮಾತನಾಡತಕ್ಕ ಕೇರಳ ಪ್ರಾಂತ, ಅಥವಾ ಮಹಾರಾಷ್ಟ್ರ ಅಥವಾ ಕರ್ಣಾಟಕ. ಹೀಗೆ ಕನ್ನಡ ಮಾತನಾಡತಕ್ಕ ಪ್ರದೇಶಗಳನ್ನು ಒಟ್ಟುಗೂಡಿಸಿ ಕನ್ನಡ ಪ್ರಾಂತವನ್ನಾಗಿ ಮಾಡಬೇಕೆಂದು ಈ ವರದಿಯಲ್ಲಿಲ್ಲದಿದ್ದರೆ ಇವತ್ತು ಎಷ್ಟೋ ಆಂದೋಳನವಾಗುತ್ತಿತ್ತು, ದೇಶದಲ್ಲಿ ಎಷ್ಟೋ ಚಳವಳಿ ಆಗುತ್ತಿತ್ತು ಎನ್ನುವುದನ್ನೂ ಕೂಡ ಅವರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಇದನ್ನು ಈಗ ಮಾಡುವುದು ಬೇಡ. ಹತ್ತು ವರ್ಷಕ್ಕಾಗಲಿ, ಐದು ವರ್ಷಕ್ಕಾಗಲಿ ಎರಡು ಕರ್ಣಾಟಕ ಮಾಡೋಣ ಎಂದು ಹೇಳಿ ಇಂಡಿಯಾ ದೇಶದ ಭೂಪಟವನ್ನು ಪದೇ ಪದೇ ಬರೆಯುತ್ತಾ ಹೋದರೆ ಅದಕ್ಕೆ ಬೆಲೆಯಿಲ್ಲದಂತಾಗುತ್ತದೆ. ಈಗ ಇಡೀ ಇಂಡಿಯಾ ದೇಶದ ನಕ್ಷೆಯನ್ನು ಬದಲಾವಣೆ ಮಾಡಬೇಕಾದ ಸಂದರ್ಭ ಬಂದಿರುವುದರಿಂದ ಇಡೀ ಇಂಡಿಯಾದೇಶದಲ್ಲಿರುವ A, B, C ಸ್ಟೇಟುಗಳು ಎನ್ನುವ federal section ಏನು ಇದೆ ಅದನ್ನು ಈ ದಿನ ಬದಲಾವಣೆ ಮಾಡಿ ಒಂದೇ ವಿಧವಾದಂಥ ಸ್ಥಾನಮಾನಗಳನ್ನು federal sectionನಲ್ಲಿ ಕೊಟ್ಟಿರತಕ್ಕದ್ದು ನಿಜವಾಗಿಯೂ ಸ್ವಾಗತಾರ್ಹವಾಗಿದೆ. ಅದರಲ್ಲೂ ಕೂಡ ಆವಡಿ ಕಾಂಗ್ರೆಸ್ ಅಧಿವೇಶನದಲ್ಲಿ ಒಂದು ನಿರ್ಣಯವನ್ನು ಪಾಸ್ ಮಾಡಿ Socialistic Pattern of Societyಗೆ ಅನುಗುಣವಾಗಿ ರಾಜಪ್ರಮುಖರ ಸ್ಥಾನವನ್ನು ರದ್ದು ಮಾಡಬೇಕೆಂದು ಹೇಳಿರುವುದು Socialistic Principle ಮೇಲೆ ಹೆಚ್ಚಿಗೆ ಅಭಿಮಾನವಿರುವ ನನಗೆ ಬಹಳ ಸಂತೋಷವಾಗಿದೆ. ಆಡಳಿತ ಬಿಗಿ ತಪ್ಪಿಹೋಗುತ್ತದೆ ಎಂದು ನನ್ನ ಮಾನ್ಯ ಗೆಳೆಯರು ಹೇಳುತ್ತಿದ್ದಾರೆ. ಉತ್ತರ ಪ್ರದೇಶ ಮತ್ತು ಮಧ್ಯ ಪ್ರದೇಶ ವಿಸ್ತಾರವಾಗಿದ್ದರೂ ಅವು ಎಷ್ಟರಮಟ್ಟಿಗೆ ನಡೆಯುತ್ತಾ ಬಂದಿವೆ. ಆಡಳಿತ ಬಿಗಿಯಿಂದ ಮುಂದುವರಿದಿಲ್ಲವೇ, ಎಂದು ಕೇಳುತ್ತೇನೆ. ಹೆಚ್ಚು ಪ್ರಾತಿನಿಧ್ಯವನ್ನು ಕೇಂದ್ರದಲ್ಲಿ ಪಡೆದು ಇಂಡಿಯಾ ದೇಶವನ್ನೇ ಅಲ್ಲಾಡಿಸುತ್ತಾ ಕುಳಿತಿದ್ದಾರೆ. ನಮ್ಮ ಪಾರ್ಲಿಮೆಂಟ್‌ನಲ್ಲಿ ಉತ್ತರ ಪ್ರದೇಶದ ಪ್ರತಿನಿಧಿಗಳ ಸಂಖ್ಯೆ ಜಾಸ್ತಿ ಇದೆ. ಮೈಸೂರಿನಿಂದ ಹೋಗಿರುವವರ ಮಾತು ಅಲ್ಲಿ ಏನು ನಡೆಯುತ್ತದೆ? ಮೈಸೂರು ಲೆಜಿಸ್ಲೇಟಿವ್ ಅಸೆಂಬ್ಲಿಯಾಗಲಿ, ಕೌನ್ಸಿಲ್ ಆಗಲಿ, ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಆಗಲಿ ನಮ್ಮದೇ ಆದ ಒಂದು ಅಂತ್ಯ ತೀರ್ಮಾನವನ್ನು ತೆಗೆದುಕೊಳ್ಳುವ ಹಾಗಿದ್ದರೆ ಆಗ ನಾವು ಕಂಠಶೋಷಣೆ ಮಾಡುತ್ತಿದ್ದೇವೆ ಎಂದ ಹೇಳಬಹುದು. ನಾವು consultative body ಆಗಿರುವುದರಿಂದ ನಾವು ಎಷ್ಟು ನಮ್ಮ ಅಭಿಪ್ರಾಯವನ್ನು ಅವರ ಮುಂದೆ ಇಡಬೇಕೊ ಅದನ್ನು ಇಡುತ್ತಾ ಇಲ್ಲ. ಈ ಅಭಿಪ್ರಾಯವನ್ನು ಒಂದಲ್ಲ ಒಂದು ರೀತಿಯಲ್ಲಿ ನಾವು ಆಗಾಗ ಶಾಸನ ಸಭೆಗಳಲ್ಲಾಗಲಿ ಬೇರೆ conferenceನಲ್ಲಾಗಲಿ ಇಡುತ್ತಾ ಬಂದಿದ್ದೇವೆ. ಮೈಸೂರು ಮೈಸೂರಾಗಿ ಉಳಿಯ ಬೇಕೆ ಅಥವಾ ಕರ್ಣಾಟಕ ಆಗಬೇಕೆ ಎಂಬ ವಿಚಾರದಲ್ಲಿ ಪ್ರಾಂತಗಳ ಪುನರ್ವಿಂಗಡಣಾ ಸಮಿತಿಯವರು ಮೈಸೂರಿನಲ್ಲಿ ಕರ್ಣಾಟಕದ ಪರವಾಗಿ ಮೆಜಾರಿಟಿ ಅಭಿಪ್ರಾಯ ಎಷ್ಟಿದೆ ಎಂಬುದನ್ನು ತಿಳಿದುಕೊಂಡು ಅದನ್ನು ಅಡಕಮಾಡಿದ್ದಾರೆಯೇ ವಿನಾ ಅವರು ಆಗಲಾರದ ಹೊರೆಯನ್ನು ಯಾರ ಮೇಲೂ ಇಷ್ಟವಿಲ್ಲದೆ ಹೊರಿಸುತ್ತಿದ್ದಾರೆ ಎಂದು ನಾನು ಎಂದಿಗೂ ಭಾವಿಸಿಲ್ಲ. ಮೈಸೂರು ಸಂಸ್ಥಾನದಲ್ಲಿ ಆ ರೀತಿ ಎರಡು ಕರ್ಣಾಟಕವಾಗಬೇಕು ಎಂಬ ಅಭಿಪ್ರಾಯವಿದ್ದಪಕ್ಷ

ದಲ್ಲಿ ಯಾವ ಕೋಮಿಗೂ, ಯಾವ ಪಂಗಡಕ್ಕೂ ಸೇರದೆ ಇರುವಂತಹ ವ್ಯಕ್ತಿಗಳು ಆ ರೀತಿ ವರದಿಯನ್ನು ಕೊಡುತ್ತಿದ್ದರೆ? ಅವರು ಕರ್ನಾಟಕವಾಗಬೇಕೆಂದು ಸಲಹೆ ಮಾಡಿರುವುದರಿಂದ ಅದು ಪಕ್ಷಾತೀತವಾಗಿದೆ ಎಂದು ಭಾವಿಸುತ್ತೇನೆ. ಅವರು ಸಾಮಾನ್ಯ ವ್ಯಕ್ತಿಗಳು. ಎಲ್ಲರ ಮನಸ್ಸನ್ನೂ ತಿಳಿದುಕೊಂಡು ಸಂತೋಷ ಪಡಿಸುವುದು ಯಾರಿಗೂ ಸಾಧ್ಯವಾಗುವುದಿಲ್ಲ. ಕೆಲವರಿಗೆ ತೃಪ್ತಿಕರವಾಗಿಲ್ಲದೆ ಇರಬಹುದು, ಇನ್ನು ಕೆಲವರಿಗೆ ಸಾಕಾದಷ್ಟು ಮಟ್ಟಿಗೆ ತೃಪ್ತಿಕರವಾಗಿಲ್ಲದೆ ಇದ್ದರೂ ಒಪ್ಪುವುದಕ್ಕೆ ಅರ್ಹವಾಗಿದೆ ಎಂದು ಹೇಳಬಹುದು. ಆದರೆ ಪ್ರಜಾಭಿಪ್ರಾಯವನ್ನು ಪಡೆಯದೆ ನಾಲ್ಕು ಮಂದಿ ಕಾಂಗ್ರೆಸ್ ಮುಖಂಡರುಗಳು ಈ ರೀತಿ ಮೈಸೂರು ಕಾಂಗ್ರೆಸ್ಸಿನ ಮೇಲೆ ಹೊರೆ ಹೊರಿಸಿಲ್ಲ. ಯಾವ ಕಡೆ ಹೆಚ್ಚಿಗೆ balance ಇದೆಯೋ ಆ ರೀತಿ ಆಗಬೇಕೆಂದು ನಿರ್ದೇಶ ಕಳುಹಿಸಿದ್ದಾರೆ ಎಂದು ಭಾವಿಸಿಕೊಂಡಿದ್ದೇನೆ. ಮೈನಾರಿಟಿ ಹಿತದೃಷ್ಟಿಯ ವಿಚಾರವನ್ನೂ ಕೂಡ ಈ ವರದಿಯಲ್ಲಿ ಹೇಳಿದ್ದಾರೆ. ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ಮಾತನಾಡುತ್ತಾ, ಕರ್ನಾಟಕವಾದರೆ ಎಲ್ಲಿ convert ಮಾಡುತ್ತಾರೆಯೋ, ಶಿವಶಿವ ಎಂದು ಹೇಳಿದರು. ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು ಅಯ್ಯಯ್ಯೋ ರಾಮರಾಮ ಎಂದು ಹೇಳಿದರು. ಬೆಂಕಿ ಇಲ್ಲದೆ ಹೊಗೆ ಆಡುವುದಿಲ್ಲ. ಕೋಮುಗಳಿಂದ ದೂರವಾಗಿದ್ದೇವೆ, ಕೋಮುವಾರು ಭಾವನೆಯಿಲ್ಲ ಎಂದು ಎಷ್ಟೋ ನಾವು ಹೇಳಿದರೂ ಕೂಡ ಭಾಷಣಗಳನ್ನು ಮಾಡತಕ್ಕ ರೀತಿ ನೀತಿಗಳನ್ನು ನೋಡಿದರೆ ಕೋಮುವಾರು ಭಾವನೆ ಎರಡು ಕಡೆಯೂ ಇದ್ದೇ ಇದೆ. ಅದು ಇಲ್ಲ ಎಂದರೆ ನಾನು ಆತ್ಮಸಾಕ್ಷಿಯಾಗಿ ಒಪ್ಪುವುದಿಲ್ಲ.

3-30 P.M.

ಇಲ್ಲದೇ ಇರುವುದನ್ನೆಲ್ಲಾ ಈ ವರದಿಯಲ್ಲಿ ತಂದು, ಲಿಂಗಾಯಿತರು, ಒಕ್ಕಲಿಗರು ಎಂದೇಕೆ ಇಲ್ಲಿ ಹೇಳಿದ್ದಾರೆಂದು ಕೆಲವರು ಕೇಳಿದರು. ಇದ್ದುದನ್ನು ಇದ್ದ ಹಾಗೆ ಅವರು ಬರೆದಿದ್ದಾರೆ. ಒಂದು ವೇಳೆ ಉತ್ತರ ಕರ್ನಾಟಕವನ್ನೇ ಬೇರೆ ಮಾಡಿಕೊಳ್ಳಿ ಎಂದರೆ, ಅಲ್ಲಿ ಪೂರ್ತಿ ಲಿಂಗಾಯಿತರೇ ಆಗುತ್ತಾರೆ. ಮಿಕ್ಕವರು ಬಹಳ ಕಡಮೆಯಿರುತ್ತಾರೆ. ಇಲ್ಲಿ ಮೈಸೂರಿಗೆ ಮಂಗಳೂರು, ಕೊಳ್ಳೇಗಾಲ, ಸತ್ಯಮಂಗಲದವರೆಗೆ ಇರುವ ಪ್ರದೇಶ ಇವನ್ನೆಲ್ಲಾ ಸೇರಿಸಿದರೆ, ಇವರು ಶೇಕಡ 40 ರಷ್ಟಾಗುತ್ತಾರೆ. ಇದನ್ನೆಲ್ಲಾ ನೋಡಿ ಅವರು ಕಜ್ಜಾಯದ ವಿಷಯದಲ್ಲಿ ಕೋತಿ ನ್ಯಾಯ ತೀರ್ಮಾನ ಮಾಡಿದ ಹಾಗೆ ಯಾರೂ ಹೆಚ್ಚಾಗಿಲ್ಲದೇಯಿರುವ ಹಾಗೆ ಎಲ್ಲವನ್ನೂ ಸೇರಿಸಿ ಒಂದೇ ಮಾಡಬೇಕೆಂದು ಸೂಚಿಸಿದ್ದಾರೆ. ಇನ್ನು ಬಳ್ಳಾರಿಯನ್ನು ಆಂಧ್ರಕ್ಕೆ ಕೊಡಿ, ಕೋಲಾರವನ್ನು ಇಲ್ಲಿ ಇಟ್ಟುಕೊಳ್ಳಿ ಎಂದು ಹೇಳಿದ್ದಾರೆ. ಈ ಸಲಹೆಯನ್ನು ಮೈಸೂರು ದೇಶದ ಜನರ ಅಭಿಪ್ರಾಯಕ್ಕನುಗುಣವಾಗಿ ಕೊಟ್ಟಿದ್ದಾರೆಯೋ ಹೊರಗಿನವರ ಅಭಿಪ್ರಾಯಕ್ಕನುಗುಣವಾಗಿ ಕೊಟ್ಟಿದ್ದಾರೆಯೋ ಗೊತ್ತಾಗುವುದಿಲ್ಲ. ಅಂತೂ ಒಟ್ಟಿನಲ್ಲಿ ಯಾವ ಕೋಮೂ ಪ್ರಾಧಾನ್ಯಕ್ಕೆ ಬರದೇಯಿರುವ ಹಾಗೆ ಮಾಡಿದ್ದಾರೆ. ಈ ವರದಿ ಅಂಗೀಕಾರಾರ್ಹವಾಗಿದೆ, ಇದನ್ನು ಎಲ್ಲರೂ ಒಪ್ಪಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

*ಶ್ರೀ ಇಜಾರಿ ಸಿರಸಪ್ಪ (ಹರಪನಹಳ್ಳಿ).—ಸ್ವಾಮಿ, ಈ ಮನೆಯಲ್ಲಿ ಪ್ರಾಂತ ಪುನರ್ವಿಂಗಡಣಾ ಸಮಿತಿಯ ವರದಿಯ ಬಗ್ಗೆ ಮಾತನಾಡುತ್ತಾ ಇದರ ಪರವಾಗಿಯೂ ವಿರೋಧವಾಗಿಯೂ ಅನೇಕ ಸದಸ್ಯರು ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದಾರೆಂಬುದು ಈಗಾಗಲೇ ಗೊತ್ತಾಗಿದೆ. ನಾನು ಅಂಕಿ ಸಂಖ್ಯೆಗಳ ಗೊಡವೆಗೆ ಹೋಗುವುದಿಲ್ಲ. ಅನೇಕರು ಹೇಳಿದ್ದಾಗಿದೆ. ಅನೇಕ ತಜ್ಞರೂ ಸಂಸ್ಥೆಗಳೂ ತಮ್ಮ ಅಭಿಪ್ರಾಯವನ್ನು ಈ ಕರ್ನಾಟಕ ಪ್ರಾಂತದ ಬಗ್ಗೆ ಈಗಾಗಲೇ ಕೊಟ್ಟಿದ್ದಾರೆ. ಬಹುಶಃ ಅನೇಕ ಸದಸ್ಯರಿಗೆ ಇವುಗಳು ಬೇಕಾಗಿಲ್ಲವೋ ಅಥವಾ ಅವುಗಳ ಕಡೆ ಅವರ ಗಮನ ಹೋಗಲಿಲ್ಲವೋ ಏನೋ, ಒಕ್ಕೂಟ ಕರ್ನಾಟಕ ಪ್ರಾಂತವಾಗುವುದರಿಂದ ಒಂದು ಡಿಫಿಸಿಟ್ ಪ್ರಾಂತವಾಗುತ್ತದೆ, ನಮ್ಮ ಉದ್ಧಾರಕ್ಕೆ, ಪ್ರಗತಿಗೆ, ಮೇಲ್ಮೆಗೆ ಹಾನಿಯಾಗುತ್ತದೆ ಎನ್ನುವ ವಾದವನ್ನು ಹೂಡಿದ್ದಾರೆ. ಶ್ರೀ ದೇವರಾಜ ಅರಸಿನವರು ಹೇಳುವಾಗ, 'ನನ್ನ ತಲೆ ಕೆಟ್ಟುಹೋಗಿದೆ, ನಾನು ಯಾವ ಕಡೆ ಮಾತನಾಡುವುದೋ ಗೊತ್ತಿಲ್ಲ' ಎಂದು ಹೇಳಿದರು. ನಾನು ಅವರ ತಲೆಯನ್ನು ಇನ್ನೂ ಹೆಚ್ಚು ಕೆಡಿಸುವುದಕ್ಕೆ ಹೋಗದೆ ಅಂಕಿಸಂಖ್ಯೆಗಳನ್ನು ಕಡಮೆ ಮಾಡಿ, ಈ ವಿಷಯದಲ್ಲಿ ಜನತೆಯ ಅಭಿಪ್ರಾಯ ಯಾವ ರೀತಿ ಮೂಡಿದೆ ಎನ್ನುವುದನ್ನು ಸಭೆಯ ಮುಂದೆ ಹೇಳತಕ್ಕವನಾಗಿದ್ದೇನೆ. ಈ ವರದಿಯನ್ನು ತಯಾರು ಮಾಡಿದ ಮೂರು ಜನ ಮುತ್ಸದ್ದಿಗಳು ಈ ಪ್ರಾಂತ ವಿಂಗಡಣೆ ಮಾಡುವ ಉದ್ದೇಶವೇನು, ಹಿಂದೆ ಹಿಂದೂಸ್ಥಾನ ಯಾವ ರೀತಿ ಇತ್ತು, ಬ್ರಿಟಿಷರು ವ್ಯಾಪಾರಕ್ಕಾಗಿ ಹಿಂದೂಸ್ಥಾನಕ್ಕೆ ಬಂದ ಮೇಲೆ ರಾಜ್ಯಗಳನ್ನು ಯಾವ ರೀತಿ ಪಡೆದರು, ಯಾವ ರೀತಿ ವಿಂಗಡಣೆ ಮಾಡಿದರು, ಇದರಲ್ಲಿ ಹಿನ್ನೆಲೆಯೇನಿತ್ತು ಎಂಬುದನ್ನೆಲ್ಲ ವಿವರವಾಗಿ ಅವರ ವರದಿಯಲ್ಲಿ ಬರೆದಿದ್ದಾರೆ. ಹಿಂದೂಸ್ಥಾನದಲ್ಲಿ ಒಗ್ಗಟ್ಟುಂಟಾಗಬಾರದು, ಇವರ ಒಗ್ಗಟ್ಟಿನ ಶಕ್ತಿಯನ್ನು ಬೆಳೆಸಿದರೆ ಬ್ರಿಟಿಷರನ್ನು ಇಲ್ಲಿಂದ ಹೊರದೂಡಲು ಅವರಿಗೆ ಶಕ್ತಿ ಬರುತ್ತದೆ ಎಂಬ ಭಾವನೆಯಿಂದ ಒಂದು ಜನಾಂಗದ ಒಂದು ಭಾಗವನ್ನು ಒಂದು ಪ್ರಾಂತ್ಯದಲ್ಲಿ ಇನ್ನೊಂದು ಭಾಗವನ್ನು ಇನ್ನೊಂದು ಕಡೆ ಹೀಗೆ ಸೇರಿಸಿ ಜನತೆ ಒಗ್ಗಟ್ಟನ್ನು ಸಾಧಿಸದಂತೆ ಮತ್ತು ಅವರ ಆಳ್ವಿಕೆ ಸುಗಮವಾಗಿ ನಡೆದುಕೊಂಡು ಹೋಗುವಂತೆ ಮಾಡಿ ಪ್ರಾಂತ ನಿರ್ಮಾಣ ಮಾಡಿದ್ದಾರೆಂದು ಈ ವರದಿಯಲ್ಲಿ ಸ್ಪಷ್ಟವಾಗಿ ಹೇಳಿ ನಮ್ಮ ಮುಂದಿಟ್ಟಿದ್ದಾರೆ. ಶ್ರೀ ರಾಮಚಂದ್ರರಾಯರು ಮಾತನಾಡುವಾಗ, 'ಬ್ರಿಟಿಷರ ಆಡಳಿತವನ್ನು ಕೊನೆಗಾಣಿಸಿ ಸ್ವಾತಂತ್ರ್ಯವನ್ನು ಪಡೆಯುವುದಕ್ಕಾಗಿ, ಮಹಾತ್ಮಾ ಗಾಂಧಿಯವರ ನಾಯಕತ್ವದಲ್ಲಿ ಹೋರಾಟ ನಡೆಸಿಕೊಂಡು ಹೋಗುವುದಕ್ಕಾಗಿ, ಕಾಂಗ್ರೆಸ್ ಸಮಿತಿಗಳನ್ನು ಭಾಷಾವಾರು ಆಧಾರದ ಮೇಲೆ ಮಾಡಿದರು; ಆಗ ನಮ್ಮ ಗುರಿಯನ್ನು ಸಾಧಿಸಬೇಕಾದರೆ ಹಾಗೆ ಮಾಡಬೇಕಾಯಿತು. ಅದನ್ನು ಸಾಧಿಸಿದ ಮೇಲೆ ಇನ್ನು ಅದರ ಅವಶ್ಯಕತೆ ಇಲ್ಲ'ವೆಂದು ಹೇಳಿದ್ದಾರೆ. ಸ್ವಲ್ಪ ಆಲೋಚನೆ ಮಾಡಿದರೆ, ಪ್ರಬಲವಾದ ಬ್ರಿಟಿಷ್ ಸರ್ಕಾರವನ್ನು ಹೊರದೂಡುವುದಕ್ಕೆ ಯಾವ ಒಂದು ಶಕ್ತಿಯನ್ನು ಉಂಟುಮಾಡಲು ಒಂದು ಮಾರ್ಗವನ್ನು ಇಟ್ಟುಕೊಂಡಿದ್ದೆವೋ, ನಮ್ಮ ದೇಶದಲ್ಲಿ ಒಗ್ಗಟ್ಟು ಉಂಟುಮಾಡಬೇಕೆಂಬ ಉದ್ದೇಶದಿಂದ ಮಹಾತ್ಮಾ ಗಾಂಧಿಯವರು ಯಾವ ರಚನೆಯನ್ನು ಮಾಡಿದರೋ ಅದೇ ರಚನೆಯಿಂದ ಒಂದು ದೇಶದ ಅಭ್ಯುದಯವನ್ನು ಸಾಧಿಸುವುದಕ್ಕೆ ಸಾಧ್ಯವಿಲ್ಲ, ಆ ಕೆಲಸ ಮುಗಿದು ಹೋಯಿತು ಎಂದು ಹೇಳಿದರೆ, ಬಹುಶಃ ಅದು ತಪ್ಪೆಂದು ನನ್ನ ಅಭಿಪ್ರಾಯ. ರಾಜ್ಯವನ್ನು ಪಡೆಯುವುದಕ್ಕೆ ಯಾವುದು ಸಹಾಯಕವಾಯಿತೋ ರಾಜ್ಯವನ್ನು ಉದ್ಧರಿಸುವುದಕ್ಕೂ ಮುಂದೆ ಕೊಂಡೊಯ್ಯುವು

(ಶ್ರೀ ಇಜಾರಿ ಸಿರಸಪ್ಪ.)

ದಕ್ಕೂ ಅದೇ ಆಚರಣೆ ಬಹುಶಃ ಬಹಳ ಸಹಾಯಕವಾಗಬಹುದೆಂದು ನನ್ನ ಅಭಿಪ್ರಾಯ. ಶ್ರೀ ವೀರಣ್ಣಗೌಡರು 'ಯಾವುದೋ ಕೆಲವು ಅಂಕಿಅಂಶಗಳ ಮೇಲೆ ಹಿಂದೆ ನಾನೊಂದು ನಿಲುವು ತೆಗೆದುಕೊಂಡಿದ್ದೆ, ಅದನ್ನು ಆಮೇಲೆ ಬದಲಾಯಿಸಿಕೊಳ್ಳಬೇಕಾಯಿತು ಅದಕ್ಕೆ ಕಾರಣಗಳಿವೆ' ಎಂದು ಸಭೆಯ ಮುಂದಿಟ್ಟಿದ್ದಾರೆ. ನಾಳೆ ಬೆಳಿಗ್ಗೆ ಆದ ಮೇಲೆ ಅವರು ಒಕ್ಕೂಟ ಕರ್ಣಾಟಕ ಆಗಬಹುದು ಎಂದು ಹೇಳಿದರೆ ಅದೇನೂ ಆಶ್ಚರ್ಯವಲ್ಲ, ತಪ್ಪಲ್ಲ. ನಾಳೆ ಅದಕ್ಕೆ ಸರಿಯಾದ ಕಾರಣ ಅವರಿಗೆ ದೊರಕಬಹುದು. ಬಹುಶಃ ಈಗ ವಿರೋಧಾಭಿಪ್ರಾಯ ವ್ಯಕ್ತಮಾಡಿದ ಎಲ್ಲ ಸದಸ್ಯರೂ ಯಾವುದೋ ಒಂದು ನಿಲುವಿಗೆ ಯಾವುದೋ ಅಂಕಿ ಅಂಶಗಳ ಆಧಾರದ ಮೇಲೆ ಬಂದಿದ್ದಾರೆ. ಮೈಸೂರು ಮೈಸೂರಾಗಿಯೇ ಉಳಿಯಬೇಕೆಂದು ಅವರು ಖಚಿತವಾಗಿ ಸಂಪೂರ್ಣ ಆಧಾರದ ಮೇಲೆ ವ್ಯಕ್ತಪಡಿಸಿದಂತೆ ನನಗೆ ಕಂಡುಬರುವುದಿಲ್ಲ. ಈ ವರದಿಯಲ್ಲಿ ಹೇಳಿರುವುದನ್ನೂ ಇಲ್ಲಿ ಮಾತನಾಡಿರುವ ಸದಸ್ಯರ ಅಭಿಪ್ರಾಯವನ್ನೂ ನೋಡಿದರೆ ಕರ್ಣಾಟಕ ಒಂದು ಕೊರತೆಯ ಪ್ರಾಂತವಾಗುತ್ತದೆಂಬ ಕಾರಣದಿಂದ ಇದನ್ನು ವಿರೋಧ ಮಾಡಿದಂತೆ ಕಾಣುತ್ತದೆ. ಮಾನ್ಯ ಸದಸ್ಯರಲ್ಲಿ ಒಂದು ಪ್ರಶ್ನೆ ಕೇಳುತ್ತೇನೆ ಭಾರತದಲ್ಲಿರುವ ಪ್ರಾಂತಗಳಲ್ಲಿ ಯಾವ ಪ್ರಾಂತ ಕೊರತೆಯಿಲ್ಲದೆ ತನ್ನ ಕಾಲ ಮೇಲೆ ತಾನು ನಿಲ್ಲುವಂತಿದೆ ಎಂಬುದನ್ನು ಅವರು ತೋರಿಸಲಿ. ಅಂಥ ಪ್ರಾಂತವಿದ್ದರೆ ಆಗ ಮೈಸೂರು ಮೈಸೂರಾಗಿಯೇ ಉಳಿಯುವುದಕ್ಕೆ ಒಪ್ಪಬಹುದು. ತಮಗೇ ಗೊತ್ತಿರುವಂತೆ, ಹಣಕಾಸಿನ ಮಂತ್ರಿಗಳು ಹೇಳಿದಂತೆ, ಈಗಾಗಲೇ ಮೈಸೂರು ಸಂಸ್ಥಾನ ಕೊರತೆಯ ಪ್ರಾಂತ. ಶೇಷಾದ್ರಿ ಸಮಿತಿ ವರದಿ, ಹಾಗೂ ಪ್ರಾಂತ ಪುನರ್ವಿಂಗಡಣಾ ಸಮಿತಿಯ ವರದಿಯ ಪ್ರಕಾರ ಕರ್ಣಾಟಕ ಪ್ರಾಂತ ಕೊರತೆ ಪ್ರಾಂತವಾಗಬಹುದು; ಒಂದು ಅಥವಾ ಒಂದುವರೆ ಕೋಟಿ ರೂಪಾಯಿಗಳಷ್ಟು ಕೊರತೆ ಆಗಬಹುದು ಎಂದು ಹೇಳಿದ್ದಾರೆ. ಇದಕ್ಕೆ ಈ ವರದಿಯಲ್ಲೇ ನಿವಾರಣೋಪಾಯವನ್ನೂ ಕೊಟ್ಟಿದ್ದಾರೆ. ಎರಡು ಪ್ರಾಂತ ಮಾಡಿ ಬೇರೆ ಬೇರೆ ಕಚೇರಿಗಳನ್ನೂ ಸಿಬ್ಬಂದಿ ವ್ಯವಸ್ಥೆಗಳನ್ನೂ ಮಾಡುವುದು ಬಿಟ್ಟು ಒಂದೇ ಮಾಡುವುದರಿಂದ ಖರ್ಚನ್ನು ಕಡಮೆ ಮಾಡಿ ಉಳಿತಾಯ ಮಾಡಿಕೊಳ್ಳಬಹುದೆಂದು ತೋರಿಸಿದ್ದಾರೆ. ಇದರ ಮೇಲೆ ಅನೇಕ ಲಾಭದಾಯಕವಾದ ಯೋಜನೆಗಳನ್ನು ನಾವು ಕೈಗೊಳ್ಳುತ್ತಿದ್ದೇವೆ. ಈ ಯೋಜನೆಗಳ ಮೂಲಕ ಒಟ್ಟಾಗಿ ಸೇರುವ ಪ್ರಾಂತಗಳು ಒಗ್ಗಟ್ಟಾಗಿ ಕೆಲಸಮಾಡಿದರೆ ಇದರಿಂದ ಕೊರತೆಯನ್ನು ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಬಹುದು. ಈ ವರದಿಯಲ್ಲಿ ಒಂದೇ ಕಾರಣ, ಎಂದರೆ ಭಾಷೆಯನ್ನೇ, ಪ್ರಾಮುಖ್ಯವಾಗಿಟ್ಟುಕೊಂಡಿಲ್ಲ. ಕೂಲಂಕಷವಾಗಿ ಆಲೋಚನೆ ಮಾಡಿ ಅನೇಕ ವಿಷಯಗಳನ್ನು ಪರಿಶೀಲಿಸಿ ಎಲ್ಲ ದೃಷ್ಟಿಯಿಂದಲೂ ಕನ್ನಡ ಭಾಗಗಳೆಲ್ಲವೂ ಸೇರಬೇಕೆಂದು ಸಲಹೆಮಾಡಿದ್ದಾರೆ. ಭಾಷೆಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟರೂ ಉಳಿದ ವಿಷಯಗಳನ್ನು ವಿಚಾರ ಮಾಡಿದ್ದಾರೆ. ಈಗ ಮದರಾಸು, ಬೊಂಬಾಯಿ, ಹೈದರಾಬಾದು, ಕೊಡಗು, ಈ ಪ್ರಾಂತಗಳಲ್ಲೆಲ್ಲಾ ಹರಿದು ಹಂಚಿ ಹೋಗಿರುವ ಕನ್ನಡನಾಡು ಏಕೆ ಹಿಂದೆ ಬಿದ್ದಿದೆ ಎಂದರೆ, ಆಯಾ ಪ್ರಾಂತದ ಶಾಸನ ಸಭೆಗಳಲ್ಲಿ ಅವರಿಗೆ ಹೆಚ್ಚಿನ ಪ್ರಾತಿನಿಧ್ಯವಿಲ್ಲ; ಅದರಿಂದ ಅವರು ಮುಂದುವರಿಯುವುದಕ್ಕೆ ಸಾಧ್ಯವಿಲ್ಲದೇ ಹೋಗಿರಬಹುದು.

ಇನ್ನೊಂದು ವಿಷಯ ಭಾಷೆ ನಮ್ಮನ್ನು ಹತ್ತಿರ ಸೆಳೆಯುವುದಕ್ಕೊಂದು ಸಾಧನ. ಹೊರ ಪ್ರಾಂತಗಳಲ್ಲಿರುವ ಕನ್ನಡ ಜನರಿಗೆ ಅನೇಕ ರೀತಿಯಲ್ಲಿ ಕಷ್ಟವಿದೆ. ಉದಾಹರಣೆಗೆ, ಮದರಾಸು ಅಸೆಂಬ್ಲಿಯನ್ನು ನಾವು ಈಗ ಬಿಟ್ಟು ಬಂದಮೇಲೆ ಈಗ ಅಲ್ಲಿಯ ಕಾರ್ಯಕಲಾಪಗಳು ಬರೀ ತಮಿಳಿನಲ್ಲಿ ನಡೆಯುತ್ತಿವೆ. ಇದರಿಂದ ಅಲ್ಲಿ ಯಾವ ವಿಷಯ ಚರ್ಚೆಯಾಗುತ್ತಿದೆ, ಜನತೆಗೆ ಹಿತವಾಗುವ ಮಸೂದೆಯನ್ನಿಟ್ಟಿದ್ದಾರೆಯೆ ಅಥವಾ ಅಹಿತವಾಗುವುದನ್ನಿಟ್ಟಿದ್ದಾರೆಯೆ ಎಂಬುದನ್ನು ಅಲ್ಲಿನ ಕನ್ನಡ ಸದಸ್ಯರು ತಿಳಿದುಕೊಳ್ಳಲು ಸಾಧ್ಯವಿಲ್ಲ. ಹೀಗೆಯೇ ಬೊಂಬಾಯಿ ಪ್ರಾಂತವನ್ನು ತೆಗೆದುಕೊಳ್ಳಿ, ಅಲ್ಲಿ ಮರಾಠಿ ಭಾಷೆಯಲ್ಲಿ ಮಾತನಾಡಲು ಷುರು ಮಾಡಿದರೆ ಏನು ಮಾಡುವುದು. ಮುಂಬಯಿ ಶಾಸನ ಸಭೆಯಲ್ಲಿ ಯಾವುದಾದರೊಂದು ಮಸೂದೆಯನ್ನು ಚರ್ಚೆಗೆ ತೆಗೆದುಕೊಂಡರೆ ಅದನ್ನು ಮಂಡಿಸುವಾಗ ಮಹಾರಾಷ್ಟ್ರದಲ್ಲಿ ಆಗಲಿ ಬೇರೆ ಭಾಷೆಯಲ್ಲಾಗಲೀ ಕಾರ್ಯಕಲಾಪಗಳನ್ನು ನಡೆಸಿದರೆ ಅಲ್ಲಿನ ಕನ್ನಡ ಸದಸ್ಯರ ಗತಿ ಏನಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಕನ್ನಡಿಗರೆಲ್ಲರೂ ಒಂದು ಕಡೆ ಸೇರುವುದರಿಂದ ಆರ್ಥಿಕ ಸುಧಾರಣೆ, ಸಾಮಾಜಿಕ ಸುಧಾರಣೆ ಮುಂತಾದ ಕಾರ್ಯಕಲಾಪಗಳನ್ನು ಯಾರಮೇಲ್ಮೆಗಾಗಿ ಶಾಸನ ಸಭೆಗಳ ಮೂಲಕ ಕೈಗೊಳ್ಳುತ್ತೇವೋ ಅದು ಸದಸ್ಯರೆಲ್ಲರಿಗೂ ಗೊತ್ತಾಗಿ ಯಾವುದು ಒಳ್ಳೆಯದು ಯಾವುದು ಕೆಟ್ಟದ್ದು, ಎಂಬುದನ್ನು ತಿಳಿದುಕೊಂಡು ಸಾಧಕ ಬಾಧಕಗಳನ್ನು ನೋಡುವುದಕ್ಕೆ ಅವಕಾಶವಾಗುತ್ತದೆ. ಯಾರೂ ತಮ್ಮ ಅಭಿಪ್ರಾಯವನ್ನು ಹೇಳುವುದಕ್ಕೆ ಸಂಕೋಚಪಡುವುದಿಲ್ಲ.

ಈ ವರದಿಯ ವಿಚಾರವಾಗಿ ಇನ್ನೂ ಅನೇಕ ವಿಷಯಗಳನ್ನು ಈಗಾಗಲೇ ಹೇಳಿದ್ದಾರೆ. ಅನೇಕ ಅಂಕಿ ಸಂಖ್ಯೆಗಳನ್ನು ಹೇಳಿದ್ದಾರೆ, ನಕಾಶಿಗಳನ್ನು ತೋರಿಸಿದ್ದಾರೆ. ಅದನ್ನೆಲ್ಲಾ ಈಗ ನಾನು ಮತ್ತೆ ಸಭೆಯ ಮುಂದಿಡುವುದಕ್ಕೆ ಸಾಧ್ಯವಿಲ್ಲ. ಈಗ ಕಾಲ ಸನ್ನಿಹಿತವಾಗಿದೆ, ಹಿಂದುಳಿಯುವುದಕ್ಕೆ ಸಾಧ್ಯವಿಲ್ಲ, ಒಕ್ಕೂಟ ಕರ್ಣಾಟಕವಾಗಬೇಕೆಂದು ನಾವು ಸೇರಿರುವ ಸಂಸ್ಥೆಯ ಹಿರಿಯರು ಸಂದೇಶವನ್ನು ಕಳುಹಿಸಿದ್ದಾರೆ. ನಾನು ಹೆಚ್ಚಾಗಿ ಹೇಳುವುದು ಬಳ್ಳಾರಿಯ ವಿಷಯ. ಈ ವರದಿಯಲ್ಲಿ ಬಳ್ಳಾರಿಯ ಬಗ್ಗೆ, ಈ ಜಿಲ್ಲೆಯ ಮೂರೂವರೆ ತಾಲ್ಲೂಕುಗಳನ್ನು ಆಂಧ್ರಕ್ಕೆ ಸೇರಿಸಬೇಕೆಂಬ ಶಿಫಾರಸನ್ನು ಮಾಡಿದ್ದಾರೆ. ಇದಕ್ಕೆ ಅವರು ಮೂರು ಕಾರಣಗಳನ್ನು ಕೊಟ್ಟಿದ್ದಾರೆ. ಒಂದನೆಯದು ತುಂಗಭದ್ರಾ ಯೋಜನೆ, ಎರಡನೆಯದು ಆಡಳಿತ ಸೌಕರ್ಯ, ಮೂರನೆಯದು ವ್ಯಾಪಾರೋದ್ಯಮದಲ್ಲಿ ಆಂಧ್ರಕ್ಕೂ ಬಳ್ಳಾರಿಗೂ ಇರುವ ಸಂಪರ್ಕ. ಇದಕ್ಕಿಂತ ಮುಂಚೆ ಬಳ್ಳಾರಿಯ ಚರಿತ್ರೆಯ ವಿಷಯವಾಗಿ ಎರಡು ಮಾತುಗಳನ್ನಾಡಬಯಸುತ್ತೇನೆ. ಬಳ್ಳಾರಿಯ ಮೂರೂವರೆ ತಾಲ್ಲೂಕುಗಳು ಆಂಧ್ರಕ್ಕೆ ಸೇರುವುದು ನ್ಯಾಯವೆಂದು ಶ್ರೀ ಮುಲ್ಕಾ ಗೋವಿಂದ ರೆಡ್ಡಿಯವರು ಹೇಳಿದರು. ಅಂಕಿ ಸಂಖ್ಯೆಯ ಗೋಜಿಗೆ ಹೋಗಿಲ್ಲ. ಆ ಪ್ರದೇಶದಲ್ಲಿ ಕನ್ನಡಿಗರ ಸಂಖ್ಯೆ ಎಷ್ಟಿದೆ, ಅವರ ಮನಸ್ಸು ಯಾವ ರೀತಿ ವರ್ತಿಸುತ್ತಿದೆ, ಅವರ ಇಚ್ಛೆ ಏನಿದೆ, ಯಾವ ಕಡೆ ಬರುವುದಕ್ಕೆ ಅವರು ಮನಸ್ಸು ಮಾಡಿದ್ದಾರೆಂಬುದನ್ನು ಅವರು ಹೇಳಿಲ್ಲ. ನಾಲ್ಕು ಲಕ್ಷ ಚಿಲ್ಲರೆ ಜನರಲ್ಲಿ 3 ಲಕ್ಷ 60 ಸಾವಿರ ಜನರು ಕನ್ನಡ ಮಾತನಾಡುವವರಿದ್ದಾರೆಂದು ವರದಿಯಲ್ಲೇ ಒಪ್ಪಿದ್ದಾರೆ. ಆದರೆ 70 ಸಾವಿರ ಜನರು ಮಾತ್ರ ತೆಲುಗು ಮಾತನಾಡುವವರು ಈ ಮೂರೂ

ವರೆ ತಾಲ್ಲೂಕುಗಳಲ್ಲಿದ್ದಾರೆ. ಆದ್ದರಿಂದ ಭಾಷೆಯ ಆಧಾರದಮೇಲೆ ನೋಡಿದರೂ ಬಳ್ಳಾರಿಯನ್ನು ಆಂಧ್ರಕ್ಕೆ ಸೇರಿಸುವುದು ನ್ಯಾಯವಲ್ಲವೆಂದು ಅವರಿಗೆ ಹೇಳಲು ಬಯಸುತ್ತೇನೆ. ಬಳ್ಳಾರಿಯ ಪ್ರಶ್ನೆ ಇಂದಿನದಲ್ಲ, ನಿನ್ನೆಯದಲ್ಲ. ಮೈಸೂರು ಒಕ್ಕೂಟಕರ್ಣಾಟಕಕ್ಕೆ ಸೇರಬೇಕೆ ಅಥವಾ ಮೈಸೂರು ಮೈಸೂರಾಗಿಯೇ ಉಳಿಯಬೇಕೆ ಎಂಬ ಪ್ರಶ್ನೆ ಈಚೆಗೆ ಅವರ ತಲೆಯನ್ನು ಕೆಡಿಸುತ್ತಿದೆ, ಇದಕ್ಕಿಂತ ಹಿಂದೆ ಈ ವಿಚಾರ ಅವರ ಮನಸ್ಸಿನಲ್ಲಿರಲಿಲ್ಲವೆಂದು ಹೇಳಿದರು. ಹಿಂದೆ ಕಾಂಗ್ರೆಸ್‌ನವರು ಸ್ವಾತಂತ್ರ್ಯ ಚಳುವಳಿ ಪ್ರಾರಂಭಿಸಿದಾಗ, ಪ್ರಾಂತಗಳನ್ನು ಭಾಷಾವಾರು ಆಧಾರದಮೇಲೆ ವಿಂಗಡಿಸಬೇಕೆಂದು ಆಲೋಚನೆ ಮಾಡಿದರು. ಆಗ 1919-20ರಲ್ಲಿ ಕೇಳ್ಕರ್‌ರವರು ಬಳ್ಳಾರಿಯ ಪ್ರಶ್ನೆಯನ್ನು ಬಗೆಹರಿಸಲು ಪ್ರಯತ್ನ ಮಾಡಿದರು. ಬಳ್ಳಾರಿ ಕರ್ಣಾಟಕಕ್ಕೆ ಸೇರಬೇಕೆಂದು ಅಭಿಪ್ರಾಯವಾಗಿದ್ದರೂ ಸಹಿತ, ಶ್ರೀ ಕೇಳ್ಕರ್‌ರವರು ಬಳ್ಳಾರಿ ಕನ್ನಡ ಪ್ರದೇಶವೆಂದು ಒಪ್ಪಿಕೊಂಡಿದ್ದರೂ ಸಹ, ಆರು ತಾಲ್ಲೂಕುಗಳನ್ನು ಕನ್ನಡ ಪ್ರಾಂತಕ್ಕೂ ಉಳಿದ ಮೂರು ತಾಲ್ಲೂಕುಗಳನ್ನು ಆಂಧ್ರಕ್ಕೂ ಸೇರಿಸಿ ಮುಂದೆ ಯಾವಾಗಲಾದರೂ ಕರ್ಣಾಟಕ ಪ್ರಾಂತವಾಗುವುದಾದರೆ ಬಳ್ಳಾರಿ ಜಿಲ್ಲೆ ಸಂಪೂರ್ಣವಾಗಿ ಕರ್ಣಾಟಕಕ್ಕೆ ಹೋಗಬೇಕೆಂಬ ಅಭಿಪ್ರಾಯವನ್ನು ಮೂವತ್ತೈದು ವರ್ಷಗಳ ಹಿಂದೆಯೇ ಹೇಳಿದ್ದಾರೆ.

ಮಾನ್ಯ ಡಾ॥ ನಾಗನಗೌಡರೇ ಹಿಂದೆ ಯೂನಿವರ್ಸಿಟಿ ಕೌನ್ಸಿಲ್ಲಿನ ಮೆಂಬರಾಗಿದ್ದರು. ಆಂಧ್ರರಿಗೂ ನಮ್ಮ ಜಿಲ್ಲೆಯವರಿಗೂ ಯಾವ ತರದ ಬಾಂಧವ್ಯ ಈ 30-35 ವರ್ಷಗಳಿಂದ ನಡೆದುಕೊಂಡು ಬಂದಿದೆ ಎಂಬುದು ಎಲ್ಲರಿಗೂ ತಿಳಿದಿದೆ. ಅವರೇ ಮೆಂಬರಾಗಿದ್ದಾಗ ಬಹಳವಾಗಿ ಹೋರಾಟಮಾಡಿ ವಾದಿಸಿ ಆಂಧ್ರ ಯೂನಿವರ್ಸಿಟಿಗೆ ಅಫಿಲಿಯೇಟ್ ಆಗಿದ್ದ ನಮ್ಮ ಜಿಲ್ಲೆಯ ಶಾಲಾ ಕಾಲೇಜುಗಳನ್ನು ಮದರಾಸ್ ಯೂನಿವರ್ಸಿಟಿಗೆ ಸೇರಿಸಿ ಮುಂದೆ ಕರ್ಣಾಟಕ ಪ್ರಾಂತವಾದಾಗ ಅವುಗಳು ಕರ್ಣಾಟಕ ಪ್ರಾಂತ್ಯದ ಆಡಳಿತಕ್ಕೆ ಸೇರುವಂತಾಗಬೇಕೆಂದು ಹೇಳಿ ಆಗಲೇ 1927ನೆಯ ಇಸವಿಯಲ್ಲೇ ಮದರಾಸ್ ಯೂನಿವರ್ಸಿಟಿಗೆ ಸೇರಿಸಿದ್ದು ಎಲ್ಲರಿಗೂ ಗೊತ್ತೇಯಿದೆ. ಅಲ್ಲದೆ ಮೋತೀಲಾಲ್ ನೆಹ್ರೂ ಕಮಿಟಿಯವರೂ ಈ ವಿಷಯವನ್ನು ಪ್ರಸ್ತಾಪಿಸಿ, ಕರ್ಣಾಟಕ ಪೂರ್ಣವಾದಾಗ ಬಳ್ಳಾರಿಯು ಕರ್ಣಾಟಕಕ್ಕೆ ಸೇರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ, ಅಲ್ಲದೆ, ಆಂಧ್ರ ಪ್ರಾಂತ್ಯದ ಮುಖ್ಯ ಲೀಡರ್ ಆಗಿದ್ದು ಈಗ ಗೌರ್ನರ್ ಆಗಿದ್ದ ಪಟ್ಟಾಭಿ ಸೀತಾರಾಮಯ್ಯನವರೇ ಕರ್ಣಾಟಕ ಏಕೀಕರಣ ಸಮಿತಿಯ ಅಧ್ಯಕ್ಷರಾಗಿದ್ದರು. ಅವರೇ ಹೇಳಿದ್ದಾರೆ, ಕರ್ಣಾಟಕ ಆಗಲೇಬೇಕು, ಬಳ್ಳಾರಿಯ ಜಿಲ್ಲೆ ಅದರೊಡನೆ ಹೋಗಲೇಬೇಕು ಎಂದು. ಅಧಿಕಾರ ಸ್ಥಾನದಿಂದ ಹೇಳಿರುವ ಮಾತುಗಳಿವು. ಇವಲ್ಲದೆ ಧಾರ್‌ಸಮಿತಿ, ಜೆ.ವಿ.ಪಿ. ರಿಪೋರ್ಟು—ಇವೆಲ್ಲಾ ಬಳ್ಳಾರಿಯು ಕರ್ಣಾಟಕಕ್ಕೆ ಸೇರಬೇಕೆಂಬ ನಿಲುವನ್ನೇ ನಮ್ಮ ಮುಂದಿಟ್ಟಿದ್ದಾರೆ. ಕಡೆಯದಾಗಿ ಆಂಧ್ರ ಸಂಸ್ಥಾನ ಏರ್ಪಡುವಾಗಲೂ ಈ ಎಲ್ಲ ವಿಚಾರಗಳೂ ಚರ್ಚೆಗೆ ಬಂದು, ಯಾರೋ ಅಂಕಿಅಂಶಗಳನ್ನು ತಪ್ಪಾಗಿ ಕೊಟ್ಟಿದ್ದಾರೆಂಬುದು ವ್ಯಕ್ತಪಟ್ಟು ಪಂಡಿತ್ ಜವಹರಲಾಲ್ ನೆಹರೂ ಅವರು ಮಿಶ್ರಾ ಸಮಿತಿಯನ್ನು ನೇಮಕಮಾಡಿದರು. ಅದರಮೇಲೆ ಮಿಶ್ರಾ ಸಮಿತಿಯವರು ಸಂಪೂರ್ಣ ಪರಿಶೀಲನೆ ನಡೆಸಿ ಬಳ್ಳಾರಿಯ ಈ ಏಳು ತಾಲ್ಲೂಕುಗಳೂ ಮೈಸೂರಿಗೆ ಸೇರಿ ಮುಂದೆ ಕರ್ಣಾಟಕವಾಗುವಾಗ ಮೈಸೂರನ್ನೊಳಗೊಂಡ ಕರ್ಣಾಟಕವಾಗಬೇಕೆಂದು ನಿರ್ಣಯ ಮಾಡಿದ್ದಾರೆ. ಅದೇ ಪ್ರಕಾರ ಜವಹರಲಾಲ್ ನೆಹರೂ ಅವರೂ, ಮೌಲಾನಾ ಅಜಾದ್‌ರವರೂ ಮತ್ತು ಆಗಿನ ಹೋಮ್ ಮಿನಿಸ್ಟರ್ ಆದ ಖಟ್ಜು ಅವರೂ ಪಾರ್ಲಿಮೆಂಟ್ ಮುಂದೆ ಒಂದು Statement ಕೂಡ ಮಾಡಿದ್ದಾರೆ. ಅಂಥಾದ್ದು ಈಗೇಕೆ ಬದಲಾವಣೆಯಾಗಿದೆಯೋ ಗೊತ್ತಿಲ್ಲ.

ಹೀಗೆಲ್ಲಾ ಇರುವಾಗ, ಈ ವರದಿಯವರು ಒಂದು ನಿರ್ದೇಶಮಾಡಿದ ಮಾತ್ರಕ್ಕೇ ಬಳ್ಳಾರಿಯನ್ನು ಆ ಕಡೆಗೆ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತೇನೆ. ಸುಮ್ಮನೆ ತುಂಗಭದ್ರಾ ವಿಷಯವನ್ನು ತೆಗೆದುಕೊಂಡು ಬಳ್ಳಾರಿಯನ್ನು ಆಂಧ್ರಕ್ಕೆ ಸೇರಿಸಿದರೆ ಉತ್ತಮವೆಂದು ಹೇಳಿದರೇ ಹೊರತು, ಈಗ ಉಂಟಾಗಿರತಕ್ಕ ಸಾಧಕ ಬಾಧಕಗಳ ಬಗ್ಗೆ ಯಾವ ಅಂಕಿಅಂಶಗಳನ್ನೂ ಕೊಟ್ಟಿಲ್ಲ. ಅವರು ಈ ರೀತಿ ಮಾಡಿದ್ದು ಸರ್ವಥಾ ಸರಿಯಲ್ಲವೆಂದು ಹೇಳುತ್ತೇನೆ. ಬಳ್ಳಾರಿ-ಕರ್ಣಾಟಕದಲ್ಲಿ ತುಂಗಭದ್ರಾ ಪ್ರಾಜೆಕ್ಟ್ ಕೆಳಗೆ ಏಳು ಲಕ್ಷ ಎಕರೆಗಳು ಸಾಗುವಳಿಗೆ ಬರಲಿವೆ. ಇಂಥಾದ್ದರಲ್ಲಿ ಸಂಜೀವರೆಡ್ಡಿಯವರು ಹೇಳಿದ್ದು ಸತ್ಯಕ್ಕೆ ದೂರವಾದದ್ದು. ಆಡಳಿತ ವಿಷಯದಲ್ಲೇ ಆಗಲಿ ಭಾಷಾ ಸಂಸ್ಕೃತಿಗಳ ವಿಚಾರದಲ್ಲೇ ಆಗಲಿ ಹೆಚ್ಚಿನ ಸಾಮೀಪ್ಯ ಬಳ್ಳಾರಿಯು ಮೈಸೂರು ಮತ್ತು ಕರ್ಣಾಟಕದಲ್ಲಿ ಒಟ್ಟುಗೂಡುವುದರಿಂದ ಸಾಧ್ಯವೇ ಹೊರತು ಆಂಧ್ರದಲ್ಲಿ ಸೇರುವುದರಿಂದ ಸಾಧ್ಯವಿಲ್ಲ ಮತ್ತು ಯಾವುದೇ ವಿಚಾರದಲ್ಲೂ ನಾವು ಆಂಧ್ರರೊಡನೆ ಸೇರಬಯಸುವುದಿಲ್ಲವೆಂದು ನಾನು ಹೇಳುತ್ತೇನೆ.

ಮೂರನೆಯದಾಗಿ ಅವರು ಹೇಳಿದಂತೆ ವ್ಯಾಪಾರೋದ್ಯಮಗಳ ದೃಷ್ಟಿಯಿಂದ ನೋಡೋಣ. ವ್ಯಾಪಾರದ ವಿಚಾರದಲ್ಲಿಯೂ ಅವರು ಹೇಳಿರುವಂತೆ ರಾಯದುರ್ಗದೊಡನೆ ಸಂಪರ್ಕವಿರುವುದು ನನಗಂತೂ ಗೊತ್ತಿಲ್ಲ. ಅವರು ಹೇಳಿರುವುದಕ್ಕೆ ಆಧಾರವಾಗಿ ಅಂಕಿಅಂಶಗಳಾವುದನ್ನೂ ಕೊಟ್ಟಿಲ್ಲ. ಸರ್ಕಾರಿ ಲೆಕ್ಕ ಪತ್ರಗಳ ಆಧಾರದ ಮೇಲೆ ನೋಡುವುದಾದರೂ ಕೂಡ ಬಳ್ಳಾರಿಯ ಎಲ್ಲ ವ್ಯವಹಾರೋದ್ಯಮಗಳೂ ಮುಂಬೈ ಕರ್ಣಾಟಕದೊಡನೆ ನಡೆಯುತ್ತಿವೆಯೆಂಬುದನ್ನು ಕಾಣಬಹುದು. ಹೀಗಿರುವಲ್ಲಿ ಈ ವರದಿಕಾರರು ಬರೆದಿರುವುದಕ್ಕೆ ಕೊಟ್ಟಿರುವ ಕಾರಣಗಳೂ ಯಾವುವೂ ಸರಿಯಲ್ಲ, ಪುಷ್ಟಿಕರವಾಗಿಲ್ಲವೆಂದು ಹೇಳುತ್ತೇನೆ.

ಈ ತಿದ್ದುಪಡಿಯ ಕೊನೆಯಲ್ಲಿ ಅಕ್ಕಪಕ್ಕದಲ್ಲಿರುವ ಯಾವ ಯಾವ ಪ್ರದೇಶಗಳ ಜನರು ಈ ಹೊಸರಾಜ್ಯದ ಜೊತೆಗೆ ಸೇರಬೇಕೆಂದು ತಮ್ಮ ಅಭಿಲಾಷೆಯನ್ನು ವ್ಯಕ್ತಪಡಿಸಿರುತ್ತಾರೋ ಆ ಪ್ರದೇಶಗಳನ್ನು ಕರ್ಣಾಟಕ ಪ್ರಾಂತ್ಯದಲ್ಲಿ ಅಥವಾ ಮೈಸೂರೆಂದು ಕರೆಯಲ್ಪಡುವ ಕರ್ಣಾಟಕ ಪ್ರಾಂತ್ಯದಲ್ಲಿ ಸೇರಿಸಬಹುದು ಎಂದು ಹೇಳಿದ್ದಾರೆ. ಆದರೆ, ಇಲ್ಲಿ ಇಂಥದೇ ಪ್ರದೇಶಗಳೆಂದು ನಿರ್ದಿಷ್ಟವಾಗಿ ಹೇಳಿದ್ದರೆ ಸರಿಹೋಗುತ್ತಿತ್ತೆಂದು ನಮ್ಮ ಅಭಿಮತ. ಈ ಬಗ್ಗೆ ಕೆಲವು ಪ್ರದೇಶಗಳನ್ನು ಸೇರಿಸಿಕೊಳ್ಳಬೇಕೆಂದು ನಾನು ಸೂಚನೆ ಮಾಡುತ್ತೇನೆ. ಇವು ನೀಲಗಿರಿ, ಹೊಸೂರು, ತಾಳವಾಡ, ಆಂಧ್ರ ಪ್ರಾಂತ್ಯಕ್ಕೆ ಸೇರಿದ ಮಡಕಶಿರ, ಮುಂಬೈ ಪ್ರಾಂತ್ಯಕ್ಕೆ ಸೇರಿದ ಸೊಲ್ಲಾಪುರ, ಅಕ್ಕಲಕೋಟೆ ಇವುಗಳ ಜೊತೆಗೆ, ಮುಂದೆ ಬೌಂಡರಿ ಕಮಿಷನ್ನಿಗೆ refer ಆಗಿ ಅವರು ತೀರ್ಮಾನಮಾಡಿ ಆ ಜನತೆಯು ಒಪ್ಪಿದರೆ ಆಲೂರು, ಆದೋನಿ, ರಾಯದುರ್ಗ—ಇವುಗಳೂ ಕರ್ಣಾಟಕ ಪ್ರಾಂತ್ಯಕ್ಕೆ ಸೇರಬಹುದೆಂದು ಸೂಚಿಸಿ ಮಾನ್ಯ ಮಂತ್ರಿಗಳು ಸಭೆಯು

(ಶ್ರೀ ಇಜಾರಿ ಸಿರಸಪ್ಪ.)

ಮುಂದಿಟ್ಟಿರುವ ನಿರ್ಣಯಕ್ಕೆ ಹೃತ್ಪೂರ್ವ ಸ್ವಾಗತವನ್ನು ಬಯಸಿ ಎಲ್ಲರೂ ಇದಕ್ಕೆ ಬೆಂಬಲ ಕೊಡಬೇಕೆಂದು ಹೇಳುತ್ತೇನೆ.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈಗ ನಮ್ಮ ಮುಂದಿರುವ ವರದಿಯನ್ನು ನಾನು ಸ್ವಾಗತಿಸುತ್ತೇನೆ. ಪ್ರಾಂತ್ಯವಿಂಗಡಣಾ ಸಮಸ್ಯೆ ಎಂಬುದು ಬಹಳ ಕ್ಲಿಷ್ಟವಾದ ಸಮಸ್ಯೆ. ಇದು ದೇಶದಲ್ಲೆಲ್ಲಾ ಆಂದೋಳನವನ್ನುಂಟುಮಾಡುವಂತಹದು. ಇಂಥ ಸಮಸ್ಯೆಯನ್ನು ಈ ಸಮಿತಿಯವರು ಬಹಳ ಮೇಧಾವಿಗಳಾದ್ದರಿಂದ ಸಾಧ್ಯವಾದಷ್ಟು ಮಟ್ಟಿಗೆ ಎಷ್ಟು ಎಲ್ಲರಿಗೂ ಸಮಾಧಾನವುಂಟುಮಾಡುವುದಕ್ಕೆ ಸಾಧ್ಯವೋ ಅಷ್ಟೂ ಪ್ರಯತ್ನಪಟ್ಟಿದ್ದಾರೆ. ಇದಕ್ಕಾಗಿ ಇಡೀ ದೇಶದವರು ಅವರಿಗೆ ಕೃತಜ್ಞರಾಗಿರಬೇಕೆಂದು ಹೇಳುತ್ತೇನೆ.

ಮುಖ್ಯವಾಗಿ, ಈ ವರದಿಯಲ್ಲಿ ಒಂದು ಹೆಚ್ಚಿನ ಸಂತೋಷದ ವಿಷಯವಿದೆ. ಏನೆಂದರೆ, ಸಾಮಾನ್ಯ ಜನಗಳ ಆಶೆಗಳಲ್ಲಿ ಕೆಲವನ್ನು ಅವರು ನೆರವೇರಿಸಿದ್ದಾರೆ. ಈಗ ಕಳೆದ ಕೆಲವು ವರ್ಷಗಳಿಂದಲೂ ದೇಶದಲ್ಲಿರುವ ಆರ್ಥಿಕ ಅಸಮಾನತೆಗಳ ವಿಚಾರವಾಗಿ ಒತ್ತಾಯಮಾಡುತ್ತಲೆ ಇದ್ದರು. ಅದನ್ನು ನಿವಾರಣೆ ಮಾಡಬೇಕಾದದ್ದು ಬಹಳ ಅಗತ್ಯವಾಗಿತ್ತು. ಆದಷ್ಟು ಜಾಗ್ರತೆ ದೇಶದಲ್ಲಿ ಸಮಾನತೆಯನ್ನು ತರುವುದು ಅತ್ಯಗತ್ಯವಾಗಿತ್ತು. ಈ ದೃಷ್ಟಿಯಿಂದ ಪ್ರಾಂತ್ಯಗಳನ್ನು ಎ.ಬಿ. ಮತ್ತು ಸಿ. ಕ್ಲಾಸ್‌ಗಳೆಂದು ವಿಂಗಡಿಸಿರತಕ್ಕದು ಬಹಳ ಅನ್ಯಾಯ, ನಮ್ಮ ದೇಶದಲ್ಲಿ ಒಂದು ಪ್ರಾಂತ್ಯಕ್ಕೂ ಇನ್ನೊಂದು ಪ್ರಾಂತ್ಯಕ್ಕೂ ವ್ಯತ್ಯಾಸವಿರಕೂಡದೆಂದು ಒತ್ತಾಯಮಾಡುತ್ತಿದ್ದರು. ಇದೇ ಸಂದರ್ಭದಲ್ಲಿ ನಮ್ಮ ರಾಜ್ಯಾಂಗ ರಿಪಬ್ಲಿಕ್ ಆದ ಮೇಲೆ ರಾಜಪ್ರಮುಖರಿಗೆ ಸ್ಥಾನವಿಲ್ಲ, ಆದ್ದರಿಂದ ಈಗಿನ ಸನ್ನಿವೇಶಕ್ಕೆ ತಾತ್ಕಾಲಿಕವಾಗಿ ಮಾಡಿಕೊಂಡಿರುವಂಥ ರಾಜಪ್ರಮುಖರ ಸ್ಥಾನವನ್ನು ರದ್ದು ಮಾಡಬೇಕೆಂದು ಒತ್ತಾಯವಿತ್ತು.

ಇವುಗಳೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಈ ವರದಿಯಲ್ಲಿ ಎಲ್ಲವನ್ನೂ ಸರಿಮಾಡಿದ್ದಾರೆ. ಹಿಂದಿನಿಂದ ಬಂದಂಥ ಸಂಸ್ಥಾನಗಳ ಗಡಿ ಸ್ವಾಭಾವಿಕವಾದದ್ದಲ್ಲ, ಅನುಕೂಲವಾದದ್ದಲ್ಲ, ಇವುಗಳನ್ನು ವಿಂಗಡಿಸಿದ್ದು ಅನೇಕ ರಾಜಕೀಯ ಕಾರಣಗಳಿಗಾಗಿ, ಮಿಲಿಟೆರಿ ಅನುಕೂಲತೆಗಳಿಗಾಗಿ, ಈ ಗಡಿಗಳೆಲ್ಲಾ ಚರಿತ್ರಾರ್ಹವಾಗಿ ಬಂದುವು ಎಂಬುದನ್ನು ಮನಗಂಡು ಈಗಿನ ಕಾಲಕ್ಕನುಸಾರವಾಗಿ ಮಾಡಬೇಕೆಂದು ಹೇಳಿ ಅದರಂತೆ ಮಾಡಿದ್ದಾರೆ. ಇಷ್ಟಕ್ಕೂ ಈ ವರದಿಯನ್ನು ತಯಾರಿಸುವುದಕ್ಕೆ ಸಮಿತಿಯನ್ನು ನೇಮಕಮಾಡಿದ್ದು ಜನಗಳ ಒತ್ತಾಯದಿಂದ. ನಾವು ಕಾಣುವ ಹಾಗೆ ಬಹಳ ಹಿಂದಿನಿಂದಲೂ ಇದರ ವಿಚಾರದಲ್ಲಿ ಬಹಳ ಒತ್ತಾಯವಿತ್ತು. ಹಿಂದೆ ಒರಿಸ್ಸಾ, ಸಿಂಧ್ ಪ್ರದೇಶಗಳು ಏರ್ಪಟ್ಟಾಗಲೂ ಒತ್ತಾಯ ಬಂದು ಆಂಧ್ರಪ್ರಾಂತವನ್ನೂ ಆಗಲೇ ಮಾಡಬೇಕೆಂದು ಚಳವಳಿ ನಡೆಯಿತು. ಆಗೇನೋ ಅದನ್ನು ಮಾಡಲಿಲ್ಲ. ಈಚೆಗೆ ಮತ್ತೆ ಈ ಪ್ರಶ್ನೆಗೆ ಒತ್ತಾಯ ಬಂದು ಧಾರ್ ಸಮಿತಿ ಏರ್ಪಾಡಾಯಿತು. ಆದರೆ ಅವರೂ ಸ್ವಲ್ಪ ಕಾಲ ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಬೇಕೆಂದು ಹೇಳಿದರು. ಇದಾದ ಮೇಲೆ ದೇಶದಲ್ಲಿ ಮತ್ತೆ ಚಳವಳಿ ನಡೆದು ಆಂಧ್ರಪ್ರಾಂತ್ಯವಾಯಿತು. ಆಂಧ್ರಪ್ರಾಂತ್ಯವಾದ ಮೇಲೆ ಬಾಕಿ ಬದಲಾವಣೆಗಳಾಗಲೇಬೇಕು. ಜೊತೆಗೆ (c) ಪ್ರಾಂತ್ಯಗಳಿಗೆ ಸ್ಥಾನವಿಲ್ಲ. ಅವುಗಳನ್ನು ತೆಗೆದುಹಾಕಿದ ಮೇಲೆ ರಾಜ್ಯಗಳನ್ನು ಪುನರ್ವಿಂಗಡಣೆ ಮಾಡುವುದು ಅತ್ಯಾವಶ್ಯಕ. ಇದನ್ನು ಮನಗಂಡು ಮುಖ್ಯವಾಗಿ ಆಡಳಿತ ದೃಷ್ಟಿಯಿಂದ ಈ ವಿಂಗಡಣೆಗಳನ್ನು ಸೂಚಿಸಿದ್ದಾರೆಂದು ತಿಳಿಸಿದ್ದಾರೆ. ಆದರೆ ಭಾಷೆಯನ್ನು ಬಿಟ್ಟು ಆಡಳಿತ ದೃಷ್ಟಿಯೆಂಬುದೇ ಬೇರೆಯಿಲ್ಲ. ಆದ್ದರಿಂದ ಇದನ್ನು ಗಮನಿಸಿ, ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಒಂದು ರಾಜ್ಯ, ಒಂದು ಸಂಸ್ಥಾನ ನಡೆಯಬೇಕಾಗಿದ್ದರೆ ಎಷ್ಟರ ಮಟ್ಟಿನ ವಿಸ್ತೀರ್ಣ ಮತ್ತು ಜನಸಾಂದ್ರತೆಯಿರಬೇಕೆಂಬುದನ್ನು ನೋಡಿ ಮಾಡಿದ್ದಾರೆ.

ಇಷ್ಟೆಲ್ಲಾ ಮಾಡಿದ್ದರೂ, ಉತ್ತರ ಪ್ರದೇಶವನ್ನು ವಿಂಗಡಿಸಲಿಲ್ಲ, ನಮ್ಮದನ್ನು ಮಾತ್ರ ಜಾಸ್ತಿಮಾಡಿದ್ದಾರೆಂದು ಮಾನ್ಯ ಮಿತ್ರರು ಕೆಲವರು ವಾದಿಸಿದ್ದಾರೆ. ಹಾಗೆ ನೋಡುವುದಾದರೆ ಇಂಡಿಯಾ ದೇಶದಲ್ಲಿರುವ 16 ಸಂಸ್ಥಾನಗಳಲ್ಲಿ ನಮ್ಮ ದೇಶ ಅತಿದೊಡ್ಡದೂ ಆಗುವುದಿಲ್ಲ, ಅತಿ ಚಿಕ್ಕದೂ ಅಲ್ಲ ; ಸರಿಸುಮಾರಾಗಿದೆಯೆನ್ನಬಹುದು. ಅಲ್ಲದೆ ಉತ್ತರ ಪ್ರದೇಶವನ್ನು ಹಂಚಬೇಕಾದದ್ದು ಅವರಿಗೆ ಸೇರಿದ್ದು. ಅವರು ಬೇಕಾಗಿದ್ದರೆ ಒತ್ತಾಯ ಮಾಡಿ ವಿಂಗಡಿಸಿಕೊಳ್ಳಬಹುದಾಗಿತ್ತು.

ಜೊತೆಗೆ, ಇನ್ನೂ ಒಂದು ವಿಷಯವನ್ನು ನಾವು ಗಮನಿಸಬೇಕು. ಈಗಿರತಕ್ಕ ಸನ್ನಿವೇಶದಲ್ಲಿ ನಾವು ಭಾಷಾವಾರು ಪ್ರಾಂತ್ಯಬೇಡ, ರಾಜಪ್ರಮುಖರೇ ಬೇಕು ಎನ್ನುವ ಸ್ಥಿತಿಯಲ್ಲೂ ಇಲ್ಲ. ಏಕೆಂದರೆ ಭಾಷಾವಾರಿನ ರೀತ್ಯವೇ ವಿಂಗಡಣೆ ಮಾಡ ಹೊರಟು ಅತ್ತ ಬೊಂಬಾಯಿ ಪ್ರಾಂತ್ಯದಲ್ಲಿ ಮರಾಠಾ ಪ್ರದೇಶದಲ್ಲಿ ಕನ್ನಡ ಭಾಗಗಳನ್ನು ಬೇರ್ಪಡಿಸಿದ್ದಾರೆ, ಇತ್ತ ಹೈದರಾಬಾದಿನಲ್ಲಿ ತೆಲುಗು ಪ್ರದೇಶವನ್ನೂ ಕನ್ನಡ ಮಾತನಾಡುವ ಭಾಗಗಳನ್ನೂ ಬೇರ್ಪಡಿಸಿದ್ದಾರೆ. ಹೀಗೆ ನಾಲ್ಕು ಭಾಷಾರಾಜ್ಯಗಳು ಬೇರೆ ಬೇರೆಯಾಗಿರುವಾಗ ಕರ್ನಾಟಕ ಆಗಲೇಬೇಕಾಗುತ್ತದೆ. ಏಕೆಂದರೆ, ಆ ನ್ಯಾಲು ರಾಜ್ಯಗಳಾದ ಮೇಲೆ ಮಧ್ಯೆ ಮಧ್ಯೆ ಉಳಿದಿರುವ ಅಲ್ಪಸ್ವಲ್ಪ ಭಾಗಗಳು ಅಲ್ಲೊಂದಿಷ್ಟು ಇಲ್ಲೊಂದಿಷ್ಟು ಇರುವುವುಗಳನ್ನೇ ಸೇರಿಸಿ ಬೇರೊಂದು ಆಡಳಿತ ನಡೆಸಿಕೊಳ್ಳುವಂತೆ ಮಾಡಿ ಎನ್ನುವುದು ಸರಿಯಲ್ಲ. ಆದ್ದರಿಂದ ಕರ್ಣಾಟಕವನ್ನೇರ್ಪಡಿಸುವುದನ್ನು ಬಿಟ್ಟು ಬೇರೆ ಮಾರ್ಗವಿಲ್ಲವೆಂದು ನನ್ನ ಅಭಿಪ್ರಾಯ.

ಆಮೇಲೆ, ಕೆಲವು ಮಾನ್ಯ ಸ್ನೇಹಿತರು ಇದರಿಂದಾಗಿ ಹಣ ಕಾಸಿನ ತೊಂದರೆ ನಮಗುಂಟಾಗುತ್ತದೆಂದು ಹೇಳಿದರು. ಇನ್ನು 20 ವರ್ಷಗಳು ನಮ್ಮ ದೇಶ ಮುಗ್ಗಟ್ಟಿಗೆ ಸಿಕ್ಕಬೇಕಾಗುತ್ತದೆಂದು ಹೇಳಿದರು. ಕರ್ನಾಟಕದ ಭಾಗಗಳು ನಮ್ಮ ದೇಶಕ್ಕಿಂತ ಬಹಳ ಹಿಂದಿವೆ ಎಂದು ವಾದಮಾಡಿ ಅವರ ದೆಶೆಯಿಂದ ನಮ್ಮ ದೇಶದ ಪ್ರಗತಿ ಕುಂಠಿತವಾಗುತ್ತದೆಂದು ಹೇಳಿದರು. ಒಂದು ವೇಳೆ ಕರ್ಣಾಟಕ ಹಿಂದೆಬಿದ್ದಿದ್ದರೆ, ಆ ಒಂದು ದೃಷ್ಟಿಯಿಂದಲೇ ಅವರನ್ನು ನಮ್ಮೊಡನೆ ಸೇರಿಸಿಕೊಳ್ಳಬೇಕು. ಏಕೆಂದರೆ ನಮ್ಮ ಇಂಡಿಯಾ ದೇಶದಲ್ಲಿ ಯಾವ ಪ್ರಜೆಯೂ ಹಿಂದುಳಿಯಕೂಡದು, ಪ್ರತಿಯೊಬ್ಬರಿಗೂ ಸಾಕಾದಷ್ಟು ಅವಕಾಶ ಕೊಟ್ಟು ಉತ್ತಮ ಸ್ಥಿತಿಗೆ ತರುವುದಕ್ಕೆ ಎಲ್ಲರೂ ಪ್ರಯತ್ನಪಡಬೇಕೆಂದಿರುವುದು ನಮ್ಮೆಲ್ಲರ ಧ್ಯೇಯ. ಇದಕ್ಕಾಗಿ ದೇಶದ ಎಲ್ಲ ಸಂಪತ್ತನ್ನೂ ವಿನಿಯೋಗಿಸಬೇಕಾಗಿದೆ. ಇಂಥ ಸಂದರ್ಭದಲ್ಲಿ ಮೈಸೂರು ಮೈಸೂರಾಗಿಯೇ ಇರಬೇಕೆನ್ನುವುದು ಯಾವ ಕಾಲದ ಮಾತು ? 1950 ನೆಯ ಇಸವಿಯಲ್ಲಿ ನಮ್ಮ ಸಂಸ್ಥಾನದ 15 ಇಲಾಖೆಗಳನ್ನು ಕೇಂದ್ರ ಸರ್ಕಾರದವರಿಗೆ ವಹಿಸಿಕೊಟ್ಟೆವು. ಅದಾಗಿ ಆರ್ಥಿಕ ವಿಲೀನೀಕರಣವಾಗುವ ಕಾಲದಲ್ಲಿ ಇಂಡಿಯಾ ದೇಶದಲ್ಲಿರುವವರೆಲ್ಲರೂ ಒಂದೇ, ಕೇಂದ್ರ ಸರ್ಕಾರ ಬೇರೆ

ಯಲ್ಲ. ನಾವು ಬೇರೆಯಲ್ಲ ಎಂದು ಪ್ರತಿಯೊಬ್ಬರೂ ತತ್ವ ಪ್ರತಿಪಾದನೆ ಮಾಡ ಹೊರಡಲಿಲ್ಲವೇ? ಇವತ್ತು ಮೈಸೂರು ದೇಶದ ಸ್ಥಿತಿಯಾದರೂ ಏನು? ನಮ್ಮ ಕಾಲಿನ ಮೇಲೆ ನಾವು ನಿಲ್ಲುತ್ತೇವೆಂದು ಹೇಳುವ ಹಾಗಿದ್ದೇವೆಯೇ? ನಮ್ಮಲ್ಲಿದ್ದ 15,000 ನೌಕರರ ಸಮೇತವಾಗಿ ನಮ್ಮ ಅನೇಕ ಇಲಾಖೆಗಳನ್ನು ಕೇಂದ್ರಕ್ಕೆ ಕೊಟ್ಟೆವು. ಸೆಂಟ್ರಲ್ ಎಕ್ಸೈಸ್ ಒಂದು ಬಾಬಿನಿಂದಲೇ 4 ಕೋಟಿ 30 ಲಕ್ಷ ರೂಪಾಯಿಗಳು ನಮ್ಮ ಸಂಸ್ಥಾನದಿಂದ ಕೇಂದ್ರಕ್ಕೆ ಹೋಗುತ್ತಿವೆ.

4 P.M.

ಈ ದಿವಸ ನಮ್ಮ ದೇಶದಿಂದ ಇನ್‌ಕಂಟ್ಯಾಕ್ಸ್ ರೂಪದಲ್ಲಿ ಇಂಡಿಯಾ ಸರ್ಕಾರಕ್ಕೆ ವರ್ಷಂಪ್ರತಿ 2¼ ಕೋಟಿ ರೂಪಾಯಿಗಳು ಹೋಗುತ್ತಿವೆ. ಇಷ್ಟೊಂದು ಅಪಾರ ಉತ್ಪತ್ತಿಯನ್ನು ತರುತ್ತಿದ್ದಂಥ ಅನೇಕ ಇಲಾಖೆಗಳು ನಮ್ಮ ಕೈಬಿಟ್ಟು ಕೇಂದ್ರ ಸರ್ಕಾರಕ್ಕೆ ಹೋದಮೇಲೆ ಇನ್ನು ನಮಗೆ ಇಲ್ಲಿ ಉಳಿದಿರುವುದೇನು? ನಮ್ಮ ದೇಶವು ಈ ಹೊತ್ತು ಆಡಳಿತವನ್ನು ಒಂದು ದೊಡ್ಡ ಮುನಿಸಿಪಾಲಿಟಿಯೋಪಾದಿಯಲ್ಲಿ ನಡಸತಕ್ಕಂಥ ಪರಿಸ್ಥಿತಿಯೊದಗಿದೆ. ಅನೇಕ ಜಿಲ್ಲಾ ಬೋರ್ಡುಗಳಿಗೆ ರಸ್ತೆಯಲ್ಲಿ ಕಸ ಗುಡಿಸತಕ್ಕ ಜಾಡಮಾಲಿಗಳಿಗೆ ಸಂಬಳ ಸಾರಿಗೆಗಳನ್ನು ಕೊಡುವುದಕ್ಕೂ ಕೂಡ ಸಾಕಷ್ಟು ಹಣದ ವರಮಾನವಿರುವುದಿಲ್ಲ. ಹೀಗೆ ಈ ಹೊತ್ತು ನಮ್ಮ ಮೈಸೂರು ಸರ್ಕಾರಕ್ಕೆ ಒಂದ ಹತ್ತು ಲಕ್ಷ ರೂಪಾಯಿಗಳ ಕಾಂಗಾರಿ ನಡೆಸುವುದಕ್ಕೆ ಯತ್ನವಿಲ್ಲದೆ ಹಿಂದು ಮುಂದು ನೋಡುತ್ತಿದ್ದರೂ ಮೈಸೂರು ಮೈಸೂರಾಗಿಯೇ ಉಳಿಯಬೇಕೆಂದು ಹೇಳುತ್ತಿರುವುದರಲ್ಲಿ ಅರ್ಥವಿಲ್ಲ; ಇದರಲ್ಲಿ ತಿರುಳೂ ಇಲ್ಲ. ನಮ್ಮ ಸರ್ಕಾರಕ್ಕೆ ಈಗಾಗಲೇ 3 ಕೋಟಿಗೆ ಮೇಲ್ಪಟ್ಟು ಖೋತಾ ಬಡ್ಜೆಟ್ಟಾಗುತ್ತಿದೆ. ಹೀಗೆ ನಮ್ಮ ಪರಿಸ್ಥಿತಿಯು ವರ್ಷ ವರ್ಷ ಇಳಿಮುಖವಾಗುತ್ತಿದ್ದರೂ ಕೊನೆಗೆ ನಮ್ಮ ನಿಜಸ್ವರೂಪವೆಲ್ಲಿಗೆ ನಿಲ್ಲುತ್ತದೆಂಬುದನ್ನು ಆಲೋಚಿಸದೆ ನಾವೇ ಜಗತ್ತಿನಲ್ಲಿ ತೀರಾ ಮುಂದುವರಿದಿರತಕ್ಕವರು—ಬಾಕಿಯವರೆಲ್ಲಾ ಹಿಂದುಳಿದಿದ್ದಾರೆ ಎಂದು ಹೇಳುತ್ತಿರುವುದು ದೂರದೃಷ್ಟಿಯಿಂದ ಆಡುತ್ತಿರುವ ಮಾತುಗಳಲ್ಲ. ಹೀಗೆ ಈ ದಿವಸ ಯಾರು ಮೈಸೂರನ್ನು ಅಚ್ಚ ಮೈಸೂರಾಗಿಯೇ ಉಳಿಸಿಕೊಳ್ಳಬೇಕೆಂದು ಕೂಗು ಎತ್ತಿದ್ದಾರೋ ಇವರು ಈ ಹಿಂದೆ ಆ ಕೇಂದ್ರಕ್ಕೆ ನಮ್ಮ ಆದಾಯ ಬಾಬುಗಳೆಲ್ಲಾ ಸೇರದಂತೆ ಅಡ್ಡ ಹಾಕಿ ಆಗಲೇ ಉಳಿಸಿಕೊಂಡಿದ್ದರೆ ಆಗುತ್ತಿತ್ತೋ ಏನೋ. ಆದರೆ ಆ ದಿವಸ ತೆಪ್ಪನೆ ಕುಳಿತಿದ್ದು ಈಗ ಕೂಗಾಡುವುದಕ್ಕೆ ಪ್ರಾರಂಭಿಸಿದರೆ ಏನು ಪ್ರಯೋಜನವಿದೆ? ಈ ಹೊತ್ತು ನಮ್ಮ ದೇಶದ ಬಹುಮಟ್ಟಿನ ದೊಡ್ಡ ಆದಾಯ ಬಾಬುಗಳೆಲ್ಲಾ ಕೇಂದ್ರಕ್ಕೆ ಹೋದನಂತರ ನಮ್ಮ ದೇಶದಲ್ಲಿ ಪ್ರಜೆಗಳ ಮೇಲೆ ಸರ್ಕಾರ ನಾನಾರೂಪದಲ್ಲಿ 8-10 ತೆರಿಗೆಗಳನ್ನು ಹೆಚ್ಚು ಮಾಡಿದೆ. ಹೆಲ್ತ್ ಸೆಸ್ಸಿನಿಂದ ಸುಮಾರು 8 ಲಕ್ಷ ರೂಪಾಯಿಗಳು ಬರುತ್ತಿವೆ. ಮೋಟಾರ್ ಸೆಸ್ಸಿನಿಂದ, ಬೀಡಿ ಸೆಸ್ಸಿನಿಂದ ಕೆಲವು ಹಣ ಬರುತ್ತಿದೆ. ಹೀಗೆ ಸೆಸ್ಸುಗಳಮೇಲೆ ಬೇಟೆ ಆಡುತ್ತಿದ್ದಾರೆ. ಆದಾಗ್ಯೂ ಈ ಹೊತ್ತು ನಮ್ಮ ಹಣಕಾಸಿನ ಪರಿಸ್ಥಿತಿಯೇನೂ ಸುಧಾರಿಸಿಲ್ಲ. ಹೀಗಿರುವಾಗ ಕೆಲವು ನನ್ನ ಸ್ನೇಹಿತರು ಯಾವುದೋ ಯುಗದಲ್ಲಿದ್ದಂಥ ಪರಿಸ್ಥಿತಿಯನ್ನು ಚಪಲದಲ್ಲಿಟ್ಟುಕೊಂಡು ಅದೇ ಪರಿಸ್ಥಿತಿ ಈ ಹೊತ್ತೂ ಇದೆ ಎಂದು ಒಂದು ಭ್ರಮೆ ಇಟ್ಟುಕೊಂಡು ಮೈಸೂರು ಹೀಗೇ ಇರಲಿ ಎಂದು ವಾದ ಎತ್ತಿರುವುದು ಸರ್ವಥಾ ನ್ಯಾಯವಾದದ್ದಲ್ಲ. ಈ ದಿವಸ ನಾವೆಲ್ಲರೂ ಈ ಪ್ರಶ್ನೆಯನ್ನು ಅಖಿಲ ಭಾರತದ ಹಿತದೃಷ್ಟಿಯಿಂದ ಪರಿಶೀಲನೆ ಮಾಡಬೇಕಾಗಿದೆ. ನಮ್ಮ ಮೈಸೂರೊಂದನ್ನೇ ಗಮನದಲ್ಲಿಟ್ಟುಕೊಂಡು ಅದ್ವವಾದ ಮಾಡುವುದು ರೀತಿ ನೀತಿಗಳಿಂದ ದೂರವಾಗಿದೆ. ಈ ದಿವಸ ಕೊಡಗು ನಮ್ಮ ದೇಶಕ್ಕೆ ಸೇರಬೇಕೆಂದು ಹೇಳಲಾಗಿದೆ. ಅದರೆ ಈಗ ಸದ್ಯಕ್ಕೆ ಅಲ್ಲಿಯೂ 24-25 ಮಂದಿ ಶಾಸನ ಸಭಾಸದಸ್ಯರಿರುತ್ತಾರೆ. ಒಂದು ಶಾಸನ ಸಭೆಯಿದೆ. ಆದರೆ ಈ ದಿವಸ ಅವರೂ ಕೂಡ ನಾವು ಮೈಸೂರಿಗೆ ಸೇರುವುದಿಲ್ಲ, ನಾವೇ ಒಂದು ಪ್ರತ್ಯೇಕ ರಾಜ್ಯ ಮಾಡಿಕೊಂಡಿರುತ್ತೇವೆ ಎಂದು ಹೇಳುತ್ತಿದ್ದಾರೆ. ಆದರೆ ಅದನ್ನು ಯಾರು ಒಪ್ಪಲು ಸಾಧ್ಯವಿದೆ? ಅವರೂ ಸಹ ಪ್ರತ್ಯೇಕವಾಗಿ ಉಳಿಯಬೇಕೆಂಬ ಬಗ್ಗೆ, ಇಲ್ಲಿ ಕೆಲವರು ವಾದಿಸುತ್ತಿರುವಂತೆ, ಕೆಲವು ಕಾರಣಗಳನ್ನು ಹೇಳುತ್ತಿದ್ದಾರೆ. ಅತ್ತ ಮದ್ರಾಸ್ ಪ್ರಾಂತ್ಯ ಇತ್ತ ಮಲೆಯಾಳ ಈ ಎರಡರ ಮಧ್ಯೆ ನಮ್ಮ ದೇಶ ಒಂದು ಮೂಲೆ ಕಟ್ಟಾಗಿದೆ, ಕರ್ಣಾಟಕ ಪ್ರಾಂತ್ಯಕ್ಕೆ ಇದು ಬಹಳ ದೂರವಾಗುತ್ತದೆ ಎಂದು ಕೆಲವು ಕಾರಣಗಳನ್ನು ಹೇಳುತ್ತಿದ್ದಾರೆ. ಆದರೆ ಅವರ ವಾದಕ್ಕೆ ಮನ್ನಣೆ ಕೊಡಬೇಕೆಂದಾದರೆ ಭಾರತದಲ್ಲಿ ಅಂಥ ಮೂಲೆಗಳನ್ನೆಲ್ಲಾ ಒಂದೊಂದು ಪ್ರತ್ಯೇಕ ರಾಜ್ಯ ಮಾಡುತ್ತಾ ಹೋದರೆ ತಲೆಗಿಂತ ಬಾಲ ದಪ್ಪ ಆದಂತಾಗುತ್ತದೆ. ಈ ದಿವಸ ಈ ಕೊಡಗಿನಂಥ ಒಂದು ಸಣ್ಣ ರಾಜ್ಯಕ್ಕೆ ಇಂಥ ಅವಕಾಶ ನೀಡುವುದಾದರೆ ನಾಳೆ ಆ ಹೈದರಾಬಾದಿನವರಿಗೂ ಕೂಡ ಅದೇ ವಾದದಮೇಲೆ ಅವರೂ ಸಹ ಪ್ರತ್ಯೇಕವಾಗಿ ಉಳಿಯಲು ಅವಕಾಶ ಕೊಡಲೇಬೇಕಾಗುತ್ತದೆ. ಆದುದರಿಂದ ಹೀಗೆಲ್ಲಾ ವಾದಗಳನ್ನು ಎತ್ತುವುದು ಸರಿಯಾದ ನೀತಿಯಲ್ಲ. ಏನೋ ಅಲ್ಪ ಸ್ವಲ್ಪ ಬದಲಾವಣೆಗಳನ್ನು ಆ ಗಡಿ ಸರಹದ್ದಿನ ಪ್ರದೇಶಗಳಲ್ಲಿ ಮಾಡಲು ಮಾತ್ರ ಅವಕಾಶವಿದೆ. ಅಂಥ ಕಡೆಗಳಲ್ಲಿ ಅಲ್ಲಿನ ಜನರ ಅಭಿಪ್ರಾಯಕ್ಕನುಸಾರವಾಗಿ ಅವರು ಅತ್ತಕಡೆಗಾದರೂ ಸೇರಬಹುದು ಇಲ್ಲವೇ ಇಷ್ಟಪಟ್ಟರೆ ಇತ್ತಕಡೆಗಾದರೂ ಸೇರಬಹುದು. ಈ ವಿಚಾರಗಳೆಲ್ಲಾ ಆ ಗಡಿ ನಿರ್ಧಾರದ ಸಮಿತಿಯ ಅಧಿಕಾರಕ್ಕೆ ಬಿಡತಕ್ಕ ವಿಚಾರಗಳು. ಈ ದಿವಸ ಕೆಲವರು ಕೋಲಾರದ ಬಗ್ಗೆ ವಿಶೇಷ ಚರ್ಚೆ ಮಾಡುತ್ತಿದ್ದಾರೆ. ಆದರೆ ನಾವೇನೂ ಅದರ ಬಗ್ಗೆ ಈಗ ಹೇಳುವುದಕ್ಕೆ ಅವಕಾಶವಿಲ್ಲ. ಅದು ಅವರ ಇಷ್ಟಕ್ಕೇ ಬಿಡತಕ್ಕಂಥ ವಿಚಾರ. ಅವರು ಎತ್ತ ಕಡೆ ಇಷ್ಟ ಬಂದರೆ ಅತ್ತ ಕಡೆಗೆ ಸೇರಲು ಯಾವತ್ತೂ ಅವರಿಗೆ ಅವಕಾಶವಿದ್ದೇ ಇದೆ. ಆದರೆ ನಾವು ಈ ಸಮಯದಲ್ಲಿ ಹೀಗೆಲ್ಲಾ ವಾದಮಾಡುತ್ತಾ ಕುಳಿತುಕೊಳ್ಳುವುದು ದೇಶಕ್ಕೆ ಉಚಿತವಾದದ್ದಲ್ಲ. ಇಂಡಿಯಾ ಸರ್ಕಾರದವರು ನಮಗೆ ಪ್ರಥಮ ಪಾಂಚವಾರ್ಷಿಕ ಯೋಜನೆಗಾಗಿ 250 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು. ಆದರೆ ಈ ಹೊತ್ತು ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಅದನ್ನು 85 ಕೋಟಿಗೆ ಇಳಿಸಿದ್ದಾರೆ. ನಮಗಾದರೋ ಒಂದು ಕೋಟಿ ರೂಪಾಯಿಗಳನ್ನು ಕೂಡ ಇದಕ್ಕೆ ಸಪ್ಲಿಮೆಂಟ್ ಮಾಡಲು ಚೈತನ್ಯವಿಲ್ಲ. ನಮ್ಮದು ಈಗಲೇ ಖೋತಾ ಬಡ್ಜೆಟ್ಟಾಗಿದೆ. ಅದಕಾರಣ ನಾವೀದಿವಸ ಹೀಗೆಲ್ಲಾ ವಿಧವಿಧವಾಗಿ ಟೀಕೆ ಮಾಡುತ್ತಾ ಹೋದರೆ ಮುಂದೆ ನಮ್ಮ ಅನುಕೂಲಗಳಿಗೆಲ್ಲಾ ನಾವೇ ವಿಘ್ನ ತಂದುಕೊಂಡ ಹಾಗಾಗುತ್ತದೆ. ಇದು ಯಾರಿಗೂ ಸ್ಥಿರವಲ್ಲ. ಇಂಥ ವಾದಗಳನ್ನು ಎಷ್ಟುಬೇಗ ಕೈಬಿಟ್ಟರೆ ನಮಗೆ ಅಷ್ಟೂ ಒಳ್ಳೆಯದು. ಮೊನ್ನೆ ನಮ್ಮ ಲಾಸಟಿವರು ಭಾಷಣ ಮಾಡುತ್ತ 'ನಮ್ಮ ದೇಶದಲ್ಲಿ ಒಂದು

(ಶ್ರೀ ಬಿ. ಹುಚ್ಚೇಗೌಡ.)

ಯೂನಿಫಾರಂ 'ಲಾ' ದೇಶದಲ್ಲೆಲ್ಲಾ ಇಲ್ಲ; ಮೂರು ಸಂಸ್ಥಾನಗಳಿನ್ನೂ ಇಂಟಿಗ್ರೇಟೇ ಆಗಿಲ್ಲ' ಎಂದು ಹೇಳಿದರು. ಆ ರೀತಿ ಈ ಹೊತ್ತು ಈ ದೇಶದಲ್ಲಿ ಒಂದು ಯೂನಿಫಾರಂ 'ಲಾ' ಅನ್ನು ಜಾರಿಗೆ ತಾರದೆ ಇದ್ದಿದ್ದರೆ ಅದು ಅವರ ಕಾಂಗ್ರೆಸ್ ಸರ್ಕಾರಕ್ಕೆ ಇರತಕ್ಕಂಥ ಒಂದು ಲೋಪದೋಷವಾಯಿತು. ಅವರಿಗೆ ಅಂಥ ಒಂದು ಶಕ್ತಿ, ದಕ್ಷತೆ ಇಲ್ಲವೆಂಬುದನ್ನು ಅವರೇ ಎತ್ತಿ ತೋರಿಸಿದ್ದಾರೆ. ಆದರೆ ಈ ಹೊತ್ತು ಅವರು 'ಲಾ' ಸಚಿವರಾಗಿದ್ದುಕೊಂಡು, ಕಾಂಗ್ರೆಸ್ ಮಂತ್ರಿಗಳಾಗಿದ್ದುಕೊಂಡು, ಹೀಗೆ ಹೇಳುವುದಕ್ಕೆ ಅವರೇ ನಾಚಿಕೆಪಡಬೇಕಾಗಿದೆ. ಇದೇ ರೀತಿ ಅವರು ಭಾಷಣ ಮಾಡುತ್ತ ಒರಿಸ್ಸಾ ಪ್ರಾಂತ್ಯದ ವಿಚಾರವನ್ನು ಪ್ರಸ್ತಾಪಮಾಡಿ ಕೆಲವು ಲೋಪದೋಷಗಳನ್ನು ಹೇಳಿದರು. ಆದರೆ ಅವುಗಳನ್ನೆಲ್ಲಾ ಮುಂದೆ ಸರಿಪಡಿಸಿಕೊಳ್ಳಲು ಅವಕಾಶವಿದೆ. ಈಗಾಗಲೇ ಆ ಕೇಂದ್ರ ಸರ್ಕಾರ ಪ್ರಥಮ ಪಾಂಚವಾರ್ಷಿಕ ಯೋಜನೆಯ ಅಂತ್ಯಘಟ್ಟವನ್ನು ಮುಟ್ಟಿ ಎರಡನೇ ಪಾಂಚವಾರ್ಷಿಕ ಯೋಜನೆಯನ್ನು ಜಾರಿಗೆ ಕೊಡತಕ್ಕ ಸ್ಟೇಜಿನಲ್ಲಿದೆ. ನಾವೀಗ ದೇಶಾದ್ಯಂತವೂ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನೂ, ಸ್ಕೀಮುಗಳನ್ನೂ ಜಾರಿಗೆ ತರತಕ್ಕಂಥ ಯುಗದಲ್ಲಿದ್ದೇವೆ. ಆದಕಾರಣ ನಾವು ಆದಷ್ಟು ಬೇಗ ಈ ಪ್ರಶ್ನೆಯನ್ನು ತೀರ್ಮಾನಮಾಡಿ ಆ ಬೌಂಡ್ರಿ ಕಮಿಷನ್ ನೇಮಕಕ್ಕೆ ಅವಕಾಶ ಮಾಡಿಕೊಟ್ಟರೆ ಮುಂದೆ ಈ ಗಡಿನಿರ್ಣಯ ಎಷ್ಟು ಬೇಗ ಪೂರೈಸಿದರೆ ನಮಗೆ ಅಷ್ಟು ಅನುಕೂಲವಿದೆ, ನಮ್ಮ ಕೆಲಸ ಕಾರ್ಯಗಳು ಸುಲಲಿತವಾಗಿ ಮುಂದುವರಿಯಲು ಅವಕಾಶವಾಗುತ್ತದೆ. ಒಂದೇ ಉದಾಹರಣೆಯನ್ನು ನಾನೀಗ ತಮಗೆ ಕೊಡಲಿಚ್ಛಿಸುತ್ತೇನೆ. ಕೊಡಗಿನಲ್ಲಿ ಬಾರಾ ವಿದ್ಯುತ್ ಕೇಂದ್ರ ಸ್ಥಾಪನೆಗಾಗಿ ಎಲ್ಲಾ ಸಿದ್ಧತೆಗಳೂ ಆಗುತ್ತಿವೆ. ಅಲ್ಲಿ ಸುಮಾರು ಎರಡು ಲಕ್ಷ ಕಿಲೋವಾಟ್ಸ್ ಪವರ್ ಉತ್ಪತ್ತಿಯಾಗುತ್ತದೆ. ಆ ಪವರನ್ನೆಲ್ಲಾ ಆ ಚಿಕ್ಕ ದೇಶದವರೇನು ಉಪಯೋಗ ಮಾಡಬಲ್ಲರು? ಆ ಪವರ್ ಉತ್ಪತ್ತಿಗನುಗುಣವಾಗಿ ಯಾವ ಯಾವ ಪ್ರದೇಶದಲ್ಲಿ ಏನೇನು ಕೈಗಾರಿಕೆಯನ್ನು ಸ್ಥಾಪಿಸಬಹುದು ಎನ್ನುವುದನ್ನು ಸರ್ವೆಮಾಡಿ ಅದರಿಂದ ಅನೇಕ ಸ್ಥಳಗಳಿಗೆ ಅನುಕೂಲ ಕಲ್ಪಿಸತಕ್ಕ ಉದ್ದೇಶದಿಂದ ಆ ಕಾರ್ಯವನ್ನು ಕೈಕೊಂಡಿದ್ದಾರೆಯೇ ಹೊರತು ಕೇವಲ ಆ ಕೊಡಗಿಗಾಗಿಯೇ ಅದನ್ನು ಪ್ರಾರಂಭಿಸಿರುವುದಿಲ್ಲ. ಈಗ ಕೆಲವು ಅನಿವಾರ್ಯ ಪ್ರಸಂಗಗಳ ಪರಿಣಾಮದಿಂದ ಟ್ರಾವಂಕೂರಿನಲ್ಲಿ ಒಂದು ಕೋಟಿ 35 ಲಕ್ಷ ಜನಸಂಖ್ಯೆ ಮಾತ್ರ ಇದೆ; ಅಷ್ಟನ್ನೇ ಒಂದು ಪ್ರಾಂತ್ಯ ಮಾಡಲಾಗಿದೆ. ಮದ್ರಾಸ್ ಪ್ರಾಂತ್ಯದಲ್ಲಿ 3 ಕೋಟಿ ಜನ ಸಂಖ್ಯೆಯಾಗುತ್ತದೆ; ಆಂಧ್ರ ಪ್ರಾಂತ್ಯದ ಜನಸಂಖ್ಯೆ ಮೂರುವರೆ ಕೋಟಿ ಆಗುತ್ತದೆ. ಮಧ್ಯಪ್ರದೇಶದ್ದು 2 ಕೋಟಿ 60 ಲಕ್ಷವಾಗುತ್ತದೆ. ಆದರೆ ಮಧ್ಯ ಪ್ರಾಂತ್ಯದಲ್ಲೇಕೆ 2 ಕೋಟಿ ಚಿಲ್ಲರೆ ಜನಸಂಖ್ಯೆ ಇರಬೇಕು, ತಿರುವಾಂಕೂರಿನಲ್ಲಿ ಒಂದು ಕೋಟಿ ಚಿಲ್ಲರೆ ಕಡಮೆಯಾಗಲಿಲ್ಲವೇ ಎಂದು ಕೇಳತಕ್ಕದ್ದೇನು ಅಷ್ಟು ಜಾಣತನದ ಪ್ರಶ್ನೆಯಲ್ಲ. ಪರಿಸ್ಥಿತಿ ಹೇಗಿತ್ತೋ ಹಾಗಾಯಿತು. ಆದರೆ ಈಗಲೂ ತಿರುವಾಂಕೂರಿನವರು ಜಾಸ್ತಿ ಪ್ರದೇಶ ಸಿಕ್ಕಿದರೆ ಅವರೇನೂ ಬೇಡ ಎಂದು ಹೇಳುತ್ತಿಲ್ಲ. ಆಂಧ್ರದವರು ಇನ್ನೂ ಹೆಚ್ಚು ಹೆಚ್ಚು ಪ್ರದೇಶಕ್ಕಾಗಿ ವಿಶೇಷವಾಗಿ ಶ್ರಮಿಸುತ್ತಿದ್ದಾರೆ. ಆದರೆ ಹೀಗೆ ಇವರೇನೋ ಕೇಳುತ್ತಿರಬಹುದು. ಯಾರೂ ಹಾಗೆ ಕೊಡಲು ತಯಾರಾಗಿಲ್ಲ.

ಈ ದಿವಸ ಕೆಲವರು ಇಲ್ಲಿ ಏನು ಒಂದು ವಿಷಯವನ್ನು ಎತ್ತಿದ್ದಾರೆ ಅಂದರೆ—ಈ ಪ್ರಾಂತಗಳನ್ನು ಭಾಷಾವಾರು ಆಧಾರದಮೇಲೆ ವಿಂಗಡಿಸಿದರೆ ಇಂಡಿಯಾ ದೇಶದ ಯೂನಿಟಿ ಹೋಗುತ್ತದೆ ಎಂದು ವಾದ ಮಾಡಿದ್ದಾರೆ. ಇದು ನಿಜವಾದದ್ದಲ್ಲ. ಈ ಜಾತಿ ವಾದವಾಗಲಿ ಭಾಷಾ ವಾದವಾಗಲಿ ಮುಂದೆ ಇವುಗಳೊಂದೂ ಸ್ಥಿರವಾಗಿ ನಿಲ್ಲುವುದಿಲ್ಲ. ಇಂಡಿಯಾ ದೇಶದಲ್ಲಿ ಇನ್ನು ಮುಂದಕ್ಕೆ ನಿಲ್ಲುವುದು ಪಾರ್ಟಿ ಶಿಸ್ತುಗಳೊಂದೇ ಶಿವಾಯಿ ಮತ್ತೊಂದು ತಂತ್ರಕ್ಕೆ ಅವಕಾಶವಿರುವುದಿಲ್ಲ. ಈ ಹೊತ್ತು ಈ ಕಾಂಗ್ರೆಸ್ ಪಾರ್ಟಿ ಅಧಿಕಾರದಲ್ಲಿದೆ. ಇಂಥ ಒಂದು 'haves and have nots' ಬಲ ಈ ಭಾಷೆಗಾಗಲಿ ಅಥವಾ ಜಾತಿ ವಾದಕ್ಕಾಗಲಿ ಬರುವುದಿಲ್ಲ. ಈ ಭಾವನೆಗಳೆಲ್ಲಾ ತೀರ ಹಂಗಾಮಿಯಾದವುಗಳು. ಆದರೆ ಈ ದಿವಸ ಈ ದ್ವಿ ಕರ್ಣಾಟಕ ಚಳವಳಿ ಹೂಡಿರತಕ್ಕವರೆಲ್ಲಾ ಯಾವುದೋ ಒಂದು ತಮ್ಮ ಸ್ವಾರ್ಥ ಅಧಿಕಾರ ಲಾಲಸೆಗಳಿಂದ ಹೀಗೆ ವಾದ ಎತ್ತಿದ್ದಾರೆಯೇ ಶಿವಾಯಿ ಇದರಲ್ಲಿ ಶುದ್ಧಾಂಗವಾಗಿ ಏನೂ ಅರ್ಥವಿಲ್ಲ. ಕರ್ಣಾಟಕ ಪ್ರಾಂತ್ಯವಾದರೆ ಕೆಲವರಿಗೆ ನೋವಾಗುತ್ತದೆಂದು ಕೆಲವರು ಅಭಿಪ್ರಾಯ ಸೂಚಿಸಿದ್ದಾರೆ. ಅದು ಅವರ ಒಂದು ಭ್ರಮೆ. ಆ ರೀತಿ ಯಾರಿಗೂ ನೋವುಂಟು ಮಾಡುವ ಪ್ರಸಂಗ ಒದಗಲು ಇದರಲ್ಲಿ ಅವಕಾಶವಿಲ್ಲ. ಆ ಹೆದರಿಕೆಗೆ ಬುಡವೂ ಇಲ್ಲ. ನಮ್ಮನಮ್ಮ ಆಸ್ತಿಪಾಸ್ತಿಗಳು ನಮಗೇ ಉಳಿಯುತ್ತವೆ; ಅವುಗಳನ್ನು ಯಾರೇನೂ ಕಿತ್ತುಕೊಂಡು ಹೋಗುವುದಿಲ್ಲ. ಯಾರಿಂದ ಯಾರೂ ಸಾಯಬೇಕಾದದ್ದೂ ಇಲ್ಲ. ಅವರವರ ನಿಸ್ಪೃಹತೆ ಅವರನ್ನು ಉಳಿಸಿಯೇ ಉಳಿಸುತ್ತದೆ. ಮುಂದಿನ ಚುನಾವಣೆ ವೇಳೆಗೆ ಭ್ರಮೆಗಳೆಲ್ಲಾ ಒಂದೂ ನಿಲ್ಲುವುದಿಲ್ಲ. ಎಲ್ಲರೂ ಒಂದಾಗಿಯೇ ಆಗುತ್ತಾರೆ. ಮತ್ತೆ ಕೆಲವರು ಇನ್ನೊಂದು ವಾದ ಎತ್ತಿ ನಾಳೆ ಪ್ರಾಂತ್ಯಗಳು ದೊಡ್ಡದಾದಾಗ ನಾವು ಈ ಅಧಿಕಾರವರ್ಗದಲ್ಲಿರತಕ್ಕ ನೌಕರು ಮಾನೇರುಗಳಿಗೆ ಸಂಬಳ ಸಾರಿಗೆಗಳನ್ನು ಹೆಚ್ಚು ಮಾಡಬೇಕಾಗುತ್ತದೆ ಎಂದರು. ಹೌದು ಇದೇನೋ ನಿಜವಾದಂಥ ವಿಷಯ. ಆದರೆ ಈ ಪ್ರಶ್ನೆ ಇನ್ನೆವಿಟೆಬಲ್, ಆಗಿಯೇ ತೀರಬೇಕು. ನಾವೂ ಸಹ ನಮ್ಮ ಅಕ್ಕಪಕ್ಕದ ಪ್ರಾಂತ್ಯಗಳವರಂತೆ ಈ ನೌಕರರ ವಿಚಾರದಲ್ಲಿ ನಡೆದುಕೊಳ್ಳಲೇಬೇಕು. ಇದರಲ್ಲಿ ಎರಡು ಅಭಿಪ್ರಾಯಗಳಿರುವುದಿಲ್ಲ. ಅದಕ್ಕಾಗಿ ಈಗಾಗಲೇ ನಮ್ಮ ಸರ್ಕಾರದವರು ಪೇ ಸ್ಟ್ರಕ್ಚರ್ ಕಮಿಟಿ ಎಂದು ಒಂದು ಕಮಿಟಿಯನ್ನು ನೇಮಕ ಮಾಡಿದ್ದಾರೆ. ನಮ್ಮ ನೆರೆಹೊರೆಯವರು ಯಾವರೀತಿ ಈ ನೌಕರರಿಗೆ ಸಂಬಳ ಸಾರಿಗೆಗಳನ್ನು ಕೊಡುತ್ತಿದ್ದಾರೋ ಆ ರೀತಿ ನಾವೂ ಕೂಡ ಇಲ್ಲಿ ಕೊಡದಿದ್ದರೆ ನಮ್ಮ ನೌಕರರು ಹೇಗೆ ಸುಮ್ಮನಿರುತ್ತಾರೆ? ನ್ಯಾಯವಾಗಿ ಯಾರಾರಿಗೆ ಏನೇನು ಸಲ್ಲಬೇಕೋ ಅದು ಸಲ್ಲಲೇಬೇಕು. ಅವರಿಂದ ನ್ಯಾಯವಾಗಿ ಕೆಲಸಗಳು ನೆರವೇರಬೇಕೆಂಬ ಆಸೆಯಿದ್ದರೆ ಅವರ ನ್ಯಾಯವಾದ ಬೇಡಿಕೆಗಳಿಗೆ ಮನ್ನಣೆಯನ್ನು ಕೊಡಲೇಬೇಕು. ಈ ಹೊತ್ತು ನಾವು ಸುಮ್ಮನಿದ್ದರೂ ನಾಳೆ ಈ ಪ್ರಶ್ನೆಯನ್ನು ನಾವು ಬಗೆಹರಿಸಲೇಬೇಕಾಗಿದೆ.

ಇನ್ನು ಕೆಲವರು "ನಮ್ಮ ಮೈಸೂರು ಬಹಳ ಮುಂದುವರಿದ ದೇಶ, ಇಲ್ಲಿ ಕನ್ನಂಬಾಡಿ ಇಂಥಿಂಥ ದೊಡ್ಡ ಜಲಾಶಯಗಳಿವೆ" ಎಂದು ವಾದ ಮಾಡಿದರು. ಹೌದು ಇವೆ. ಆದರೆ ಆ ಉತ್ತರ ಕರ್ಣಾಟಕದಲ್ಲಿ ಇಂಥ ದೊಡ್ಡ ಜಲಾಶಯಗಳಿಲ್ಲವೇನು? ಇಲ್ಲಿ

ಕನ್ನಂಬಾಡಿ ಜಲಾಶಯವಿದ್ದರೆ, ಅಲ್ಲಿ ತುಂಗಭದ್ರ ಜಲಾಶಯವಿದೆ. ಆ ತುಂಗಭದ್ರ ಜಲಾಶಯದ ಕೆಳಗೆ ಆರು ಲಕ್ಷ ಎಕರೆ ಭೂಮಿ ನೀರು ಸಾಗುವಳಿಗೆ ಬರುತ್ತದೆ. ಆದಕಾರಣ ಈ ಒಂದು ವಾದದಿಂದಲೂ ಮೈಸೂರು ಮೈಸೂರಾಗಿಯೇ ಉಳಿಯಬೇಕೆಂಬ ವಾದದಲ್ಲಿ ಏನೂ ತಿರುಳಿಲ್ಲ. ಶ್ರೀ ಎಚ್. ಕೆ. ವೀರಣ್ಣ ಗೌಡರು ನಮ್ಮ ದೇಶವನ್ನು ಮುಂದಕ್ಕೆ ಒಂದು ರೋಡ್ ರೋಲರ್ ಮಾಡುತ್ತಾರೆ ಎಂದು ಹೇಳಿದರು. ಹೀಗೆ ಆಗಬಾರದೆಂಬ ಆಸೆ ಇವರಿಗಿದ್ದಿದ್ದರೆ ಇದನ್ನು ಹೀಗೆಯೇ ಉಳಿಸಿಕೊಳ್ಳಲು ಇವರು ತಮ್ಮ ಪ್ರಯತ್ನವನ್ನು ಇಲ್ಲಿಗೆ ನಾಲ್ಕೈದು ವರ್ಷಗಳ ಹಿಂದೆಯೇ ನಡೆಸಬೇಕಾಗಿತ್ತು. ಆ ದಿವಸ ಇವರಿಗೆ ಈ ಅರಿವೆಲ್ಲಾ ಉಂಟಾಗಿರಲಿಲ್ಲವೇನು? ಆ ಹೊತ್ತು ಎಚ್ಚರ ತಪ್ಪಿ ಈಗ ವಾದಮಾಡಿದರೇನು ಸುಖವಿದೆ? ಈ ಹಿಂದೆ ಆ ಫಜಲಾಲಿ ಸಮಿತಿ ಇಲ್ಲಿಗೆ ಬಂದಿದ್ದಾಗ ಇವರು ತಮ್ಮ ಅಭಿಪ್ರಾಯಗಳನ್ನು ಅವರಿಗೆ ಹೇಳಬಹುದಾಗಿತ್ತು. ಏಕೆ ಹೇಳಲಿಲ್ಲ ಆ ದಿವಸ? ಆದರೆ ಈ ಹೊತ್ತು ಇವರೇನೇ ಹೇಳಲಿ ಫಜ್ಲಾಲಿ ಸಮಿತಿಯವರು ಮೈಸೂರಿಗೆ ಬಂದಿದ್ದಾಗ ಇವರ ಪೈಕಿ ಯಾರೋ ಆ ಸಮಿತಿಯವರನ್ನು ಭೇಟಿ ಮಾಡಿರಲೇಬೇಕು. ಹಾಗೆ ಮಾಡಿಯೂ ಮಾಡಿದ್ದಾರೆ. ಆದರೆ ಈ ದಿವಸ ಆ ಸಮಿತಿಯ ಮುಂದೆ ನಾವುಗಳ್ಯಾರೂ ಹೋಗಲಿಲ್ಲ ಎಂದು ಹೇಳುತ್ತಿದ್ದಾರೆ. ಹಾಗೆ ಯಾರೂ ಹೋಗದೆ ಇದ್ದಿದ್ದರೆ ಫಜ್ಲಾಲಿ ಸಮಿತಿಯವರೇಕೆ ಈ ವರದಿಯಲ್ಲಿ ಈ ಜಾತಿ ವಿಚಾರ ತೆಗೆದುಕೊಂಡು ಅಂಕಿ ಅಂಶಗಳ ವಿವರಣೆಗಳೊಂದಿಗೆ ಪ್ರಸ್ತಾಪಿಸಬೇಕಾಗಿತ್ತು? ಆದ್ದರಿಂದ ಯಾರೋ ಹೋಗಿ ಈ ಅಭಿಪ್ರಾಯಗಳನ್ನೆಲ್ಲಾ ಅವರಲ್ಲಿ ಪ್ರಸ್ತಾಪ ಮಾಡಿದ್ದಾರೆ ಎನ್ನುವುದು ಮೇಲೆಯೇ ಎದ್ದು ಕಾಣುತ್ತಿದೆ. ಆದರೆ ನಾನು ಒಂದು ಅಂಶವನ್ನು ಮಾತ್ರ ಎಲ್ಲರಿಗೂ ಹೇಳಬೇಕಾಗಿದೆ. ಯಾರಾರು ಇತರರಿಗೆ ತಮ್ಮ ವಿಚಾರದಲ್ಲಿ ಶ್ರದ್ಧೆವಹಿಸಬೇಕು, ನಮಗಾಗಿ ಇತರರು ತ್ಯಾಗ ಮಾಡಬೇಕೆಂದು ಹೇಳುತ್ತಾರೋ ಅವರೆಲ್ಲರೂ ಮೊದಲು ತಾವು ತ್ಯಾಗಮನೋಭಾವವುಳ್ಳವರಾಗಿರಬೇಕು. ಹೀಗೆ ಎಲ್ಲರೂ ಈ ಮಾರ್ಗವನ್ನರಿತುಕೊಂಡು ನಡೆದರೆ ಯಾರಿಂದ ಯಾರಿಗೂ ನೋವಾಗುವುದಿಲ್ಲ. ಈ ಹೊತ್ತು ಇಲ್ಲಿ ಒಕ್ಕಲಿಗ ಕೋಮಿನವರಿಗೆ ಹೆಚ್ಚಿನ ಪ್ರಾಶಸ್ತ್ಯವಿತ್ತು, ಮುಂದೆಯೂ ಹೀಗೆಯೇ ಈ ಪ್ರಾಶಸ್ತ್ಯ ಇವರಿಗೆ ಉಳಿಯುವಂಥ ಒಂದು ಭರವಸೆಯನ್ನು ತೆಗೆದುಕೊಂಡಿದ್ದಾರೆಂಬ ಮಾತ ಸಹ ಹೊರಕ್ಕೆ ಬಂತು. ಆದರೆ ಹೀಗೆಯೇ ಎಲ್ಲಾ ಕಾಲದಲ್ಲೂ ನಡೆಯುವಂಥ ಭರವಸೆಯನ್ನು ಯಾರು ತಾನೆ ಕೊಡಲು ಸಾಧ್ಯವಿದೆ? ನಮ್ಮ ರಾಜಪ್ರಮುಖರ ವಿಚಾರವನ್ನೇ ನಾವು ತೆಗೆದುಕೊಳ್ಳೋಣ. ಅವರಿಗಾದರೂ ಸಹ ಯಾರು ತಾನೆ ಅಂಥ ಒಂದು ಗ್ಯಾರಂಟಿ ಕೊಡಲು ಸಾಧ್ಯವಿದೆ? ಆದುದರಿಂದ ಮುಂದಕ್ಕೆ ಹೀಗೆಯೇ ಒಕ್ಕಲಿಗರ ಜನಾಂಗ ಒಂದು ಪ್ರಾಮುಖ್ಯತೆಯನ್ನು ಗಳಿಸಿಕೊಳ್ಳಬೇಕೆಂಬ ಆಸೆ ಆಕಾಂಕ್ಷೆಗಳಲ್ಲಿ ಈ ದಿವಸ ಇವರೆಲ್ಲರೂ ಕೂಡ ಇವರ ಭಾಗದ ಒಂದು ಪೌಂಡ್ ಆಫ್ ಫ್ಲೆಷನ್ನು ಇತರರಿಗೆ ಬಿಟ್ಟುಕೊಡಲೇ ಬೇಕು. ಆಗಲೇ ಇವರಿಗೊಂದು ಮಾನ್ಯತೆ ದೊರೆತೀತು. ಹೀಗೆ ಇವೊತ್ತು ಯಾವ ಒಂದು ಕೋಮಿನವರೇ ಆಗಲಿ ತಾವು ಮುಂದಕ್ಕೂ ಉಳಿಯಬೇಕೆಂಬ ಆಸೆಯಿದ್ದರೆ, ಅವರೂ ಕೂಡ ಒಂದು ಮೇಲ್ಮಟ್ಟದಲ್ಲಿರಬೇಕೆಂಬ ಇರಾದೆಯಿದ್ದರೆ, ಅವರು ಇಂದು ತ್ಯಾಗಕ್ಕೆ ಸಿದ್ಧರಾಗಿರಬೇಕು. ಈ ಭಾವನೆಗಳನ್ನು ಇಟ್ಟುಕೊಂಡು ಯೋಚನೆಮಾಡಿದರೆ ಅಖಂಡ ಕರ್ಣಾಟಕ ಪ್ರಾಂತ್ಯರಚನೆಯಾಗುವುದು ಸರ್ವ ದೃಷ್ಟಿಗಳಿಂದಲೂ ಒಳ್ಳೆಯದು. ಅದಕ್ಕಾಗಿ ಈ ದಿವಸ ತಾವುಗಳೆಲ್ಲರೂ ಒಂದು ತ್ಯಾಗಬುದ್ಧಿಯಿಂದ ತಮ್ಮ ಭಾಗದ ಪೌಂಡ್ ಆಫ್ ಫ್ಲೆಷನ್ನು ಇತರರ ಅಭಿವೃದ್ಧಿಗಾಗಿ ಬಿಟ್ಟುಕೊಡಿ—ಇದರಿಂದ ನಿಮಗೆ ಮುಂದೆ ಲುಕ್ಸಾನೇನೂ ಇಲ್ಲ—ಇದರಿಂದ ನಿಮಗೆಲ್ಲಾ ನ್ಯಾಯವಾದ ರಿಬೇಟ್ ದೊರತೇ ದೊರೆಯುತ್ತದೆ. ಇದರಿಂದ ಸರ್ವರಿಗೂ ಅನುಕೂಲವಾಗುತ್ತದೆ ಎನ್ನುವುದು ನನ್ನ ಮುಖ್ಯಾಭಿಪ್ರಾಯ. ಆದ್ದರಿಂದ ಇದರಲ್ಲಿ ಯಾರೂ ಕೂಡ ಅಷ್ಟುಮಟ್ಟಿಗೆ ಉದ್ರಿಕ್ತರಾಗಲು ಅವಕಾಶವಿಲ್ಲ.

ಒಂದು ದೇಶವನ್ನು ಎರಡು administrative units ಆಗಿ ಮಾಡುವುದರಲ್ಲಿ ಇರತಕ್ಕ ಅನಾನುಕೂಲಗಳನ್ನು ಸ್ವಲ್ಪಮಟ್ಟಿಗೆ ಗಮನಿಸಿದರೆ ಗೊತ್ತಾಗುತ್ತದೆ. ಬೆಂಗಳೂರು capital ಆಗಿರುವುದು ಹೋಗುತ್ತದೆ ಎಂದು ಹೇಳಿದರು. ಒಂದು capitalನ್ನು ಹೊಸದಾಗಿ ಮಾಡಬೇಕಾದರೆ ಎಷ್ಟು ಕಷ್ಟವಿದೆ ಎಂಬುದನ್ನು ಯೋಚನೆಮಾಡಬೇಕು. ಆಂಧ್ರದಲ್ಲಿ ಕರ್ನೂಲನ್ನು capital ಆಗಿ ಮಾಡಬೇಕಾದರೆ ಎಷ್ಟು ಕಷ್ಟಪಟ್ಟರು, ಪಂಜಾಬಿನಲ್ಲಿ ಚಂಡೀಘರ್ capital ಮಾಡುವುದಕ್ಕೆ ಎಷ್ಟು ಕಷ್ಟಪಟ್ಟರು ಎಂಬುದನ್ನು ಯೋಚನೆಮಾಡಿದರೆ ಯಾರೂ ಆ ರೀತಿ ಮಾತನಾಡುವುದಿಲ್ಲ. ನಮ್ಮ ಈಗಿರತಕ್ಕ ಆರ್ಥಿಕ ಪರಿಸ್ಥಿತಿಯಲ್ಲಿ 20-30 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಯಾರೂ ತಯಾರಾಗಿಲ್ಲ, ಆದ್ದರಿಂದ ಇಂತಹ ಭಯವನ್ನು ಇಟ್ಟುಕೊಳ್ಳಬಾರದು. ಕರ್ಣಾಟಕಕ್ಕೆ ಸೇರುವುದರಿಂದ ನಮ್ಮಲ್ಲಿರುವ ಕೊರತೆ ಅಲ್ಲಿ ಸಿಕ್ಕುತ್ತದೆ. ಅಲ್ಲಿರುವ ಕೊರತೆ ಇಲ್ಲಿ ಸಿಕ್ಕುತ್ತದೆ. ವಿದ್ಯಾರ್ಥಿಗಳು ನಮ್ಮಲ್ಲಿ ಜಾಸ್ತಿ ಇದ್ದಾರೆ. ಕೈಗಾರಿಕೆ ಮತ್ತು ನೀರಾವರಿ ಪ್ರಾಜೆಕ್ಟ್‌ಗಳನ್ನು ಮಾಡುವುದಕ್ಕೆ ಅಲ್ಲಿ ಬೇಕಾದಷ್ಟು ಅವಕಾಶವಿದೆ. ಈ ಅವಕಾಶವನ್ನು ಉಪಯೋಗಿಸಿಕೊಳ್ಳಬಹುದು. ಉಭಯತ್ರರಿಗೂ ಉತ್ತಮವಾಗುತ್ತದೆ. ಅದು ಬಿಟ್ಟು administrationಗಾಗಿ ಕೋಟ್ಯಂತರ ರೂಪಾಯಿಗಳನ್ನು ಹೆಚ್ಚಿಗೆ ಖರ್ಚುಮಾಡುವುದು ಅನಾವಶ್ಯಕ. ಈ ಸಮಿತಿ ರಿಪೋರ್ಟನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಮಡಕಶಿರಾ, ಹೊಸೂರು, ಮುಂತಾದ ಪ್ರದೇಶಗಳ ವಿಚಾರದಲ್ಲಿ ಮೈನರ್ ಬದಲಾವಣೆಗಳನ್ನು ಮಾಡಿ ಆಯಾ ಪ್ರಾಂತಗಳ ಜನರ ಇಷ್ಟದ ಪ್ರಕಾರ ಸೇರಿಸಿಕೊಳ್ಳಬೇಕೆಂದು ಸೂಚಿಸುತ್ತೇನೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ (ಚಿಂತಾಮಣಿ).—ಸ್ವಾಮಿ, ಈ ರಾಜ್ಯಗಳನ್ನು ಪುನರ್ವಿಂಗಡಣೆ ಮಾಡತಕ್ಕ ಈ ಮಹತ್ಕಾರ್ಯದಲ್ಲಿ, ಈ ಕಮಿಷನ್ನಿನವರು ನಮ್ಮ ಇಂಡಿಯಾ ದೇಶದ ಒಂದು ಭೂಪಟವನ್ನು ಬದಲಾಯಿಸಿ ಅದಕ್ಕೆ ಹೊಸ ರೂಪವನ್ನು ಕೊಡತಕ್ಕ ಒಂದು ಮಹತ್ಕಾರ್ಯದಲ್ಲಿ, ಅದು ಯಾವ ರೀತಿ ಒಂದು ಆದರ್ಶರೂಪವಾಗಿ, ನಾಗರಿಕ ಕಾಲಕ್ಕೆ ತಕ್ಕಂತೆ ಬೇರೆ ದೇಶಗಳಿಗೆ ಒಂದು ಆದರ್ಶವಾಗಿರಬೇಕೆಂದು ಏನು ಉದ್ದೇಶಗಳು ಈ ವರದಿಯಲ್ಲಿ ಅಡಕವಾಗಬೇಕಾಗಿದೆಯೋ ಆ ಉದ್ದೇಶಗಳನ್ನು ನೇರವೇರಿಸದೆ, ಕೆಲವು ಇಂಡಿಯಾ ದೇಶದ ಪ್ರಭಾವಶಾಲಿಗಳ ಪ್ರಭಾವಕ್ಕೊಳಪಟ್ಟು ಅವರ ಕರ್ತವ್ಯಗಳನ್ನು ಈ ರಿಪೋರ್ಟಿನಲ್ಲಿ ಸರಿಯಾಗಿ ನಿರ್ವಹಿಸಿಲ್ಲವೆಂದು ಹೇಳಿ ಈ ವರದಿಯನ್ನು ವಿರೋಧಿಸದೆ ವಿಧಿ ಇಲ್ಲದಾಗಿ ಬಂದಿದೆ. ದೇಶದಲ್ಲಿ ಹೊಸ ಪ್ರಾಂತಗಳನ್ನು ರಚನೆ ಮಾಡತಕ್ಕ ಸಂದರ್ಭದಲ್ಲಿ ಆ ಪ್ರಾಂತಗಳು ಆಡಳಿತ ದೃಷ್ಟಿಯಿಂದ ಅಥವಾ ಇಂಡಿಯಾ ದೇಶದ ಒಂದು

(ಶ್ರೀ ಎಂ. ಸಿ. ಆಂಜನೇಯುರೆಡ್ಡಿ.)

ಭದ್ರತೆಯ ದೃಷ್ಟಿಯಿಂದ ಯಾವ ರೀತಿ ಇರಬೇಕೆಂದು ಈ ವರದಿಯಲ್ಲಿ ಏನು ಬರೆದಿದ್ದಾರೋ ಅದನ್ನೂ ಕೂಡ ಅವರು ಸರಿಯಾದ ರೀತಿಯಿಂದ ನಿರ್ವಹಿಸಿಲ್ಲ ಎಂದು ನಾನು ಹೇಳಬೇಕಾಗುತ್ತದೆ. ಈ ಹೊಸ ಪ್ರಾಂತ ಗಳ ವಿಸ್ತರಣೆ uniform ಆಗಿ ಅಥವಾ ಪ್ರಜಾ ಸಂಖ್ಯೆಗೆ ಸ್ವಲ್ಪ ಹೆಚ್ಚು ಕಡಿಮೆ ಇಷ್ಟೇ ಇರಬೇಕು ಎಂದು ಹೇಳಿ ಮಾಡಿಲ್ಲ. ಒಂದು ಕಡೆ 14 ಸಾವಿರ ಚದರಮೈಲಿ, ಮತ್ತೊಂದು ಕಡೆ 171 ಸಾವಿರ ಚದರ ಮೈಲಿ, ಹೀಗೆ Stateಗಳನ್ನು ನಿರ್ಮಾಣಮಾಡಿದ್ದಾರೆ. ಪ್ರಜಾಸಂಖ್ಯೆ ತೆಗೆದುಕೊಂಡರೂ ಅದೂ ಕೂಡ ಒಂದು ಕಡೆ 44 ಲಕ್ಷ ಮತ್ತೊಂದುಕಡೆ 6 ಕೋಟಿ 32 ಲಕ್ಷ, ಈ ರೀತಿ ಮಾಡಿ ಈ ಕಾರ್ಯವನ್ನೂ ಕೂಡ ಅವರು ಸರಿಯಾಗಿ ನಿರ್ವಹಿಸಿಲ್ಲ ಎಂದು ಹೇಳಬೇಕಾಗಿದೆ.

ಆಮೇಲೆ ಭಾಷಾವಾರು ಪ್ರಾಂತಗಳು. ಈ ಪ್ರಾಂತಗಳನ್ನು ಭಾಷೆಯ ಆಧಾರದಮೇಲೆ ಮಾಡಿದ್ದಾರೆಯೇ ಎಂದು ಯೋಚನೆಮಾಡಿದರೆ ಅದರಲ್ಲೂ ಕೂಡ ಅವರು ತಮ್ಮ ಕರ್ತವ್ಯವನ್ನು ಖಚಿತವಾಗಿ ನಿರ್ವಹಿಸಿಲ್ಲ ಎಂದು ಹೇಳದೆ ವಿಧಿಯಿಲ್ಲ. ಮೈಸೂರು ಸ್ಟೇಟ್‌ನಲ್ಲಿ 20 ಲಕ್ಷ ತೆಲುಗು ಮಾತನಾಡತಕ್ಕ ಜನರನ್ನು ಅವರು ಸ್ವಲ್ಪ ಮಾತ್ರವಾದರೂ ಗಣನೆಗೆ ತೆಗೆದುಕೊಂಡಿಲ್ಲ. ಮೈಸೂರು ದೇಶದ ಪ್ರಜಾಸಂಖ್ಯೆಯಲ್ಲಿ ನಾಲ್ಕರಲ್ಲಿ ಒಂದು ಭಾಗದಷ್ಟು ತೆಲುಗು ಮಾತನಾಡುವ ಈ ಜನರ ಒಂದು ಹಿತರಕ್ಷಣೆಯನ್ನು ಅವರು ಗಮನಿಸಿಲ್ಲ. ಅಲ್ಲದೆ ಕೋಲಾರ ಡಿಸ್ಟ್ರಿಕ್ಟಿನಲ್ಲಿ ನೂರಕ್ಕೆ ಐವತ್ತನಾಲ್ಕು ಜನರು ತೆಲುಗು ಮಾತನಾಡುತ್ತಾರೆ, ಕನ್ನಡದವರು ಇಪ್ಪತ್ತು ಜನರೆಂದು ಅವರ ವರದಿಯಲ್ಲಿ ಬರೆದಿದ್ದಾರೆ. ಭಾಷೆಯನ್ನೇ ಖಚಿತವಾಗಿ ಒಂದು ಆಧಾರವನ್ನಾಗಿಟ್ಟುಕೊಂಡಿದ್ದರೆ, ಖಚಿತವಾಗಿ ಅವರ ಗಮನಕ್ಕೆ ಬಂದಿರತಕ್ಕ ಶೇಕಡ 54 ತೆಲುಗು ಜನ ಇರತಕ್ಕ ಕೋಲಾರ ಡಿಸ್ಟ್ರಿಕ್ಟ್ ಹಾಗೂ ಬೆಂಗಳೂರು ಡಿಸ್ಟ್ರಿಕ್ಟ್‌ನ ಕೆಲವು ಪ್ರದೇಶಗಳೂ, ಆನೇಕಲ್, ಚಿತ್ರದುರ್ಗ ಡಿಸ್ಟ್ರಿಕ್ಟಿನ ಕೆಲವು ಪ್ರದೇಶಗಳೂ, ತುಮಕೂರು ಡಿಸ್ಟ್ರಿಕ್ಟಿನ ಕೆಲವು ಪ್ರದೇಶಗಳೂ ಮತ್ತು ಈ ರೀತಿ ತೆಲುಗು ಮಾತನಾಡತಕ್ಕ ಪ್ರದೇಶಗಳು ಏನು ಇವೆಯೋ ಅವೆಲ್ಲವೂ ಆಂಧ್ರದ borderಗೆ ಅಂಟಿಕೊಂಡಿರುವುದರಿಂದ ಅವುಗಳನ್ನು ಆಂಧ್ರಕ್ಕೆ ಸೇರಿಸಲು ಸಲಹೆ ಮಾಡಬಹುದಾಗಿತ್ತು. ಅವರು ಆ ರೀತಿ ಕರ್ತವ್ಯ ನಿರ್ವಹಣೆಮಾಡದೇ ಇರುವುದರಿಂದ ಭಾಷೆಯ ಆಧಾರವನ್ನೇ ಅವರು ಖಚಿತವಾಗಿ ಇಟ್ಟುಕೊಂಡಿಲ್ಲ ಎಂದು ಹೇಳಬೇಕಾಗಿದೆ. ಕೋಲಾರವನ್ನು ಆಂಧ್ರಕ್ಕೆ ಸೇರಿಸದೆ ಕರ್ಣಾಟಕಕ್ಕೆ ಸೇರಿಸುವ ವಿಚಾರದಲ್ಲಿ ಒಂದು ಮಾತನ್ನು ಲೌಕಿಕವಾಗಿ ಬರೆದಿದ್ದಾರೆ. ಕೋಲಾರದಲ್ಲಿ ಒಂದು ಚಿನ್ನದ ಗಣಿ ಇದೆ, ಅದು ದೊಡ್ಡ ಕೈಗಾರಿಕೆ. ಅದಕ್ಕೆ ಮೈಸೂರು ಸರ್ಕಾರದವರು ಸಲೀಸಾಗಿ, ಸುಲಭ ದರದಲ್ಲಿ ವಿದ್ಯುಚ್ಛಕ್ತಿ ಸಹಾಯ ಮಾಡುತ್ತಿದ್ದಾರೆ. ಅದೂ ಅಲ್ಲದೆ ಮೈಸೂರನ್ನು ಹೊಂದಿಕೊಂಡಿದೆ, ಕೋಲಾರ ಡಿಸ್ಟ್ರಿಕ್ಟಿನವರಿಗೆ ಕರ್ನೂಲ್ ಆಗಲಿ, ಹೈದರಾಬಾದ್ ಆಗಲಿ ಬಹಳ ದೂರವಾಗುತ್ತದೆ, ಬೆಂಗಳೂರು ಹತ್ತಿರವಾಗುತ್ತದೆ ಎಂಬ ಕಾರಣಗಳನ್ನು ಕೊಟ್ಟಿದ್ದಾರೆ. ಬೆಂಗಳೂರು ಯಾವಾಗಲೂ capital ಆಗಿ ಇಟ್ಟುಕೊಳ್ಳುತ್ತಾರೆಂದು ಯಾವ ಆಧಾರದಮೇಲೆ ಹೇಳುತ್ತಾರೋ ಅದನ್ನು ನಾನಂತೂ ನಂಬುವುದಕ್ಕೆ ಸಾಧ್ಯವಿಲ್ಲ. ಅದು ಸಾಧ್ಯವೂ ಆಗುವುದಿಲ್ಲ. ಈ ಸಭೆಯಲ್ಲಿ ಬೇರೆ ದೇಶದ ಜನಗಳನ್ನು ಸೇರಿಸಿಕೊಳ್ಳತಕ್ಕ ಸಂದರ್ಭದಲ್ಲಿ ಏನೊಂದು ಉದಾರ ಮನೋಭಾವವನ್ನೂ ಸ್ವಾರ್ಥತ್ಯಾಗವನ್ನೂ ತೋರಿಸುತ್ತೇವೋ ಅದನ್ನೇ capital ಆಗಿ ಇಲ್ಲಿಂದ ಬದಲಾವಣೆ ಮಾಡುವುದಕ್ಕೂ ನಾವು ತೋರಿಸಬೇಕಾಗುತ್ತದೆ. ಏಕೆಂದರೆ, ನಾವು ಹತ್ತಿರದಲ್ಲಿದ್ದು ಸುಖವನ್ನು ಅನುಭವಿಸಿಕೊಂಡು 400-500 ಮೈಲಿಗಳಿಂದ ಬರತಕ್ಕವರಿಗೆ ತೊಂದರೆಕೊಡುವುದು ತಪ್ಪಾಗುತ್ತದೆ. ಆಗಲೂ ಕೂಡ ನಾವು ತ್ಯಾಗದಿಂದ ಒಪ್ಪಿಕೊಳ್ಳಬೇಕಾಗಿ ಬರುತ್ತದೆ. ಗಣಿಗಳ ವಿಚಾರದಲ್ಲಿ ಸುಲಭ ದರದಿಂದ ವಿದ್ಯುಚ್ಛಕ್ತಿ ಸಹಾಯಮಾಡುತ್ತಿದ್ದಾರೆ, ಆದ್ದರಿಂದ ಅವರು ಮೈಸೂರಿನಲ್ಲಿ ಇರಬೇಕೆಂದು ಹೇಳುತ್ತಾರೆ. ಸ್ವಾಮಿ, ಮೈಸೂರು ಸರ್ಕಾರದವರು ಕೋಲಾರದ ಜನಗಳನ್ನು ಉದ್ಧಾರಮಾಡುವುದಕ್ಕೋಸ್ಕರ ವಿದ್ಯುಚ್ಛಕ್ತಿ ಸಹಾಯ ಮಾಡಲಿಲ್ಲ. ಅಲ್ಲಿಂದ ಭಂಗಾರ ಎತ್ತಿಕೊಂಡು ಬರತಕ್ಕ ಆದಾಯಕ್ಕೋಸ್ಕರ ಮಾಡಿದ್ದಾರೆ. ಅದೇ ಒಂದು ಕಾರಣ ಎಂದು ನಾನು ಹೇಳುವುದಕ್ಕಾಗುವುದಿಲ್ಲ. ಅಲ್ಲದೆ ಮೇಲ್ಮನೆಯಲ್ಲಿ ನನ್ನ ಮಾನ್ಯ ಮಿತ್ರರಾದ ಶ್ರೀ ಡಿ. ವೆಂಕಟರಾಮಯ್ಯನವರು ಕೋಲಾರದ ಜನ ಕರ್ಣಾಟಕವನ್ನು ಸ್ವಾಗತಿಸಿದ್ದಾರೆ ಎಂದು ಮಾತನಾಡಿದ್ದಾರೆ. ಖಂಡಿತ ಅದು ಸಾಧ್ಯವಿಲ್ಲ. ಕೋಲಾರದ ಜನ ಇದುವರೆಗೆ ಯಾರೂ ಬೇರೆ ಹೋಗಬೇಕೆಂದು ಕೇಳುತ್ತಾ ಇಲ್ಲ ಎಂಬುದಾಗಿ ಅನೇಕ ಮಿತ್ರರು ಹೇಳುತ್ತಾ ಇದ್ದಾರೆ. ಹಾಗೆ ಕೇಳತಕ್ಕ ಸಂದರ್ಭ ಇದುವರೆಗೆ ಒದಗಿಲ್ಲ. ಇದುವರೆಗೆ ಮೈಸೂರು ಮೈಸೂರಾಗಿರುತ್ತದೆ ಎಂದು ಆಶಿಸಿದ್ದೆವು. ಹೀಗೆ ಜನತೆಯ ಆಶೋತ್ತರಗಳೂ ಈಡೇರುತ್ತವೆ, ಮೈಸೂರಿನಲ್ಲಿ ಒಂದು ಸುಭದ್ರ ಸರ್ಕಾರ ಇದೆ, ಇಲ್ಲಿನ ವ್ಯವಸ್ಥೆ ಭದ್ರವಾಗಿದೆ, ಇದು ಬಹಳ ಅನುಕೂಲವಾಗಿದೆ, ಇದರಲ್ಲಿ ಇರೋಣ ಎಂದು ನಾವು ಇದುವರೆಗೂ ಬಯಸುತ್ತಿದ್ದೆವು. ಕರ್ಣಾಟಕ ಮಾಡಿಕೊಂಡರೆ ಗುಲ್ಬರ್ಗದ ಕನ್ನಡ ನಮಗೆ ಅರ್ಥವಾಗುವುದಿಲ್ಲ. ಕೋಲಾರದ ಜನ ಅವರನ್ನು ಹೊಂದಿಕೊಂಡು ಇರುವುದಕ್ಕೆ ಒಪ್ಪಿಕೊಳ್ಳುವುದಿಲ್ಲ ಎಂದು ಹೇಳುತ್ತೇನೆ. ಎರಡು ಕರ್ಣಾಟಕ ಮಾಡಿದರೆ ಬಹಳ ತೊಂದರೆ. ಇಂಡಿಯಾ ದೇಶವೆಲ್ಲಾ ಒಂದು ಎಂಬ ಅಭಿಪ್ರಾಯವನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕೆಂದು ಮಾನ್ಯ ಸ್ನೇಹಿತರು ಅನೇಕರು ಹೇಳಿದ್ದಾರೆ. ಎರಡು ಕರ್ಣಾಟಕವಾದರೆ ಇಂಡಿಯಾದೇಶದ ಭದ್ರತೆಗೆ ಧಕ್ಕೆ ಬರುತ್ತದೆ ಎಂದು ಹೇಳುವಾಗ ನಾನು ಕೇಳುತ್ತೇನೆ: 16 ಸಂಸ್ಥಾನಗಳನ್ನು ಏತಕ್ಕೆ ಮಾಡಬೇಕಾಗಿತ್ತು; ಉತ್ತರ ಪ್ರಾಂತ, ದಕ್ಷಿಣ ಪ್ರಾಂತ ಎಂದು ಎರಡು ಪ್ರಾಂತಗಳನ್ನು ಮಾತ್ರ ಮಾಡಿಕೊಂಡಿದ್ದರೆ ಆಗ ಇಂಡಿಯಾ ದೇಶದ ಭದ್ರತೆಯನ್ನು ಹೆಚ್ಚಾಗಿ ಕಾಪಾಡಬಹುದಾಗಿತ್ತಲ್ಲವೇ? ಇದನ್ನು ಒಂದೇ ಪ್ರಾಂತಮಾಡಿದರೆ ಚೆನ್ನಾಗಿರುತ್ತದೆ. ಎಷ್ಟೋ ವರ್ಷಗಳಿಂದ ಒಂದುಕೋಟಿ ಪ್ರಜಾಸಂಖ್ಯೆಯಲ್ಲಿದ್ದು ಆಡಳಿತ ಚೆನ್ನಾಗಿರುತ್ತದೆ, ಆದರ್ಶವಾಗಿ ಒಂದು ಹೆಸರು ವಾಸಿಯನ್ನು ಪಡೆದಿದೆ, ಇಂತಹ ಸ್ಟೇಟನ್ನು ಬದಲಾಯಿಸಿ ಬೇರೆ ಪ್ರಾಂತ್ಯಕ್ಕೆ ಸೇರಿಸುವಾಗ ಅದಕ್ಕೆ ಹೊಸ ಹೆಸರನ್ನೂ ಕೂಡ ಕೊಡಬೇಕು ಎಂದು ಮುಖ್ಯಮಂತ್ರಿಗಳು ಹೇಳಿದರು. ಹೆಸರು ಯಾವುದು ಕೊಟ್ಟರೆ ಏನು? ಕರ್ಣಾಟಕ "ಮೈಸೂರು ಸಹಿತ ಕರ್ಣಾಟಕ" ಎಂದು ಹೇಳಿದರು. ಮೈಸೂರನ್ನು ಬಿಟ್ಟು ಕರ್ಣಾಟಕ ಎಂದು ಹೇಳಿದ್ದರೆ, ನಾನು ವಾದ ಮಾಡುತ್ತಿರಲಿಲ್ಲ. ಕರ್ಣಾಟಕ ಎಂದು ಹೇಳಿದಮೇಲೆ ಅದನ್ನು ಮೈಸೂರು ಎಂದು ಕರೆಯುವುದು, ಈ ವಿಚಾರದಲ್ಲಿ ವಿರೋಧವಾಗಿರುವ ಮೈಸೂರು ಜನತೆಯ ಮೇಲೆ ಒಂದು ಪರಿಣಾಮವಾಗಲಿ ಎಂಬ ಕಾಲಕ್ಕೆ ತಕ್ಕಂಥ ಮಾತೇ

ಹೊರತು ಅದು ಕರ್ಣಾಟಕ ರಾಜ್ಯವೇ ಎಂದು ಖಚಿತವಾಗಿ ಹೇಳಬಹುದಾಗಿದೆ. ಶ್ರೀ ಭೀಮಪ್ಪನಾಯಕರು, 'ಶ್ರೀ ನಾಗಯ್ಯರೆಡ್ಡಿಯವರು ಒಂದು ವರದಿಯನ್ನು ಒಪ್ಪಿಸಿದ್ದಾರೆ, ಅದು ಏನು ಎಂಬುದನ್ನು ಹೇಳುವುದಿಲ್ಲ' ಎಂದು ಹೇಳಿದರು. ಅದೇನೆಂಬುದು ನನಗೆ ಚೆನ್ನಾಗಿ ಗೊತ್ತಿದೆ. ಆಂಧ್ರಕ್ಕೆ ಹೋಗಬೇಕೆಂದು ಯಾರೂ ಇಷ್ಟಪಡುವುದಿಲ್ಲ ಎಂದು ಹೇಳಿದ್ದಾರೆ. ಈ ರೀತಿ ಹೇಳುವಾಗ ಅವರು ಕೋಲಾರ ಡಿಸ್ಟ್ರಿಕ್ಟಿನ ಯಾವ ಜನರ ಅಭಿಪ್ರಾಯವನ್ನು ಪ್ರತಿಬಿಂಬಿಸುತ್ತಾರೋ ನನಗೆ ಗೊತ್ತಿಲ್ಲ. ನಾನು ಅಲ್ಲಿನ ಜನಗಳ ಪ್ರತಿನಿಧಿಯಾಗಿ ಬಂದಿರತಕ್ಕವನು. ಅಲ್ಲಿನ ಜನರ ವಿಚಾರ ಚೆನ್ನಾಗಿ ಗೊತ್ತಿದೆ. ಏನೋ ಒಂದು ಭ್ರಾಂತಿಯನ್ನು ನಾವು ಇಟ್ಟುಕೊಂಡು ಮೈಸೂರು ಮೈಸೂರಾಗಿ ಉಳಿಯಲಿ ಎಂದು ಪ್ರಯತ್ನಪಡುತ್ತಿದ್ದೇವೆ. ಶ್ರೀ ನಾಗಯ್ಯರೆಡ್ಡಿಯವರು ಮೈಸೂರು ಮೈಸೂರಾಗಿ ಉಳಿಯಲಿ ಎಂದು ಹೇಳಿದ್ದಾರೆಯೇ ಹೊರತು ಕರ್ಣಾಟಕಕ್ಕೆ ಸೇರಬೇಕು ಎಂದು ಹೇಳಲಿಲ್ಲ. ಅದು ನನಗೆ ಚೆನ್ನಾಗಿ ಗೊತ್ತಿದೆ. Law Association ರಾಜಕಾರಿಣಿಗಳು ಕರ್ಣಾಟಕವನ್ನು ಸ್ವಾಗತ ಮಾಡಿದರೆ ಇಷ್ಟು ವಿಚಾರಕ್ಕೆ ಮಾತ್ರ ಇರಬಹುದು: ಬೆಂಗಳೂರು capital ಆಗಿರುತ್ತದೆ, ಲಾಯರ್ ಕೆಲಸಕ್ಕೆ ಅನುಕೂಲವಾಗುತ್ತದೆ ಎಂದು ಹಾಗೆ ಹೇಳಿರಬಹುದು. ಮತ್ತೊಂದು ರಾಜಕೀಯ ಕಾರಣ, ಒಂದು ಕೋಮಿನ ಜನರು ಬಹಳ ಜಾಸ್ತಿ ಇದ್ದಾರೆ, ರಾಜಕೀಯದಲ್ಲಿ ಅವರ ಆಕಾಂಕ್ಷೆಗೆ ಆತಂಕವಾಗಿ ಘಟನೆಗಳು ನಡೆದಿದ್ದರಿಂದ ಅವರು ನಿರುತ್ಸಾಹದಿಂದ ಆ ರೀತಿ ಹೇಳಿರಬಹುದು. ಆದರೆ ತೆಲುಗು ಮಾತನಾಡುವವರು ಕನ್ನಡ ಭಾಷೆಯ ಆಧಾರದ ಮೇಲೆ ದೇಶವನ್ನು ಕಟ್ಟತಕ್ಕ ಸಂದರ್ಭದಲ್ಲಿ ಅದನ್ನು ಖಂಡಿತ ಒಪ್ಪುತ್ತಾ ಇಲ್ಲ. ಸಾಮಾನ್ಯ ಜನ ಇದಕ್ಕೆ ಒಪ್ಪುವುದಿಲ್ಲ, ಒಪ್ಪುವುದಕ್ಕಾಗುವುದಿಲ್ಲ. ಒಟ್ಟಿನಲ್ಲಿ ಎರಡು ಸ್ಟೇಟುಗಳು ಆಗಬೇಕು, ಮೈಸೂರು ಮೈಸೂರಾಗಿ ಉಳಿಯಲಿ, ಕನ್ನಡ ಪ್ರಾಂತ್ಯ ಇನ್ನೊಂದು ಮಾಡಿಕೊಳ್ಳಲಿ ಎಂದು ನಾನು ಕೂಡ ಒಂದು ತಿದ್ದುಪಡಿ ಕೊಟ್ಟಿದ್ದೆ. ಇದನ್ನು ಶೇಷಾದ್ರಿ ಸಮಿತಿ ರಿಪೋರ್ಟ್ ಮೇಲೆ ಮಾತನಾಡುವಾಗಲೂ ಹೇಳಿದೆ. ಈಗಲೂ ಕೂಡ ಮೈಸೂರು ಮೈಸೂರಾಗಿಯೇ ಉಳಿಯುವ ಪ್ರಯತ್ನ ಮಾಡಬೇಕು. ಆ ರೀತಿ ಮಾಡದೇ ಇದ್ದ ಪಕ್ಷದಲ್ಲಿ ತೆಲುಗು ಜನರು ಕಷ್ಟಕ್ಕೀಡಾಗುತ್ತಾರೆಂದು ಈ ವರದಿಯನ್ನು ವಿರೋಧಿಸುತ್ತೇನೆ.

4-30 P.M.

Sri M. V. RAMA RAO (Tumkur).—Mr. Speaker, Sir, I welcome the recommendations of the States Reorganisation Commission with reference to the State of Mysore and the proposal to form a United Karnataka State including the whole of Mysore as suggested in the amendment moved by the Chief Minister and including the other parts adjoining the present State of Mysore as mentioned in the subsequent paragraphs of that amendment. Many arguments have been addressed for and against the recommendations contained in the Report of the States Reorganisation Commission. I have no intention of repeating any part of those arguments, because I am sure the House has heard practically everything that could have been said on the one or the other side of this question.

But there are one or two other things that I wish to say. The first of those things is that it is regrettable that unfair comments have been made against the members of the Commission. If a certain viewpoint held by Hon'ble Members has not found sufficient expression before the States Reorganisation Commission, it certainly was not the fault of the Commission, but probably the fault was on the part of those who felt bound to obey the mandate of a Party which today does not seem to hold any terror for them and which does not inspire much respect in their hearts today. Various comments have also been made against what has been called the Congress High Command and the party authorities and the party hierarchy. To me it appears that those comments and those criticisms have really no bearing on the course of the debate on this Report, because the inside working of a political party machine is no concern of this House. What this House is really concerned with is the report and what is contained in the Report. Whether we wish to agree with what is said in it or whether we do not wish to agree with what is said in it we cannot import into the debate matters of such extraneous character as the directives issued from somewhere else to members of one political party or the internal dissensions of the party itself or what transpired at an *in camera* session of a political party or organisational meeting. It is very much to be deplored and I personally very much deprecate the disclosures attempted to be made by certain Hon'ble Members of this House of matters relating to those organisational proceedings and I take this opportunity of saying that it would have added to the quality of the debate and to the strength of their arguments if those references had been omitted.

(SRI M. V. RAMA RAO.)

Then the second thing I wish to say is that in my own opinion three persons of greater competence, greater integrity and greater capacity for being objective and dispassionate could certainly not have been found in India. I have the privilege of personal acquaintance with at least two members of this Commission. The Chairman of this Commission has held the highest judicial post that is open to a competent and qualified person in this country. He has been the Chief Justice of the Patna High Court and he also has been a judge of the Federal Court and when the Supreme Court of India was inaugurated in 1950, Mr. Justice Fazl Ali was one of the Judges who constituted the Supreme Court of Free India. To cast aspersions upon their impartiality, to doubt the integrity or the objectivity of a person like Dr Kunzru who is connected with the Servants of India Society founded by Gokhale of revered memory and to cast aspersions and to make insinuations against a person of the stature of Sardar Panikkar, who has been our ambassador in Communist China and in Egypt, to make insinuations against persons of their eminence, I should like to say, was not fair. And, as I said, it is very much to be regretted that those comments have been made.

Sir, the Report contains and provides to every person who wishes to carry on a debate on this Report with all arguments he needs, both for and against. The principles upon which the reorganisation of States has been suggested and concrete proposals have been formulated have been very clearly laid down in the Report itself. These principles, I should like to remind some of my Hon'ble friends, are like surgical instruments and only the skilled persons who are skilled in the use of those instruments can use them with any prospect of doing good to others. Angry men who try to use those surgical instruments can only hurt each other or hurt themselves. I wish the violence that was contained in some of the speeches had been avoided. I wish that challenges had not been flung across the floor of this House at persons who are in office today by those who till yesterday were more loyal than anyone else, and I wish that instead of throwing challenges to others on the floor of this House, they had set an example by resigning their seats and seeking re-election if only to prove that they believe in what they have said and have courage of conviction. That would be a very honourable, straight forward and honest way of advocating a cause. Then, Sir, I should like to say that though a great amount of heat was generated by the violent speeches made by gentlemen on this or the other side of the House, some light was also generated. But I am sorry to say that that light shed a very lurid glow over the prospects of future friendliness and future fraternal feeling amongst people who have a common destiny to fulfil. It is very unfortunate that a certain amount of hostility has been exhibited at the prospect of other citizens of India being put under a common administration with those who have had the privilege of having their own administration for a number of years past. I ask whether the content of our feeling of nationalism, whether the content of our feeling of Indian citizenship, is really as narrow as all that. I am sure it is not. Angry men say and do things which are disagreeable to themselves and to others. Only, they will realise it after their anger has passed away. I am sure this anger and this exhibition of violence and heat and passion is a passing phase and when that phase has passed and when anger has disappeared, they will become sweet, reasonable, friendly and fraternal as before.

Sir, I once again say that I welcome the recommendations contained in the Report of the States Reorganisation Commission for the formation of a Karnataka State and I also support the amendment which the Chief Minister has moved.

ಶ್ರೀ ಟಿ. ಹನುಮಯ್ಯ (ಹಿರಿಯೂರು—ಅನುಸೂಚಿತ ಜಾತಿಗಳು).—ಸ್ವಾಮಿ, ಈ ರಾಜ್ಯ ಪುನರ್ವಿಂಗಡಣಾ ಸಮಿತಿಯ ವರದಿಯನ್ನು ಸ್ವಾಗತಿಸುತ್ತಾ, ಕೆಲವು ವಿಷಯಗಳನ್ನು ಮಾನ್ಯಸಭೆಗೆ ತಿಳಿಸಲು ಇಚ್ಛಿಸುತ್ತೇನೆ. ಈ ಸಭೆಯಲ್ಲಿ ಕೆಲವರು ಬಹಳ ಗೊಂದಲಕ್ಕೆ ಸಿಕ್ಕಿದ್ದಾರೆಂದು ಎನಿಸುತ್ತದೆ. ಏಕೆಂದರೆ, ಸಾಧಾರಣವಾಗಿ ಇಡೀ ಪ್ರಪಂಚದಲ್ಲಿ ಯಾವ ಒಂದು ದೇಶವಾಗಲಿ ಅದು

ತಾನು ಇನ್ನೂ ವಿಶಾಲವಾಗಬೇಕು, ಇನ್ನೂ ಮುಂದೆ ಬರಬೇಕು ಎಂದು ಹೇಳುವಾಗ, ಇಲ್ಲಿ ನಮ್ಮ ದೇಶ ದೊಡ್ಡದಾಗುತ್ತದೆ ಎಂದು ಹೇಳಿದರೆ ಬೇಡ ಎಂದು ಹೇಳುವ ವಾದವನ್ನು ಕೇಳಿ ನನಗೆ ಆಶ್ಚರ್ಯವಾಗುತ್ತದೆ! ಸಾಧಾರಣವಾಗಿ ನಮ್ಮ ವ್ಯವಸಾಯಗಾರರಲ್ಲಿ ಒಬ್ಬನಿಗೆ 50 ಎಕರೆ ಜಮೀನಿದ್ದರೆ ಇನ್ನೂ ನೂರು ಎಕರೆ ಬರುವುದಾದರೆ, ಅದು ಬಂಜರಾದರೂ, ಬರಲಿ ಎಂದು ಹೇಳುತ್ತಾನೆ. ಅದು ಫಲವತ್ತಾಗಿರಲಿ, ಇಲ್ಲದಿರಲಿ, ತನ್ನ ಜಮೀನಿನ ವಿಸ್ತೀರ್ಣ ಹೆಚ್ಚಲೆಂದು ಬಯಸುತ್ತಾನೆ. ಹೀಗಿರುವಾಗ ನೆರೆಹೊರೆಯವರು, ನಮ್ಮ ಪಕ್ಕದಲ್ಲಿರುವವರು ಪ್ರಜಾಪ್ರಭುತ್ವದಡಿಯಲ್ಲಿ ನಿಮ್ಮೊಡನಿರುತ್ತೇವೆ ಎಂದು ಹೇಳಿದರೆ ಬೇಡಿ ಎನ್ನುತ್ತಾರೆ! ಯಾರೋ ಪಾಶ್ಚಾತ್ಯ ದೇಶದವರೋ ಬೇರೆ ಯಾವ ದೇಶದವರೋ ಅಮೆರಿಕಾದೇಶದವರೋ ಬಂದು ನಮಗೇನೋ ಮಾಡುತ್ತಾರೆ ಎನ್ನುವಹಾಗೆ, ಬರುತ್ತಿರುವವರು ಸಮುದ್ರದಾಚೆಯಿಂದ ಬರುತ್ತಿದ್ದಾರೆ ಎಂಬ ಭಾವನೆಯಿಂದ ಕೆಲವರು ಹೆದರುತ್ತಿದ್ದಾರೆ. ಇದನ್ನು ನೋಡಿ ಆಶ್ಚರ್ಯವಾಗುತ್ತಿದೆ. ಅಲ್ಲದೆ ಇನ್ನೊಂದು ವಿಷಯ ಹೇಳುತ್ತಿದ್ದಾರೆ. ಜಾತಿಯ ಗೊಂದಲ ಎರಡು ಆನೆಗಳು ನಿಂತಹಾಗೆ ನಿಂತಿದೆ. ಈ ಎರಡು ಪಂಗಡದ ಜನರೂ ಈ ರಾಜ್ಯ ಇನ್ನಾರದೂ ಅಲ್ಲ ಎಂದು ತಿಳಿದುಕೊಂಡಿರುವ ಹಾಗೆ ಕಾಣುತ್ತದೆ. ನನಗೆ ಕೆಲವು ಮಾನ್ಯ ಸದಸ್ಯರು ಈ ವಿಚಾರ ಹೇಳಿದಾಗ, ಇವರದೇ ಇಷ್ಟಿದ್ದಮೇಲೆ ನಮ್ಮದು, ಆದಿಕರ್ಣಾಟಕರದು ಎಷ್ಟಿರಬೇಕು ಎಂದು ಕೇಳಿದೆ. ಅವರಿಬ್ಬರಮೇಲೂ ಕೈ ಇಟ್ಟುಕೊಂಡು ನಾವು ರಾಜ್ಯವನ್ನು ನಡೆಸಿಕೊಂಡು ಹೋಗುತ್ತೇವೆ, ಯಾರೂ ಹೆದರಬೇಡಿ ಎಂದು ಹೇಳಿದೆ (ನಗು!). ಈ ಹೊತ್ತಿನ ದಿವಸ ನಾವು ವಿಶಾಲವಾದ ಮನೋಭಾವವನ್ನು ಬೆಳಸಬೇಕೇ ವಿನಾ ಸಂಕುಚಿತ ಮನೋಭಾವವನ್ನಿಟ್ಟುಕೊಂಡು ಹೀಗೆಯೇ ಇರಬೇಕೆಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ಇನ್ನು ಕೆಲವರು ಮೈಸೂರು ಹೀಗೆಯೇ ಇರಬೇಕೆಂಬ ವಾದದಲ್ಲಿ ಕೊಡಗು, ಕೊಳ್ಳೇಗಾಲ, ದಕ್ಷಿಣ ಕನ್ನಡಜಿಲ್ಲೆ ಸೇರಬೇಕೆಂದು ಹೇಳುತ್ತಾರೆ, ಏಕೋ ಗೊತ್ತಿಲ್ಲ, ಇದೇಕೋ ನನಗರ್ಥವಾಗುವುದಿಲ್ಲ. ಮೈಸೂರು ಇದ್ದಹಾಗೆಯೇ ಇರಬೇಕು, ಅಕ್ಕಪಕ್ಕದ ಜನರು ಬರಕೂಡದೆಂದು ಹೇಳಿದಮೇಲೆ, ಇದಾದರೂ ಏತಕ್ಕೆ? ಕೆಲವು ಪ್ರಾಂತ್ಯಗಳು ಬರಲಿ, ಮತ್ತೆ ಇತರ ಪ್ರಾಂತ್ಯಗಳು ಬೇಡವೆನ್ನುವುದರಲ್ಲಿ ಅರ್ಥವಿಲ್ಲ. ಬೆಂಗಳೂರು ಇದ್ದಹಾಗೆ ಇರಬೇಕೆಂದು ನಾವು ಹೇಳಿದರೆ ಅದು ಹಾಗೆಯೇ ಇರುತ್ತದೆಯೇ? ಈಗ ಹತ್ತು ವರ್ಷಗಳ ಹಿಂದೆ ಬೆಂಗಳೂರು ಎಷ್ಟಿತ್ತೋ ಇವತ್ತಿಗೂ ಅಷ್ಟೇ ಇದೆಯೇ ಏನು? ಕೆಂಪೇಗೌಡ ಗೊತ್ತುಮಾಡಿದ್ದ ಗಡಿಗೂ ಇವತ್ತಿರುವ ಗಡಿಗೂ ಅಜಗಜಾಂತರ ವ್ಯತ್ಯಾಸವಿದೆ. ಆದ್ದರಿಂದ ಯಾವುದೇ ಊರು ಇದ್ದಹಾಗೆಯೇ ಇರಬೇಕೆಂದು ಹೇಳಿದಮಾತ್ರಕ್ಕೆ ಅದು ಹಾಗೆಯೇ ಇರುವುದಕ್ಕೆ ಸಾಧ್ಯವೇ? ಹೀಗಿರುವಾಗ ನಮ್ಮ ಮಾನ್ಯ ಸದಸ್ಯರೇಕೆ ಸಂಕುಚಿತ ಮನೋಭಾವನೆಯನ್ನು ಜನರಲ್ಲಿ ಬೆಳೆಸುತ್ತಾರೋ ಗೊತ್ತಿಲ್ಲ.

ಅಲ್ಲದೆ, ಈ ಮೂವರು ತ್ರಿಮೂರ್ತಿಗಳು ಸಾಮಾನ್ಯರಲ್ಲ. ಅವರು ಭಾರತ ದೇಶದ ಹಿತದೃಷ್ಟಿಯಿಂದ, ಭಾರತದ ಭದ್ರತೆಯ ದೃಷ್ಟಿಯಿಂದ ದೇಶದ ವಿಂಗಡಣೆಯನ್ನು ಸೂಚಿಸಿದ್ದಾರೆ. ಅವರಿಗೇನೂ ಹೀಗೆ ಮಾಡುವುದರಲ್ಲಿ ಈ ಜಾತಿಯವರು ಜಾಸ್ತಿಯಾಗುತ್ತಾರೆ, ಆ ಜಾತಿಯವರು ಕಡಿಮೆಯಾಗುತ್ತಾರೆಂಬ ದೃಷ್ಟಿಯಿಲ್ಲ. ನಮ್ಮ ದೇಶದಲ್ಲಿ ಭಾಷಾವಾರು ಪ್ರಾಂತ ಆಗಬೇಕೆಂಬ ಕೂಗು ಇತ್ತು. ಅದನ್ನು ಮನಗಂಡು ಹೆಚ್ಚು ಕಡಿಮೆ ಭಾಷಾವಾರು ದೃಷ್ಟಿಯನ್ನೂ ಈ ವಿಂಗಡಣೆಯಲ್ಲಿ ಇಟ್ಟುಕೊಂಡಿದ್ದಾರೆ. ಕಾಂಗ್ರೆಸ್ಸಿನವರು ಭಾಷಾವಾರು ಪ್ರಾಂತ್ಯವಾಗಬೇಕೆಂದು ಮೊದಲೇ ಒಪ್ಪಿಕೊಂಡಿದ್ದಾರೆ. ಇವತ್ತಿನ ದಿವಸ ಬೇಡವೆನ್ನುವುದಕ್ಕಾಗುತ್ತದೆಯೇ? 1948ನೆಯ ಇಸವಿಯಲ್ಲಿ ಮೈಸೂರಿನಲ್ಲಿ ನಡೆದ ಅಸೆಂಬ್ಲಿ ಅಧಿವೇಶನದಲ್ಲಿ ಒಂದು ನಿರ್ಣಯ ಬಂದು ಅಕ್ಕಪಕ್ಕದ ಪ್ರಾಂತ್ಯಗಳು ಮೈಸೂರಿಗೆ ಬಂದು ಸೇರಲಪೇಕ್ಷಿಸಿದರೆ, ಮೈಸೂರು ದೇಶದ ವೈಶಿಷ್ಟ್ಯವನ್ನು ಕಾಪಾಡಿಕೊಂಡು ಅವುಗಳನ್ನು ಸೇರಿಸಿಕೊಳ್ಳುವುದರಲ್ಲಿ ಯಾವ ಅಭ್ಯಂತರವೂ ಇಲ್ಲವೆಂದು ಅಂಗೀಕೃತವಾಗಿದೆ. ಇದು ಈ ಮಾನ್ಯ ಸಭೆಯಲ್ಲಿರತಕ್ಕ ಸದಸ್ಯರನೇಕರಿಗೆ ಗೊತ್ತಿರತಕ್ಕ ವಿಷಯ.

ಅಲ್ಲದೆ ಇನ್ನೊಂದು ದೃಷ್ಟಿಯನ್ನು ನಾವು ಈ ಸಂದರ್ಭದಲ್ಲಿ ಗಮನಕ್ಕೆ ತಂದುಕೊಳ್ಳಬೇಕು. ನಾವು ಈ ದಿವಸ ಇಂಡಿಯಾದೇಶದ ರಾಜ್ಯಾಂಗಕ್ಕೆ—ಅದೊಂದು ಪವಿತ್ರ ಗ್ರಂಥ—ಅದಕ್ಕೆ ಎಲ್ಲರೂ ತಲೆಬಾಗಬೇಕು. ಆ ಗ್ರಂಥದಲ್ಲಿ ನಾವು ಜಾತ್ಯತೀತ ರಾಷ್ಟ್ರವನ್ನು ಕಟ್ಟಬೇಕೆಂದು ಹೇಳಿದ್ದೇವೆ. ಅದೇ ಪ್ರಕಾರ ಈ ಹೊತ್ತು ಇಲ್ಲಿ ಯಾರೂ ಯಾವುದೊಂದು ಜಾತಿಯ ಆಧಾರದಮೇಲೂ ಒಂದು ಭಾಗವಹಿಸುತ್ತಿಲ್ಲ. ಒಂದು ಸಂಸ್ಥೆಯ ಪರವಾಗಿ ನಾವಿಲ್ಲಿ ಸದಸ್ಯತ್ವವನ್ನು ಪಡೆದಿದ್ದೇವೆಂಬುದನ್ನು ಇಲ್ಲಿ ಯಾರೂ ಮರೆಯಬಾರದು ಅಂದಮೇಲೆ ನಮ್ಮ ವಾದ ಜಾತಿಯ ದೃಷ್ಟಿಯ ಮೇಲೆ ಹೋಗತಕ್ಕದ್ದಲ್ಲವೆಂಬುದನ್ನು ನಾವು ತಿಳಿದುಕೊಳ್ಳಬೇಕು. ಆದ್ದರಿಂದ ಈ ರೀತಿಯ ಪ್ರಾಂತ್ಯ ವಿಂಗಡಣೆಯಿಂದ ಯಾವುದೇ ಒಂದು ಮತಕ್ಕೆ ಪ್ರಾಧಾನ್ಯತೆ ದೊರೆಯುತ್ತದೆಂಬ ದೃಷ್ಟಿಯಿಂದ ನಾವು ವಾದ ಮಾಡಕೂಡದೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಮೈಸೂರು ಇದ್ದಹಾಗೆಯೇ ಇರಲಿ ಎನ್ನುವವರು, ನಮ್ಮ ಮೈಸೂರು ಈಗಿನಂತೆಯೇ ಇತ್ತೇ ಎಂಬುದನ್ನೂ ಗಮನಿಸಲಿ. ನಾಲ್ಕನೆಯ ಮೈಸೂರು ಯುದ್ಧಕ್ಕೆ ಹಿಂದೆ ಮೈಸೂರು ಸಂಸ್ಥಾನ ತಿರುವಾಂಕೂರು, ಕೊಚ್ಚಿನ್, ಬಳ್ಳಾರಿ, ಕಡಪ, ಕರ್ನೂಲ್—ಇವೆಲ್ಲವನ್ನೂ ಒಳಗೊಂಡಿತ್ತು. ವಿಜಯನಗರ ಕೂಡ ಮೈಸೂರಿಗೆ ಸೇರಿ ನಮ್ಮ ಮೈಸೂರು ಮಹಾರಾಜರಿಗೆ ಕರ್ನಾಟಕ ಸಿಂಹಾಸನಾಧೀಶ್ವರರೆಂಬ ಹೆಸರಿತ್ತು. ಅಂಥ ಮೈಸೂರು ಮಹಾರಾಜರ ಹೆಸರನ್ನು ಹೇಳಿಕೊಂಡು ಮೈಸೂರು ಈಗಿನಷ್ಟೇ ಇರಲಿ ಎಂದು ಹೇಳುವುದರ ಅರ್ಥ ನನಗೆ ಗೊತ್ತಾಗುವುದಿಲ್ಲ.

ಈಗಿರುವ A,B,C ಮುಂತಾದ ರೀತಿ ಸಂಸ್ಥಾನಗಳಾಗಿರುವುದು ಹೇಗೆ ಎಂಬುದನ್ನೂ ಸ್ವಲ್ಪ ನೋಡಿ. ನಾನಾ ಕಾರಣಗಳಿಂದ ಇಂಗ್ಲೀಷರ ಆಳ್ವಿಕೆಯ ಕಾಲದಲ್ಲಿ ಅನೇಕ ಸಣ್ಣ ಸಣ್ಣ ರಾಜ್ಯಗಳಿದ್ದುವು. ಇವತ್ತಿಗೂ ಕೊಡಗು ಸಂಸ್ಥಾನ ಚಿಕ್ಕದಾಗಿ ಹಾಗೆಯೇ ಉಳಿದಿದೆ. ಅಂಥ ಚಿಕ್ಕ ಪ್ರಾಂತ್ಯಕ್ಕೇ ಒಂದು ಮಂತ್ರಿಮಂಡಲ, ಅದಕ್ಕೊಂದು ಲೆಜಿಸ್ಲೇಚರ್, ಅದಕ್ಕೆ 24 ಮಂದಿ ಸದಸ್ಯರು, ಒಬ್ಬರು ಸ್ಪೀಕರು, ಒಬ್ಬರು ಡೆಪ್ಯುಟಿ ಸ್ಪೀಕರ್ ಇರಬೇಕೆಂದರೆ ಎಷ್ಟು ಖರ್ಚಾಗುತ್ತದೆ! ನಾಳೆ ನಾವು ಚಿತ್ರದುರ್ಗದವರು ಬೇರೊಂದು ರಾಜಧಾನಿಯನ್ನು ಮಾಡಿಕೊಳ್ಳುತ್ತೇವೆನ್ನಬಹುದು. ದೇಶದ ಒಟ್ಟಿನ ಹಿತದೃಷ್ಟಿಯಿಂದ ಇವೊಂದೂ ಸಾಧುವಾದದ್ದಲ್ಲ. ಆದ್ದರಿಂದ ನಾವೆಲ್ಲರೂ ಒಟ್ಟು ಸೇರಿ ಎರಡು ಕೋಟಿ ಜನರನ್ನೊಳಗೊಂಡ ಒಂದು ಪ್ರಾಂತ್ಯ ಮಾಡಿಕೊಂಡು, ತಿಳಿವಳಿಕಸ್ಥರಾದ, ದೇಶದ ಹಿತದೃಷ್ಟಿ

(ಶ್ರೀ ಟಿ. ಹನುಮಯ್ಯ.)

ಯುಳ್ಳ, ಅದರಲ್ಲೂ ಆಡಳಿತ ನಡೆಸುವ ಅನುಭವವುಳ್ಳ, ನಾವು ಯಾವ ಜಾತಿಯ ಗೊಂದಲಗಳಿಗೂ ಅವಕಾಶ ಕೊಡದೆ ಬಾಳಬಲ್ಲೆವು ಎಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ನಾವು ಯಾವ ರೀತಿಯಿದ್ದೆವೆಂಬುದನ್ನೂ ಸ್ವಲ್ಪ ಜ್ಞಾಪಿಸಿಕೊಳ್ಳಿ. ಈ ತರದ ಗೊಂದಲ ಯಾವ ಕಡೆಯಲ್ಲೂ ಇದ್ದದ್ದನ್ನು ನಾನು ಕಂಡಿರಲಿಲ್ಲ. ಕರ್ನಾಟಕವಾಗಬೇಕೆಂದು ಹೇಳಿದರೆ ಎಲ್ಲರೂ "ಜೈ ಕರ್ನಾಟಕ" ಎಂದು ಘೋಷಿಸುತ್ತಿದ್ದರು. ಹಾಗಿರುವಲ್ಲಿ ಈಗ ಸ್ವಾತಂತ್ರ್ಯ ಬಂದು, ಎಲ್ಲರೂ ಸೇರಿ ದೇಶದ ಅಭಿವೃದ್ಧಿಯನ್ನು ಸಾಧಿಸಬೇಕೆಂದಿರುವಲ್ಲಿ ನಾವು ನಾವು ಭಿನ್ನಾಭಿಪ್ರಾಯಕ್ಕೆ ಎಡೆಕೊಟ್ಟು, ಅವರೆಲ್ಲಿ ರಾಜ್ಯವನ್ನು ಹೊತ್ತುಕೊಂಡು ಹೋಗುತ್ತಾರೋ, ಇವರೆಲ್ಲಿ ರಾಜ್ಯವನ್ನು ಹೊತ್ತುಕೊಂಡು ಹೋಗುತ್ತಾರೋ ಎಂದು ಒಬ್ಬರಮೇಲೊಬ್ಬರು ಅನುಮಾನ ಪಡುವುದು ಸರಿಯಲ್ಲ. ಇಡೀ ಭಾರತದ ಭದ್ರತೆಯ ದೃಷ್ಟಿಯಿಂದ ಒಬ್ಬರನ್ನೊಬ್ಬರು ಹೊಂದಿಕೊಂಡು ಹೋಗಿ ಈ ವರದಿಯನ್ನೊಪ್ಪಿಕೊಳ್ಳುವುದರಿಂದ ದೇಶದ ಹಿತವನ್ನು ಸಾಧಿಸಿದಂತಾಗುತ್ತದೆಂದು ಹೇಳುತ್ತೇನೆ.

ಕರ್ನಾಟಕದ ಜನರು ಬಹಳ ಹಿಂದುಳಿದಿದ್ದಾರೆ, ನಾವು ಅವರೊಡನೆ ಸೇರಿದರೆ ನಾವು ಬಹಳ ತೊಂದರೆಗಳನ್ನನುಭವಿಸಬೇಕಾಗುತ್ತದೆಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಇವತ್ತಿಗೂ ಮೈಸೂರು ದೇಶದ ಬಡ್ಜೆಟ್ಟು ಖೋತಾ ಬಡ್ಜೆಟ್ಟು ಎಂಬುದನ್ನು ಆ ಸದಸ್ಯರುಗಳು ಮರೆಯದಿರಲಿ. ಕೇಂದ್ರ ಸರ್ಕಾರದವರು ನಮಗಿಂದು ವರ್ಷ ವರ್ಷ ಹಣ ಕೊಡದೆ ಇದ್ದಿದ್ದರೆ ನಾವೇನೂ ಮಾಡುವುದಕ್ಕಾಗುತ್ತಿರಲಿಲ್ಲ. ಆದ್ದರಿಂದ ನಮಗೆ ಬೇಕಾದಷ್ಟಿದೆ, ಇನ್ನೊಂದು ದೇಶಕ್ಕೆ ಕೊಡುವ ಶಕ್ತಿಯಿದೆ, ಇತರರು ಬಂದರೆ ನಮ್ಮ ದುಡ್ಡನ್ನು ದೋಚಿಕೊಂಡು ಹೋಗುತ್ತಾರೆ ಎಂಬ ಮನೋಭಾವವಿಟ್ಟುಕೊಳ್ಳುವುದು ಸರಿಯಲ್ಲ. ಕೇಂದ್ರದ ಆಧಾರದ ಮೇಲೆಯೇ ನಾವಿಂದು ಬದುಕಿದ್ದೇವೆ. ಆದ್ದರಿಂದ ನಾಳೆ ನಮ್ಮ ಅಕ್ಕಪಕ್ಕದ ಪ್ರಾಂತ್ಯಗಳು ಬಂದರೂ ನಮಗೆ ಕೇಂದ್ರದವರು ಅದಕ್ಕೆ ಸರಿಯಾಗಿ ಸಹಾಯಮಾಡಿಯೇ ಮಾಡುತ್ತಾರೆ. ಮಾನ್ಯ ಸದಸ್ಯರೊಬ್ಬರು ಹೊರಗಿನವರು ನಮ್ಮ ಮನೆಗೆ ನುಗ್ಗುತ್ತಾರೆ ಎಂದು ಹೇಳಿದರು. ಇದಕ್ಕೆ ಅರ್ಥವಿಲ್ಲ. ಈಗಲೂ ಇಲ್ಲಿ ಮೈಸೂರು ದೇಶದಲ್ಲಿಯೂ ಕೂಡ ಏನೇ ಇಲ್ಲದೆ ಹೋದರೂ ಯಾರ ಮನೆಗೂ ಯಾರೂ ನುಗ್ಗುವುದಿಲ್ಲ. ಹೀಗಿರುವಲ್ಲ ಕರ್ನಾಟಕ ಜನ ಬಂದು ಮೇಲೆ ನುಗ್ಗುತ್ತಾರೆಂದು ಹೇಳುವುದು ಸಾಧುವಲ್ಲ.

ಭಾಷೆಯ ಆಧಾರದ ಮೇಲೆ ರಾಜ್ಯ ಕಟ್ಟುವುದು ಸರಿಯಲ್ಲ, ಈಗ ಭಾಷೆಯ ಮೇಲೆಯೇ ವಿಂಗಡಿಸಿ ಹೊರಟಿದ್ದಾರೆಂದು ಒಬ್ಬ ಸದಸ್ಯರು ವಾದಮಾಡಿದರು. ಭಾಷೆಯೂ ದೇಶದ ಆಡಳಿತದಲ್ಲಿ ಒಂದು ಮುಖ್ಯ ಪಾತ್ರವನ್ನು ವಹಿಸುತ್ತದೆಂಬುದು ಮಾನ್ಯ ಸದಸ್ಯರಿಗೆ ಗೊತ್ತಿಲ್ಲದೆ ಇಲ್ಲ. ಮಾತೃಭಾಷೆಯೆನ್ನುವುದು ಹಡೆದ ತಾಯಿಗಿಂತ ಹೆಚ್ಚು ಎಂದು ನಾನು ಹೇಳುತ್ತೇನೆ. ಆದ್ದರಿಂದ ಆದಷ್ಟು ಮಟ್ಟಿಗೆ ಕನ್ನಡ ಭಾಷೆಯಾಡುವವರೆಲ್ಲರನ್ನೂ ಒಂದು ಆಡಳಿತಕ್ಕೊಳಪಡಿಸುವುದು ಅವಶ್ಯಕ. ಈ ಪ್ರಾಂತ್ಯದಲ್ಲಿ ಬೇರೆ ಭಾಷೆಗಳನ್ನಾಡುವವರೂ, ತಮಿಳರು, ತೆಲುಗರು, ಉರ್ದುವಿನವರೂ ಇರಬಹುದು. ಆದರೂ ಹೆಚ್ಚು ಜನರು ಯಾವ ಭಾಷೆಯನ್ನಾಡುತ್ತಾರೋ ಅದನ್ನು ಮುಖ್ಯವಾಗಿ ಲೆಕ್ಕಕ್ಕೆ ತೆಗೆದುಕೊಳ್ಳಬೇಕಾದದ್ದು ಅವಶ್ಯಕ. ಹಾಗೂ ಹಣಕಾಸಿನ ದೃಷ್ಟಿಯಿಂದ ಆದಷ್ಟು ದೊಡ್ಡ ದೇಶವಾಗುವುದು ಅಗತ್ಯವೆಂದು ನಾನು ಭಾವಿಸುತ್ತೇನೆ.

ಈ ವರದಿಯ ಮೇಲೆ ಚರ್ಚೆಮಾಡುವಾಗ ರಾಜಪ್ರಮುಖರ ಪ್ರಶ್ನೆಯನ್ನೂ ತೆಗೆದುಕೊಂಡಿದ್ದಾರೆ. ಅನೇಕರು ರಾಜಪ್ರಮುಖರು ಬೇಡ ಎಂದು ಹೇಳಿಲ್ಲ. ಆದರೆ ಇದು ಭಾರತದ ಪ್ರಶ್ನೆ. ಭಾರತ ಸರ್ಕಾರದವರು ಇದನ್ನು ಇತ್ಯರ್ಥಮಾಡಬೇಕಾಗಿದೆ. ಆದ್ದರಿಂದ ಈ ಸಭಾ ಸದಸ್ಯರಾರೂ ಮಹಾರಾಜರವರ ವಿಷಯವನ್ನು ಹಚ್ಚಿಕೊಳ್ಳಬೇಕಾಗಿಲ್ಲ. ಭಾರತ ಸರ್ಕಾರದವರು ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳುತ್ತಾರೆಂದು ನಾನು ನಂಬಿದ್ದೇನೆ.

ಕೊನೆಯದಾಗಿ, ಕರ್ನಾಟಕ ಪ್ರಾಂತ್ಯ ನಮಗೆ ಬರುವುದಾದರೆ ನಮಗೆ ಬೇಕಾದಷ್ಟು ಅರಣ್ಯ ಸಂಪತ್ತು ಲಭಿಸುತ್ತದೆ; ಅಪಾರ ಖನಿಜ ಸಂಪತ್ತು ದೊರೆಯುತ್ತದೆ. ಜೊತೆಗೆ, ಈ ಹೊತ್ತು ಮದರಾಸ್, ಬೊಂಬಾಯಿ ಪ್ರಾಂತ್ಯಗಳ ಮುನ್ನಡೆಗೆ ಮುಖ್ಯ ಕಾರಣವಾದ ಬಂದರುಗಳು ನಮಗೆ ದೊರೆಯುತ್ತವೆ. ನಾಲ್ಕಾರು ಬಂದರುಗಳು ನಮಗೆ ದೊರಕಿ ನಮ್ಮ ದೇಶದ ವ್ಯಾಪಾರ ಅಭಿವೃದ್ಧಿಗೊಳ್ಳುತ್ತದೆ. ಹಿಂದೆ ಒಂದು ಬಂದರನ್ನು ಪಡೆಯುವುದಕ್ಕೆ ನಾವು ಸತತ ಪ್ರಯತ್ನ ಮಾಡಿದ್ದೆವು. ಟಿಪ್ಪುಸುಲ್ತಾನನು ಮಂಗಳೂರನ್ನು ಗೆಲ್ಲಲು ಎಷ್ಟು ಕಷ್ಟಪಟ್ಟನೆಂಬುದು ಗೊತ್ತಿದೆ. ಹೀಗಿರುವಲ್ಲಿ ಇಂದು ಅನಾಯಾಸವಾಗಿ ಬಂದರುಗಳು ನಮಗೆ ಸಿಕ್ಕಿರುವುದು ನಮ್ಮ ಅದೃಷ್ಟ. ಇದರಿಂದಾಗಿ ಕರ್ನಾಟಕ ರಾಜ್ಯಕ್ಕೆ ಹಣಕಾಸಿನ ವಿಷಯದಲ್ಲಿ ಹೆಚ್ಚಿನ ಅನುಕೂಲತೆ ದೊರೆತಂತಾಗುತ್ತದೆ. ಅಲ್ಲದೆ, ನಾವು ಈಗಿರುವಂತೆಯೇ ಇರುತ್ತೇವೆ, ಕೇಂದ್ರ ಸರ್ಕಾರದವರು ಇನ್ನೇನೂ ಹೆಚ್ಚಿಗೆ ಸಹಾಯ ಮಾಡುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಕೇಂದ್ರದಿಂದ ಬೇಕಾದಷ್ಟು ಸಹಾಯವೂ ಬರುತ್ತಿದೆ.

ಅಲ್ಲದೆ, ನಾವು (ಹರಿಜನರು) ಈಗ ನೂರು ವರ್ಷಗಳಿಂದ ಬಹಳ ಹಿಂದೆ ಬಿದ್ದಿದ್ದೇವೆ. ಹೀಗಿರುವಲ್ಲಿ, ಕರ್ನಾಟಕವೆಂಬ ಸಮುದ್ರಕ್ಕೆ ಹೋಗಿಬಿಟ್ಟರೆ, ನಾವು ಎಲ್ಲಿ ಹೋಗಿಬಿಡುತ್ತೇವೋ ಎಂಬ ಭಯ ನಮಗಿರಬೇಕು. ಅಂಥದರಲ್ಲಿ ನಾವೇ ಬೇಡ ಎನ್ನುತ್ತಿಲ್ಲ. ನಾವು ಎಷ್ಟು ವಿಶಾಲ ದೃಷ್ಟಿಯಿಂದ 'ನೀವೇನಾದರೂ ಮಾಡಿ ನಿಮ್ಮ ಜೊತೆಯಲ್ಲೇ ನಿಮ್ಮನೊಡಗೂಡಿ ಬರುತ್ತೇವೆ' ಎಂದು ಹೇಳುತ್ತಿದ್ದೇವೆ. ಇದೇ ರೀತಿ ಮಾನ್ಯ ಸದಸ್ಯರೆಲ್ಲರೂ ಧೈರ್ಯತಳೆದು ಜಾತಿ ಮನೋಭಾವವನ್ನಿಟ್ಟುಕೊಳ್ಳದೆ ದೇಶದ ಹಿತದೃಷ್ಟಿಯಿಂದ, ದೇಶದ ಭದ್ರತೆಯ ದೃಷ್ಟಿಯಿಂದ ವಿಶಾಲವಾದ ರಾಜ್ಯವನ್ನು ಕಟ್ಟುವುದಕ್ಕೆ ನೆರವಾಗಿರಿ ಎಂದು ಪ್ರಾರ್ಥಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*Sri S. SRINIVASA IYENGAR (T.-Narasipur).—Mr. Speaker, I rise to place my views on the S.R.C. Report. The voters in my constituency have given mandates. With your permission, I will read the relevant paras of the mandates. I have used the word 'mandates' because I have received two mandates, one mandate directing me to fight for the retention of Mysore as such and the other mandate directing me to support United Karnataka.

Both these mandates are signed by responsible people.

Sri H. SIDDAVEERAPPA.—Would it be correct to call it a mandate ?

Sri S. SRINIVASA IYENGAR.—I am elected by my electorate. My voters are my masters. Whatever they say is a mandate to me.

Sir, I venture to place my personal views on the Report. I belong to a party. Even though the party has passed a resolution, yet it has been guided by the principle of patriotism and has stood by the Report. We have exhibited that unique quality and discipline. Our party has a composite character as you know. We have been able to maintain that discipline. We support not only the Report but also the amendment that has been tabled before this House.

Sir, my party has passed a resolution supporting the formation of Linguistic Provinces and therefore there cannot be any reason for difference of opinion.

5 P.M.

While welcoming the Report, I wish to place on record my congratulations for the members of the Commission on having ably discharged the very heavy responsibility of suggesting re-organization of States. This is the one Report, I think, which has been read and re-read by a very large number of people in India. I have heard the debate in this House with rapt attention and while I wish to express my view on that I am always guided by the word ' brevity '. I posed to myself two questions. No. 1—the appropriateness of the proposal, No. 2—its inevitability. Many Hon'ble Members said that it is not appropriate to introduce such a change at present. Many Hon'ble Members also suggested that the re-organisation of States may be postponed. Such a suggestion has also been made to the Commission. They have made a note on that in one of the paras in their Report. The suggestion was to postpone reorganisation for a period of 20 or 25 years. The Commission do not agree with that view. I also do not agree with that view for the following reasons. As late as 1903, Lord Curzon, the then Governor-General of India, was of the view that the artificial character of the provincial boundaries should be changed. He gave certain reasons. He said that at that moment there was absence of political passion. He said that the educated people welcomed such a change. He said that there were efficient men to man the new provinces. To-day on the first two items we have a different picture. Today in almost all the debates there has been the exhibition of this political passion and the educated people are divided and it has been difficult all the more. Subsequent to that, by 1918 when Montagu and Chelmsford introduced their reform, they said that the provincial boundaries in India be re-changed. But such a change was not undertaken because of the reforms that were about to be introduced. By 1930, as you are aware, the Indian Statutory Commission concurred with this view and in fact wanted a boundary commission to be set up for the change of boundaries of several States in India. The only result of such a thing was the formation of Orissa State purely on linguistic basis. From 1836 to 1947 there was no change.

Sri T. MARIAPPA.—Orissa and Sindh both.

Sri S. SRINIVASA IYENGAR.—Sindh on political grounds and Orissa purely on linguistic basis. From 1936 to 1947 nothing was possible because of the political upheaval and the war. When the Constituent Assembly was set up, the Constituent Assembly itself laid down that linguistic provinces have to be carved out, and therefore created a Linguistic Provinces' Commission popularly known as the Dar Commission. If the Constituent Assembly had no idea of forming Linguistic Provinces, they would not have constituted a Committee called the Linguistic Provinces Committee. The Dar Committee ended this stalemate. They laid down certain conditions by which re-adjustment of States could be undertaken. The Report says that the question could be taken up when India had been physically and emotionally integrated, the Indian States

(SRI S. SRINIVASA IYENGAR.)
problem solved, the national sentiment strengthened and other conditions were favourable. The J.V.P. Report agreed with it. We have today solved the Indian problem. We have today achieved the strengthening of India emotionally and physically. We have today the need for enduring political units in India. We have today the necessity for doing away with the artificial classification of Part B and Part C States. I do not see any objection to re-drawing the political map of India when we have the objective that we are one with India and that we have common citizenship. I can never understand that we are Mysoreans, that we are Bombayites, that we are Madrasis. The Report itself says that its objective is to see that provincialism and linguistic faddism should be ended and controlled. Part B and Part C States were too small. The boundaries of Part B and Part C States nobody settled. Many of those States were administered by kings. When the Constitution was adopted, this royalty was ended and the territories of those States remained as such. During that period many States vanished; out of 600, two or three States had the fortune to remain as they were. I do not say there is any objection. We had 27 States in India. The States Reorganisation Commission now say that India can have only 16 States of the status of Part A States. As I have already said, for every administrative block, what is most required is enduring political unity and financial viability. The States must be large enough to undertake plans under the national development programme. We have the First Plan and the Second Plan is about to be brought into operation. The States must be large enough to shoulder such a responsibility. Therefore I say that reorganisation or redrawing of the political map of India cannot be postponed. It must be done here and now. That is what the S.R.C. does. Therefore it is quite appropriate. Suppose we do not do it now. We spend money under the Five-Year Plans and lot of works are done in every part of India and when the State is fully developed, we will be quite averse to change the boundaries, because we will have invested a lot of money; we will have developed a particular tendency. Therefore, once the boundaries are formed, it is very difficult to disturb them.

Sri T. MARIAPPA.—There are reasons given in the Report. People will be avariciously investing money if you don't re-draw the map.

Sri S. SRINIVASA IYENGAR.—It is best that we change the political map. It reduces itself to this. We have lost the federal concept in India. Even though it is laid down in the Constitution, it is no longer a federal India. It is an India having a unitary system of Government, there are only administrative bits of India depending mostly on the Centre and being protected by the Centre, having little opportunity to develop their intrinsic life. That is the position. Let us face it. Let us know it. When the Constitution was given to us by ourselves, no State was a sovereign State. We cannot draw the example of America. America is a federation where sovereign States pool their sovereignty and provide a Constitution. It is not so in India. The S.R.C. Report is very clear on this point that long before we gave the Constitution to ourselves, whatever sovereignty the kings had possessed had been surrendered to the Government of India. Therefore, what the S.R.C. aim to do is to change the political map of India and nothing else. They don't carve out any sovereign State. They are drawing up, re-marking administrative units in India. I think I have said enough about the appropriateness.

Second, the inevitability. I have also said that since we can never justify the existence of Part B and Part C States in India it is inevitable that States carved out should be of the status of Part A States. Have the Commission achieved this? That is the next question. They have done it. All the Part B States have been disturbed. Part C States have been merged. They have laid down two principles. One is either declare Part B State as Part A

State or merge the neighbouring area with Part B State to elevate it to the status of Part A State. In this case what they have done is, they have enlarged Part B States in such a manner as to raise them to the status of Part A States, thereby rendering them as enduring political units. I said the S.R.C. have not been guided only by one principle in respect of Mysore State. They have depended on the linguistic principle; they have also depended on the linguistic homogeneity. They have depended upon the contiguous areas; they have depended upon the financial position—all these considerations have been applied. No one single principle has been kept in view in respect of Mysore. There was an argument to the effect as to why Mysore should not be allowed to remain as such. You were pleased to pose that question to Sri Mariappa when he was speaking—why not they carve out a separate province with the new areas? When they can easily do it, what is wrong? The Commission no doubt have been moved by this linguistic idea when they carved out Vidarbha. Vidarbha was carved out with the sole idea of forming a linguistic province. It is not so with reference to the Mysore State. Mysore State is a composite State. They have added some areas to Mysore. Suppose they retain the areas as such. They have also taken this consideration that economically it will not be good to carve out a new province there. Perhaps that may be their idea. The other idea is to implement the demands of the ruling party in India. Congress had committed itself to the formation of certain linguistic provinces. Just to implement that commitment perhaps they might have been moved with the idea of merging these areas with Mysore State. As they have very ably pointed out, no single consideration will be the rule. When my friend Sri Veeranna Gowda said "ಒಕ್ಕಲಿಗರಿಗೆ ನೆಲ ಉಳುವುದಕ್ಕೂ ಬರುತ್ತದೆ, ನೆಲ ಆಳುವುದಕ್ಕೂ ಬರುತ್ತದೆ", "ಒಕ್ಕಲಿಗರು ಉಳುವುದನ್ನು ತೋರಿಸಿದ್ದಾರೆ ರಾಜ್ಯ ಆಳುವುದನ್ನು ತೋರಿಸಿದ್ದಾರೆ" ಎಂದು ಹೇಳಿದರು. No single community rules in any State in India. It is the people that rule.

Sri H. K. VEERANNA GOWDH.—Did I say that people alone rule the country?

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ನೀವು ಹೇಳಿದ್ದು—"ಒಕ್ಕಲಿಗರಿಗೆ ನೆಲ ಉಳುವುದಕ್ಕೂ ಬರುತ್ತದೆ—ಆಳುವುದಕ್ಕೂ ಬರುತ್ತದೆ. ನೆಲವನ್ನು ಉತ್ತು ತೋರಿಸಿದ್ದೇವೆ ಮತ್ತು ರಾಜ್ಯವನ್ನು ಆಳಿ ತೋರಿಸಿದ್ದೇವೆ" ಎಂದು ಏನೋ ಹೇಳಿದಿರಿ. But no single community is ruling to-day.

Sri H. K. VEERANNA GOWDH.—He is misrepresenting me. ನಾವು ಹೇಳಿದ್ದು "ಸಮಯ ಬಂದರೆ ಒಕ್ಕಲಿಗರು ನೆಲ ಉಳುವುದಕ್ಕೂ ತಯಾರಾಗಿದ್ದೇವೆ, ಸಂದರ್ಭ ಬಂದರೆ ನೆಲ ಆಳುವುದಕ್ಕೂ ತಯಾರಿಗಿದ್ದೇವೆ" ಎಂದು ಹೇಳಿದ್ದೇನೆ.

Sri S. SRINIVASA IYENGAR.—I am deeply indebted to Sri Veeranna Gowda. My submission is, in no State like Mysore in India or in any place where there is democracy, no single community rules. That is all my submission. It is the people that rule. Political parties are built up. People return political parties to the Legislature. It is the Legislature that rules. Therefore, we need not ban any particular community to rule any area in India.

Lastly, I would deal with the financial viability—why the neighbouring areas have to be merged with India. Ever since I have been returned to this House I have made it quite plain that the financial position of Mysore State is weak, but I had always the misfortune of being told that I was doing it for the sake of opposition or I was stating a wrong thing. Now I feel that I have been correct. Sir, even though the budgetary position of the Mysore State is of the order of Rs. 22 crores, the tax revenue in Mysore State is not more than about Rs. 8 crores. The subsidy from the Centre towards the revenue gap is of the order of about Rs. 4½ crores. The rest of the revenue shown in the revenue side of the budget relates to some other heads which are brought under revenue on account of classification. On account of uniform classification insisted upon by the Accountant General, these things have been brought under the revenue. The tax revenue in Mysore State is not more than about Rs. 8½ crores. On the expenditure side our salary Bill, that is, the amount of money that we have to pay to the officers of the State,

(SRI S. SRINIVASA IYENGAR.)

is about Rs. 8½ crores. Whatever taxes that are collected by the State are necessary for the payment of the salary Bill. Under the financial integration, the subvention from the Centre towards the revenue gap has to continue for a period of five years from 1950 and taper on subsequent to that to zero in the coming five years and in that period it may be very hard to balance the budget of the State. Further, Sir, it is quite significant to observe that the Hon'ble the Chief Minister said the other day that all the money that is required for the Second Five-Year Plan has to be obtained from the Centre or from the public market, because we will have very little revenue surplus. Taking all these things into consideration and in the interest of the unity of India, it is very necessary that we should accept this Report. Sir, I have been pressed more than once to close my speech in view of the very limited time I have had at my disposal; even though I have a number of points to deal with, in obedience to you, Sir, I will close.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಹಾಸನ).—ಸ್ವಾಮಿ, ನಾನು ಹಿಂದೆ ಶೇಷಾದ್ರಿ ಸಮಿತಿಯ ರಿಪೋರ್ಟಿನ ಮೇಲೆ ಮಾತನಾಡುವಾಗ, ಈ ಭಾಷಾವಾರು ಪ್ರಾಂತ್ಯಗಳಾಗಲಿ, ಅಥವಾ ಪ್ರಾಂತ್ಯಗಳ ಪುನರ್ವಿಂಗಡನೆಯ ಕೆಲಸಕ್ಕೆ ಪ್ರಯತ್ನ ಮಾಡುವುದಾಗಲಿ ಸರಿಯಾದುದಲ್ಲ, ಅದು ಸಕಾಲವಾದುದಲ್ಲ, ಇಂಡಿಯಾದ ಆರ್ಥಿಕ ದೃಷ್ಟಿಯಿಂದಲೂ, ಇಂಡಿಯಾ ದೇಶದ ಭದ್ರತೆಯ ದೃಷ್ಟಿಯಿಂದಲೂ ಕೂಡ ಇನ್ನೂ ಹತ್ತಾರು ವರ್ಷಗಳು ಮುಂದಕ್ಕೆ ಹೋಗುವುದು ದೇಶದ ಹಿತದೃಷ್ಟಿಯಿಂದ ಒಳ್ಳೆಯದು ಎಂದು ನಾನು ಹೇಳಿದೆ. ಈಚೆಗೆ ಘನಲಾಲಿ ಸಮಿತಿಯ ರಿಪೋರ್ಟು ಬಂದಮೇಲಂತೂ ನಾನು ಹಿಂದೆ ಹೇಳಿದಂಥ ಅಭಿಪ್ರಾಯ ನ್ಯಾಯವಾದುದು ಎಂದು ಗೊತ್ತಾಗಿದೆ. ಈ Commissionನ ವರದಿ ಬಂದ ಮೇಲೆ, ಹಿಂದೆ ಏನು ಜನಗಳಲ್ಲಿ re-organisation of States ವಿಚಾರದಲ್ಲಿ ಅಲ್ಲಲ್ಲಿ ಒತ್ತಾಯ ಇತ್ತೋ, ಅದು ಉಲ್ಬಣವಾಗಿ, ಹತ್ತು ಇಪತ್ತರಷ್ಟು ಹೆಚ್ಚಿ, ದೇಶದಲ್ಲಿ ಜನಗಳ ಮನಸ್ಸನ್ನು ಕದಡಿ, ಒಂದು ಆಂದೋಳನಕ್ಕೆ ಅವಕಾಶವಾಗಿರುವುದಲ್ಲದೆ, ಈ ದಿವಸ ದೇಶದ ಜನಗಳ ಮನಸ್ಸನ್ನೂ ಕೆಡಿಸಿರುವುದಲ್ಲದೆ, it has sown seeds of disunity and dissatisfaction among the Indian people ಎಂದು ನನಗೆ ಖಚಿತವಾಗಿ ಗೊತ್ತಾಗುತ್ತದೆ.

Sri M. CHIKKALINGIAH (Malavalli—Scheduled Castes).—Among the party members!

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಪಾರ್ಟಿಯಲ್ಲಲ್ಲ, ಎಲ್ಲಾ ಜನತೆಯ ಮೇಲೂ ಕೂಡ ಅದರ ಪರಿಣಾಮ ಉಂಟಾಗಿದೆ ಎಂಬುದನ್ನು ತಾವು ನೋಡುತ್ತೀರಿ. ಯಾವ ಪ್ರಾಂತ್ಯಗಳಲ್ಲಿ ಸ್ವಲ್ಪ ಬದಲಾವಣೆಗಳಾಗಿವೆಯೋ, ಅಂತಹ ಕೆಲವು ಪ್ರಾಂತ್ಯಗಳನ್ನು ಬಿಟ್ಟು ಉಳಿದ ಎಲ್ಲಾ ಕಡೆಗಳಲ್ಲಿಯೂ ಕೂಡ ಇದು ಜನಗಳಲ್ಲಿ ವಿಪರೀತ ಗಲಾಟೆಗೆ ಅವಕಾಶ ಕೊಟ್ಟಿದೆ ಮತ್ತು ಅಸಮಾಧಾನಕ್ಕೆ ಅವಕಾಶ ಕೊಟ್ಟಿದೆ. ಇದು ಸ್ವಾಭಾವಿಕವಾದುದು. ಇಂಡಿಯಾ ದೇಶ ಸ್ವಾತಂತ್ರ್ಯವನ್ನು ಹೊಂದಿದ ಮೇಲೆ, ಪ್ರಜಾಪ್ರಭುತ್ವವನ್ನು ರೂಢಿಸಿ ಸತ್ಸಂಪ್ರದಾಯಗಳನ್ನು ಬೆಳಸಿ, ದೇಶವನ್ನು ಪ್ರಗತಿಗೆ ತಂದು, ದೇಶವನ್ನು ಭದ್ರತೆಯಿಂದ ಕಟ್ಟಬೇಕು ಎಂದು ಪ್ರಯತ್ನಗಳು ನಡೆಯುತ್ತಾ ಇರುವಾಗ, ಪಾಂಚವಾರ್ಷಿಕ ಯೋಜನೆ ವಗೈರೆ ಯೋಜನೆಗಳನ್ನು ಹಾಕಿಕೊಂಡು ದೇಶದ ಸಂಪತ್ತನ್ನು ಹೆಚ್ಚಿಸುವುದಕ್ಕೆ ದೇಶದ ನಾಯಕರು ದುಡಿಯುತ್ತಾ ಇರುವ ಕಾಲದಲ್ಲಿ, ಈ ಗೊಂದಲವನ್ನು ಎಬ್ಬಿಸಿ, ಜನಗಳ ಮನಸ್ಸು ರಾಷ್ಟ್ರಾಭಿವೃದ್ಧಿ ಕಾರ್ಯಗಳಲ್ಲಿ ಮಗ್ನವಾಗಿರುವುದಕ್ಕೆ ಬದಲಾಗಿ, ನಮ್ಮನಮ್ಮಲ್ಲಿ ಜಗಳಕ್ಕೆ ಅವಕಾಶವಾಗಿ, ದೇಶದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಬಹುದು ಎಂದು ಜನರಲ್ಲಿ ಅಭಿಪ್ರಾಯ ಮೂಡಿದೆ. ಇದು ಯಾವ ರೀತಿಯಲ್ಲಿ ಪರಿಣಾಮವಾಗುತ್ತದೆ ಎಂದು ಕಾದು ನೋಡಬೇಕಾಗಿದೆ. ನಮ್ಮ ಮಾನ್ಯ ಮಿತ್ರರಾದ ಶ್ರೀ ಭೀಮಪ್ಪನಾಯಕರು ಈ causeನ್ನು ಬಹಳ champion ಮಾಡುತ್ತಿದ್ದಾರೆ. ಅವರ ಸ್ವಂತ ವಿಚಾರವನ್ನು ತೆಗೆದುಕೊಳ್ಳೋಣ.

ಅಧ್ಯಕ್ಷರು.—ಅವರು ನಿಮ್ಮ ಮನಸ್ಸನ್ನು ಪರಿವರ್ತನೆ ಮಾಡಿಲ್ಲ! ನೀವು ಅವರ ಮನಸ್ಸನ್ನೂ ಪರಿವರ್ತನೆ ಮಾಡಿಲ್ಲ!

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಅದಕ್ಕೇ ಹೆಚ್ಚಿಗೆ ಹೇಳುವುದಿಲ್ಲ. ನನ್ನ notesನ್ನು ಮನೆಯಲ್ಲೇ ಬಿಟ್ಟು ಬಂದಿದ್ದೇನೆ. ಎಲ್ಲದಕ್ಕೂ ಜವಾಬುಕೊಡುವುದಿಲ್ಲ. ಕರ್ಣಾಟಕ ಪ್ರಾಂತ್ಯ ವಿಚಾರವನ್ನು ತೆಗೆದುಕೊಂಡರೆ, ಅವರು ಹೇಳುತ್ತಾರೆ ''ಏನೂ ಇಲ್ಲ, ಜನರು ಸರಿಯಾಗಿ ಹೋಗುತ್ತಾರೆ, ಯಾವ ಗಲಭೆಯೂ ಇಲ್ಲ, ಕೆಲವರೇ ಇದನ್ನು ಮಾಡುತ್ತಾ ಇರುವುದು, ಎಲ್ಲಾ ಸರಿಹೋಗುತ್ತದೆ'' ಎಂದು. ತಮಗೆ ಜ್ಞಾಪಕವಿರಬಹುದು: ಪಂಚಾಯಿತಿ re-organisation ವಿಚಾರದಲ್ಲಿ, ಒಂದೆರಡು ಸಣ್ಣ ಸಣ್ಣ ಊರುಗಳಿಗೆ ಒಂದೊಂದು ಪಂಚಾಯಿತಿ ಇದ್ದರೆ, ಗ್ರಾಮಗಳಿಗೆ ಬೇಕಾದ ಅನುಕೂಲಗಳನ್ನು ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ, ನಾಲ್ಕಾರು ಗ್ರಾಮಗಳನ್ನು ಸೇರಿಸಿದರೆ, ಅದಕ್ಕೆ ಬೇಕಾದಷ್ಟು ಹಣಕಾಸಿನ ಸೌಕರ್ಯ ದೊರೆತು ಸುಗಮವಾಗಿ ಕೆಲಸಕಾರ್ಯಗಳು ನಡೆದುಕೊಂಡು ಹೋಗುತ್ತವೆ ಎಂಬ ಸದುದ್ದೇಶದಿಂದ ಸರ್ಕಾರದವರು group ಪಂಚಾಯಿತಿಗಳನ್ನು ಏರ್ಪಾಡು ಮಾಡಬೇಕೆಂದು ಮಾಡಿದರು. ಎಲ್ಲಾ ಕಡೆಗಳಲ್ಲಿಯೂ ಅಮಲ್ದಾರರೂ ಡೆಪ್ಯುಟಿ ಕಮಿಷನರೂ ಆಯಾ ಡಿಸ್ಟ್ರಿಕ್ಟಿನ ಪಂಚಾಯಿತಿ ಗ್ರೂಪುಗಳನ್ನು ಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟರು. ಆಗ ದೇಶದಲ್ಲಿ ಎಷ್ಟು ಅಲ್ಲೋಲ ಕಲ್ಲೋಲವುಂಟಾಯಿತು ಮತ್ತು ಪ್ರತಿಯೊಂದು ಪಂಚಾಯಿತಿಯಲ್ಲಿಯೂ ಎಷ್ಟು ಕಾದಾಟವುಂಟಾಯಿತೆಂಬುದನ್ನು ತಾವು ನೋಡಿರಬಹುದು. ಗ್ರೂಪ್ ಪಂಚಾಯಿತಿಗಳು ಕೂಡದು, ನಮ್ಮ ನಮ್ಮ ಪಂಚಾಯಿತಿಗಳನ್ನು ನಾವು ಮಾಡಿಕೊಳ್ಳುತ್ತೇವೆ, ಗ್ರೂಪ್ ಪಂಚಾಯಿತಿಯಿಂದ ಕೆಲಸ ಮಾಡುವುದಕ್ಕಾಗುವುದಿಲ್ಲ, ಒಗ್ಗಟಿನಿಂದ ಒಂದು ತೀರ್ಮಾನಕ್ಕೆ ಬರುವುದಕ್ಕಾಗುವುದಿಲ್ಲ ಎಂದು ಸಾವಿರಾರು ಅರ್ಜಿಗಳು ಬಂದುವು. ಆಗ ಶ್ರೀ ಭೀಮಪ್ಪನಾಯಕ್‌ರವರ ಡಿಸ್ಟ್ರಿಕ್ಟ್‌ನಿಂದ

ಬಂದಿರುವಷ್ಟು ಅರ್ಜಿಗಳು ಬೇರೆ ಯಾವ ಡಿಸ್ಟ್ರಿಕ್ಟ್‌ನಿಂದಲೂ ಬಂದಿಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ.—ಆ ವಿಚಾರ ನಮಗೇ ಗೊತ್ತಿಲ್ಲ. ಅದು ತಮಗೆ ಹೇಗೆ ಗೊತ್ತಾಯಿತು ?

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಅದು ಮಾನವನ ಸ್ವಭಾವ. ನಮಗೆಲ್ಲರಿಗೂ ತಿಳಿದಿರುವಹಾಗೆ ಬಹಳ ದೇಶಾಭಿಮಾನಿಗಳೂ ಮತ್ತು ನಮ್ಮ ದೇಶದ ಅನೇಕ ಮುಖಂಡರುಗಳೂ ಕೂಡ ಈ ಪ್ರಾಂತ್ಯ ಪುನರ್ವಿಂಗಡಣೆಯ ವಿಚಾರದಲ್ಲಿ ಬಹಳ ಆಲೋಚನೆ ಮಾಡುತ್ತಿದ್ದಾರೆ. ತಾವೂ ಕೂಡ ದೆಹಲಿಯಲ್ಲಿ ಇದ್ದಿರಿ. ಅಲ್ಲಿಯ ಮುಖಂಡರ ಅಭಿಪ್ರಾಯ ಹೇಗಿತ್ತು ಎಂಬುದು ತಮಗೆ ಗೊತ್ತಿದೆ. J. V. P. ರಿಪೋರ್ಟಿನಲ್ಲಿಯೂ ಕೂಡ ಪ್ರಾಂತಗಳ ಪುನರ್ವಿಂಗಡಣೆ ಅತ್ಯಾವಶ್ಯಕವಾದರೂ ಅದನ್ನು ಮಾಡುವುದರಿಂದ ಅನೇಕ ಜಟಿಲ ಸಮಸ್ಯೆಗಳುಂಟಾಗುತ್ತವೆ, ಬಹಳ ಕಷ್ಟ ನಷ್ಟಗಳು ಒದಗುತ್ತವೆ, ಬಹಳ ಕಠಿಣವಾದ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ, ಜನರ ಗಮನವನ್ನು ಬೇರೆಕಡೆಗೆ ಸೆಳೆಯಬೇಕಾಗುತ್ತದೆ, ಇದು ಸಕಾಲವಲ್ಲ, ಇದನ್ನು ಮುಂದೂಡುವುದು ಒಳ್ಳೆಯದು ಎಂದು ಹೇಳಿದ್ದಾರೆ. ಅಷ್ಟೇ ಅಲ್ಲದೆ ಕೊನೆಯದಾಗಿ ಪ್ರಜಾಪ್ರಭುತ್ವದಲ್ಲಿ ನಾವು ಆಡಳಿತ ನಡೆಸುತ್ತಾ ಇರುವುದರಿಂದ ಎಲ್ಲಾ ಕಡೆಗಳಲ್ಲಿಯೂ ಜನರು ಒತ್ತಾಯ ಪೂರ್ವಕವಾಗಿ ಪ್ರಾಂತಗಳನ್ನು ಮಾಡಬೇಕೆಂದು ಅಭಿಪ್ರಾಯಪಟ್ಟರೆ ನಾವು ಒಪ್ಪಿಕೊಳ್ಳಬೇಕಾಗುತ್ತದೆ ಎಂದು ಹೇಳಿದ್ದಾರೆ. ಪಂಡಿತ ಜವಹರ್‌ಲಾಲ್ ನೆಹರೂರವರು 'ಇಂತಹ ವಿಚಾರದಲ್ಲಿ ಕೈಹಾಕುವುದು ಸರಿಯಾದುದಲ್ಲ' ಎಂದು ಅನೇಕ ಸಾರಿ ಜವಾಬು ಕೊಟ್ಟಿರುವುದನ್ನು ತಾವು ನೋಡಿರಬಹುದು, ಕರ್ಣಾಟಕ ಮತ್ತು ಮಹಾರಾಷ್ಟ್ರದ ಒತ್ತಾಯ ಕ್ಕೋಸ್ಕರ ಇದಕ್ಕೆ ಕೈಹಾಕಬೇಕಾಗಿ ಬಂತು, ಇವತ್ತಿನ ದಿವಸ ಈ ಅಲ್ಪ ಸ್ವಲ್ಪ ಒತ್ತಾಯಕ್ಕೆ ಕೈಹಾಕಿ ದೊಡ್ಡ ಗೊಂದಲಕ್ಕೆ ಸಿಕ್ಕಿಕೊಂಡಿದ್ದಾರೆ, ಇವತ್ತಿನ ದಿವಸ ನಮ್ಮ ನಾಯಕರಾದ ಜವಹರ್‌ಲಾಲ್ ನೆಹರೂರವರು ತಮ್ಮ ಮುಖಂಡತ್ವ ಮತ್ತು ನಾಯಕತ್ವವನ್ನು ಎಷ್ಟರಮಟ್ಟಿಗೆ ದಕ್ಷತೆಯಿಂದ ನಿಬಾಯಿಸಿಕೊಳ್ಳಬಲ್ಲರು ಎಂಬುದಕ್ಕೆ ಒಂದು ಪರೀಕ್ಷೆ ನಡೆಯುತ್ತಿದೆ ಎಂದು ವಿದೇಶಗಳಲ್ಲಿ ಈ ವಿಚಾರ ಚರ್ಚೆಗೆ ಬರುತ್ತಿದೆ ಎಂಬುದಾಗಿ ಕೆಲವರು ಹೇಳಿದರು. ಪಂಡಿತ್ ಜವಹರಲಾಲ್ ನೆಹರೂರವರು ಎಷ್ಟರಮಟ್ಟಿಗೆ ಜನಗಳ ಮೇಲೆ ಹದ್ದುಬಸ್ತು ಇಟ್ಟುಕೊಂಡಿದ್ದಾರೆ ಮತ್ತು ಅವರ ಪ್ರೀತಿಯನ್ನು ಸಂಪಾದಿಸಿದ್ದಾರೆ ಎಂಬುದಕ್ಕೆ ಒಂದು test ನಡೆಯುತ್ತಿದೆ ಎಂದು ಹೊರಗಿನವರು ಹೇಳುತ್ತಿದ್ದಾರೆ. 'ಪಂಡಿತ್ ಜವಹರಲಾಲ್ ನೆಹರೂರವರು ಮಾನ್ಯ ಮುಖಂಡರು, ಅದರಲ್ಲೂ ಕೂಡ ಪ್ರಜಾಪ್ರಭುತ್ವ ತತ್ವದಲ್ಲಿ ಬಹಳ ಪ್ರೇಮ ಮತ್ತು ನಂಬಿಕೆಯನ್ನು ಇಟ್ಟುಕೊಂಡು ಆಡಳಿತ ನಡೆಸತಕ್ಕವರು, ಅವರು ಇದಕ್ಕೆ ಕೈಹಾಕಿ ಇದರಿಂದ ವಿಪರೀತವಾದ ಗೊಂದಲಗಳುಂಟಾಗಿ ಅನೇಕ ಜಟಿಲ ಸಮಸ್ಯೆಗಳು ಉದ್ಭವಿಸಿವೆ, ಇವನ್ನು ಬಿಡಿಸುವುದಕ್ಕೆ ಹೋದರೆ ಬಹಳ ಕಾಲ ವ್ಯಯವಾಗುತ್ತದೆ, ಇದರಿಂದ ನಮ್ಮ ಜನಗಳು ಉತ್ತಮ ಸ್ಥಿತಿಗೆ ಬರುವ ದಾರಿಯಲ್ಲಿ ಏನೇನು ಕೆಲಸಗಳು ಮಾಡಬೇಕಾಗಿವೆಯೋ ಅವಕ್ಕೆಲ್ಲಾ ತೊಂದರೆ ಬರುತ್ತದೆ, ಆದ್ದರಿಂದ ಪ್ರಾಂತಗಳನ್ನು ಮಾಡುವುದನ್ನು ಒಪ್ಪಿಕೊಳ್ಳುವುದು ಬೇಡ, ಇದಕ್ಕೆ ಪ್ರಯತ್ನ ಮಾಡುವುದು ತಪ್ಪು, ಇದನ್ನು ಮುಂದೂಡುವುದು ದೇಶದ ಹಿತದೃಷ್ಟಿಯಿಂದಲೂ ಜನಗಳ ಐಕಮತ್ಯದ ದೃಷ್ಟಿಯಿಂದಲೂ ಒಳ್ಳೆಯದು' ಎಂದು ಹೇಳಿದ್ದಾರೆ.

Mr. SPEAKER.—Nobody has advanced this view in this House.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇದು ಬಹಳ ಸೂಕ್ತ ಸಲಹೆಯೆಂದು ತಿಳಿದುಕೊಂಡಿದ್ದೇನೆ.

Mr. SPEAKER.—The Hon'ble Member knows that it is against the principle of democracy that we should be influenced by extraneous considerations.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಯಾರು ನಮ್ಮ ದೇಶದ ಮುಖಂಡರಾಗಿ ಅಗ್ರಗಣ್ಯ ಸ್ಥಾನವನ್ನು ಪಡೆದಿದ್ದಾರೋ ಅಂಥವರಿಂದ ಈ ಸಲಹೆ ಬಂದಿದೆ. ಶ್ರೀ ರಾಜಗೋಪಾಲಾಚಾರಿಯವರು ಸಾಮಾನ್ಯರಲ್ಲ. ಅವರ ವಿಚಾರ ತಮಗೆಲ್ಲಾ ಗೊತ್ತಿದೆ. ಅವರ ಆತ್ಮಕ್ಕೆ ಯಾವ ವಿಚಾರ ಬರುತ್ತದೋ ಅದನ್ನು ಯಾವ ದಾಕ್ಷಿಣ್ಯಕ್ಕೂ ಒಳಗಾಗದೆ ಸುತ್ತಮುತ್ತ ಎಷ್ಟೇ ಒತ್ತಾಯಗಳು ಇದ್ದರೂ, ಎಷ್ಟೇ influence ಇದ್ದರೂ ಕೂಡ ಅವು ಯಾವುದಕ್ಕೂ ಒಳಗಾಗದೆ ತಮ್ಮ ಮನಸ್ಸಿಗೆ ಬಂದಂಥ ವಿಚಾರವನ್ನು ಧೈರ್ಯವಾಗಿ ದೇಶದ ಮುಂದೆ ಅವರ ಮನಸ್ಸಿಗೆ ತೋಚಿದ ರೀತಿಯಲ್ಲಿ ಅವರ ಅಭಿಪ್ರಾಯವನ್ನು ಇಡುವ ಇಬ್ಬರಲ್ಲಿ ಅವರೊಬ್ಬರು. ಅದು ತಮಗೆ ಗೊತ್ತಿದೆ.

Mr. SPEAKER.—But he has advocated only one Government!

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಮೊದಲು ಈ ಪ್ರಾಂತಗಳನ್ನು ಮಾಡುವುದನ್ನು ಮುಂದಕ್ಕೆ ಹಾಕುವುದು ಒಳ್ಳೆಯದು ಎಂದು ಹೇಳಿದ್ದಾರೆ. Sri C. Rajagopalachari is the brain of our nation. He is one of the best intellectuals of our country and many of his predictions have become true in India.

Sri T. MARIAPPA.—Will he agree to the suggestion of being ruled like a District Board by a District officer ?

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಅವರು ಹಿಂದೆ ಇಂಡಿಯಾ—ಪಾಕಿಸ್ತಾನ ವಿಭಾಗವಾಗುವ ವಿಚಾರದಲ್ಲಿ ಇಡೀ ದೇಶವೇ ವಿರೋಧವಾಗಿರುವ ಕಾಲದಲ್ಲಿ, partition ಆಗತಕ್ಕದ್ದು ಸೂಕ್ತವಾದುದು ಆಗಲೇಬೇಕು ಎಂದು ಧೈರ್ಯವಾಗಿ ಹೇಳಿದರು. ಕೊನೆಗೆ ಅವರ ಮಾತಿನಂತೆ partition ಆಗಲೇ ಬೇಕಾಗಿ ಬಂತು, ಇನ್ನು District Boardನಂತೆ ಆಡಳಿತವಾಗಬೇಕು ಎಂದು ಶ್ರೀಮಾನ್ ಮರಿಯಪ್ಪನವರು ಹೇಳಿದರು. ಅವರು ಭಾಷಣ ಮಾಡುವಾಗ ನನ್ನ ಅನಾರೋಗ್ಯದ ಕಾರಣದಿಂದ ನಾನು ಇಲ್ಲಿ ಹಾಜರಿರಲಿಲ್ಲ. ಆದ್ದರಿಂದ ಅವರ ಮಾತಿಗೆ ಉತ್ತರ ಹೇಳಲು ಅವಕಾಶವಿಲ್ಲ. ಮೈಸೂರು ಮೈಸೂರಾಗಿಯೇ ಉಳಿಯಬೇಕು. ಏತಕ್ಕೆಂದರೆ ಮೈಸೂರು ಈಗ ಇರುವ ರೀತಿಯಲ್ಲಿ ಆಡಳಿತವನ್ನು ನಡೆಸುವುದಕ್ಕೆ ಒಂದು ಸರಿಯಾದ unit ಆಗಿದೆ ಮತ್ತು ಈ ರೀತಿಯಾಗಿರುವುದಕ್ಕೆ ಜನಾಭಿಪ್ರಾಯ ಮೊದಲಿನಿಂದಲೂ ಅನುಕೂಲವಾಗಿದೆ. ಇದಕ್ಕೆ ಬೇಕಾದಷ್ಟು arguments ಇವೆ. ಆದರೆ ಈಗ ತಕ್ಕಷ್ಟು ಸಮಯವಿಲ್ಲದಿರುವುದರಿಂದ ಅವನ್ನು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ನನ್ನ ದೃಷ್ಟಿಯಲ್ಲಿಯೂ ಮತ್ತು ಇನ್ನೂ ಅನೇಕ ಮಾನ್ಯ ಸ್ನೇಹಿತರ ದೃಷ್ಟಿಯಲ್ಲಿಯೂ ಕೂಡ ಈ ರೀತಿ ಸಣ್ಣ ಸಣ್ಣ ಪ್ರಾಂತ

(ಶ್ರೀ ಜಿ. ಎ. ತಿಮ್ಮಪ್ಪಗೌಡ.)

ಗಳು ಆಗುವುದರಿಂದ ಆಡಳಿತ ಭದ್ರತೆಯು ದೃಷ್ಟಿಯಿಂದ ಬಹಳ ಅನುಕೂಲ ಎಂದು ಅಭಿಪ್ರಾಯವಿದೆ. ಅದಕ್ಕೆ ಕೆಲವರು ಎರಡು ಕೋಟಿ ಜನ ಸಂಖ್ಯೆ ಇರಬೇಕು, ಇನ್ನು ಕೆಲವರು ಒಂದು ಕೋಟಿ ಜನ ಸಂಖ್ಯೆ ಇರಬೇಕು, ಮತ್ತೆ ಕೆಲವರು 3 ಕೋಟಿ ಜನ ಸಂಖ್ಯೆ ಇರಬೇಕು ಎಂದು ಹೇಳಬಹುದು. ಆದರೆ ಪ್ರಪಂಚದಲ್ಲಿ ಯಾವ ದೇಶವನ್ನು ತೆಗೆದುಕೊಂಡರೂ ಕೂಡ, ರಷ್ಯಾ ದೇಶವನ್ನೇ ತೆಗೆದುಕೊಳ್ಳಲಿ, ಅಮೇರಿಕಾ, ಆಫ್ರಿಕಾ ದೇಶಗಳನ್ನೇ ತೆಗೆದುಕೊಳ್ಳಲಿ, ಯಾವ ಪ್ರಾಂತ್ಯವನ್ನು ನೋಡಿದರೂ ಕೂಡ ಕೆಲವು ನಾಲ್ಕಾರು ಪ್ರಾಂತ್ಯಗಳಲ್ಲಿ ಒಂದು ಕೋಟಿಗಿಂತ ಹೆಚ್ಚಾಗಿದೆಯೇ ಹೊರತು ಮಿಕ್ಕ ಎಲ್ಲಾ ಕಡೆಯೂ 35 ಲಕ್ಷಗಳಿಂದ ಹಿಡಿದು 1 ಕೋಟಿಗಿಂತ ಜಾಸ್ತಿ ಇರುವ ಪ್ರಾಂತಗಳೇ ಇಲ್ಲ. ಅಲ್ಲಿ ಆಡಳಿತ ಬಹಳ ಚೆನ್ನಾಗಿ ನಡೆದುಕೊಂಡು ಬರುತ್ತಿದೆ. ಇದನ್ನು ತಿಳಿದುಕೊಳ್ಳುವುದಕ್ಕೆ ನಾವು ಹೊರಗಡೆ ಹೋಗಬೇಕಾಗಿಲ್ಲ. ಮೈಸೂರು ದೇಶದಲ್ಲಿಯೂ ಕೂಡ ಇಲ್ಲಿಯವರೆಗೆ ಇಂಡಿಯಾ ದೇಶದ ಇತರ ಯಾವ ಪ್ರಾಂತ್ಯಗಳಿಗಿಂತಲೂ ದಕ್ಷತೆಯಲ್ಲಾಗಲೀ ಅಥವಾ ಇನ್ನು ಯಾವ ದೃಷ್ಟಿಯಿಂದ ನೋಡಿದರೂ ಕೂಡ ಆಡಳಿತ ಬಹಳ ಚೆನ್ನಾಗಿ ನಡೆದುಕೊಂಡು ಬಂದಿದೆ. ಹೀಗೆ ನಮ್ಮ ಆಡಳಿತ ಚೆನ್ನಾಗಿ ನಡೆದುಕೊಂಡು ಬಂದದ್ದರಿಂದ ನಮಗೆ ಎರಡು ಕೋಟಿ ಹೆಚ್ಚು, ಒಂದು ಕೋಟಿ ಇದ್ದರೆ ಒಳ್ಳೆಯದು. ಇನ್ನೊಂದು ಕಾರಣ ಹೇಳುತ್ತಾ ಬಂದರು: 'ಉತ್ತರ ಕರ್ನಾಟಕದವರಿಗೆ ಬೇರೆ ಸರ್ಕಾರವಿಲ್ಲ. ಕನ್ನಡಿಗರು ಹೀಗೆ ನಾಲ್ಕಾರು ಬೇರೆ ದೇಶಗಳಿಗೆ ಸೇರಿದ್ದರಿಂದ ಈಗ ಅವರನ್ನು ಏನು ಮಾಡಬೇಕು ! ಅದಕ್ಕೋಸ್ಕರ ಅವರು ನಮ್ಮ ಜೊತೆಗೆ ಸೇರುವುದಕ್ಕೆ ಬರುತ್ತಿದ್ದಾರೆ' ಎಂದು ಸಂಕಟದಿಂದ ಹೇಳಿದರು. ಆದರೆ ನಾನು ಹೇಳುತ್ತೇನೆ, ಹಿಂದೆ ಇದ್ದ ಸ್ಥಿತಿಗತಿಗಳಿಗೂ ಈಗಿನ ಸ್ಥಿತಿಗತಿಗಳಿಗೂ ವ್ಯತ್ಯಾಸವಿದೆ. ಹಿಂದೆ ಮದರಾಸು ಮತ್ತು ಬೊಂಬಾಯಿ ಪ್ರಾಂತಗಳಿಗೆ ಸೇರಿದ ಕನ್ನಡ ಪ್ರದೇಶಗಳು ಮದರಾಸು ಅಥವಾ ಬೊಂಬಾಯಿಗೆ ಬಹಳ ದೂರವಾಗಿದ್ದವು. ಅವು ದೊಡ್ಡ ಪ್ರಾಂತಗಳಾದುದರಿಂದಲೂ ಈ ಕನ್ನಡ ಪ್ರದೇಶಗಳು ಆಡಳಿತ ಕೇಂದ್ರಗಳಿಗೆ ಬಹಳ ದೂರವಾಗಿದ್ದುದರಿಂದಲೂ ಆಯಾ ಸರ್ಕಾರಗಳಿಗೆ ಅವುಗಳ ಮೇಲೆ ನಿಗಾ ಕೊಡುವುದಕ್ಕೆ ಸಾಧ್ಯವಿಲ್ಲದೆ ಕನ್ನಡ ಮಾತನಾಡತಕ್ಕ ಪ್ರದೇಶಗಳು ಹಿಂದುಳಿಯಬೇಕಾಯಿತು. ಈಗ ಅಂಥ ಪ್ರದೇಶಗಳೆಲ್ಲವೂ ಸೇರಿ ಸ್ವತಂತ್ರವಾಗಿ ಒಂದು ಕರ್ನಾಟಕ ಪ್ರಾಂತವನ್ನು, ಒಂದು ಕೋಟಿ ಪ್ರಜಾಸಂಖ್ಯೆಯಿರುವ ಒಂದು ಪ್ರಾಂತವನ್ನು ಮಾಡಿಕೊಂಡು, ಒಂದು viable unit ಮಾಡಿಕೊಂಡು ಅಭಿವೃದ್ಧಿ ಮಾಡಿಕೊಳ್ಳಿ ಎಂದರೆ, ಇಲ್ಲ ಮೈಸೂರಿಗೇ ಸೇರುತ್ತೇವೆ, ನೀವೂ ಇದೇ ತೊಂದರೆ ಅನುಭವಿಸಿ ಎಂದು ಹೇಳಿದರೆ ಅದಕ್ಕೇನು ಹೇಳುವುದು ? ನಾವೂ ತೊಂದರೆ ಅನುಭವಿಸಬೇಕಾಗುತ್ತದೆ ಅಥವಾ ಜಗಳವಾಡಬೇಕಾಗುತ್ತದೆ.

5-30 P.M.

ಅಧ್ಯಕ್ಷರು.—ಮೈಸೂರಿನವರು ಜಗಳವಾಡುವುದಿಲ್ಲವೆಂದು ಗೊತ್ತು ! (ನಗು !)

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಅದಕ್ಕೇ ನಮ್ಮಲ್ಲಿಗೆ ಬರಬೇಕೆನ್ನುವುದು.

ಬಹಳ ಹಿಂದೆ, ಈ ಗೊಂದಲ ಹುಟ್ಟುವುದಕ್ಕಿಂತ ಮುಂಚೆ, ಪಜಲಾಲಿ ಕಮಿಷನ್ ವರದಿ ಬರುವುದಕ್ಕಿಂತ ಮುಂಚೆ, ನಮ್ಮ ಪ್ರಾಂತಗಳ ಮತ್ತು ಕೋಮುವಾರು ಗೊಂದಲಕ್ಕೆ ಸಿಕ್ಕದೇಯಿರುವ ಕೆಲವು ಮಹನೀಯರು ತಮ್ಮ ಅಭಿಪ್ರಾಯವನ್ನು ಹಿಂದಿನ ಕಾಲದಲ್ಲೇ ಹೇಳಿದ್ದಾರೆ.

Lord Mountbatten, the last Viceroy of India, replying to the Civic Address at Bangalore stated :

> "I am not at all surprised to hear of such progress because Mysore State in company with other major States of the South has long been famed for its progressive outlook in all directions and for the high standards it has set in its social activities. I am sure that States such as Mysore have a big part to play in the India of the future . . . . I have always been in favour of mediatization of small States and the formation of larger viable units. Mysore, of course, continues to stand as a major State in its own right."

ಆದ್ದರಿಂದ, ಮೈಸೂರಿನ ಕೀರ್ತಿ ಹರಡಿದೆ- ಈ ಕೀರ್ತಿ ಏನಿದೆಯೋ ಅದನ್ನು ಅಳಿಸುವುದಕ್ಕೆ ಹೋಗಬೇಡಿ. ಮೈಸೂರು ಮಾದರಿಯಾಗಿದ್ದುಕೊಂಡು, ಮೈಸೂರಿನ ಅಭಿವೃದ್ಧಿ, ವೈಶಿಷ್ಟ್ಯಗಳನ್ನು ನೋಡಿಕೊಂಡು, ಇತರ ಪ್ರಾಂತಗಳೂ ಅಭಿವೃದ್ಧಿಗೆ ಬರುವುದಕ್ಕೆ ಪ್ರಯತ್ನ ಪಡಲಿ.

It is not Mysore going to Dharwar. It is Dharwar coming to Mysore. ಇದೇರೀತಿ ಹಿಂದಿದ್ದ ದಿವಾನರು ಅಭಿಪ್ರಾಯ ಪಟ್ಟಿದ್ದಾರೆ. ಶ್ರೀಮಾನ್ ಭೀಮಪ್ಪನಾಯಕರು ಹೇಳಿದ ಹಾಗೆ ಹಿಂದಿದ್ದ ಸರ್ಕಾರ ಬೇರೆ ರೀತಿಯದಿರಬಹುದು. ಆದರೆ ಬಹುಕಾಲ ಆಡಳಿತ ನಡೆಸಿದವರೂ ಹಿರಿಯರೂ ರಾಜಕಾರಣಿಗಳೂ ಆದವರ ಅಭಿಪ್ರಾಯಕ್ಕೆ ಮನ್ನಣೆ ಕೊಡಲೇಬೇಕು. ಈಗಲೂ ಇಲ್ಲಿಯೂ ಕೂಡ ಪ್ರಜಾಪ್ರಭುತ್ವಕ್ಕೆ ವಿರೋಧವಾಗಿ ಕೆಲಸಮಾಡುವವರಿದ್ದಾರೆ. ಇವರಿಗೆ ಮಾತ್ರ ಮನ್ನಣೆ ಕೊಟ್ಟು ಅವರಿಗೆ ಮಾತ್ರ ಏಕೆ ಕೊಡುವುದಿಲ್ಲ ? ಶ್ರೀ ಎ. ರಾಮಸ್ವಾಮಿ ಮೊದಲಿಯಾರ್‌ರವರು ಏನು ಹೇಳಿದ್ದಾರೆಂಬುದನ್ನು ನೋಡಿ.

> "Mysore has earned for itself a unique place in the polity of India developing for a long time its own tradition and individuality. It is the duty of every Mysorean to safeguard them. Mysore has everything to lose by its merger with Karnataka and its alround progress and advancement will be seriously jeopardised. I ardently hope that Mysoreans will not be

carried away by slogans and shibboleths and that they will do everything to safeguard its cultural and economic glory."

ಶ್ರೀ ಜೆ. ಮಹಮ್ಮದ್ ಇಮಾಂ.—ಅವರು ದಿವಾನ್‌ರಾಗಿದ್ದಾಗ ತಾನೆ ಇದನ್ನು ಹೇಳಿರುವುದು ?

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇರಬಹುದು. ಆದರೇನು ?

ನಮ್ಮ ನೆಚ್ಚಿನ ಸ್ನೇಹಿತರಾದ ಶ್ರೀಮಾನ್ ಪಟ್ಟಾಭಿರಾಮನ್‌ರವರು ಒಂದು ಮಾತು ಹೇಳಿದರು, ಅದನ್ನು ಬಹಳ ವ್ಯಸನದಿಂದ ಕೇಳಿದೆ.

'Change is im:ninent and change is urgent' ಎಂದು ಹೇಳಿದರು. ಎಂದರೆ ಮೈಸೂರಿನ ರಾಜಕೀಯ ಕೀಳುದರ್ಜೆಗೆ ಬರುತ್ತಿದೆ ಎಂದು ಹೇಳಿದರು . . . .

ಶ್ರೀ ಕೆ. ಪಟ್ಟಾಭಿರಾಮನ್.—'ಕೀಳು' ಎಂದು ನಾನು ಹೇಳಲಿಲ್ಲ, ಅಂಥ ಪದವನ್ನೇಕೆ ಉಪಯೋಗಿಸುತ್ತೀರಿ !

ಶ್ರೀ ಜಿ. ಎ. ತಿಮ್ಮಪ್ಪಗೌಡ.—Degenerate ಆಗುತ್ತಿದೆ ಎಂದು ಹೇಳಿದರು. ಅವರು ಹೇಳಿದರಲ್ಲ, ಇಲ್ಲಿ ನ್ಯಾಯಕ್ಕೆ ಮನ್ನಣೆ ದೊರೆಯುವುದಿಲ್ಲ ಎಂದು ಹೇಳಿದರು. ಅವರು ಹೇಳಿದುದರ (spirit) ಭಾವವನ್ನು ಮಾತ್ರ ಹೇಳುತ್ತೇನೆ. 'ಹಿತ್ತಲ ಗಿಡ ಮದ್ದಲ್ಲ' ಎಂದು ಹೇಳುವ ಹಾಗೆ ನಮ್ಮವರಲ್ಲಿರುವ ಒಳ್ಳೆಯ ಗುಣ ನಮಗೆ ಕಾಣುವುದಿಲ್ಲ. ಕರ್ನಾಟಕದಲ್ಲಿ ವಿಲೀನಗೊಂಡರೆ ನಮ್ಮಲ್ಲಿರುವ ಲೋಪದೋಷಗಳು ತಿಳಿಯಾಗುತ್ತವೆ, ಇವನ್ನು overcome ಮಾಡಬಹುದು, ವಿಶಾಲ ಕ್ಷೇತ್ರವನ್ನು ಹೊಂದಬಹುದು ಎಂದು ಅವರು ತಿಳಿದುಕೊಂಡಿದ್ದರೆ ಆ ಅಭಿಪ್ರಾಯ ಸರಿಯಲ್ಲವೆಂದು ಹೇಳುತ್ತೇನೆ. ಕರ್ನಾಟಕದವರನ್ನು ಅಲ್ಲಗಳೆಯಬೇಕೆಂದೇನೂ ನಾನು ಹೇಳುವುದಿಲ್ಲ. ಆದರೆ ಅಲ್ಲಿನ ರಾಜಕೀಯ ಹೇಗಿದೆ ಎಂಬುವನ್ನು ತಿಳಿಸಲು ಹೇಳುತ್ತೇನೆ. ಕೆಲವು ಮುಖಂಡರು ಅಲ್ಲಿನ ರಾಜಕೀಯದ ವಿಚಾರವನ್ನು ಮಾತನಾಡುತ್ತಾ ಅಲ್ಲಿನ ಪರಿಸ್ಥಿತಿಯನ್ನು ಬಗೆಹರಿಸಲು ಸಾಧ್ಯವಿಲ್ಲವೆಂದು ಬೇಸರವನ್ನೂ ಅಸಮಾಧಾನವನ್ನೂ ವ್ಯಕ್ತಪಡಿಸಿದ್ದಾರೆ. ಬೇಕಾದರೆ ನಾನು ಅವರ ಹೆಸರುಗಳನ್ನು ಕೂಡ ಹೇಳುತ್ತೇನೆ. ಸಭಾಪತಿಗಳಿಗೂ ಕೂಡ ಗೊತ್ತಿದೆ. ಡೆಲ್ಲಿಯಲ್ಲಿ ಕರ್ನಾಟಕದ ಮುಖಂಡರ ಒಂದು ಸಭೆಯಾಯಿತು. ಶ್ರೀಮಾನ್ ನಿಜಲಿಂಗಪ್ಪನವರೂ ಭಾಗವಹಿಸಿದ್ದರು. ಅಲ್ಲಿಗೆ ಮೈಸೂರಿನವರೂ ಹೋಗಿದ್ದರು. ಅಲ್ಲಿ ಮೈಸೂರಿನವರು ಮಾತನಾಡುತ್ತಾ ಕುಳಿತುಕೊಂಡಿದ್ದರು. ಆಗ ಕರ್ನಾಟಕದವರಿಗೇ ಭಿನ್ನಾಭಿಪ್ರಾಯ ವಾಗ್ವಾದಗಳು ಪ್ರಾರಂಭವಾಯಿತು. ಒಬ್ಬರನ್ನೊಬ್ಬರು ಆಕ್ಷೇಪಣೆ ಮಾಡುತ್ತಾ 'ನೀವು ಹೀಗೆ ಮಾಡಿದಿರಿ, ಹಾಗೆ ಮಾಡಿದಿರಿ, ನಮಗೆ ಸ್ಥಾನಮಾನವಿಲ್ಲ, ಇತರರಿಗೆ ಅವಕಾಶವಿಲ್ಲ' ಇತ್ಯಾದಿ ಏನೇನೋ ಮಾತುಗಳು ನಡೆಯುವುದಕ್ಕೆ ಪ್ರಾರಂಭವಾಗಿ, ಕೊನೆಗೆ ಮೀಟಿಂಗೇ ನಡೆಯಲಿಲ್ಲ. ಹೀಗೆ ಜಗಳದಲ್ಲೇ ಮುಕ್ತಾಯವಾಯಿತು. ಆಗ ಮೈಸೂರಿನವರು ಅದನ್ನು ನೋಡಿ ಬೇಸರಗೊಂಡು ವಾಪಸು ಹೋದರು. ಇಷ್ಟು ಚೆನ್ನಾಗಿದೆ ಅಲ್ಲಿನ ರಾಜಕೀಯ ! ಇಂಥ ಉದಾಹರಣೆಗಳನ್ನು ಇನ್ನೂ ಬೇಕಾದರೆ ಹೇಳುತ್ತೇನೆ. ಈ ಹೊತ್ತು ದೊಡ್ಡ ದೊಡ್ಡ ದರ್ಜೆಯಲ್ಲಿ, ಉನ್ನತಮಟ್ಟದಲ್ಲಿರುವ ನಾಯಕರು ಮಾತನಾಡುವುದನ್ನೂ ಕೇಳಿದ್ದೇನೆ. ಕರ್ನಾಟಕದ ರಾಜಕೀಯದಲ್ಲಿ ಬೇಯುವುದು ಬಹಳ ಕಷ್ಟ, ಮೈಸೂರಿನವರು ಬಹಳ smooth-going people ಎಂದು ಹೇಳಿರುವುದನ್ನು ಕೇಳಿದ್ದೇನೆ. ಈ ದೃಷ್ಟಿಯಿಂದ ಹೇಳುತ್ತಿದ್ದೇನೆ. ಅವರಲ್ಲಿ ಎಷ್ಟು ಅನುಕೂಲವಿದೆ ಎಂಬುದು ನಮಗೆ ಗೊತ್ತಿದೆ. ಅವರು ಒಂದು ಕೋಟಿ ಜನರಿದ್ದಾರೆ. ಬೇಕಾದಷ್ಟು ಅಂಕಿ ಅಂಶಗಳನ್ನು ಕೆಲವರು ಹೇಳಿದರು. ಅಲ್ಲಿ ಆ ಅನುಕೂಲವಿದೆ, ಈ ಅನುಕೂಲವಿದೆ, ನಮಗೂ ಅನುಕೂಲವಾಗುತ್ತದೆ ಎಂದು ಹೇಳಿದರು. ಅವರು ಹಾಗೆ ತಿಳಿದುಕೊಂಡಿದ್ದರೆ, ಅದನ್ನೆಲ್ಲಾ ಅವರೇ ಇಟ್ಟುಕೊಳ್ಳಲಿ. ಇನ್ನೊಂದು ವಿಷಯ ಹೇಳುತ್ತೇನೆ. ನಾನು ಕೋಮುವಾರು ಭಾವನೆಯಿಂದೇನೂ ಹೆದರುವುದಿಲ್ಲ. ಈ ಶ್ರೀಮಾನ್ ಹನುಮಂತಯ್ಯನವರಿಗೆ ಯಾರು ಬೆಂಬಲ ಕೊಡುತ್ತಿದ್ದಾರೆಂಬುದು ತಿಳಿದವರಿಗೆ ಗೊತ್ತೇ ಇದೆ. ಇದು ರಾಜಕೀಯ.

ಶ್ರೀ ಕೆ. ಪಟ್ಟಾಭಿರಾಮನ್.—ಅದನ್ನೇ ನಾನೂ ಹೇಳಿದ್ದು !

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಯಾವ ಮನುಷ್ಯನಿಗೇ ಆದರೂ enlightened self-interest ಇದ್ದೇ ಇರುತ್ತದೆ, ಇದು ಇರಲೇಬೇಕು. ಯಾವ ಮನುಷ್ಯನಿಗೇ ಆಗಲಿ ದೇಶಕ್ಕೇ ಆಗಲಿ ತಾನು ಮುಂದುವರಿಯುವುದಕ್ಕೆ enlightened self-interest ಇರಬೇಕು. ನನಗೆ ಕರ್ನಾಟಕ ಪ್ರಾಂತದವರ ಮೇಲೆ ಹೊಟ್ಟೇಕಿಚ್ಚೇನೂ ಇಲ್ಲ. ನಮ್ಮ ಅನುಕೂಲಗಳನ್ನು ಕುಂಠಿತಮಾಡಬೇಡಿ, ಒಟ್ಟಿಗೆ ಸೇರುವುದರಿಂದ ಕುಂಠಿತವಾಗುತ್ತದೆ, ನಮಗೆ ಅನಾನುಕೂಲವಾಗುತ್ತದೆ, ಬೇರೆ ಪ್ರಾಂತ ಮಾಡಿಕೊಳ್ಳಿ ಎಂದು ಹೇಳಿದರೆ ಇದಕ್ಕೆ ಒಪ್ಪದಿದ್ದರೆ ಏನು ಮಾಡುವುದು ?

ಇನ್ನೊಂದು ವಿಷಯ ಹೇಳಿದರು, ಬೇರೆ ರಾಜಧಾನಿಯನ್ನು ಏರ್ಪಾಡು ಮಾಡುವುದರಿಂದ ಲಕ್ಷಾಂತರ ರೂಪಾಯಿ ಖರ್ಚಾಗುತ್ತದೆಂದು ಹೇಳಿದರು. ಈಗಾಗಲೇ ನಮ್ಮ ಸಂಸ್ಥಾನದಲ್ಲಿ ಆಡಳಿತಕ್ಕಾಗಿ ಕೋಟ್ಯಂತರ ರೂಪಾಯಿ ಖರ್ಚಾಗುತ್ತಿದೆ. ಒಂದು ಕರ್ನಾಟಕವಾದರೆ ದೂರದ ಕರ್ನಾಟಕ ಪ್ರಾಂತದಿಂದ ಇಲ್ಲಿರುವ ಹೈಕೋರ್ಟಿಗೆ ಜನ ಬರಬೇಕಾದರೆ ಮುನ್ನೂರು ನಾನೂರು ಮೈಲಿ ಬರಬೇಕಾಗುತ್ತದೆ. ಇದು ಕಷ್ಟ. ಆದುದರಿಂದ ಹುಬ್ಬಳ್ಳಿಯಲ್ಲೋ ಧಾರವಾಡದಲ್ಲೋ ಹೈಕೋರ್ಟ್ ಬೆಂಚನ್ನು ಏರ್ಪಾಡು ಮಾಡಬೇಕಾಗುತ್ತದೆ. ಹಾಗೆಯೇ ರೆವಿನ್ಯೂ ಕಮಿಷನರ ಕೋರ್ಟನ್ನೂ ಅಲ್ಲಿ ಬೇರೆ ಮಾಡಬೇಕಾಗುತ್ತದೆ. ಇದಕ್ಕೆಲ್ಲಾ ಖರ್ಚು ಹೆಚ್ಚಾಗಿಯೇ ಆಗುತ್ತದೆ. ಅಧಿಕಾರಿಗಳನ್ನು ಹೆಚ್ಚಿಸಬೇಕಾಗುತ್ತದೆ. ಈ ಹೊತ್ತಿನ ದಿವಸ ಆಡಳಿತ ಸಿಬ್ಬಂದಿಯ ಸಂಬಳ ಸಾರಿಗೆಗಾಗಿ ವರ್ಷಕ್ಕೆ ಎಂಟುಕೋಟಿ ರೂಪಾಯಿ ಖರ್ಚು ಮಾಡುತ್ತೇವೆ, ಆಮೇಲೆ ಇದಕ್ಕೆ ಎರಡು ಮೂರರಷ್ಟು ಬೇಕಾಗುತ್ತದೆ. ಅಲ್ಲಿಯೂ ಕಟ್ಟಡಗಳೂ ಬೇಕಾಗುತ್ತವೆ. ನೌಕರರ ಸಂಬಳ ಸಾರಿಗೆಗಳನ್ನು ಹೆಚ್ಚಿಸಬೇಕಾಗುತ್ತದೆ. ಈಗಾಗಲೇ ಎನ್.ಜಿ.ಓ.ಗಳಲ್ಲಿ ಏಕ ಕರ್ನಾಟಕ ವಾದಿಗಳು ನಿಮ್ಮ ಸಂಬಳಗಳನ್ನು ಹೆಚ್ಚಿಸುತ್ತೇವೆಂದು ಪ್ರಚಾರ ಮಾಡುತ್ತಿದ್ದಾರೆ. ಏಕೀಕರಣ ಮಾಡಿದರೆ ಅವರ ಸಂಬಳ ಸಾರಿಗೆಗಳನ್ನು ಹೆಚ್ಚಿಸಲೇ ಬೇಕಾಗುತ್ತದೆ. ಹಾಗೆ ಮಾಡಿದರೆ ಬಹಳ ತೊಂದರೆ ಬರುತ್ತದೆ. ಉತ್ತರ ಕರ್ನಾಟಕದಲ್ಲಿರುವ ನೌಕರರ ಸಂಬಳಗಳನ್ನು ಇಲ್ಲಿಗೆ ಸೇರಿದಮೇಲೆ ಕಡಮೆ ಮಾಡುವುದಕ್ಕಾಗುವುದಿಲ್ಲ. ಹಾಗೆ ಮಾಡಿದರೆ ತೊಂದರೆಯಾಗುತ್ತದೆ. ಹೀಗೆ ಇನ್ನೂ ಅನೇಕ ವಿಷಯಗಳಲ್ಲಿ ತೊಂದರೆಗಳಿವೆ. ಉತ್ತರ ಕರ್ನಾಟಕವನ್ನು ಬೇರೆ ಮಾಡಿಕೊಂಡು ಆದಕ್ಕೇ ಬೇರೆ ರಾಜಧಾನಿ

(ಶ್ರೀ ಜಿ. ಎ. ತಿಮ್ಮಪ್ಪಗೌಡ.)

ಮಾಡುವುದಕ್ಕೆ ಎಷ್ಟು ಖರ್ಚಾಗುತ್ತದೆಯೋ ಅದಕ್ಕಿಂತ ಹೆಚ್ಚು ಖರ್ಚು ಮೈಸೂರಿನೊಡನೆ ಸೇರಿಸಿದರೆ ಆಗುತ್ತದೆ. ಅಲ್ಲದೆ ಜಟಿಲವಾದ ಇನ್ನೂ ಹೆಚ್ಚು ಸಮಸ್ಯೆಗಳುಂಟಾಗುತ್ತವೆ. ಈ ಹೊತ್ತೇನೋ ತಮಾಷೆಗಾಗಿ ಉದ್ವೇಗದಿಂದ ಅಥವಾ ಆಸೆಯಿಂದ, ದೊಡ್ಡ ಪ್ರಾಂತವಾದರೆ ಅನುಕೂಲವಾಗಬಹುದೆಂದು ನನ್ನ ಸ್ನೇಹಿತರು ಹೇಳುತ್ತಿದ್ದಾರೆ. ಅದು ನಿಜವಲ್ಲ. ಅದರಿಂದ ಬಹಳ ತೊಂದರೆಗಳು ಬರುತ್ತವೆ. ಉದಾಹರಣೆಗೆ, ಬಳ್ಳಾರಿಯನ್ನು ತೆಗೆದುಕೊಂಡರೆ, ನಾವು ಕೇಳಿರುವ ಹಲವು ಪ್ರಶ್ನೆಗಳಿಗೆ ಸರ್ಕಾರ ಕೊಟ್ಟಿರುವ ಉತ್ತರಗಳಿಂದ ಗೊತ್ತಾಗುತ್ತದೆ. ಬಳ್ಳಾರಿ ಜಿಲ್ಲೆಗೆ ಇತರ ಜಿಲ್ಲೆಗಳಿಂದ ಹೆಚ್ಚು ಹಣವನ್ನೊದಗಿಸಿದ್ದಾರೆ. ಸಣ್ಣ ವಿಷಯಗಳಲ್ಲಿ ನೋಡಿದರೂ ಉದಾಹರಣೆಗೆ, ಬುರ್‌ಡೋಜರುಗಳ ವಿಷಯ ತೆಗೆದುಕೊಳ್ಳೋಣ, ಇತರ ಜಿಲ್ಲೆಗಳಿಗೆ ಒಂದೊಂದು ಕೊಟ್ಟರೆ ಬಳ್ಳಾರಿಗೆ ನಾಲ್ಕು ಕೊಟ್ಟಿದ್ದಾರೆ. ನಾವು ನಮ್ಮ ಜಿಲ್ಲೆಗೆ ಪಶು ವೈದ್ಯಶಾಲೆ ಬೇಕೆಂದು ಕೇಳಿದರೆ, ಬಳ್ಳಾರಿಯವರು ನಮ್ಮ ಬಳ್ಳಾರಿಯಲ್ಲಿ ಒಂದು ಕೂಡ ಇಲ್ಲ, ನಿಮ್ಮಲ್ಲಿ ಇದ್ದರೂ ನಾಲ್ಕು ಕೊಡಿ ಎಂದು ಕೇಳುತ್ತೀರಲ್ಲ ಎಂದು ಹೇಳುತ್ತಾರೆ. ಅಲ್ಲಿಯೂ ಆಸ್ಪತ್ರೆಗಳು, ವೆಟರಿನರಿ ಆಸ್ಪತ್ರೆಗಳು ಇವೆ. ಆದರೂ ಮದರಾಸಿನ ಕಡೆಯವರೂ, ಬೊಂಬಾಯಿನ ಕಡೆಯವರೂ ಇಲ್ಲಿ ಬಂದು ನಮ್ಮೊಡನೆ ಸೇರಿದರೆ, ಹೆಚ್ಚು ಕೇಳದೆ ಒಂದೆರಡು ವರ್ಷ ಸುಮ್ಮನೆ ಇರಬಹುದು. ಆಮೇಲೆ ಸುಮ್ಮನಿರುತ್ತಾರೆಯೆ ? ಆಗ ನಮಗೆ ತೊಂದರೆಯಾಗುವುದಿಲ್ಲವೇ ? ಅದರಿಂದ ನಮಗೆ ಹೊಟ್ಟೆ ಉರಿಯುವುದಿಲ್ಲವೇ ? ನಮ್ಮ ಜನರಿಗೆ ಒದಗಿಸುವ ಅನುಕೂಲಗಳು ಕಡಮೆಯಾದರೆ, ನಾನು ಅವರ ಪ್ರತಿನಿಧಿಯಾಗಿ ನಮ್ಮ ಜನರ ಹಿತ, ಅನುಕೂಲ ನೋಡಬೇಕು. ಉತ್ತರ ಕರ್ಣಾಟಕದವರಿಗೂ ಪೂರ್ತಿ ಅನುಕೂಲ ದೊರೆಯುವುದು ಸದ್ಯಕ್ಕೆ ಸಾಧ್ಯವಾಗುವುದಿಲ್ಲ. ನಮಗೆ ಕಡಮೆಮಾಡಿಕೊಂಡರೂ ಅವರನ್ನು ಸಮಾಧಾನಪಡಿಸಬೇಕಾದರೆ ಇನ್ನೂ ಹದಿನೈದು ಇಪ್ಪತ್ತು ವರ್ಷಗಳಾಗುತ್ತವೆ. ನಮ್ಮಲ್ಲಿಯೂ ಅನುಕೂಲ ಕಡಮೆಯಾಯಿತೆಂದು ಅಸಮಾಧಾನ ಬರುತ್ತದೆ. ಆದುದರಿಂದ ಹೀಗಾಗುವುದಕ್ಕೆ ಬದಲು, ಅವರು ಒಂದು ಕೋಟಿ ಜನರಿದ್ದಾರೆ, ಬೇರೆ ಪ್ರಾಂತ ಮಾಡಿಕೊಳ್ಳಲಿ, ಬೇರೆ ರಾಜಧಾನಿ ಮಾಡಿಕೊಳ್ಳಲಿ, ಮೈಸೂರಿಗೆ ಕೊಡುವ ಹಣದಲ್ಲಿ ಅವರೇ ಬೇರೆ ರಾಜಧಾನಿ ಕಟ್ಟಿಕೊಳ್ಳಬಹುದು. ಅವರು ಬಂದರೂ ತುಂಗಭದ್ರಾ ಜಲಾಶಯಕ್ಕೂ ಉತ್ತರ ಕರ್ಣಾಟಕದ ಜಲಾಶಯಗಳಿಗೂ ಮೂವತ್ತು ನಲವತ್ತು ಕೋಟಿ ರೂಪಾಯಿ ಸಾಲವನ್ನು ಮಾಡಿದ್ದಾರೆ. ಈ ಸಾಲವಿದ್ದೇ ಇರುತ್ತದೆ. ಇವುಗಳಿಂದ ಅಲ್ಲಿನ ಪ್ರಾಂತದವರಿಗೇ ಅನುಕೂಲವಾಗಬಹುದು. ಮೈಸೂರು ಜನರ ಸೌಕರ್ಯ ದೃಷ್ಟಿಯಿಂದ ನಮಗೆ ವರಮಾನ ಬರುವುದಿಲ್ಲ. ಹೀಗೆ ಅನೇಕ ವಿಧವಾದ ತೊಂದರೆಗಳುಂಟಾಗುತ್ತವೆ. ಇದರಿಂದ ಜನರಲ್ಲಿ ಬಹಳ ಅಸಮಾಧಾನವುಂಟಾಗುತ್ತದೆ. ಈ ಕಾರಣಗಳಿಂದ ಮೊದಲಿನಿಂದಲೂ ಮೈಸೂರು ದೇಶದಲ್ಲಿ ಈ ವಿಷಯದಲ್ಲಿ ಅಸಮಾಧಾನವಿದೆ.

ಇನ್ನು ಒಂದೇ ಒಂದು ವಿಷಯ ಹೇಳಿ ಮುಗಿಸುತ್ತೇನೆ. ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರಿಗೂ ಇದು ಗೊತ್ತಿದೆ. ಹಿಂದೆ 1949ನೆಯ ಇಸವಿಯ ಅಕ್ಟೋಬರ್ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನದಲ್ಲಿ ಈ ಪಬ್ಲಿಕ್ ಸರ್ವಿಸ್ ಕಮಿಷನ್ನಲ್ಲಿ ಮೆಂಬರಾಗಿರುವ ಮಲ್ಲಿಕಾರ್ಜುನಪ್ಪನವರು, ನಾನು, ಗುಪ್ತರವರೇ ಮುಂತಾಗಿ 7-8 ಜನ ಸೇರಿ ಒಂದು ನಿರ್ಣಯವನ್ನು ಇಟ್ಟಿದ್ದೆವು. ಅದಕ್ಕೆ ಕಾರಣ, ಆಗ್ಗೆ ಅತ್ತ ಕಡೆಯಲ್ಲಿ ಪ್ರಾಂತ್ಯ ಪುನರ್ವಿಂಗಡಣೆಯ ವಿಚಾರದಲ್ಲಿ ಕೆಲಸ ಕಾರ್ಯಗಳು ನಡೆಯುತ್ತಿದ್ದು ಮೈಸೂರು ಮತ್ತು ಇತರ ಕರ್ಣಾಟಕ ಪ್ರಾಂತಗಳೂ ಸೇರುವ ಸಂಭವವಿದೆಯೆಂದು ವರ್ತಮಾನ ಬಂದು ನಾವುಗಳು ಆತುರ ಆತುರವಾಗಿ ಇಂಥ ಒಂದು ವಿಶೇಷ ನಿರ್ಣಯವನ್ನು ಸಭೆಯ ಮುಂದಿಟ್ಟಿದ್ದೆವು. ಆಗ ಪಾರ್ಟಿಯ ನಾಯಕರಾಗಿ ಇವರೂ ಇದ್ದರು. ಆಗ್ಗೆ ಆ ಅಸೆಂಬ್ಲಿಯಲ್ಲಿ ಸರ್ವಾನುಮತದಿಂದ ಮೈಸೂರು ಮೈಸೂರಾಗಿಯೇ ಉಳಿಯಬೇಕು, ನಾವು ಬೇರೆ ಕಡೆಗೆ ಸೇರುವುದಕ್ಕೆ ಸಿದ್ಧವಾಗಿಲ್ಲ ಎಂದು ತೀರ್ಮಾನವಾಯಿತು. ಇದೇ ರೀತಿ ಅನೇಕ ಕಡೆಗಳಲ್ಲಿ ಇದಕ್ಕೆ ವಿರೋಧವಿದ್ದೇ ಇತ್ತು. ಹೀಗಿದ್ದರೂ ಮಾನ್ಯ ಸದಸ್ಯರು ಕಾಂಗ್ರೆಸ್ ಕಮಿಟಿಯವರು ಬೀರೂರಿನಲ್ಲಿ, ದಾವಣಗೆರೆಯಲ್ಲಿ ತೀರ್ಮಾನ ಮಾಡಿರಲಿಲ್ಲವೇ, ಎಂದು ಪ್ರಶ್ನೆ ಮಾಡಿದರು. ಆಗಿರಬಹುದು. ಅದಕ್ಕೆ ಅಲ್ಲಿದ್ದ ಪರಿಸ್ಥಿತಿಯೇನೆಂಬುದನ್ನು ಸ್ವಲ್ಪಮಟ್ಟಿಗೆ ಗಮನಿಸಬೇಕು. ಕೆ.ಪಿ.ಸಿ.ಸಿ. ಅಧ್ಯಕ್ಷರಾದ ನಿಜಲಿಂಗಪ್ಪನವರೇ ಆ ಸಭೆಗಳಲ್ಲಿ ಅಧ್ಯಕ್ಷತೆಯಲ್ಲಿರುವುದು, ಬಳ್ಳಾರಿ ಸಿದ್ದಮ್ಮನವರೇ ಮುಂತಾದವರುಗಳು ಓಡಾಡಿಕೊಂಡು ಈ ರೀತಿಯ ನಿರ್ಣಯಗಳನ್ನು ತರುವುದು, ನಾವುಗಳೆಲ್ಲಾ "ಬೀಸುವ ದೊಣ್ಣೆ ತಪ್ಪಿದರೆ ಸಾವಿರ ವರ್ಷ ಆಯುಸ್ಸು" ಎನ್ನುವಂತೆ ನಮ್ಮ ಅವರ ಮನಸ್ಸಿನಲ್ಲಿ ಏಕೆ ಸುಮ್ಮನೆ ವಿರಸವುಂಟುಮಾಡಿಕೊಳ್ಳಬೇಕೆಂದು ಹೇಳಿ ಅವರು ಹಾಕಿದ ನಿರ್ಣಯಗಳಿಗೆ ಒಪ್ಪುತ್ತಾ ಬರುತ್ತಿದ್ದೆವು ಅಷ್ಟೆ. ಹತ್ತು ಗಂಟೆಗೆ ಎ.ಐ.ಸಿ.ಸಿ. ಸಭೆ ಸೇರುತ್ತಿತ್ತು. ಸಭೆಗೆ ಬಂದವರಲ್ಲಿ ಶೇಕಡ 75 ಜನಕ್ಕೆ ಕಡಿಮೆಯಿಲ್ಲದಷ್ಟು ಮಂದಿ ಮೈಸೂರು ಮೈಸೂರಾಗಿಯೇ ಇರಬೇಕೆಂದು ಹೇಳತಕ್ಕ ಪ್ರತಿನಿಧಿಗಳಿದ್ದರೂ ಏನೋ ಒಪ್ಪಿಗೆ ಕೊಡುತ್ತಿದ್ದೆವು. ಆದರೂ ನಾವು ಹೇಳುತ್ತಿದ್ದೆವು, ಕರ್ಣಾಟಕ ಐಕ್ಯವಾಗಬೇಕೆಂದು ಹೇಳಿದರೂ ನಾವುಗಳಾರೂ ಹೋಗುವುದಿಲ್ಲ ಎಂದು. ಹೀಗೆಲ್ಲಾ ಇತ್ತು, ಆಗಿನ ಸಮಾಚಾರ.

ಆಮೇಲೆ, ಫಜಲಾಲಿ ಕಮಿಷನ್ನಿನವರು ಮೈಸೂರಿನಲ್ಲಿ ಪ್ರಜಾಭಿಪ್ರಾಯ ಮೈಸೂರು ಮೈಸೂರಾಗಿಯೇ ಉಳಿಯುವ ವಿಷಯದಲ್ಲಿ ಅಷ್ಟುಮಟ್ಟಿಗೆ ಹೆಚ್ಚಾಗಿಲ್ಲವೆಂದು ಹೇಳಿದ್ದಾರೆ. ಈ ಕಮಿಟಿಯ ಸದಸ್ಯರೇನೋ ದೊಡ್ಡ ವ್ಯಕ್ತಿಗಳಾಗಿದ್ದರೂ ಈ ವಿಷಯದಲ್ಲಿ ಸರಿಯಾಗಿ ಹೇಳಿಲ್ಲವೆಂದು ನಾನು ಹೇಳಬೇಕಾಗಿದೆ.

ಶ್ರೀ ವಿ. ಆರ್. ನಾಯ್ಡು.—ಮಾನ್ಯ ಸದಸ್ಯರು ಧಾರವಾಡ ದೇಶ ಅಷ್ಟು ಫಲವತ್ತಾಗಿಲ್ಲವೆಂದು ಹೇಳುತ್ತೀರಲ್ಲಾ, ಅಲ್ಲಿನ ಎಮ್ಮೆಗಳು ಹೇಗೆ ಅಷ್ಟು ಹಾಲು ಕೊಡುತ್ತವೆ ?

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇಷ್ಟೆಲ್ಲಾ ಹೇಳಿದ ಮೇಲೆ, ಎಲ್ಲ ವಿಧದಲ್ಲೂ ಮೈಸೂರು ಮೈಸೂರಾಗಿಯೇ ಉಳಿಯುವುದು ಒಳ್ಳೆಯದು. ನಮ್ಮ ದೇಶದ ಜನರಿಗೂ ಸಮಾಧಾನವಾಗುತ್ತದೆ. ಉತ್ತರ ಕರ್ಣಾಟಕದವರೂ ನಮ್ಮ ಮೇಲೆ ಯಾವ ಅಪಾದನೆಯನ್ನು ಮಾಡುವುದಕ್ಕೂ ಅವಕಾಶವಿರುವುದಿಲ್ಲ. ಅವರು ತಮ್ಮದೇ ಒಂದು ರಾಜ್ಯ ಮಾಡಿಕೊಂಡರೆ ಅದರ ಕಷ್ಟ ಸುಖಗಳನ್ನು ಅವರೇ ಅನುಭವಿಸಬಹುದು. ಹಾಗಿಲ್ಲದೆ ನಮ್ಮ ಜೊತೆಯಲ್ಲಿ ಸೇರಿ ನಮಗೂ ತೊಂದರೆಯನ್ನುಂಟು ಮಾಡಿ, ನಮ್ಮ ನಾಯಕರು ಹಾಗೆ ಮಾಡಿದರು, ಹೀಗೆ ಮಾಡಿದರು ಎಂದು ಅಪಾದನೆ ಮಾಡುವುದೇಕೆ ? ಆದ್ದರಿಂದ ಕೇಂದ್ರ ಸರ್ಕಾರ

ದವರು ಇದನ್ನೆಲ್ಲಾ ದೂರಾಲೋಚನೆ ಮಾಡಿ, ದೇಶ ಎಲ್ಲಾ ಕಡೆಯಲ್ಲೂ ಸಮಾಧಾನ ಸ್ಥಿತಿಗೆ ಬಂದು, ನಮ್ಮ ಅಭಿವೃದ್ಧಿ ಕಾರ್ಯಗಳು ಒಂದು ಮಟ್ಟಕ್ಕೆ ಬರುವವರೆಗೂ ಈ ರಿಪೋರ್ಟನ್ನು ಜಾರಿಗೆ ತರುವುದನ್ನು ಮುಂದಕ್ಕೆ ಹಾಕಲಿ ಎಂದು ಹೇಳಿ ಮುಗಿಸುತ್ತೇನೆ.

ಶ್ರೀ ಆರ್. ಚೆನ್ನಿಗರಾಮಯ್ಯ (ಕೊರಟಗೆರೆ-ಮಧುಗಿರಿ—ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ಈಗ ನಾನು ಷುರು ಮಾಡಿದ್ದಕ್ಕೇ ಅನೇಕರು ಅಸಮಾಧಾನ ಪಡುತ್ತಿದ್ದಾರೆ.

Sri J. MOHAMED IMAM.—May I know how long are we continuing ?

Mr. SPEAKER.—We are going to close soon.

ಶ್ರೀ ಆರ್. ಚೆನ್ನಿಗರಾಮಯ್ಯ.—ಸ್ವಾಮಿ, ಈ ಎಸ್.ಆರ್.ಸಿ. ವರದಿಯ ಮೇಲೆ ಇದುವರೆಗೂ ಬಹಳ ಸ್ವಾರಸ್ಯವಾದ ಚರ್ಚೆ ನಡೆದಿದೆ. ಅದರಲ್ಲೂ ಶ್ರೀಮಾನ್ ತಿಮ್ಮಪ್ಪಗೌಡರ ಭಾಷಣವನ್ನು ನಾನು ಕೇಳಿದ ಮೇಲೆ ನನಗೇನು ಜ್ಞಾಪಕಕ್ಕೆ ಬರುತ್ತದೆಂದರೆ, ಮೊನ್ನೆ ತಾನೆ ರಷ್ಯ ಪ್ರೈಮ್ ಮಿನಿಸ್ಟರಾದ ಮಾರ್ಷಲ್ ಬುಲ್ಗಾನಿನ್‌ರವರು ನಮ್ಮ ದೇಶಕ್ಕೆ ಬಂದಿದ್ದವರು, ಇಲ್ಲಿ ಅವರಿಗೆ ದೊರೆತ ಅಭೂತಪೂರ್ವ ಸ್ವಾಗತವನ್ನು ನೋಡಿ ನಮ್ಮ ಜನರು ಎಂಥ ವಿಶಾಲ ಹೃದಯರು, ಉದಾತ್ತ ಮನೋಭಾವವುಳ್ಳವರು ಎಂದು ಕೊಂಡಾಡಿ, ನಮ್ಮ ದೇಶ ಕೈಗಾರಿಕೆಯಲ್ಲಿ ಮತ್ತು ಇತರ ವಿಷಯಗಳಲ್ಲಿ ಹಿಂದುಳಿದಿರುವುದನ್ನು ಸುಧಾರಿಸಲು ರಷ್ಯಾ ದೇಶದಿಂದ ಬೇಕಾದ ಸಹಾಯವನ್ನೆಲ್ಲಾ ನೀಡುವುದಾಗಿ ಭರವಸೆ ಕೊಟ್ಟಿದ್ದಲ್ಲದೆ, ಅಂಥ ಕಷ್ಟಕಾಲ ಬಂದರೆ ಒಂದು ಚೂರು ರೊಟ್ಟಿಯನ್ನು ನಾವಿಬ್ಬರೂ ಹಂಚಿಕೊಂಡು ತಿನ್ನೋಣ ಎಂದು ಹೇಳಿದರು. ನಮ್ಮ ಜನರ ಸ್ವಭಾವವನ್ನು ನೋಡಿ ಪಾಶ್ಚಾತ್ಯ ದೇಶದವರು ಅದರಲ್ಲೂ ಕಮ್ಯೂನಿಸ್ಟ್ ದೇಶದವರು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದ್ದಾರೆ. ಇಂಥ ಸನ್ನಿವೇಶದಲ್ಲಿ, ನಾವು ನಮ್ಮ ಪಕ್ಕದಲ್ಲಿರುವ ಜನರಿಗೆ, ಅದರಲ್ಲೂ ಬಂಧುಗಳು, ಸೋದರರಾಗಿದ್ದವರಿಗೆ, ಅಲ್ಪ ಸ್ವಲ್ಪ ನೆರವನ್ನು ನೀಡಿ, ಕಾರಣಾಂತರಗಳಿಂದ ಸ್ವಲ್ಪ ಹಿಂದೆ ಬಿದ್ದಿದ್ದರೂ ಅವರನ್ನೂ ಜೊತೆಗೆ ಕರೆದುಕೊಂಡು, ನಿಮ್ಮ ಸರ್ಕಾರದ ಅಧೀನದಲ್ಲೇ ಇರಗೊಡಿ ಎಂದರೆ ಎಷ್ಟೊಂದು ಭಿನ್ನಾಭಿಪ್ರಾಯ ಈ ಅಸೆಂಬ್ಲಿಯಲ್ಲಿ ಬಂದಿದೆಯೆಂದು ಆ ರಷ್ಯಾದ ಪ್ರಧಾನ ಮಂತ್ರಿಗಳವರಿಗೆ ಗೊತ್ತಾದರೆ ನಮ್ಮ ಮೇಲೆ ಎಷ್ಟು ಮಮತೆ ವಿಶ್ವಾಸವುಂಟಾಗಿತ್ತೋ ಅಷ್ಟೂ ಹೋಗುತ್ತದೆ!

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಅಣ್ಣತಮ್ಮಂದಿರಾದರೂ ಬೇರೆಯವರಾದ ಮೇಲೆ ಒಂದಾಗುವುದಕ್ಕೆ ಒಪ್ಪುತ್ತೀರೋ?

ಶ್ರೀ ಆರ್. ಚೆನ್ನಿಗರಾಮಯ್ಯ.—ಶ್ರೀಮಾನ್ ತಿಮ್ಮಪ್ಪಗೌಡರು ಅವರ ಅಣ್ಣತಮ್ಮಂದಿರ ವಿಚಾರದಲ್ಲಿ ಹೇಗೆ ವರ್ತಿಸುತ್ತಾರೋ ಗೊತ್ತಿಲ್ಲ.

ಈಗ ಮುಖ್ಯವಾಗಿ ಎರಡು ಕರ್ನಾಟಕವಾಗಬೇಕೇ ಒಂದು ಕರ್ನಾಟಕವಾಗಬೇಕೇ ಎಂಬ ವಿಷಯದಲ್ಲಿ ಬಹಳ ದೀರ್ಘವಾದ ಚರ್ಚೆಯಾಗಿದೆ. ನಮ್ಮ ಸ್ನೇಹಿತರನೇಕರು ಒಂದು ಕರ್ನಾಟಕಕ್ಕೆ ಬದಲಾಗಿ ಎರಡು ಕರ್ನಾಟಕವಾಗಬೇಕು, ಮೈಸೂರು ಮೈಸೂರಾಗಿಯೇ ಇರಬೇಕು, ಪಕ್ಕದಲ್ಲಿರುವ ಕನ್ನಡ ಮಾತನಾಡುವ ಜನರೇ ಸೇರಿ ಮತ್ತೊಂದು ಕರ್ನಾಟಕ ಮಾಡಿಕೊಳ್ಳಲಿ ಎಂದು ಹೇಳಿದ್ದಾರೆ. ಇಷ್ಟೇ ಅಲ್ಲದೆ ಬೇರೆ ಕಡೆಯಿಂದ ಬರತಕ್ಕ ಕನ್ನಡ ಸಹೋದರರುಗಳನ್ನು ಟೀಕೆ ಮಾಡುತ್ತಾ ನಾವು ಬೇಡ ಬೇಡವೆಂದರೂ ಬರುತ್ತಾರೆಂದೂ, ಕುತ್ತಿಗೆ ಕಿವುಚುವುದಕ್ಕೆ ಬರುತ್ತಾರೆಂದೂ, ಬಹಳ ವ್ಯಥೆಯಿಂದ ಹೇಳಿದರು. ನನಗಾದರೂ ಅನ್ನಿಸುತ್ತದೆ, ಆ ಮಾನ್ಯ ಸಹೋದರರು ಇಲ್ಲಿಗೆ ಬರುತ್ತಿರುವುದು ತಮಗೆ ಇರತಕ್ಕ ಅವಕಾಶಗಳನ್ನು ಬಿಟ್ಟು, ತಾವೇ ಪ್ರತ್ಯೇಕವಾಗಿ ಒಂದು ದೇಶವನ್ನು ಕಟ್ಟಿ, ಪ್ರತ್ಯೇಕ ಸರ್ಕಾರವನ್ನೂ, ಪ್ರತ್ಯೇಕ ಲೆಜಿಸ್ಲೇಚರನ್ನೂ ರಚಿಸಿಕೊಂಡು, ಅಲ್ಲಿ ಮುಖಂಡರಾಗಿ ಮಂತ್ರಿಗಳು, ಮುಖ್ಯಮಂತ್ರಿಗಳಾಗುವ ಎಲ್ಲಾ ಅವಕಾಶಗಳನ್ನೂ ತ್ಯಾಗಮಾಡಿ ನಮ್ಮ ದೇಶಕ್ಕೆ ಬರುತ್ತೇವೆನ್ನುವುದು ಅವರ ಹೃದಯ ವೈಶಾಲ್ಯವನ್ನೂ ತ್ಯಾಗ ಬುದ್ಧಿಯನ್ನೂ ತೋರಿಸುತ್ತದೆಯಲ್ಲವೇ? ಪ್ರತ್ಯೇಕ ದೇಶವೊಂದನ್ನು ಕಟ್ಟಬೇಕಾದರೆ ಎಷ್ಟೋ ಹಣ ಬೇಕಾಗುತ್ತದೆ; ನಮ್ಮ ದೇಶದಲ್ಲಿಯೇ ಈಗ 8 ಕೋಟಿ ರೂಪಾಯಿಗಳು ಸಿಬ್ಬಂದಿಗಾಗಿಯೇ ಖರ್ಚಾಗುತ್ತಿದೆ. ಅವರಿಗೂ ಹೆಚ್ಚು ಕಡಮೆ ಇಷ್ಟೇ ಬೇಕಾಗುತ್ತದೆ. ಹೊಸ ಕಾಲೇಜುಗಳನ್ನೂ, ವಿಶ್ವವಿದ್ಯಾನಿಲಯಗಳನ್ನೂ, ಹೊಸ ಸೆಕ್ರೆಟೇರಿಯಟ್ಟನ್ನೂ ಕಟ್ಟಿಕೊಳ್ಳಬೇಕಾಗುತ್ತದೆ; ಇಷ್ಟೆಲ್ಲಾ ಖರ್ಚು ಮಾಡುವುದಕ್ಕೆ ಬದಲಾಗಿ ಅದನ್ನೇ ದೇಶದ ಅಭಿವೃದ್ಧಿಗಾಗಿ ಖರ್ಚು ಮಾಡಿದರೆ, ನಾನಾ ಮುಖವಾಗಿ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ, ಎಂದು ನಮ್ಮ ಜೊತೆಯಲ್ಲಿ ಸೇರುತ್ತೇವೆನ್ನುವುದರಲ್ಲಿ ಅವರ ದುರುದ್ದೇಶವೇನಾದರೂ ಇದೆಯೆ ? ಇಲ್ಲಿಗೆ ಬಂದಿದ್ದರಿಂದ ಅವರಿಗೇನೂ ಹೆಚ್ಚಿನ ಲಾಭ ದೊರೆಯುವಂತಿಲ್ಲ. ಇನ್ನು ಸ್ವಲ್ಪ ನಷ್ಟವೇ ಅಗುತ್ತದೆ. ಹೀಗಿರುವಾಗ ನಾವು ಅವರನ್ನು ಸಂತೋಷದಿಂದ ಅಭಿನಂದಿಸಿ ಸ್ವಾಗತಿಸುವುದಕ್ಕೆ ಬದಲಾಗಿ ಇಂಥ ಆಪಾದನೆಗಳನ್ನು ಮಾಡುವುದು ಸರಿಯಲ್ಲವೆಂದು ಹೇಳುತ್ತೇನೆ. ಅಲ್ಲದೆ ಅವರನ್ನು ಪ್ರತ್ಯೇಕವಾಗಿ ಹೋಗಿರೆಂದರೆ, ಎಸ್.ಆರ್.ಸಿ. ರಿಪೋರ್ಟಿನಲ್ಲಿ ಹೇಳಿರತಕ್ಕ ನಾನಾ ಕನ್ನಡ ಪ್ರದೇಶಗಳು ಯಾವುವೂ ಮೈಸೂರನ್ನು ಬಿಟ್ಟು ಬೇರೆಯವರನ್ನು ಸೇರುವುದಕ್ಕೆ ಒಪ್ಪುವುದಿಲ್ಲ. ಹೈದರಾಬಾದ್ ಕನ್ನಡ ಪ್ರದೇಶದ ಜನರು ಮೈಸೂರಿನೊಡನೆ ಸೇರುವುದಕ್ಕೆ ಇಷ್ಟಪಡುತ್ತಾರೆಯೇ ಹೊರತು, ಅವರನ್ನು ಬೊಂಬಾಯಿ ಕನ್ನಡಿಗರ ಜೊತೆಯಲ್ಲಿ ಹೋಗಿರೆಂದರೆ ಹೋಗುವುದಿಲ್ಲ. ಕೊಡಗಿನವರೂ ಹಾಗೆಯೇ ಮೈಸೂರೊಡನೆ ಸೇರಿದರೇ ಸೇರುತ್ತೇವೆ ಇಲ್ಲದಿದ್ದರೆ ಬೇರೆಯಾಗಿ ಹೀಗೆಯೇ ಇರುತ್ತೇವೆನ್ನುತ್ತಾರೆ. ಸೌತ್ ಕೆನರ, ಕೊಳ್ಳೇಗಾಲದವರನ್ನು ಧಾರವಾಡಕ್ಕೋ ಬೆಳಗಾಮಿಗೋ ಸೇರಿಕೊಳ್ಳಿರೆಂದರೆ ಅವರು ಒಪ್ಪುತ್ತಾರೆಯೇ? ಅವರುಗಳೆಲ್ಲರೂ ಮೈಸೂರು ರಾಜ್ಯವಾದರೇ ಒಪ್ಪುತ್ತಾರೆ, ಬೇರೆ ಯಾವುದನ್ನೂ ಒಪ್ಪುವುದಿಲ್ಲ. ಅಂದಮೇಲೆ ಬೊಂಬಾಯಿ ಕನ್ನಡ ಪ್ರಾಂತ್ಯವನ್ನೇ ಬೇರೆ ಮಾಡಿ ಅಲ್ಲಿಗೇ ಒಂದು ಲೆಜಿಸ್ಲೇಚರ್, ಒಂದು ಮಂತ್ರಿಮಂಡಲವನ್ನು ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಏರ್ಪಡಿಸುವುದು ಜಾಣತನವೇ? ಅದು ಸಾಧ್ಯವೇ? ಇದನ್ನೆಲ್ಲಾ ಯೋಚನೆ ಮಾಡಿಯೇ ರಿ-ಆರ್ಗನೈಸೇಷನ್ ಸಮಿತಿಯವರು ಎಲ್ಲಾ ಪ್ರಾಂತ್ಯಗಳಿಗೂ ಹೋಗಿ ಜನಗಳ ಅಭಿಪ್ರಾಯ ತೆಗೆದುಕೊಂಡು ಬಹುಜನಕ್ಕೆ ಒಪ್ಪಿಗೆಯಾಗುವ ಸಲಹೆಯನ್ನು ಮಾಡಿದ್ದಾರೆ. ಕೆಲವರು ತಮಗೆ ಆ ಸಂದರ್ಭದಲ್ಲಿ ಹೇಳಿಕೊಳ್ಳಲು ಅವಕಾಶ ಸಿಕ್ಕಲಿಲ್ಲವೆಂದು ಹೇಳಬಹುದು. ಯಾರೋ ಕೆಲವರಿಗೆ ಅವಕಾಶ ಸಿಕ್ಕದೆ ಇದ್ದರೂ ಅನೇಕರು ತಾವೇ ಅವಕಾಶ ಕಲ್ಪಿಸಿಕೊಂಡು ಹೋಗಿ ತಿಳಿಸಿದ್ದಾರೆ. ಅಲ್ಲದೆ

(ಶ್ರೀ ಆರ್. ಚೆನ್ನಿಗರಾಮಯ್ಯ.)

ಕಾಂಗ್ರೆಸ್ ಪ್ರೆಸಿಡೆಂಟರು ಇದಕ್ಕಾಗಿಯೇ ಬಂದು ಎಲ್ಲಾ ಜಿಲ್ಲೆಗಳನ್ನೂ ಪ್ರವಾಸ ಮಾಡುತ್ತಿದ್ದಾಗ ರಿ-ಆರ್ಗನೈಸೇಷನ್ ಸಮಿತಿಯ ಮುಂದೆ ಹೇಳಬಹುದಾಗಿದ್ದುದನ್ನೆಲ್ಲಾ ಹೇಳಿದ್ದಾರೆ. ಆದ್ದರಿಂದ ನಿಜಾಂಶವೇನು, ಎಷ್ಟರಮಟ್ಟಿಗೆ ಪ್ರೇರೇಪಣೆಯಿಂದಾಗಿದೆ ಎಂಬುದೆಲ್ಲಾ ಗೊತ್ತಾಗಿದೆ. ಯಾರೋ ಒಬ್ಬರು ಶ್ರೀ ಧೇಬರ್‌ರವರು ಬಂದಾಗ ಒಂದು ಪತ್ರ ತಂದು ಎರಡು ಕರ್ಣಾಟಕ ಬೇಕೆಂದು ಹೇಳಿ ಕೊಟ್ಟಾಗ ಶ್ರೀ ಧೇಬರ್‌ರವರು ಏಕಪ್ಪಾ ಎಂದು ಕೇಳಿದ್ದಕ್ಕೆ 'ಅದು ನಮಗೆಲ್ಲಾ ಗೊತ್ತಿಲ್ಲ, ರೆವಿನ್ಯೂ ಇನ್ಸ್‌ಪೆಕ್ಟರು ಎಲ್ಲರ ಹತ್ತಿರ ರುಜು ಹಾಕಿಸಿಕೊಂಡು ಹೋಗಿ ಕೊಡು, ಎಂದು ಹೇಳಿದರು ಎಂದನಂತೆ. ಈ ಪ್ರಕಾರ ಕಾಂಗ್ರೆಸ್ ಪ್ರೆಸಿಡೆಂಟರು ಎಲ್ಲಾ ಜಿಲ್ಲೆಗಳನ್ನೂ ತಿರುಗಿ ವಿಷಯಗಳನ್ನು ತಿಳಿದುಕೊಂಡಿದ್ದಾರೆ. ಅಲ್ಲದೆ ಕಾಂಗ್ರೆಸ್ ಮುಖಂಡರುಗಳನ್ನೂ ಮಂತ್ರಿಗಳನ್ನೂ ಕರೆಸಿಕೊಂಡು ಸಮಾಲೋಚನೆ ನಡೆಸಿದ್ದಾರೆ; ಅವರು ಎಲ್ಲವನ್ನೂ ತಿಳಿದುಕೊಂಡು ಶೇಕಡ 50 ಭಿನ್ನಾಭಿಪ್ರಾಯವಿದ್ದರೂ ಏನು ಮಾಡಬೇಕು ಎಂದು ಹೇಳಿದ್ದಾರೆ. ಅವರೇ ಹೇಳಿದಂತೆ ಈಗ ಬೇಡವೆಂದರೂ ಮಾಡುತ್ತಾರೆ. ಏಕೆಂದರೆ ಕೆಲವರು ಬೇಕು ಎಂದು ಎನ್ನುತ್ತಾರೆ, ಕೆಲವರು ಬೇಡ ಎನ್ನುತ್ತಾರೆ. ಒಮ್ಮನಸ್ಸಿನಿಂದ ಬೇಡವೆನ್ನುವವರೂ ಇಲ್ಲ; ಬೇಕು ಎನ್ನುವವರೂ ಇಲ್ಲ. ಇಂಥ ಸಂದರ್ಭದಲ್ಲಿ ನಾಯಕರುಗಳು ಕುಳಿತುಕೊಂಡು ಒಂದು ತೀರ್ಮಾನ ಕೊಟ್ಟರೆ, ಯಾರೇ ಆಗಲಿ ತಮ್ಮ ಮೇಲೆ ನಿರ್ಬಂಧ ಹಾಕಿದರೆಂಬುದು ಸರಿಯಲ್ಲ. ನಮ್ಮ ದೇಶದಲ್ಲಿ ಸ್ವರಾಜ್ಯ ಸ್ಥಾಪನೆಯಾಗುವುದಕ್ಕೆ ಮೊದಲು ಮತ್ತು ಆದ ಮೇಲೆ ಇಂಥ ಪ್ರಾಮುಖ್ಯವಾದ ಪ್ರಶ್ನೆಗಳು ಬಂದಾಗ ನಮ್ಮ ನಾಯಕರುಗಳೇ ಇದೇ ರೀತಿ guidance ಕೊಟ್ಟಿದ್ದಾರೆ.

ಶ್ರೀ ಬಿ. ಎಂ. ಶ್ರೀನಪ್ಪ.—ನಿಮಗೆ ಅನುಕೂಲವಾಗಿ ಬಂದದ್ದರಿಂದ ಹೀಗೆ ಮಾತನಾಡುತ್ತಿದ್ದೀರೋ !

ಶ್ರೀ ಆರ್. ಚೆನ್ನಿಗರಾಮಯ್ಯ.—ನಿಮಗೆ ಅನಾನುಕೂಲವಾಗಿ ಬಂದದ್ದರಿಂದ ಆ ರೀತಿ ವಾದಿಸುತ್ತಿದ್ದೀರಿ ಅಷ್ಟೆ.

ಹಿಂದೆಯೂ ಇಂಥ ಪ್ರಾಮುಖ್ಯವಾದ ಪ್ರಶ್ನೆಗಳು ನಮ್ಮ ದೇಶದಲ್ಲಿ ಬಂದಾಗ ನಮ್ಮ ನಾಯಕರಾದ ಜವಹರ್‌ಲಾಲ್ ನೆಹರೂ ಅವರು, ಮಹಾತ್ಮಾಗಾಂಧಿಯವರು ಮತ್ತು ಇತರ ಪ್ರಮುಖರು ಸೇರಿ ಇತ್ಯರ್ಥ ಮಾಡುತ್ತಿದ್ದರೇ ಹೊರತು ಎಂದೂ ಪ್ರತಿಯೊಬ್ಬರನ್ನೂ ಕೇಳಿ ಮಾಡುತ್ತಿರಲಿಲ್ಲ. ಪ್ರಪಂಚದಲ್ಲೇ ಎಲ್ಲಿಯೂ ಆ ರೀತಿ ಮಾಡುವುದಿಲ್ಲ. ಅದರಲ್ಲೂ ಬಹಳ ದೊಡ್ಡ ದೊಡ್ಡ ಪ್ರಶ್ನೆಗಳನ್ನು ನಾಯಕರುಗಳೇ ತೀರ್ಮಾನ ಮಾಡಬೇಕು. ಏಕೆಂದರೆ ಪಾರ್ಟಿ ಮೀಟಿಂಗುಗಳಾಗಬಹುದು, ಎಗ್ಸಿಕ್ಯೂಟಿವ್ ಕಮಿಟಿಯಲ್ಲಿಯೂ ಭಿನ್ನಾಭಿಪ್ರಾಯಗಳು ಇದ್ದೇ ಇರುತ್ತವೆ.

ಹೀಗೆ ಈ ಒಂದು ವಿಷಯದಲ್ಲೇ ಅಲ್ಲ, ಇದೇ ರೀತಿ ನಮ್ಮ ಸಭೆಯ ಮುಂದೆ ಬರತಕ್ಕ ಎಲ್ಲಾ ವಿಷಯಗಳಲ್ಲಿಯೂ ಭಿನ್ನಾಭಿಪ್ರಾಯಗಳು ಬರುತ್ತವೆಂದು ಹೇಳುತ್ತಿರುವಾಗ ಇಂಥ ಒಂದು ಪ್ರಾಮುಖ್ಯ ವಿಚಾರದಲ್ಲಿ ಭಿನ್ನಾಭಿಪ್ರಾಯಗಳು ಬರುವುದೇನೂ ಅಂಥ ಒಂದು ಆಶ್ಚರ್ಯಕರವಾದ ವಿಷಯವಲ್ಲ. ಅಲ್ಪ ಸ್ವಲ್ಪ ಭಿನ್ನಾಭಿಪ್ರಾಯಗಳು ಇದ್ದೇ ಇರುತ್ತವೆ. ನಾವುಗಳು ನಮ್ಮ ಪಾರ್ಟಿ ನಾಯಕರಿಗೆ ಈಹೊತ್ತು ಈ ಒಂದು ವಿಚಾರಕ್ಕೇ ತಲೆಬಾಗಿಲ್ಲ. ನಾವು ಎಂದು ಅವರನ್ನು ನಮ್ಮ ನಾಯಕರನ್ನಾಗಿ ಆರಿಸಿದೆವೋ ಅಂದೇ ಅವರಿಗೆ ತಲೆಬಾಗಿದ್ದೇವೆ. ಇಂಥ ಜಟಿಲವಾದ ಪ್ರಶ್ನೆಗಳ ತೀರ್ಮಾನದಲ್ಲಿ ಅವರ ಸಲಹೆಗಳನ್ನು ಅಂಗೀಕಾರ ಮಾಡಲೇಬೇಕು. ಹೀಗಿರುವಾಗ ನಾವೇಕೆ ಅವರಿಗೆ ತಲೆಬಾಗಬೇಕು, ನಮ್ಮ ಭಿನ್ನಾಭಿಪ್ರಾಯಗಳಿಗೆ ಅವರು ಮನ್ನಣೆ ಕೊಡಲಿಲ್ಲ ಎಂದು ಹೇಳುವುದು ಬಹಳ ಆಶ್ಚರ್ಯ ಒಂದೇ ಅಲ್ಲ ಇದು ನಮ್ಮ ದೇಶದ ದೌರ್ಭಾಗ್ಯ ಎಷ್ಟಿದೆ ಎನ್ನುವುದನ್ನು ತೋರಿಸುತ್ತದೆ. ಭಾರತದಲ್ಲಿ ಎಲ್ಲಾ ಪ್ರಾಂತ್ಯಗಳವರೂ ನಮಗೆ ದೇಶ ದೊಡ್ಡದು ಮಾಡಿಕೊಡಿ, ನಮಗೆ ದೇಶವನ್ನು ಇನ್ನೂ ಜಾಸ್ತಿಯಾಗಿ ಕೊಡಿ ಎಂದು ಕೂಗುಗಳನ್ನೆತ್ತಿರುವಾಗ ನಾವು ನಮ್ಮ ಮೈಸೂರು ಹೀಗೇ ಇರಲಿ, ಇದನ್ನು ಬೇಕಾದರೆ ಇನ್ನೂ ಚಿಕ್ಕದು ಮಾಡಿಕೊಡಿ ಎಂದು ಕೇಳುತ್ತಿರುವ ಜನ ನಮ್ಮ ಇಂಡಿಯಾದಲ್ಲೇ ನಮ್ಮ ವಿನಾ ಮತ್ತೆ ಯಾರೂ ಇಲ್ಲ; ಇಂಥ ಒಂದು ವಾದ ಎಲ್ಲಿಯೂ ಇಲ್ಲ. ನಮ್ಮ ಪಕ್ಕದ ಪ್ರಾಂತ್ಯವಾದ ಆಂಧ್ರ ದೇಶದವರು ಒಂದು ಮೂಲೆಯಿಂದ ಹಿಡಿದು ಮತ್ತೊಂದು ಮೂಲೆಯವರಿಗೂ ದೇಶವನ್ನು ದೊಡ್ಡದನ್ನಾಗಿ ಮಾಡಿ ಕೊಡಿ ಎಂದು ಕೇಂದ್ರ ಸರ್ಕಾರಕ್ಕೆ ಒತ್ತಾಯ ಹಾಕುತ್ತಿದ್ದಾರೆ. ಹೀಗಿರುವಾಗ ತಾವಿಲ್ಲಿ ಕುಳಿತುಕೊಂಡು ನಮಗೆ ಎರಡು ಕರ್ಣಾಟಕಗಳಾಗಲಿ, ಆಗ ನಾವು ಇದನ್ನು ಸ್ವಾಗತಿಸುತ್ತೇವೆ ಎಂದು ಹೇಳುತ್ತಿರುವುದು ಸರಿಯಲ್ಲ. ಇದಕ್ಕೆ ಬದಲಾಗಿ ಒಂದೇ ಒಂದು ಕರ್ಣಾಟಕ ಆಗುವುದು ಒಳ್ಳೆಯದು ಎರಡಾದರೆ ಏನೇನು ತೊಂದರೆಗಳುದ್ಭವಿಸುತ್ತವೆ ಎನ್ನುವ ಬಗ್ಗೆ ಕೆಲವರು ಇದರ ಕಷ್ಟಸುಖಗಳನ್ನು ಹೇಳಲು ಪ್ರಯತ್ನಿಸಿದರೆ, ಆ ವಿಷಯಗಳನ್ನು ನೀವು ಕಿವಿಯಲ್ಲಿ ಕೇಳುವುದಕ್ಕೂ ಸಹ ನಿಮಗೆ ಸಹನೆಯಿಲ್ಲ. ಹೀಗೆ ಇಲ್ಲಿಯವರೆಗೂ ನಿಮ್ಮೊಡನೆಯೇ ಇದ್ದು, ನಿಮ್ಮಲ್ಲಿ ಹುಟ್ಟಿ ಬೆಳೆದು-ಬಾಳಿದಂಥ ನಮ್ಮ ವಿಚಾರದಲ್ಲೇ ಸೈರಣೆಯನ್ನು ನೀವು ತೋರಿಸದೆ ಇರುವಾಗ ಮತ್ತು ಇಷ್ಟೊಂದು ವಿರೋಧಾಭಿಪ್ರಾಯವನ್ನು ವ್ಯಕ್ತಪಡಿಸುತ್ತಿರುವಾಗ ನೀವಿನ್ನು ಆ ಹೊರಗಡೆಯಿರತಕ್ಕವರ ವಿಷಯದಲ್ಲಿ ಹೇಗೆತಾನೆ ಸೈರಣೆಯಿಂದಿರುತ್ತೀರೋ ತಿಳಿಯದು. ಹೀಗೆ ವಾದಿಸತಕ್ಕದ್ದೂ, ಇಂಥ ಮನೋಭಾವನೆಗಳೂ ಸರಿಯಲ್ಲ. ಇದಕ್ಕೆ ಬದಲಾಗಿ Live and let live ಎನ್ನುವ ಹಾಗೆ ಒಂದು ಅವಕಾಶ ಸರ್ವರಿಗೂ ಇರಲೆಂಬ ಸದ್ಭಾವನೆಯಿಂದ ಕೂಡಿರತಕ್ಕ ಆ ಮಹಾತ್ಮಾ ಗಾಂಧೀಜಿಯವರ ತತ್ವಗಳಿಗೆ ಕೊಂಚ ಅವಕಾಶವಿರಲಿ ಎಂದು ಹೇಳುತ್ತೇನೆ. ಮೊನ್ನೆ ತಾನೆ ಮೈಸೂರಿಗೆ ಬಂದಿದ್ದಂಥ ಅಖಿಲಭಾರತ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ದೇಭರ್ ಅವರೂ ಮತ್ತು ಮಹಾತ್ಮಾಜೀಯವರೂ ಸಹ ಈ ಸರ್ಕಾರಗಳು ಆಡಳಿತ ವೆಚ್ಚವನ್ನು ಆದಷ್ಟೂ ಕಡಮೆಮಾಡುತ್ತಾ ಹೋಗಬೇಕೆಂದು ಹೇಳಿದ್ದಾರೆ. ಈ ವಿಚಾರ ಅನೇಕರಿಗೆ ಗೊತ್ತಿದೆ. ಈ ಒಂದು ತತ್ವವನ್ನು ನಮ್ಮ ಅಖಿಲ ಭಾರತದ ನಾಯಕರು ದೇಶಾದ್ಯಂತವೂ ಜಾರಿಗೆ ತರಬೇಕೆಂದು ತೀರ್ಮಾನ ಮಾಡಿದ್ದಾರೆ. ನಮ್ಮ ಮೈಸೂರಿನ ಆರ್ಥಿಕ ಪರಿಸ್ಥಿತಿಯ ಬಗ್ಗೆ ನಮ್ಮ ಮುಖ್ಯಮಂತ್ರಿಗಳು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಿಜ. ಆದರೆ ಅವರಿಗೆ ಆ ವಿಚಾರಗಳನ್ನು ಪ್ರಸ್ತಾಪಿಸುವ ಅಧಿಕಾರವಿದೆ. ಅದರಲ್ಲಿ ಯಾರೇನೂ ಹೇಳಬೇಕಾಗಿಲ್ಲ. ನಮ್ಮ ದೇಶದಲ್ಲಿ ಇನ್ನು ಮುಂದೆ ಹೆಚ್ಚಿನ ಸೌಕರ್ಯಗಳನ್ನು ಉಂಟುಮಾಡತಕ್ಕ ಬಗ್ಗೆ ಖರ್ಚು ಮಾಡಲು ಅಷ್ಟೇನೂ ಹಣದ ವರಮಾನ ಬರತಕ್ಕ ಅವಕಾಶಗಳಿರುವುದಿಲ್ಲ ಎನ್ನುವುದನ್ನು ನಾನೂ ಸಹ ತಿಳಿದುಕೊಂಡಿದ್ದೇನೆ. ಇನ್ನು ನಮ್ಮ ಡೆವಲಪ್‌ಮೆಂಟ್,

ಅಕ್ಟಿವಿಟೀಸ್'ಗಳನ್ನು ನಮ್ಮ ವರಮಾನದಿಂದಲೇ ಮುಂದುವರಿಸುವುದಕ್ಕೆ ಅವಕಾಶವಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಈ ದಿವಸ ದ್ವಿಕರ್ಣಾಟಕವಾದಿಗಳಾದ ನೀವು ಏನೊಂದು ಹೆದರಿಕೆಯನ್ನು ನಮಗೆ ಹಾಕುತ್ತಿದ್ದೀರೋ ಆ ಹೆದರಿಕೆಗೋಸ್ಕರವಾಗಿಯೇ ನಾವೀಗ ನಮ್ಮ ಪಕ್ಕಕ್ಕೆ ಯಾರಾದರೂ ಬರಲಿ- ಹಾಗೆ ಬಂದು ಅವರು ನಮ್ಮನ್ನು ಈ ಹೆದರಿಕೆಯಿಂದ ರಕ್ಷಿಸಲಿ ಎಂತಲೇ ನಾವೀಗ ಈ ಕರ್ಣಾಟಕ ಪ್ರಾಂತ್ಯವನ್ನು ಕೇಳುತ್ತಿದ್ದೇವೆ.

ಮತ್ತೊಂದು ವಿಷಯ ನಮ್ಮ ಈ ಸ್ನೇಹಿತರು ಎತ್ತಿರತಕ್ಕದ್ದು ಏನೆಂದರೆ; 40 ಲಕ್ಷ ಜನಸಂಖ್ಯೆಗೂ ಒಂದು ದೇಶ, 60 ಲಕ್ಷ ಜನಸಂಖ್ಯೆಗೂ ಒಂದು ದೇಶವಿದೆ, ಆ ಅಮೇರಿಕಾದಲ್ಲಿ ಹಾಗಿದೆ ಹೀಗಿದೆ ಎಂದು ಅಪ್ಪಣೆ ಕೊಡಿಸಿದರು. ಆದರೆ ಅವರು ಆ ಪಾಶ್ಚಾತ್ಯ ಪ್ರದೇಶಗಳನ್ನೆಲ್ಲಾ ಸುತ್ತಿಕೊಂಡು ಬಂದಿರಬಹುದು. ಅದಕ್ಕಾಗಿ ಅವರಿಗೆ ಆ ವಿಷಯಗಳೆಲ್ಲಾ ಗೊತ್ತಾಗಿದೆ. ನಾನೇನೋ ಆ ಅಮೇರಿಕಾ ದೇಶಕ್ಕೆ ಹೋಗಿಲ್ಲ. ಈ ದಿವಸ ಆ ಅಮೇರಿಕಾ ದೇಶದಲ್ಲಿ ಆ ದೇಶಗಳಲ್ಲಿರತಕ್ಕ ಜನಸಂಖ್ಯೆಯೇನೋ ಕಡಮೆಯಾಗಿರಬಹುದು. ಆದರೆ ಆ ದೇಶಗಳು ವಿಸ್ತೀರ್ಣದಲ್ಲಿ ಮತ್ತು ಆರ್ಥಿಕ ಸ್ಥಿತಿಯಲ್ಲಿ ಏನೂ ಕಡಮೆಯಿಲ್ಲ. ಈ ದಿವಸ ಇಡೀ ಇಂಡಿಯಾದೇಶದ ವಿಸ್ತೀರ್ಣ ಎಷ್ಟಿದೆಯೋ ಅದಕ್ಕೆ ಎರಡರಷ್ಟು ವಿಸ್ತೀರ್ಣ ಆ ಅಮೇರಿಕದ್ದು. ನಮ್ಮ ದೇಶದಲ್ಲಿ ಒಂದು ಕೋಟಿ ಪ್ರಜಾಸಂಖ್ಯೆಗೆ ಎಷ್ಟು ವಿಸ್ತೀರ್ಣದ ದೇಶವಿರುತ್ತದೆಯೋ ಅಷ್ಟೇ ವಿಸ್ತೀರ್ಣವುಳ್ಳ ದೇಶ ಅಮೇರಿಕಾದಲ್ಲಿ 40 ಲಕ್ಷ ಜನಸಂಖ್ಯೆಗೆ ಇರುತ್ತದೆ. ಅದಾದರೋ ಇಂಡಸ್ಟ್ರಿಯಲ್ ಕಂಟ್ರಿ. ಅದಕ್ಕೆ ಹೆಚ್ಚಿನ ಉತ್ಪತ್ತಿಯಿದೆ. ಅಲ್ಲಿ ವಿಶೇಷವಾಗಿ ಮಾರಾಟದ ತೆರಿಗೆಯಿಂದಲೂ, ಡ್ಯೂಟಿ ಮೂಲಕವೂ ಮತ್ತು ಇರ್ಕಂಟ್ಯಾಕ್ಸ್ ರೂಪವಾಗಿಯೂ ವರಮಾನವಿದೆ. ಆ ಅಮೇರಿಕಾ ದೇಶದಲ್ಲಿ ಪ್ರತಿಯೊಂದು ಹಳ್ಳಿಗೂ ಸಿಮೆಂಟ್ ರಸ್ತೆಗಳಿರುತ್ತವೆ ; ಆಸ್ಪತ್ರೆಗಳಿವೆ; ಕಾಲೇಜುಗಳಿವೆ ಹೀಗೆ ಅವರಿಗೆ ಅಗತ್ಯವಾಗಿ ಬೇಕಾದಂಥ ಪ್ರತಿಯೊಂದು ಸೌಲಭ್ಯಗಳೂ ಇವೆ. ಅವರು ಅಲ್ಲಿ ಒಂದು ಸಣ್ಣ ಸರ್ಕಾರ ಮಾಡಿಕೊಂಡಿದ್ದಾಗ್ಯೂ ಅವರಿಗೆ ಅಲ್ಲಿ ಖರ್ಚು ಕಡಮೆ, ಅವರದು ಯಾವಾಗ್ಯೂ ಉಳಿತಾಯದ ಬಡ್ಜೆಟ್ಟಾಗಿರುತ್ತದೆ. ಆದರೆ ಇಲ್ಲಿ ಈ ದಿವಸ ನಾವೂ ಸಹ ಅವರಹಾಗೆ ನಮ್ಮ ಅಕ್ಕಪಕ್ಕದಲ್ಲಿರತಕ್ಕಂಥ ಪ್ರದೇಶಗಳನ್ನೆಲ್ಲಾ ಒಟ್ಟುಗೂಡಿಸಿಕೊಂಡು, ನಮ್ಮ ಅವರ ಎಲ್ಲರ ಸಂಪಾದನೆ ಮತ್ತು ನಮ್ಮೆಲ್ಲರಿಗೂ ಇರತಕ್ಕಂಥ ರಿಸೋರ್ಸಸ್ಸುಗಳನ್ನು ಪೂಲ್'ಮಾಡಿಕೊಂಡು, ನಮ್ಮ ಆಡಳಿತವನ್ನು ವರ್ಷ ವರ್ಷ ಕಡಿಮೆಮಾಡಿಕೊಂಡು ಇದಕ್ಕಾಗಿ ಈ ದಿವಸ ವೃಥಾ ಖರ್ಚಾಗುತ್ತಿರುವಂಥ ಹತ್ತಾರು ಕೋಟಿ ರೂಪಾಯಿಗಳನ್ನು ಉಳಿಸಿ, ಅದನ್ನು ದೇಶದ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಿ ದೇಶಕ್ಕೆ ಅಗತ್ಯವಾದಂಥ ವಿದ್ಯಾ ಮತ್ತು ಮೆಡಿಕಲ್ ಸೌಲಭ್ಯಗಳನ್ನು ಉಂಟುಮಾಡೋಣ, ನಮ್ಮಲ್ಲೂ ಆ ಸರ್'ಪ್ಲಸ್ ಬಡ್ಜೆಟ್ ಆಗುವಂತೆ ಸರ್ಕಾರ ಕಟ್ಟೋಣ. ಈಗ ಅದಕ್ಕೆ, ಎಂದರೆ ಸಣ್ಣ ದೇಶಗಳಿಗೆ, ಇನ್ನೂ ಕಾಲ ಬಂದಿಲ್ಲ, ಇನ್ನೂ ಹತ್ತಾರುವರ್ಷ ಕಳೆಯಲಿ, ಆ ಮೇಲೆ ಬೇಕಾಗಿದ್ದರೆ ಆಲೋಚನೆ ಮಾಡೋಣ ಎಂದು ಹೇಳುತ್ತೇನೆ. ಇದು ಹೀಗೆ ಮುಂದುವರಿಯುತ್ತಿದ್ದರೆ ನಾವು ಸುಖವಾಗಿ ಬಾಳುವುದು ಯಾವ ಕಾಲಕ್ಕೆ ? ನಮ್ಮ ದೇಶಕ್ಕೆ ಸ್ವಾತಂತ್ರ್ಯ ಹೊಸದಾಗಿ ಬಂದಿದೆ. ನಾವಿನ್ನೂ ಈಗ ಕಣ್ಣುಬಿಡುತ್ತಿದ್ದೇವೆ ; ಆದ್ದರಿಂದ ಇನ್ನೂ ಹತ್ತಾರು ವರ್ಷ ಹೀಗೇ ಇರಲಿ ಎಂದು ಈ ಒಂದು ನೆಪದಿಂದ ಈ ದಿವಸ ಈ ಪ್ರಶ್ನೆಯನ್ನು ಹಿಂದಕ್ಕೆ ಇಡಿ ಎಂದು ಹೇಳತಕ್ಕದ್ದು ಸರಿಯಾದದ್ದಲ್ಲ. ಆದರೆ ಈಗಾಗಲೇ ನಮ್ಮ ವಿರೋಧಿಗಳಾದ ಸ್ನೇಹಿತರಿಗೂ, ಈ ದೇಶಗಳ ಪುನರ್ವಿಂಗಡಣೆಗೆ ಕಾಲ ಒದಗಿಬಂದಿದೆ, ಈಗಾಗಲೇ ಈ ವಿಷಯ ಬಹಳ ತಂಗಳು ವಿಷಯವಾಗಿದೆ, ಎನ್ನುವುದೆಲ್ಲಾ ಗೊತ್ತಿದೆ. ವಿಚಾರಗಳೆಲ್ಲವನ್ನೂ ಈಗ ನಮ್ಮ ಮುಂದಿರತಕ್ಕ ಈ ಫಜ್ಲಾಲಿ ಸಮಿತಿಯವರ ವರದಿಯಲ್ಲೇ ಸವಿಸ್ತಾರವಾಗಿ ಪ್ರಸ್ತಾಪಿಸಿರುತ್ತಾರೆ. ಈ ಸಂಬಂಧದಲ್ಲೇ ನಮ್ಮ ದೇಶದ ನಾಯಕರು ಎಲ್ಲ ವಿಷಯಗಳನ್ನೂ ಗ್ರಹಿಸಿ, ಮಥನಮಾಡಿ ಕಡೆಗೆ ನಾವೆಲ್ಲರೂ ಅನುಸರಿಸಲು ಸುಲಭವಾಗಿರತಕ್ಕಂಥ ಒಂದು ಮಾರ್ಗವನ್ನೂ ಕೂಡ ನಮಗೆ ಕಲ್ಪಿಸಿಕೊಟ್ಟಿದ್ದಾರೆ. ಆದರೆ ನಾನು ಈ ಬಗ್ಗೆ ನನ್ನ ಭಾಷಣದ ಪ್ರಾರಂಭದಲ್ಲೇ ಪೀಠಿಕಾ ರೂಪವಾಗಿ ಒಂದು ಅಂಶವನ್ನು ತಿಳಿಸಬೇಕಾಗಿತ್ತು. ನಾವು ನಮ್ಮ ಪಾರ್ಟಿ ಶಿಸ್ತಿಗೆ ಸಂಬಂಧಪಟ್ಟಂಥ ಕೆಲವು ವಿಚಾರಗಳನ್ನು ಗೋಪ್ಯವಾಗಿ ಮಾತನಾಡಿಕೊಂಡಿದ್ದುದರ ಬಗ್ಗೆಯೂ ಅಲ್ಲಿ ಏನೇನು ವಿಚಾರಗಳು ನಡೆದವು ಎನ್ನುವುದೆಲ್ಲಾ ಈ ದಿವಸ ಈ ಸಭೆಯಲ್ಲಿ ಹೊರಬೀಳತಕ್ಕಂಥ ಒಂದು ಪರಿಸ್ಥಿತಿ ಸಹ ಬಂದಿತು ಆದರೆ ಈ ಹೊತ್ತು ಅಂಥ ಆಗಬಾರದ್ದೇನೂ ಆಗಿಲ್ಲ. ನಮ್ಮ ಹಾಗೆ ಇಡೀ ಭಾರತದಲ್ಲೆಲ್ಲಾ ಯಾರೂ ವರ್ತಿಸುತ್ತಿಲ್ಲ. ಇದು ಭಾರತಕ್ಕೇ ಸಂಬಂಧಪಟ್ಟ ಪ್ರಶ್ನೆಯಾಗಿರುವುದರಿಂದ ಇಂಥ ಸಂದರ್ಭದಲ್ಲಿ ನಮ್ಮ ಸೋದರರೂ ಮತ್ತು ಸ್ನೇಹಿತರೂ ಆಗಿರತಕ್ಕ ತಾವುಗಳೆಲ್ಲರೂ ಒಂದು ವಿಶಾಲ ಭಾವನೆಯನ್ನಿಟ್ಟುಕೊಂಡು ನಾಳೆ ನಮ್ಮೊಡನೆ ಬಾಳಲು ಸಂತೋಷದಿಂದ ಬರತಕ್ಕವರನ್ನು ನಾವೂ ಸಹ ಸಂತೋಷವಾಗಿ ಸ್ವಾಗತಿಸೋಣ. ಎಂದು ಕೇಳಿಕೊಳ್ಳುತ್ತೇನೆ. ಅವರೂ ನಾವೂ ಒಂದಾದಾಗ ಅಂಥ ವ್ಯತ್ಯಾಸಗಳೇನಾದರೂ ಬಂದರೆ ಆಗ ತಾವು ನಮ್ಮನ್ನು ' ಏನಪ್ಪಾ ಆ ದಿವಸ ನೀವೆಲ್ಲಾ ಹೇಳಿದಿರಿ, ಆದರೆ ಈ ದಿವಸ ನೋಡಿ ಹೀಗಾಯಿತು ' ಎಂದು ಕೇಳಬಹುದು. ಅದಕ್ಕೆ ತಮಗೆ ಅವಕಾಶ ಕೊಡದಂತೆ ನಾವು ನಡೆದುಕೊಂಡರೆ ಆಗ ನೀವು ಈ ಹೊತ್ತು ಮಾಡಿದಂಥ ಟೀಕೆಗಳಿಗೆಲ್ಲಾ ಅವಕಾಶವಿರಲಿಲ್ಲ ಎನ್ನುವುದನ್ನು ನೀವೇ ತಿಳಿದುಕೊಳ್ಳುತ್ತೀರಿ. ಆದುದರಿಂದ ನಾವೀಗ ಕೊನೆಯದಾಗಿ ತಮ್ಮೆಲ್ಲರಲ್ಲೂ ಅರಿಕೆಮಾಡಿಕೊಳ್ಳುವುದೇನೆಂದರೆ, ತಾವೆಲ್ಲರೂ ತಮ್ಮೆಲ್ಲರತಕ್ಕಂಥ ಯಾವ ರೀತಿಯ ಭಿನ್ನಾಭಿಪ್ರಾಯಗಳೇ ಇರಲಿ ಅವುಗಳನ್ನೆಲ್ಲಾ ಬಿಟ್ಟು ಬಿಟ್ಟು ಈ ವರದಿಯನ್ನು ಒಂದೇ ಮನಸ್ಸಿನಿಂದ ಸ್ವಾಗತಿಸಬೇಕೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

Sri K. HANUMANTHAIYA.—May I know at what time the mover of the motion is expected to reply ?

Mr. SPEAKER.—There are just one or two speakers.

Sri K. HANUMANTHAIYA.—I want to know the time.

Mr. SPEAKER.—By 6-45 we will close the debate.

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ-ಅನುಸೂಚಿತ ಜಾತಿಗಳು).—ಸ್ವಾಮಿ, ನಾನು ಭಾಷಣ ಮಾಡುವುದಕ್ಕೆ ಎದ್ದು ನಿಂತಕೂಡಲೇ ದೀಪಗಳೆಲ್ಲಾ ಪ್ರಕಾಶಮಾನವಾಗಿ ಉರಿಯಲು ಪ್ರಾರಂಭಿಸಿವೆ. ನಾನೀಗ ಈ S.R.C. ರಿಪೋರ್ಟಿನ ವಿಚಾರದಲ್ಲಿ ಹೆಚ್ಚು ಮಾತನಾಡುವುದಕ್ಕೆ ಕಾಲಾವಕಾಶವಿಲ್ಲ. ಆದಕಾರಣ ಈ

(ಶ್ರೀ ಎಂ. ಚಿಕ್ಕಲಿಂಗಯ್ಯ.)

ಹಿಂದೆ ನಾನು ಆ ಶೇಷಾದ್ರಿ ಸಮಿತಿ ವರದಿಯ ಸಂಬಂಧಲ್ಲಿ ಭಾಷಣಮಾಡುತ್ತ ಏನು ಹೇಳಿದ್ದೆನೋ ಆ ಅಂಶಗಳೆಲ್ಲಾ ಈಗಾಗಲೇ ತಮಗೆ ತಿಳಿದಿರತಕ್ಕಂಥ ವಿಷಯಗಳಾಗಿವೆ. ಈ ದಿವಸ ಕೆಲವರಿಗೆ ಈ ಕರ್ಣಾಟಕಪ್ರಾಂತ್ಯ ನಿರ್ಮಾಣದ ಬಗ್ಗೆ ಏನೊಂದು ಜಿಗುಪ್ಸೆ ಉಂಟಾಗಿದೆಯೋ ಅದು ನನಗೆ ಅರ್ಥವಾಗುತ್ತಿಲ್ಲ. ಈ ಹಿಂದೆ ನಾನು ಆ ಶೇಷಾದ್ರಿ ಸಮಿತಿಯ ವರದಿ ಬಗ್ಗೆ ಪ್ರಸ್ತಾಪಮಾಡುತ್ತ ಈ ಕರ್ಣಾಟಕಪ್ರಾಂತ್ಯ ನಿರ್ಮಾಣವಾದಾಗ ಒಂದು ವೇಳೆ ಮುಖ್ಯಮಂತ್ರಿಗಳ ಪದವಿ ಹಿಂದುಳಿದಿರತಕ್ಕಂಥ ಜನಾಂಗದವರ ಕೈಗೆ ಬಂದರೂ ಬರಬಹುದು, ಹಾಗೊಂದುವೇಳೆ ಅಂಥ ಸಂದರ್ಭ ಒದಗಿದರೆ ಆದರಿಂದ ಭಾರತಕ್ಕೆ ಒಂದು ಕಲ್ಯಾಣವಾಗುತ್ತದೆ ಎಂದು ಹೇಳಿದ್ದೆ. ಇದರಿಂದ ಕೆಲವರಲ್ಲಿ ಏನೋ ಒಂದು ಭಾವನೆ ಉಂಟಾಗಿದ್ದರೂ ಇರಬಹುದು. ಆದರೆ ಈ ದಿವಸ ಈ S.R.C. ವರದಿಯಲ್ಲೇ ನಮ್ಮ ಹರಿಜನರ ಸಂಖ್ಯೆ ವಿಚಾರವನ್ನೂ ಸಹ ಉಲ್ಲೇಖಿಸಿದ್ದಾರೆ. ಈ ದಿವಸ ನಮ್ಮ ಪ್ರಜಾಸಂಖ್ಯೆ ಎಷ್ಟಿದೆಯೋ ನಾಳೆ ಕರ್ಣಾಟಕ ನಿರ್ಮಾಣವಾದರೂ ನಮ್ಮ ಪ್ರಜಾಸಂಖ್ಯೆ ಅಷ್ಟೆ ಇರುತ್ತದೆ. ಆದರೆ ಈಗಾಗಲೇ ನನ್ನ ಮಿತ್ರರಾದ ಶ್ರೀ ಟಿ. ಹನುಮಯ್ಯನವರು ಹೇಳಿರುವಂತೆ ನಾವು ಯಾವ ಒಂದು ರೀತಿಯಲ್ಲೂ ನಮ್ಮ ಭಾವನೆಗಳನ್ನು ಏರುಪೇರು ಮಾಡುವುದಕ್ಕೆ ಅವಕಾಶವಿಲ್ಲ. ಈಗಾಗಲೇ ನಮ್ಮ ರಾಜ್ಯಾಂಗದಲ್ಲಿ ತೀರ್ಮಾನಮಾಡಿರುವಂತೆ ನಮಗೆ ಇಂಥ ಸೌಕರ್ಯಗಳನ್ನು ಕಲ್ಪಿಸಿಕೊಡಿ, ರಾಜ್ಯಾಂಗದಲ್ಲೇ ಇದಕ್ಕೆ ಅವಕಾಶ ಮಾಡಿದ್ದಾರೆ ಎಂದು ಕೇಳಿಕೊಳ್ಳಬಹುದು. ಅಷ್ಟು ಹೊರತಾಗಿ ಇನ್ನೇನೂ ಬದಲಾವಣೆ ಆಗಲಾರದು. ಆದರೆ ನಾನು ಈಗ ಬಹಳ ವಿಷಾದದಿಂದ ಒಂದು ಮಾತನ್ನು ಹೇಳಬೇಕಾಗಿದೆ. ಈ ದಿವಸ ಭಾರತದಲ್ಲಿರತಕ್ಕಂಥ ಪ್ರತಿಯೊಂದು ಪ್ರಾಂತ್ಯವೂ ತನ್ನ ವಿಸ್ತೀರ್ಣ ಜಾಸ್ತಿಯಾಗಬೇಕು, ತನ್ನ ಅಭಿವೃದ್ಧಿ ಇನ್ನೂ ಹೆಚ್ಚಬೇಕು ಎಂದು ಕೇಳುತ್ತಿರುವಾಗ ಹಿಂಸೆಯಿಲ್ಲದೆ ನಾವೂ ಸಹ ನಮ್ಮ ದೇಶವನ್ನು ದೊಡ್ಡದಾಗಿ ಮಾಡೋಣ ಎಂದು ಪ್ರಯತ್ನಿಸುವುದಕ್ಕೆ ನಮಗೇನೂ ದೊಡ್ಡ ದೇಶ ಬೇಡ, ನಮಗಿರತಕ್ಕದ್ದೆ ನಮಗೆ ಸಾಕು ಎಂದು ವಾದಿಸುವುದು ಖಂಡಿತ ಸರಿಯಾದದ್ದಲ್ಲ. ಈ ಹಿಂದೆ ನಮ್ಮ ಮೈಸೂರು ದೇಶ ಇಷ್ಟೇ ಇರಲಿಲ್ಲ. ಇದಕ್ಕೆ ಸೇರಿದ್ದಂಥ ಅನೇಕ ಭಾಗಗಳನ್ನು ಅಕ್ಕಪಕ್ಕದ ಪ್ರಾಂತ್ಯಗಳಿಗೆ ಹಂಚಿಕೊಡಲಾಯಿತು ಎನ್ನುವಂಥ ವಿಚಾರ ತಮ್ಮಗೆಲ್ಲರಿಗೂ ಗೊತ್ತಿದೆ. ಚರಿತ್ರೆಯನ್ನು ಓದಿರತಕ್ಕವರೆಲ್ಲರೂ ಈ ವಿಚಾರವನ್ನು ಬಲ್ಲವರಾಗಿದ್ದಾರೆ. ಈ ಹಿಂದೆ ಈ ರಾಜ್ಯಗಳನ್ನು ದೊಡ್ಡದಾಗಿ ಮಾಡತಕ್ಕ ಕಾರ್ಯದಲ್ಲಿ ಏನೇನು ಅನಾಹುತಗಳು ಆಗುತ್ತಿದ್ದವು ಎನ್ನುವುದನ್ನೂ ಕೂಡ ಚರಿತ್ರೆಕಾರರು ಬರೆದಿದ್ದಾರೆ. ಈ ದಿವಸ ಅಂಥ ಯಾವ ಒಂದು ಹಿಂಸೆಯನ್ನೂ ಮಾಡದೆ ರಾಜ್ಯವಿಸ್ತರಣ ಮಾಡಲು ಅವಕಾಶ ಉಂಟಾಗಿದೆ. ಈ ದಿವಸ ಇಲ್ಲಿರತಕ್ಕ ಕೆಲವು ಮಾನ್ಯ ಸದಸ್ಯರು ಈ ಅಂಶವನ್ನು ಬಹಳ ಅಮೋಘವಾಗಿ ಕಾಣುತ್ತಿರುವಂತೆ ಭಾಸವಾಗುತ್ತಿದೆ. ಈಗಾಗಲೇ ಈ ನಿರ್ಣಯವನ್ನು ಮಂಡಿಸಿರತಕ್ಕಂಥ ಮಾನ್ಯ ಮುಖ್ಯಮಂತ್ರಿಗಳೂ ಮತ್ತು ಈ ಸಭಾನಾಯಕರೂ ಆಗಿರತಕ್ಕವರು ಅನೇಕ ವಿಷಯಗಳನ್ನು ತಿಳಿಸಿದ್ದಾರೆ. ತಾವೆಲ್ಲರೂ ಈ ದೊಡ್ಡ ಪ್ರಶ್ನೆಯನ್ನು ದೊಡ್ಡ ಮನಸ್ಸಿನಿಂದ ನೋಡಬೇಕೆಂದೂ ಒಂದು ಸೌಹಾರ್ದಯುತವಾದ ಭಾವನೆಯಿಂದ ಇದನ್ನು ಪರಿಶೀಲಿಸಬೇಕೆಂದೂ ಕೇಳಿಕೊಂಡಿರತಕ್ಕ ಅಂಶ ಎಲ್ಲರಿಗೂ ಮನದಟ್ಟಾಗಿದೆ. ಕೆಲವು ಮಾನ್ಯ ಸದಸ್ಯರು ಭಾಷಣಮಾಡುತ್ತ ಈ ದಿವಸ ದೇಶದ ಅನೇಕ ಭಾಗಗಳಲ್ಲಿ ಅಲ್ಲೋಲಕಲ್ಲೋಲ ಆಗತಕ್ಕ ಪರಿಸ್ಥಿತಿಯುಂಟಾಗಿದೆ ಎಂದು ಹೇಳಿದರು. ಆದರೆ ನಾನು ಹೇಳುತ್ತೇನೆ—ಎಲ್ಲಿಯೂ ಅಂಥ ಪರಿಸ್ಥಿತಿಯುಂಟಾಗಿಲ್ಲ ಎಂದು! ಕೆಲವು ಕಡೆ ಕೆಲವು ಮಹನೀಯರು ತಮ್ಮಲ್ಲಿರತಕ್ಕಂಥ ಒಂದು ದುರುದ್ದೇಶ ಭಾವನೆಯಿಂದ ದೇಶದಲ್ಲಿ ತಿಳಿವಳಿಕೆಯಿಲ್ಲದಂತೆ ಜನರಿಗೆ ಚಿತಾವಣಿ ಮಾಡಿರತಕ್ಕ ಕಾರಣದಿಂದ ಅಲ್ಲಲ್ಲೇ ಕೆಲವು ಗಲಭೆಗಳು ನಡೆಯಲು ಅವಕಾಶವಾಯಿತೇ ಶಿವಾಯಿ ಮತ್ತೆಲ್ಲೂ ಈ ಪ್ರಶ್ನೆಯ ಸಂಬಧವಾಗಿ ಅಂಥ ಕಳವಳಪರಿಸ್ಥಿತಿಯುಂಟಾಗಿಲ್ಲ ಎಂದು ಹೇಳುತ್ತೇನೆ. ಆದಕಾರಣ ಅವರು ಹೇಳಿರತಕ್ಕ ಅಭಿಪ್ರಾಯವನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಭೌಗೋಳಿಕ ದೃಷ್ಟಿಯಿಂದಲೂ ಮತ್ತು ನಮ್ಮ ಆರ್ಥಿಕ ಉನ್ನತಿಯ ದೃಷ್ಟಿಯಿಂದಲೂ ದೇಶ ದೊಡ್ಡದಾಗುವುದರಿಂದ ಈ ನಾನಾ ಅಭಿವೃದ್ಧಿಗಳಿಗೆ ಅವಕಾಶ ಹೆಚ್ಚಾಗಿ ದೊರೆಯುತ್ತದೆ ಎನ್ನುವುದಾಗಿ ಅನೇಕ ವರ್ಷಗಳ ಹಿಂದೆಯೇ ಆ ಸರ್ ಎಂ. ವಿಶ್ವೇಶ್ವರಯ್ಯನವರೇ ಹೇಳಿದ್ದಾರೆ. ಈ ಕರ್ಣಾಟಕ ಪ್ರಾಂತ್ಯವಾದರೆ ನಮಗೆ ಸಮುದ್ರ ತೀರ ಸಿಕ್ಕುತ್ತದೆ, ಇದರಿಂದ ವ್ಯಾಪಾರಾಭಿವೃದ್ಧಿಯಾಗುತ್ತದೆ, ಕೈಗಾರಿಕಾಭಿವೃದ್ಧಿಗೂ ಅವಕಾಶ ದೊರೆಯುತ್ತದೆ,-ಇದರಬಗ್ಗೆ ಯಾವ ಸಂಶಯವೂ ಇಲ್ಲ ಎಂದು ಕೂಡ ಅವರೇ ಹೇಳಿದ್ದಾರೆ. ಅವರ ಹಾಗೆ ಸರ್ ಮಿರ್ಜಾರವರೂ ಸಹ ಅವರು ದಿವಾನರಾಗಿದ್ದ ಕಾಲದಲ್ಲಿ ಮಂಗಳೂರು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸಂಚಾರಮಾಡುತ್ತಿದ್ದಂಥ ಕಾಲದಲ್ಲಿ ಈ ರೀತಿ ಒಂದು ದೇಶ ದೊಡ್ಡದಾದರೆ ಮೈಸೂರಿನ ಕೀರ್ತಿಯೂ ದೊಡ್ಡದಾಗುತ್ತದೆ ಎಂದು ಹೇಳಿದ್ದಾರೆ. ಹೀಗೆ ಅನೇಕರು ತಮ್ಮ ತಮ್ಮ ಪ್ರವಾಸ ಕಾಲದಲ್ಲಿ ತಮ್ಮ ತಮ್ಮ ಅಧಿಕಾರ ಅವಧಿಯಲ್ಲಿ ಈ ಕರ್ಣಾಟಕ ದೇಶವು ಹೆಚ್ಚಾಗಬೇಕು ಎಂದು ವ್ಯಕ್ತಪಡಿಸಿದ್ದಾರೆ. ನಾನು ವಿದ್ಯಾರ್ಥಿ ಆದಲಾಗಾಯಿತು ಕಾಲೇಜಿನಲ್ಲಿ, ಹೈಸ್ಕೂಲ್ ಪಾಠಶಾಲೆಯಲ್ಲಿ, ಕರ್ಣಾಟಕ ಸಾಹಿತ್ಯ ಪರಿಷತ್ತಿನಲ್ಲಿ ಅನೇಕ ಕಡೆ ಕಮಿಟಿಗಳನ್ನು ಮಾಡಿಕೊಂಡು ಮಾತನಾಡಿದ್ದೇನೆ. ಇಲ್ಲಿರತಕ್ಕ ಮಾನ್ಯ ಸದಸ್ಯರೂ ಕೂಡ ಸೆಕ್ರೆಟರಿ, ಪ್ರೆಸಿಡೆಂಟರಾಗಿ ಕೆಲಸ ಮಾಡಿರುವುದು ನನ್ನ ಅನುಭವದಲ್ಲಿದೆ. ಹೆಸರನ್ನೂ ಕೂಡ ಕೊಡಲು ತಯಾರಾಗಿದ್ದೇನೆ. ಅಂದಮೇಲೆ ಈಗ ಕಷ್ಟಪರಿಸ್ಥಿತಿ ಹೋಗಿ ತಾನಾಗಿ ಬಂದ ಪರಿಸ್ಥಿತಿಯಲ್ಲಿ ಈ ರೀತಿ ಯಾವುದೋ ಅಭಿಪ್ರಾಯ ಇಟ್ಟುಕೊಂಡು, ಜಿಜ್ಞಾಸೆ ಉಂಟುಮಾಡಿಕೊಂಡು, ದೇಶದಲ್ಲಿ ಶಾಂತಿಗೆ ಭಂಗ ಬರುವಂತೆ ಪ್ರಯತ್ನ ಮಾಡುವುದು ದೇಶಕ್ಕೆ ಒಳ್ಳೆಯದಲ್ಲ. ಸಭಾನಾಯಕರು ತಂದಿರತಕ್ಕ ತಿದ್ದುಪಡಿಯನ್ನು ಸದಸ್ಯರು ಒಪ್ಪಿಕೊಳ್ಳುತ್ತಾರೆ ಎಂಬ ಭರವಸೆ ನನಗೆ ಮಾತ್ರ ಸಂಪೂರ್ಣವಾಗಿದೆ. ಈ ವರದಿಯನ್ನು ಸಂಪೂರ್ಣವಾಗಿ ಓದಿದ್ದೇನೆ. ನಮ್ಮ ದೇಶದ ನಾಯಕರು ಕೆಲವು ಕಾಲದ ಹಿಂದೆ ಸ್ವರಾಜ್ಯ ಸಂಪಾದಿಸಿದ ಮೇಲೆ 'ರಾಜ್ಯ ಪುನರ್ವಿಂಗಡಣೆಗೆ ಕೈಹಾಕುವುದು ಸರಿಯಲ್ಲ. ಬೇಕಾದಷ್ಟು ತೊಂದರೆ ಇದೆ. ಆಹಾರ ಪರಿಸ್ಥಿತಿ ಇದೆ. ಪಾಕೀಸ್ಥಾನ ಮತ್ತು ಭರತಖಂಡ partition ಆಗಿರುವುದರಿಂದ ರಾಜಕೀಯ ದೃಷ್ಟಿಯಿಂದ ಕೆಲವು ತೊಂದರೆಗಳು ಇವೆ. ಎಲ್ಲವನ್ನೂ ಸರಿಪಡಿಸಿಕೊಂಡು ಮುಂದುವರಿಯಬೇಕು' ಎಂದು ಹೇಳಿದ್ದು ನಿಜ. ಕರ್ಣಾಟಕ ಪ್ರಾಂತ ಆಗಕೂಡದು, ದೇಶ ವಿಂಗಡಿಸಕೂಡದು ಎಂದು ಖಂಡಿತವಾಗಿ ಅಭಿ

ಪ್ರಾಯ ಪಟ್ಟಿಲ್ಲ. ಆಗಿನ ಪರಿಸ್ಥಿತಿಯಲ್ಲಿ ಈ ಪ್ರಶ್ನೆ ಕಷ್ಟವಾಗಿದೆ ಎಂಬ ಅಭಿಪ್ರಾಯದಿಂದ ಹೇಳಿದರು. ಈಗ ಆ ಪರಿಸ್ಥಿತಿ ಬದಲಾವಣೆಯಾಗಿದೆ. ಆಡಳಿತ ದೃಷ್ಟಿಯಿಂದ ಭಾಗಗಳನ್ನು ಒಂದು ಸ್ತ್ರಿಮಿತಕ್ಕೆ ತಾರದೇ ಇದ್ದಪಕ್ಷದಲ್ಲಿ ಭರತ ಖಂಡದ ಆಡಳಿತವನ್ನು ಸ್ತ್ರಿಮಿತಕ್ಕೆ ತರುವುದು ಕಷ್ಟವಾಗುತ್ತದೆ. ಅಲ್ಲಲ್ಲಿ ಭಾಷಾವಾರು ವಿಷಯದಲ್ಲಿ adjust ಮಾಡಿಕೊಂಡರೆ ಅನುಕೂಲವಾಗುತ್ತದೆ ಎನ್ನುವ ಅಭಿಪ್ರಾಯವನ್ನು ಕೂಡ ಕೊಟ್ಟಿದ್ದಾರೆ. ಭಾಷಾವಾರು ಎಂದರೆ ಏನೆಂಬುದನ್ನು ಅನೇಕರು ಅರ್ಥಮಾಡಿಕೊಂಡಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಒಂದು ದೇಶದ ಭಾಷೆ ಮರಾಠಿಯೇ ಆಗಲಿ, ಹಿಂದಿಯೇ ಆಗಲಿ ಇದ್ದರೆ ಆ ದೇಶದ ಆಡಳಿತವನ್ನು ಅದೇ ಭಾಷೆಯಲ್ಲಿಯೇ ನಡೆಸಬೇಕು. ಒಂದು ದೇಶದ ಆಡಳಿತವನ್ನು ಆ ದೇಶದಲ್ಲಿರತಕ್ಕ ಭಾಷೆಯಿಂದ ನಡೆಸಿದರೆ ಅದು ಸಾಮಾನ್ಯ ಮನುಷ್ಯನಿಗೆ ಅರ್ಥವಾಗುತ್ತದೆ ಎಂಬ ಉದ್ದೇಶದಿಂದ ಆ ರೀತಿ ಹೇಳಿದ್ದಾರೆ. ಅದಕ್ಕೆ ಬೇರೆ ಯಾವ ಅರ್ಥವನ್ನೂ ನಾನು ಕಾಣೆ. ಇಷ್ಟೊಂದು ವಿಶದವಾಗಿ ಹೇಳಿದ್ದರೂ ಕೂಡ ಭಾಷಾವಾರು ಪ್ರಾಂತವಾದ ತಕ್ಷಣ ಒಬ್ಬರಿಗೊಬ್ಬರಿಗೆ ಜಿಜ್ಞಾಸೆ ಉಂಟಾಗುತ್ತದೆ ಎಂಬ ಅರ್ಥ ಕಂಡುಬರುವುದಿಲ್ಲ. ಕೋಲಾರ ಬಳ್ಳಾರಿಗಳಲ್ಲಿ ಕೆಲವು ತಮಿಳರೂ ತೆಲುಗರೂ ಕನ್ನಡಿಗರೂ ಇದ್ದಾರೆ, ಅವರು ಒಬ್ಬರಿಗೊಬ್ಬರು ಹೇಗೆ ಅನುಸರಿಸಿಕೊಂಡು ಹೋಗಬೇಕು ಎಂದು ಕೇಳಿದ್ದಾರೆ. ಆಡಳಿತದಲ್ಲಿ ಒಂದು ಬಿಗಿ ಒಂದು ಸ್ತ್ರಿಮಿತ, ಒಂದು ನೆಮ್ಮದಿ ಇರುವ ದೆಸೆಯಿಂದ ಕೆಲವು ಭಾಗಗಳು ಸೇರಿಕೊಂಡರೆ ಚಿಂತೆಯಿಲ್ಲ, Administrative Unit ಚೆನ್ನಾಗಿರುತ್ತದೆ. ಅದಕ್ಕೋಸ್ಕರ ಈ ಭಾಗಗಳು ಇರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಇನ್ನು ಬಳ್ಳಾರಿಯಿಂದ ಹೋಗಿರುವ ನಾಲ್ಕು ತಾಲ್ಲೂಕುಗಳು ವಾಪಸ್ಸು ಬರುತ್ತವೆ ಎಂದು ಮುಖ್ಯ ಮಂತ್ರಿಗಳು ತಮ್ಮ ತಿದ್ದುಪಡಿಯಮೇಲೆ ಮಾಡಿದ ಭಾಷಣದಿಂದ ಗ್ಯಾರಂಟಿಯಾಗಿ ತಿಳಿದುಕೊಂಡಿದ್ದೇನೆ. ಅಲ್ಲದೆ ನಮ್ಮ ದೇಶದ ನಾಯಕರಾದಂಥ ಜವಹರ್‌ಲಾಲ್ ನೆಹರೂ ಅವರು ಬರೆದಿರತಕ್ಕ ಪತ್ರದಲ್ಲಿ ಬಳ್ಳಾರಿಯ ಪ್ರಶ್ನೆಯನ್ನು ಪುನಃ ಎತ್ತುವುದಿಲ್ಲ ಎಂಬ ಭರವಸೆ ಕೊಟ್ಟಿರುವ ದಸೆಯಿಂದ ಅವರು ಈಗ ಕೊನೆಯದಾಗಿ ಪಾರ್ಲಿಮೆಂಟ್‌ನಲ್ಲಿ ತಾವು ಕೊಟ್ಟ ಮಾತನ್ನು ಉಳಿಸಿಕೊಳ್ಳುತ್ತಾರೆ ಮತ್ತು ಬಳ್ಳಾರಿ ಮೈಸೂರಿನಲ್ಲಿ ಯಾವರೀತಿ ಇದೆಯೋ ಅದೇ ರೀತಿ ಉಳಿಸಿಕೊಡುತ್ತಾರೆ ಎನ್ನುವ ಭರವಸೆ ಇದೆ. ಇದೇ ರೀತಿ ಮೈಸೂರು ಸಂಸ್ಥಾನಕ್ಕೆ ಅಕ್ಕಪಕ್ಷದಲ್ಲಿರುವ ಕನ್ನಡ ರಾಜ್ಯಗಳಲ್ಲಿ ಶೇಕಡಾ 72-82 ಭಾಗ ಕನ್ನಡ ಮಾತನಾಡುವ ತಾಳವಾಡಿ ಕೊಳ್ಳೇಗಾಲಕ್ಕೆಸೇರಿದೆ. ಆರೋಗ್ಯ ಮತ್ತು ಔಷಧಿ ವಗೈರೆ ಮತ್ತು ಇನ್ನು ಕೆಲವು ವಿಷಯಗಳಲ್ಲಿ ಚಾಮರಾಜನಗರ ತಾಲ್ಲೂಕಿಗೆ ಸೇರಿದೆ. ಆಡಳಿತ ದೃಷ್ಟಿಯಿಂದ ತಾಳವಾಡಿ ಹೊಸೂರಿನ ಕೆಲವು ಫಿರ್ಕಾಗಳು ಮೈಸೂರಿನ ಸಂಸ್ಥಾನಕ್ಕೆ ಸಂಪೂರ್ಣವಾಗಿ ಸೇರತಕ್ಕದ್ದು ಬಹಳ ಸೂಕ್ತವಾಗಿದೆ. ಕೊನೆಯದಾಗಿ ಇನ್ನೊಂದು ವಿಷಯ ತಿದ್ದುಪಡಿಯೊಳಗೆ ಹೇಳಿದ್ದಾರೆ. ಯಾವ ಜನರು ತಾವಾಗಿಯೇ ಈ ದೇಶಕ್ಕೆ ಬಂದು ಸೇರುತ್ತಾರೋ ಅವರನ್ನು ನಾವು ಸೇರಿಸಿಕೊಳ್ಳತಕ್ಕದ್ದು ಸೂಕ್ತ ಎನ್ನುವ ವಿಚಾರದಲ್ಲಿ ತಿದ್ದುಪಡಿ ಮಾಡಿದ್ದಾರೆ. ಅದೇ ರೀತಿ ನೀಲಗಿರಿ ಡಿಸ್ಟ್ರಿಕ್ಟ್ ಮತ್ತು ಇನ್ನೂ ಕೆಲವು ಅನೇಕ ಸ್ಥಳದವರು ಬಳ್ಳಾರಿ ಡಿಸ್ಟ್ರಿಕ್ಟಿನಲ್ಲಿ ಉಳಿದುಕೊಂಡಿರತಕ್ಕ ಕೆಲವು ತಾಲ್ಲೂಕುಗಳು, ಮೈಸೂರು ಸಂಸ್ಥಾನಕ್ಕೆ ಸೇರಿಕೊಳ್ಳಬೇಕು ಎಂದು ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈಗ ಏತಕ್ಕೋಸ್ಕರ ಮೈಸೂರಿಗೆ ಸೇರಿಕೊಳ್ಳಬೇಕೆಂಬ ಅಭಿಪ್ರಾಯವನ್ನೂ ವ್ಯಕ್ತಪಡಿಸಿದ್ದಾರೆ, ಎಂದರೆ, 'ಮೈಸೂರಿನವರು ಬಹಳ ಒಳ್ಳೆಯ ಜನಗಳು, ಅಲ್ಲಿ ಹೋಗಿ ಅವರನ್ನು boss over ಮಾಡಬಹುದು, ಅಧಿಕಾರ ಚಲಾಯಿಸಬಹುದು,' ಎನ್ನುವ ಉದ್ದೇಶದಿಂದ ಅಲ್ಲ. ಮೈಸೂರಿನವರ ಜೊತೆಗೆ ಸೇರಿದಪಕ್ಷದಲ್ಲಿ ನಮ್ಮ ದೇಶ ನೆಮ್ಮದಿಯಿಂದ ಇರುತ್ತದೆ, ಕೆಲಸಕಾರ್ಯಗಳು ಅಭಿವೃದ್ಧಿಪಡಿಸಿಕೊಳ್ಳಬಹುದು ಎಂಬ ಅಭಿಪ್ರಾಯ ಅವರಲ್ಲಿದೆ. ಅಲ್ಲಿಂದ ಬರತಕ್ಕವರ ಸ್ಥಿತಿಗತಿಗಳನ್ನು ನೋಡಿದ್ದೇನೆ. ಅವರು ಎಲ್ಲಾವಿಧದಲ್ಲೂ ಅನುಕೂಲವಾಗಿದ್ದಾರೆ. ರಾಜಕೀಯದಲ್ಲಿ ಅವರಿಗೆ ಹೆಚ್ಚಿಗೆ ಆಸೆ ಇಲ್ಲ. ಮುಖ್ಯವಾಗಿ ವ್ಯಾಪಾರದ ಅಭಿವೃದ್ಧಿಯಲ್ಲಿ ಹೆಚ್ಚಿಗೆ ದೃಷ್ಟಿ ಇಟ್ಟುಕೊಂಡಿದ್ದಾರೆ. ಅವರು business people ಎಂದು ಕೇಳಿದ್ದೇನೆ. Business peopleಗೆ ಹೆಚ್ಚಿಗೆ ಆಶೆ ಇರುವುದು ವ್ಯವಸಾಯದಲ್ಲಿಯೇ ವಿನಾ, ಪ್ರಾಂತಗಳಾಗಬೇಕು, ಮಿನಿಸ್ಟರ್ ಆಗಬೇಕು, ರಾಜ್ಯಾಡಳಿತ ಮಾಡಬೇಕು ಎಂಬ ಅಭಿಪ್ರಾಯ ಅವರಿಗೆ ಇಲ್ಲ ಎಂಬ ವಿಷಯವನ್ನು ಕೇಳಿದ್ದೇನೆ. ಅಂದಮೇಲೆ ಅವರು ಬರುವ ದೆಸೆಯಿಂದ ನಮ್ಮ ದೇಶ ಬಹಳ ವಿಸ್ತಾರವಾಗುತ್ತದೆ, ಅದರಿಂದ ಹೆಚ್ಚು ಅವಕಾಶ ಸಿಕ್ಕುತ್ತದೆ ಎನ್ನುವ ಸಂದರ್ಭವಿರುವಾಗ ನಾವು ಬೇಡ ಎಂದು ಹೇಳುವುದು ಅಷ್ಟು ಸೂಕ್ತವಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಕೊನೆಯದಾಗಿ ಒಟ್ಟಿನಲ್ಲಿ ಒಳ್ಳೆಯ ಸಂದರ್ಭ ಇದೆ. ಸದವಕಾಶ ನಮಗೆ ದೊರಕಿದೆ. ದೇಶ ಪುನರ್ವಿಂಗಡಣೆಯಾಗಿ ನಿರ್ದಿಷ್ಟವಾದ ಸ್ತ್ರಿಮಿತಕ್ಕೆ ಮತ್ತು ನಿರ್ದಿಷ್ಟವಾದ ಅಭಿವೃದ್ಧಿಗೆ ಬರುವುದಕ್ಕೆ ನಮಗೆ ದೇವರು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾನೆ. ಇನ್ನು 25-50 ವರ್ಷಗಳಲ್ಲಾದರೂ ಕೂಡ ಮುಂದೆ ಬರುವವರು ಅದನ್ನು ಜ್ಞಾಪಿಸಿಕೊಳ್ಳುತ್ತಾರೆ. ಹೀಗಿರುವ ದೆಸೆಯಿಂದ ಬಂದಿರತಕ್ಕ ಅವಕಾಶವನ್ನು ತಳ್ಳಿಹಾಕದೆ ಎಲ್ಲಾ ಮಹನೀಯರೂ ಒಮ್ಮನಸ್ಸಿನಿಂದ ಪುನರ್ವಿಂಗಣಾ ಸಮಿತಿಯವರ ವರದಿಯನ್ನು ಒಪ್ಪಿಕೊಂಡು ಒಮ್ಮನಸ್ಸಿನಿಂದ ಈ ನಿರ್ಣಯವನ್ನು ಪಾರ್ಲಿಮೆಂಟಿಗೆ ಕಳುಹಿಸಿಕೊಡುತ್ತಾರೆಂದು ನಂಬಿ ಈ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಗಂಗಾನಾಯಕ್ (ಸೊರಬ-ಷಿಕಾರಿಪುರ—ಅನುಸೂಚಿತ ಜಾತಿಗಳು).—ಸ್ವಾಮಿ, ಏಕೀಕರಣದ ವಿಚಾರದಲ್ಲಿ ವಾದ ನಡೆಯುತ್ತಾ ಇರುವುದನ್ನು ನೋಡಿದರೆ ನನ್ನ ಮನಸ್ಸಿಗೆ ಬಹಳ ವ್ಯಥೆಯಾಗುತ್ತದೆ. ಏತಕ್ಕೆಂದರೆ ಎಲ್ಲಾ ದೇಶದ ನಡೆವಳಿಕೆಗಳನ್ನೂ ಒಂದು ಭಾವನೆಯಿಂದ ಸಮನ್ವಯ ಮಾಡಿಕೊಂಡು ಹೋಗಬೇಕಾದದ್ದು ನಮ್ಮ ಕರ್ತವ್ಯ. ಅದು ಸಿಕ್ಕುವುದಿಲ್ಲ, ಇದು ಸಿಕ್ಕುವುದಿಲ್ಲ, ದುಡ್ಡು ಸಿಕ್ಕುವುದಿಲ್ಲ ಎಂದು ಹೇಳುತ್ತಿದ್ದೇವೆ. ಆಮೇಲೆ ಅಲ್ಲಿಂದ ಎರಡರಷ್ಟು ಮೂರರಷ್ಟು ಕೊಟ್ಟೇ ಕೊಡುತ್ತಾರೆ. ಅನಂತರ ನಮಗೆ ಬೇಕಾದಷ್ಟು ಸೌಕರ್ಯ ದೊರತೇ ದೊರೆಯುತ್ತದೆ. ಸುಮ್ಮನೆ ಲಿಂಗಾಯಿತ, ಒಕ್ಕಲಿಗ ಎಂದು ಪಾರ್ಟಿ ಕಟ್ಟಿಕೊಂಡು ವ್ಯಾಜ್ಯ ಮಾಡುತ್ತಿದ್ದಾರೆ. ಈಗ ಏಕಿಕರಣ ಆಗಲೇಬೇಕು. ನಾವೆಲ್ಲರೂ ಒಪ್ಪಿ ಹಾಗೆ ಮಾಡೋಣ.

*ಶ್ರೀ ಎಸ್. ಪರಮೇಶ್ವರಪ್ಪ (ಸಿರುಗುಪ್ಪ).—

"ಸಮಯಕ್ಕನುಸರಿಸುತ್ತಾ, ಆ ಸಮಯದಿ
ಅಮಾತನಾಡಿ, ಅನ್ಯರ ಮನವಂ ನೋಯಿಸಿದರೆ,
ತಾ ನೋಯದೆ, ತಪ್ಪಿಸಿಕೊಳ್ಳುವವನೇ
ಧನ್ಯನು—ಸುಮತಿ"

(ಶ್ರೀ ಎಸ್. ಪರಮೇಶ್ವರಪ್ಪ.)

ಮುಖ್ಯ ಮಂತ್ರಿಗಳು ಇವತ್ತಿನವರೆಗೂ ಯಾವ ಯಾವ ಸಂದರ್ಭದಲ್ಲಿ ಏನೇನೋ ಮಾತುಗಳನ್ನು ಆಡಿಕೊಂಡು ಎಂಟು ಹತ್ತು ವರ್ಷಗಳಿಂದ ತಿರುಗಾಡಿದರು. ಮೊದಲನೆ ತಪ್ಪು ಇಂಡಿಯಾ ಸರ್ಕಾರದವರು ಮಾಡಿದರು. 1953ನೇ ಇಸವಿ ಮಾರ್ಚ್ 25ನೇ ತಾರೀಖು ಪ್ರಧಾನ ಮಂತ್ರಿ ನೆಹರೂ ಅವರು ಒಂದು statementನ್ನು ಕೊಟ್ಟರು. 'Six taluks must go to Mysore. One taluk is under consideration. Three taluks must go to Andhra', ಎಂದು ಹೇಳಿದರು. ನಮ್ಮಲ್ಲಿ ನಿಮ್ಮಲ್ಲಿ ಸ್ವಾರ್ಥ ಇದ್ದೇಇದೆ. ಮಾನ್ಯ ಶ್ರೀ ನಾಗನಗೌಡರು "ಬಳ್ಳಾರಿ ಸಾಕು. ಮುಂದೆ ನೋಡಿಕೊಳ್ಳೋಣ" ಎಂದು ಹೇಳಿ ಹೊಸಪೇಟೆಗೆ ಮೋಸಮಾಡಿದರು ಎಂದು ಘಂಟಾ ಘೋಷವಾಗಿ ಹೇಳುತ್ತೇನೆ. 'ಆದ ಕಾರಣ ಬಳ್ಳಾರಿಯನ್ನು ಇಟ್ಟುಕೊಂಡು ಮುಂದಿನ ಆಲೋಚನೆ ಮಾಡೋಣ' ಎಂದು ಹೇಳಿದರು. 1951ನೇ ಇಸವಿಯೊಳಗೆ ತಾತ್ಕಾಲಿಕವಾಗಿ ಕೇಳ್ಕರ್‌ರವರು ಎರಡು ಕಾಂಗ್ರೆಸ್ ಕಮಿಟಿಗಳನ್ನು ಮಾಡಬೇಕೆಂದು ಒಂದು ನಿರ್ಣಯವನ್ನು ಮಾಡಿದರು. ಆಂಧ್ರರ ಮನಸ್ಸು ನೋಯದ ಹಾಗೆ ಬಳ್ಳಾರಿಯ ಮೂರು ತಾಲ್ಲೂಕುಗಳನ್ನು ಸೇರಿಸಿ ಒಂದು ಬಳ್ಳಾರಿ ಡಿಸ್ಟ್ರಿಕ್ಟಿನ ಕಾಂಗ್ರೆಸ್ ಕಮಿಟಿ ಮತ್ತು ಬಳ್ಳಾರಿಯ ಏಳು ತಾಲ್ಲೂಕುಗಳನ್ನು ಸೇರಿಸಿ ಒಂದು ಕರ್ಣಾಟಕ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿ ಎಂದು ಎರಡು ಕಮಿಟಿಗಳನ್ನು ಮಾಡಿದರು. ಆಮೇಲೆ ಪ್ರತಿಯೊಬ್ಬರೂ ಕೇಳ್ಕರ್ ಅವರ award ಪ್ರಕಾರ ಮೂರು ತಾಲ್ಲೂಕುಗಳನ್ನು ನಮಗೆ ಕೊಡಿ ಎಂದು ಕೇಳುತ್ತಾ ಬಂದರು. ಮೂರು ತಾಲ್ಲೂಕುಗಳನ್ನು ಹೊಡೆದಾಡದೆ ಬಿಟ್ಟು ಬಿಟ್ಟದ್ದು ಮೊದಲನೆ ತಪ್ಪು. ಈಗ S. R. C. ಕಮಿಟಿಯವರು ಈ ಆರು ತಾಲ್ಲೂಕುಗಳಲ್ಲಿ ಮೂರು ತಾಲ್ಲೂಕುಗಳನ್ನು ಅಂದರೆ ಬಳ್ಳಾರಿ, ಹೊಸಪೇಟೆ, ಸಿರುಗುಪ್ಪ, ಪ್ರದೇಶಗಳನ್ನು ಆಂಧ್ರಕ್ಕೆ ಸೇರಿಸಲು ಶಿಫಾರ್ಸು ಮಾಡಿದ್ದಾರೆ. ಶ್ರೀಮಾನ್ ರಾಜಗೋಪಾಲಾಚಾರಿಯವರು ಮದರಾಸಿನಲ್ಲಿ ಮುಖ್ಯ ಮಂತ್ರಿಗಳಾದಾಗ ಶ್ರೀ ನಾಗನಗೌಡರಿಗೆ ಮಂತ್ರಿ ಪದವಿ ಬಂತು. ಮಂತ್ರಿ ಪದವಿ ಶಾಶ್ವತವಲ್ಲ. ರಾಜಾಜಿ ಲೀಡರ್ ಆದಮೇಲೆ ಈ ವಿಚಾರದಲ್ಲಿ ಕೇಂದ್ರ ಸರ್ಕಾರಕ್ಕೆ ಹೋಗಿ ಹೇಳಿ ಎಂದು ರಾಜಾಜಿಯವರನ್ನು ಶ್ರೀ ನಾಗನಗೌಡರು ಕೇಳಿದ್ದರೆ ಈ ಮೂರು ತಾಲ್ಲೂಕುಗಳು ಆಂಧ್ರಕ್ಕೆ ಹೋಗುತ್ತಿರಲಿಲ್ಲ. ಈಗ ನಮ್ಮ ಮನೆಗೆ ಬೆಂಕಿ ಹತ್ತಿದೆ. ಅದು ನನ್ನ ಮನಸ್ಸಿಗೆ ಬಹಳ ನೋವಾಗಿದೆ. ನಮ್ಮ ಅಭಿಪ್ರಾಯ ಏನು ಇದೆ ಎಂದು ಕೇಳಿದರು. ನಮ್ಮ ನಿಮ್ಮ ಅಭಿಪ್ರಾಯ ಒಂದೇ ಇದೆ ಎಂದು ಹೇಳಿದ್ದೇನೆ. ನಾವು ಇರುವವರು ನಾಲ್ಕು ಮಂದಿ. ಐದನೆ ಮಂದಿಗೆ ಸಂಬಂಧವಿಲ್ಲ. ರಾಜಾಜಿಯವರು 1936ನೇ ಇಸವಿಯಲ್ಲಿ Prohibition Bill ಬಂದಾಗ ಒಂದು ಕಥೆ ಹೇಳಿದರು. "ಒಂದು ದಿನ ನಾಲ್ಕು ಎತ್ತುಗಳು ಜೊತೆಯಲ್ಲಿ ಮೇಯುವುದಕ್ಕೆ ಹೋಗುತ್ತಿದ್ದುವು. ಮೇಯುವಾಗ ತಮ್ಮ ತಮ್ಮೊಳಗೆ ಕಿತ್ತಾಟ ಬಂತು. ಆಗ ಬೇರೆ ಬೇರೆ ಕಡೆ ಮೇಯುವುದಕ್ಕೆ ಹೋದವು. ಆಗ ಹುಲಿ ಬಂದು ಒಂದೊಂದನ್ನೂ ತಿಂದಿತು." ಹೀಗೆ ಒಬ್ಬೊಬ್ಬರನ್ನೂ ಒಂದು ನಲ ತಿಂದುಬಿಡುವ ಹಾಗೆ ಆಗಿದೆ. ಅದ್ದರಿಂದ ದಯವಿಟ್ಟು ಬಳ್ಳಾರಿಯ 10 ತಾಲ್ಲೂಕುಗಳನ್ನೂ Unanimous ಆಗ್ಗಿ ಈ 105 ಮೆಂಬರುಗಳೂ ಏನೂ ವಿಂಗಡಣೆಯಿಲ್ಲದೆ ಮೈಸೂರಿಗೆ ಸೇರಿಸಬೇಕೆಂದು ತೀರ್ಮಾನ ಮಾಡಬೇಕೆಂದು ಶ್ರೀ ಹುಚ್ಚಮಾಸ್ತಿ

6-30 P.M.

ಗೌಡರನ್ನು ಕೇಳಿಕೊಂಡೆವು. ಅದಕ್ಕೆ ಅವರು, 'ನಮ್ಮ ಮನೆಗೇ ಬೆಂಕಿ ಬಿದ್ದಿದೆ, ಅದನ್ನು ಆರಿಸಿಕೊಂಡಮೇಲೆ ನೀವು ಹೇಳಿದುದನ್ನು ಮಾಡಿಸಿ ಕೊಡುತ್ತೇವೆ, ಎಂದು ಹೇಳಿದರು. ನಮ್ಮಲ್ಲಿ ಒಬ್ಬರು ನಮ್ಮನ್ನು ಕೈಬಿಟ್ಟರು. ನಾನು ಮಾತ್ರ ಶ್ರೀ ಹುಚ್ಚಮಾಸ್ತಿ ಗೌಡರಿಗೆ ಮಾತು ಕೊಟ್ಟ ಪ್ರಕಾರ ನಡೆದುಕೊಳ್ಳುತ್ತೇನೆ. ನಾಲಗೆಗೆ ಬೆಲೆಯಿದೆ, ಆದರೆ ಪದವಿಗೆ ಬೆಲೆಯಿಲ್ಲ. ಈ ಹೊತ್ತಿನ ವರೆಗೂ ಶ್ರೀ ಸಿದ್ದಪ್ಪನವರು ಮಾತ್ರ ಆ ಮೂರು ತಾಲ್ಲೂಕುಗಳನ್ನು ಇಲ್ಲಿಗೇ ಸೇರಿಸಿಕೊಡಬೇಕೆಂದು ಮಾತನಾಡಿದ್ದಾರೆ. ಶ್ರೀ ಕೊಟ್ರ ಬಸವನ ಗೌಡರ ಬಾಯಲ್ಲಿ ಈ ವಿಚಾರ ಈ ಹೊತ್ತಿನವರೆಗೂ ಬಂದಿಲ್ಲ. ಈಗ ಉಳಿದಿರುವ ನಾಲ್ಕು ಮಂದಿಯನ್ನೂ ಹುಲಿ ತಿನ್ನದಂತೆ ಒಗ್ಗಟ್ಟಾಗಿರಬೇಕು. ಬಳ್ಳಾರಿಯಲ್ಲಿ ಸತ್ಯಾಗ್ರಹ ಷುರುವಾಗಿ ಅರೆಸ್ಟ್ ಆಗಿರುವವರ ಸಂಖ್ಯೆ ಆರ ನೂರು ಚಿಲ್ಲರೆವರೆಗೆ ಬಂದಿದೆ. ಮೊನ್ನೆ ವ್ಯವಸಾಯ ಮಂತ್ರಿ ಡಾ|| ನಾಗನ ಗೌಡರು ಅಲ್ಲಿಗೆ ಬಂದಿದ್ದಾಗ ಬಳ್ಳಾರಿಯಲ್ಲಿ ಕೊತ ಕೊತ ಕುದಿಯ ಎತ್ತಿತ್ತು. ಅಲ್ಲಿಯ ಜನ ನಮ್ಮನ್ನು 'ನೀವು ನಾಲ್ಕು ಮಂದಿ ಒಗ್ಗಟ್ಟಾಗಿ ನಿಂತು ಏಕೆ ನಿಮ್ಮ ಸ್ಥಾನಗಳಿಗೆ ರಾಜಿನಾಮೆ ಕೊಡಬಾರದು, ನಿಮಗೆ ಬಾಯಿಲ್ಲ, ಧೈರ್ಯವಿಲ್ಲ, ಹೆದರುತ್ತಿದ್ದೀರಿ' ಎಂದು ಪ್ರಶ್ನೆ ಮಾಡಿದರು. ಆಗ 'ಭೂದಾನ ವಿದ್ಯಾದಾನ ಕಾರ್ಯಕ್ರಮಗಳಿಂದ ನಿಧಾನವಾಗಿದೆ, ಮುಖ್ಯ ಮಂತ್ರಿಗಳೂ ವ್ಯವಸಾಯ ಮಂತ್ರಿಗಳೂ ಸಕ್ಕರೆ ಕಾರ್ಖಾನೆಯ ಅಸ್ತಿಭಾರ ಶಿಲೆ ಹಾಕುವುದಕ್ಕೆ ಇನ್ನು ಮೂರು ನಾಲ್ಕು ದಿವಸಗಳಲ್ಲಿ ಬರುತ್ತಾರೆ, ಅದುವರೆಗೆ ದಯವಿಟ್ಟು ನಿಧಾನಮಾಡಿ, ಆಮೇಲೆ ನೀವು ಹೇಳಿದ ಹಾಗೆ ಮಾಡುವುದಕ್ಕೆ ತಯಾರಾಗಿದ್ದೇನೆ' ಎಂದು ಹೇಳಿದೆವು. ಹಿಂದೆ ಭಾರತದ ಕೈಗಾರಿಗೆ ಮಂತ್ರಿಗಳಾಗಿದ್ದವರು 'ಕಾಶ್ಮೀರಕ್ಕೆ ಹೋಗಬಾರದು, ಅಲ್ಲಿಗೆ ಹೋದರೆ ಅರೆಸ್ಟ್ ಮಾಡುತ್ತಾರೆ' ಎಂದು ಅವರಿಗೆ ಹೇಳಿದರೂ ಅದನ್ನು ಲೆಕ್ಕ ಮಾಡದೆ ಅಲ್ಲಿಗೆ ಹೋದರು. ಹಾಗೆ ಈಗ ನಮ್ಮ ಮಿನಿಸ್ಟರ್ ಆಗಿರುವವರು ಸತ್ಯಾಗ್ರಹ ಮಾಡುವುದಕ್ಕೆ ಒಪ್ಪಿಕೊಂಡು, ಸತ್ಯಾಗ್ರಹ ಮಾಡಿ ಜೈಲಿಗೆ ಹೋದರೆ ಆಗ ಬಳ್ಳಾರಿಯ ಕಷ್ಟ ಸುಖ ಗೊತ್ತಾಗುತ್ತದೆ. ಅವರು ಹಾಗೆ ಮಾಡಬೇಕು. ನಮ್ಮಲ್ಲಿ ಆ ರೀತಿ ಒಗ್ಗಟ್ಟಾಗಬೇಕು. ಬಿಟ್ಟುಹೋಗಿರುವ ಆ ಮೂರು ತಾಲ್ಲೂಕುಗಳೂ ಪುನಃ ನಮಗೆ ಸೇರಬೇಕು. 1938ರಲ್ಲಿ ಡಾ|| ನಾಗನ ಗೌಡರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರಾಗಿದ್ದಾಗ ಪಂಡಿತ ತಾರಾನಾಥರು ನಮ್ಮೂರಿಗೆ ಬಂದಿದ್ದರು. ಅವರು ಒಂದು ಸಭೆಯಲ್ಲಿ 'ಜಿಹ್ವೆಯಿಲ್ಲದಿದ್ದರೆ ಜೀವವಿಲ್ಲ' ಎಂದು ಹೇಳಿದ ಮಾತನ್ನು ನಾಗನ ಗೌಡರಿಗೆ ಜ್ಞಾಪಕ ಕೊಡುತ್ತೇನೆ. ಈಗ ಪರಿಸ್ಥಿತಿ ಹೇಗಿದೆಯೆಂದರೆ, ನಾಗನ ಗೌಡರೂ ಉಳಿಯುವ ಹಾಗಿಲ್ಲ, ನಾನೂ ಉಳಿಯುವ ಹಾಗಿಲ್ಲ, ಕೊಟ್ರ ಬಸವನ ಗೌಡರೂ ಉಳಿಯುವ ಹಾಗಿಲ್ಲ. ನಾನು ಎಲ್ಲದಕ್ಕೂ ತಯಾರಾಗಿದ್ದೇನೆ. ಮನುಷ್ಯ ಹುಟ್ಟಿದ ಮೇಲೆ ಸಾಯುವುದಕ್ಕೆ ತಯಾರಾಗಿರಲೇ ಬೇಕು. 'ನಾವು ಸತ್ಯಾಗ್ರಹ ಮಾಡಿ ಅವರ ಜೊತೆಯಲ್ಲಿ ಜೈಲಿಗೆ ಹೋಗುತ್ತೇವೆ. ನಮ್ಮ ಚೀಫ್ ಮಿನಿಸ್ಟರು ಬರುವುದರೊಳಗೆ ಬಳ್ಳಾರಿಯಲ್ಲಿ ನಾಲ್ಕೈದು ಸಾವಿರ ಜನರನ್ನು ಜೈಲಿನಲ್ಲಿ ಭರ್ತಿ ಮಾಡುತ್ತೇವೆ. ಆಮೇಲೆ ಡೆಲ್ಲಿಗೆ ಹೋಗಿ ಪಂಡಿತ ನೆಹರೂ ಮನೆಯ ಮುಂದೆ ಹೋಗಿ ಅಲ್ಲಿಯೂ ಸತ್ಯಾಗ್ರಹ ಪ್ರಾರಂಭ ಮಾಡುತ್ತೇವೆ, ಭಯಪಡುವುದಿಲ್ಲ'ವೆಂದು ಅಖಂಡ ಕರ್ಣಾಟಕ ನಿರ್ಮಾಣ ಪರಿಷತ್ತಿನ ಅಧ್ಯಕ್ಷರಾದ ಶಿವಮೂರ್ತಿ

ಯವರು ಹೇಳಿದ್ದಾರೆ. ಅವರು ಆಂಧ್ರಕ್ಕೆ ಸೇರಿರುವ ಆಲೂರು, ಆದೋನಿ, ರಾಯದುರ್ಗ ಈ ಮೂರು ತಾಲ್ಲೂಕುಗಳಲ್ಲಿಯೂ ಸತ್ಯಾಗ್ರಹವನ್ನು ಪ್ರಾರಂಭಮಾಡುತ್ತೇವೆಂದು ಅಲ್ಟಿಮೇಟಂ ಕೊಟ್ಟಿದ್ದಾರೆ. ಇದನ್ನೆಲ್ಲಾ ಅರಿತು ಡಾ॥ ನಾಗನ ಗೌಡರು ಎಚ್ಚರಗೊಂಡು ಜನರಿಗೆ ಸಮಾಧಾನ ಮಾಡಬೇಕೆಂದು ಹೇಳಿ ಮುಗಿಸುತ್ತೇನೆ.

* ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ—ಅನುಸೂಚಿತ ಜಾತಿಗಳು).—ಸ್ವಾಮಿ, ಅಧ್ಯಕ್ಷರೆ, ಪ್ರಾಂತ ಪುನರ್ವಿಂಗಡಣಾ ಸಮಿತಿಯ ವರದಿಯ ಮೇಲೆ ಮಾತನಾಡುತ್ತಾ ನನಗೆ ಕಂಡು ಬಂದ ಒಂದೆರಡು ವಿಚಾರಗಳನ್ನು ಮುಚ್ಚುಮರೆಯಿಲ್ಲದೆ ತಿಳಿಸಬೇಕಾಗಿದೆ. 'ಎರಡು ಕಣ ನಂಬಿ ದಾಸಯ್ಯಕೆಟ್ಟ' ಎಂದು ಗಾದೆ ಇದೆ. ಅಲ್ಲಿ ಕಣ ಮುಂಚೆ ಮುಗಿಯುತ್ತದೆಂದು ಅಲ್ಲಿ ಹೋದ, ಅಲ್ಲಿ ಅವರು ಕೊಡಲಿಲ್ಲ, ಅಲ್ಲಿಂದ ವಾಪಸ್ ಇಲ್ಲಿಗೆ ಬರುವ ಹೊತ್ತಿಗೆ ಇಲ್ಲಿ ಮುಗಿದು ಹೋಗಿತ್ತು. ಅಂತೂ ಅವನಿಗೆ ಎರಡು ಕಡೆಯೂ ಸಿಕ್ಕಲಿಲ್ಲ. ಹಾಗಾಗಿದೆ ನಮ್ಮ ಸ್ಥಿತಿ. ಯಾವಾಗಲೂ ಒಂದಿಲ್ಲ ಒಂದನ್ನು ನಂಬಬೇಕು. ಅದಕ್ಕೇ 'ವಚಸ್ಯೇಕಂ ಮನಸ್ಯೇಕಂ ಕರ್ಮಣ್ಯೇಕಂ ಸದಾತ್ಮನಃ' ಎಂದು ಮಹನೀಯರು ಹೇಳಿದ್ದಾರೆ. ಸ್ವರಾಜ್ಯ ಸಂಪಾದನೆ ಮಾಡುವವರೆಗೆ ಕಾಂಗ್ರೆಸ್ ನಾಯಕರ ನಮಗೆ ಬೇಕಾಗಿತ್ತು. ಕಾಂಗ್ರೆಸ್ ಮುಂಖಡರು ಯಾರಾದರೂ ಏನು ಹೇಳಿದರೂ ಅದಕ್ಕೆ ತಲೆಬಾಗುತ್ತಿದ್ದೆವು. ಕಾರಣವೇನು ! ಆಶೆ. ಆಶೆ ದುರಾಶೆಯನ್ನು ದೂರ ಮಾಡಿ ಸರ್ವರೂ ಒಂದೇ ಎಂದು ಸಮಾನ ದೃಷ್ಟಿಯಿಂದ ನೋಡಬೇಕು. ಸಂಕುಚಿತ ಮನೋಭಾವವಿರಬಾರದು. ಯಾರಾದರೂ ನಮ್ಮಲ್ಲಿ ಬಂದರೆ ಅವರನ್ನು ಸೇರಿಸಿಕೊಳ್ಳಬೇಕು. ಕನ್ನಡ ರಾಜ್ಯದಲ್ಲಿರುವವರೆಲ್ಲರೂ ಒಂದಾಗಿ ಸಹೋದರರಂತೆ ಬಾಳಿದರೆ ಎಲ್ಲರಿಗೂ ಒಳ್ಳೆಯದಾಗುತ್ತದೆ. ಸಮುದ್ರತೀರವಿಲ್ಲದೆ ಈಗ ನಮ್ಮ ವ್ಯಾಪಾರಸ್ಥರಿಗೆ ಬಹಳ ತೊಂದರೆಯಾಗಿದೆ, ಕರ್ಣಾಟಕವಾದರೆ ಅದು ನಿವಾರಣೆಯಾಗುತ್ತದೆ. ಅಲ್ಲಿಯ ಅರಣ್ಯ ಸಂಪತ್ತು, ಎರೆಭೂಮಿ ಬರುತ್ತದೆ, ಒಳ್ಳೆಯ ಶ್ರೀಮಂತರ ಸ್ನೇಹವಾಗುತ್ತದೆ. ಇದರಿಂದ ನಮಗಿರುವ ಲಕ್ಷ್ಮಿ ಇನ್ನೂ ಹೆಚ್ಚಾಗುತ್ತದೆ. 'ಅಹಂ ಬ್ರಹ್ಮಾಸ್ಮಿ' ಎಂದು ಹೇಳುವ ನಾವು ಹೀಗೆ ನಾವೇ ಬೇರೆ ಅವರೇ ಬೇರೆ ಎಂಬ ಭಾವನೆಯನ್ನು ಇಡಬಾರದು. ದೂರದೃಷ್ಟಿಯಿಂದ ನೋಡಬೇಕು. ವಿಶಾಲ ಕರ್ಣಾಟಕವಾದರೆ ನಮಗೆ ಸಂತೋಷವಾಗುತ್ತದೆ, ಹೆಚ್ಚು ಸೌಕರ್ಯಗಳು ದೊರೆಯುತ್ತವೆ ಎಂಬುದು ಪ್ರಾಂತ ಪುನರ್ವಿಂಗಡಣಾ ಸಮಿತಿಯ ವರದಿಯನ್ನು ನೋಡಿದರೆ ಗೊತ್ತಾಗುತ್ತದೆ. ಆ ಸಮಿತಿಯವರೇನೂ ಕಾಂಗ್ರೆಸ್ಸಿನವರಲ್ಲ. ತ್ರಿಮೂರ್ತಿಗಳಾದ ಬ್ರಹ್ಮವಿಷ್ಣು ಮಹೇಶ್ವರರ ಹಾಗೆ ಮೂರು ಜನ ಪ್ರಾಜ್ಞರು ಸೇರಿ ತಯಾರು ಮಾಡಿರುವ ವರದಿ. ಹಿಂದೆ ಆಂಧ್ರವನ್ನೂ ಕೂಡ ಮಾಡುತ್ತಿರಲಿಲ್ಲ. ಪೊಟ್ಟಿ ಶ್ರೀರಾಮುಲು ಅವರು ಅದಕ್ಕಾಗಿ ಸತ್ತರೆಂದು ಮಾಡಿದರು. ಅವರು ಪ್ರಾಣಬಿಟ್ಟಿದ್ದರಿಂದ ಆಂಧ್ರಕ್ಕೆ ಬೇರೆ ಪ್ರಾಂತ ಸಿಕ್ಕಿತು. ಮೈಸೂರು ಮೈಸೂರಾಗಿ ಉಳಿಯುವುದು ಬೇಡ. ಕರ್ಣಾಟಕಕ್ಕೆ ಸೇರುವುದು ಒಳ್ಳೆಯದು. ಮೈಸೂರಿನಲ್ಲೇಕೆ ಈ ತರಹ ಭೇದ ಭಾವನೆ ಹುಟ್ಟಬೇಕು ? ಇದು ಇರಬಾರದು. ತತ್ವ ಸರಿಯಾಗಿದೆಯೆಂಬುದರ ಮೇಲೆ ಇದು ತೀರ್ಮಾನವಾಗಿದೆ. ಹೀಗಿರುವಾಗ ಎಂ. ಪಿ. ಸಿ. ಸಿ. ಯವರೂ ಕಾಂಗ್ರೆಸ್ ಹೈಕಮ್ಯಾಂಡಿನವರೂ ಆಗಲೆ ತೀರ್ಮಾನ ಮಾಡಿ ನಮ್ಮ ಕಾಲು ಮುರಿದಿದ್ದಾರೆ, ನಿಲ್ಲುವುದಕ್ಕಾಗುವುದಿಲ್ಲ ಎಂದು ಹೀಗೆಲ್ಲ ವಾದ ಮಾಡುವುದು ಸರಿಯಲ್ಲ. ಕರ್ಣಾಟಕ ಏಕೀಕರಣ ಒಳ್ಳೆಯದು. ಆದುದರಿಂದ ಸರ್ವರೂ ಕರ್ಣಾಟಕಕ್ಕೆ ಒಮ್ಮತ ಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಐದು ನಿಮಿಷದಲ್ಲಿ ನಾನು ಮುಗಿಸಬೇಕೆಂದು ಅಧ್ಯಕ್ಷರು ಅಪ್ಪಣೆ ಕೊಟ್ಟರು, ಅದರಂತೆ ಮುಗಿಸಿದ್ದೇನೆ. ಇಷ್ಟು ಹೇಳಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸುತ್ತೇನೆ.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ-ಅನುಸೂಚಿತ ಜಾತಿಗಳು).—ಸ್ವಾಮಿ, ಇದುವರೆಗೂ ಈ ಸಭೆಯಲ್ಲಿ ರಾಜ್ಯಗಳ ಪುನರ್ವಿಂಗಡಣಾ ಸಮಿತಿಯ ವರದಿ ಎಷ್ಟು ರೂಪದಲ್ಲಿ ಚರ್ಚೆಯಾಗಿದೆ ಎನ್ನುವುದನ್ನು ನಾವೆಲ್ಲರೂ ತಿಳಿದುಕೊಂಡಿದ್ದೇವೆ. ಒಂದು ವಿಷಯ ಚಿಕ್ಕದಾದರೂ ಹೇಳುವವರು ತಮ್ಮ ಸಾಮರ್ಥ್ಯದಿಂದ ಅದನ್ನು ದೊಡ್ಡದು ಮಾಡಿಯಾದರೂ ಹೇಳಬಹುದು, ಅಥವಾ, ಹೇಳತಕ್ಕವರ ಶಕ್ತಿ ಕಡಮೆಯಿದ್ದಾಗ ಹೆಚ್ಚು ಉಪಯುಕ್ತವಾದ ದೊಡ್ಡ ವಿಷಯವನ್ನು ಕೆಲಸಕ್ಕೆ ಬಾರದ ವಿಷಯ ಎನ್ನುವ ರೀತಿಯಲ್ಲಿ ಹೇಳಬಹುದು. ಇದನ್ನು ವಕೀಲವೃತ್ತಿ ಮಾಡುವ ಜನ ಚೆನ್ನಾಗಿ ಅರ್ಥ ಮಾಡಿಕೊಳ್ಳುತ್ತಾರೆ. They know how to make a case for a bad or a good subject. ಇದನ್ನೆಲ್ಲಾ ಗಮನಿಸಿ, ನಮ್ಮ ಮನಸ್ಸಿನಲ್ಲಿ ನಮಗೆ ನಾವೇ ಪ್ರಶ್ನೆ ಹಾಕಿಕೊಂಡರೆ, ನಮ್ಮ ಸೋಲೂ, ಗೆಲವೂ ನಮ್ಮ ಕೈಯ್ಯಲ್ಲೇ ಇದೆ ಎಂದು ಗೊತ್ತಾಗುತ್ತದೆ. ವಾದಕ್ಕೆ ವಾದ ಇದ್ದೇ ಇದೆ. "ಮಾತು ಮಾತಿಗೆ ಮರೆಸಲ್ಕೆವಿಧಿ ಬಂದು ಆತುಕೊಂಡಿಹುದು ಸರ್ವಜ್ಞ" ಎಂದು ಹೇಳಿದ್ದಾನೆ. ಬರಿಯ ಮಾತು ಬೆಳೆಸಿಕೊಂಡು ಹೋಗಬಾರದು. ಮಾತು ಬಲ್ಲವನಿಗೆ ಒಂದೇ ಮಾತು, ಬಾಳೆಗೊಂದೇ ಗೊನೆ ಎಂದು ಹೇಳುತ್ತಾರೆ. ಒಂದುಸಾರಿ ಬಾಳೆ ಗೊನೆ ಬಿಟ್ಟರಾಯಿತು ಮತ್ತೆ ಅದೇ ಬುಡದಲ್ಲಿ ಬಿಡುವುದಿಲ್ಲ. ಜನರನ್ನು ವಾದದಿಂದ ಗೆಲ್ಲುವುದಕ್ಕಾಗುವುದಿಲ್ಲ, ಪ್ರಯೋಜನವಿಲ್ಲ ಎಂದು ನಾವು ಸುಮ್ಮನಿದ್ದರೆ ಮೇಲು. ದಡ್ಡರಹಾಗೆ ಸುಮ್ಮನಿರೋಣವೆಂದರೆ, ಇದು ಪ್ರಜಾಪ್ರಭುತ್ವದ ಕಾಲ. Democracy is a form of Government where we run the Government by argumentation, persuation and conviction. ಈ ಅರ್ಥದಲ್ಲಿ ನಾವು ಭಾಷೆಯ ಗಾಂಭೀರ್ಯವನ್ನು ತಿಳಿದುಕೊಂಡು, ಮಹತ್ವದ ವಿಚಾರವನ್ನು ವಿಮರ್ಶಿಸುವಾಗ, ನಮ್ಮ ಮನಸ್ಸಿನಲ್ಲಿ ಈರ್ಷೆಯಿರಲಿ, ಕೋಪವಿರಲಿ ಅದನ್ನು ಬದಿಗಿಟ್ಟು ನ್ಯಾಯಧರ್ಮಗಳ ದೃಷ್ಟಿಯಿಂದ ಮಥನ ಮಾಡಿ, ಸರಿಯೆಂದು ತೋರಿದ ಕಾರ್ಯದಲ್ಲಿ ಮುಂದುವರಿಯಬೇಕು. ಹಾಗೆ ಮಾಡದಿದ್ದರೆ, ಬಾಳೆಯ ಸಿಪ್ಪೆಯ ಹಾಗಾಗಿ ನಮ್ಮ ಕಾರ್ಯ ಸಫಲವಾಗುವುದಿಲ್ಲ. ಭಾಷೆಯ ಗಾಂಭೀರ್ಯ ಎಷ್ಟೋ ಇದೆ. ಕೇಳುವವರು ಕೇಳುತ್ತಿದ್ದರೆ, ಪರವಾಗಿ ಮಾತನಾಡುವ ಜನ ಪರವಾಗಿ ಮಾತನಾಡಿದರೆ ಅದು ಸರಿಯೆಂದೂ, ವಿರೋಧವಾಗಿರುವ ಜನರು ವಿರೋಧದ ಕಡೆ ವಾಲಿದರೆ ಅದೂ ಸರಿಯೆಂದೂ ಭಾಷಾ ವೈಖರಿಯಿಂದ ಕಾಣಬಹುದು. ಆದರೆ Judgment ಅಥವಾ ತೀರ್ಮಾನ ಕೊಡುವಾಗ ಬರುತ್ತದೆ ಕಷ್ಟ. ಈಗ ಆ ಕಡೆಯಾದರೂ ಹೇಳಲಿ, ಈ ಕಡೆಯಾದರೂ ಹೇಳಲಿ, ಎಲ್ಲವನ್ನೂ ಜಾಗ್ರತೆಯಿಂದ ಕೇಳಿದ್ದೇನೆ. Climax of intelligence ಏನಿದೆಯೋ ಅದನ್ನು ಪಯೋಗಿಸಿ ಹೇಳಿದರೆ, ಶಕ್ತಿಯಿಲ್ಲದ ಮಧ್ಯವರ್ತಿಯಾಗುತ್ತಾರೆ. ಇವೊತ್ತಿನ ದಿವಸ ಎರಡು ವರದಿಗಳೂ ಸಭೆಯ ಮುಂದಿವೆ. ಮೈಸೂರಿನ level ನಲ್ಲಿ ಆಗಿರುವ Fact Finding

(ಶ್ರೀ ಕೆ. ಪ್ರಭಾಕರ್.)

Committeeಯ ವರದಿ ಒಂದು ; all India level ನಲ್ಲಾಗಿರುವ ಪ್ರಾಂತ ಪುನರ್ವಿಂಗಡಣಾ ಸಮಿತಿಯ ವರದಿ ಇನ್ನೊಂದು ಇವೆರಡನ್ನೂ ಮನಸ್ಸಿನಲ್ಲಿಟ್ಟು ಕೊಂಡು, ಇಲ್ಲಿ ಯಾವ ದರ್ಜೆಯ ಜನ ಮಾಡಿದ್ದಾರೆ ಅಲ್ಲಿ ಯಾವ ದರ್ಜೆಯ ಜನ ಮಾಡಿದ್ದಾರೆ ಎಂದ, ನೋಡಬೇಕು. ಒಬ್ಬ ಮನುಷ್ಯ ಮಾಡು ವಾದ ಸರಿಯೇ ಎಂದು ನೋಡಬೇಕು.

> "Human intelligence is not either weak or timid to look into the weakness or wishes of human nature,"

ಎಂದು ಹೇಳಿದ್ದಾರೆ. ಅವರು ಯಾವ ದೃಷ್ಟಿಕೋನ ದಿಂದ ನೋಡುತ್ತಾರೆ, ಅವರ ಉದ್ದೇಶವೇನು ಎಂದು ನೋಡಬೇಕು. ಹಸರು ಹಾವನ್ನು ಬೇರೆ ಹಾವು ಎಂದು ಹೇಳಿ ತೋರಿಸತಕ್ಕ ಕಾಲ ಹೋಯಿತು. ಎಲ್ಲಿಯೂ ಉಳಿಯುವುದು ಧರ್ಮ, ಇರತಕ್ಕ ವಿಷಯ ವೇನೆಂದು ತಿಳಿದು ಮುಂದೆ ಹೋಗುವುದು ಸರಿ. ಬಹಳ ಕಾಲದಿಂದ ಕಾರಣಾಂತರದಿಂದ ಪಾಶ್ಚಾ ತ್ಯರ ಆಳ್ವಿಕೆ ನಮ್ಮಲ್ಲಿ ಬಂದದ್ದರಿಂದ ನಮ್ಮ ಮನಸ್ಸಿನ ಮಟ್ಟವೇನಾಗಿದೆ ಎಂಬುದನ್ನು ತಿಳಿದುಕೊಂಡು ಮಾತನಾಡಬೇಕು. ರಾಮನಗರ ತಾಲ್ಲೂಕಿನಲ್ಲಿ ಒಂದು ಬಂಡೆಯಮೇಲೆ ಒಂದು ಬಿರುಕಿದೆ. ಅದನ್ನು ಭೀಮನ ಒಳಲೆ ಎಂದು ಹೇಳಿ ಅದಕ್ಕೆ ಒಂದು ಕತೆಕಟ್ಟಿದ್ದಾರೆ. ಅಲ್ಲಿ ಯಾರೋ ಅರ್ಚಕರು ಸೇರಿ ಕೊಂಡು, ಜನ ಕಾಯಿ ಒಡೆದು ಕೊಟ್ಟರೆ ಚಟ್ನಿಗಾಗು ತ್ತದೆಂದು ಹೀಗೆ ಮಾತಾಡಿದರೆಂದು ಕಾಣುತ್ತದೆ. ನಾನು ಅಲ್ಲಿಗೆ ಹೋಗಿದ್ದಾಗ ಯಾರೋ ಒಬ್ಬರು ಅಲ್ಲಿ ಕಾಯಿ ಒಡೆದು ತಂದಿದ್ದರು. ಅದೇಕೆ ಕಾಯಿ ಒಡೆದಿರಿ ಎಂದು ಕೇಳಿದೆ. "ಅಲ್ಲಿ ಭೀಮ ಹಾಲು ಕುಡಿದ ಒಳಲೆ ಇದೆ, ಭೀಮನನ್ನು ಜನ ಮರೆಯುತ್ತಾ ರೆಂದು ಅದನ್ನು ಅಲ್ಲೇ ಬಿಟ್ಟಿದ್ದಾರೆ, ಅದಕ್ಕೆ ಪೂಜೆ ಮಾಡುತ್ತಿದ್ದಾರೆ" ಎಂದು ಹೇಳಿದರು. ಅದು ಯಾವಾಗ ಆಯಿತೆಂದುದಕ್ಕೆ ರಾಮನು ಅಜ್ಞಾತವಾಸ ಮಾಡಿದಾಗ ಎಂದು ಹೇಳಿದರಂತೆ. ಜನ ಅದನ್ನೂ ನಂಬುತ್ತಾರೆ. ನಮ್ಮಲ್ಲಿ customary practices ಬಹಳಮಟ್ಟಿಗೆ ನಂಬುತ್ತೇವೆ. ಇವತ್ತಿನ ದಿವಸ ಸಾಮಾನ್ಯ ಜನರ ತಿಳಿವಳಿಕೆಯ ಮಟ್ಟ ಎಷ್ಟರ ಮಟ್ಟಿಗಿದೆಯೆಂದರೆ ಏನು ಹೇಳಿದರೆ ಏನು ಹಿಡಿದು ಕೊಳ್ಳುತ್ತಾರೋ ಎನ್ನುವ ಪರಿಸ್ಥಿತಿಯಲ್ಲಿ ಮಾತನಾಡಿ ದರೆ ಹೆಚ್ಚಿನ ಪ್ರಯೋಜನವಾಗಲಾರದು. ಇಂಥ ಸಂದರ್ಭದಲ್ಲಿ ಪ್ರೋಪಗ್ಯಾಂಡ ಮಾಡಿದರು ಎಂದರೆ ನಂಬುವುದಕ್ಕಾಗುತ್ತದೆಯೇ ?

Is this the age when we are expected to take plebiscite on a great problem, a greater issue wherein the country's destiny will have to be shaped by a very few national leaders ?

ಇದರ ಅರ್ಥವನ್ನು ನಾವು ಪರಿಗಣಿಸುವುದಾದರೆ, ಪ್ಲೆಬಿಸೈಟಿನಿಂದ ಈ ವಿಷಯವನ್ನು ಎಷ್ಟರಮಟ್ಟಿಗೆ ತೀರ್ಮಾನ ಮಾಡಬಹುದೆಂಬುದನ್ನು ಯೋಚಿಸಬ ಹುದು. ಸಾಮಾಜಿಕ ವಿಚಾರಗಳಲ್ಲಿ ಓಟ್ ತೆಗೆದು ಕೊಂಡು ತೀರ್ಮಾನ ಮಾಡುವುದಕ್ಕೆ ಸಾಧ್ಯವೇ ? ಹಿಂದೂ ಕೋಡಿನ ಬಿಲ್ಲಿನ ವಿಷಯದಲ್ಲಾಗಲಿ, temple entry ವಿಷಯದಲ್ಲಾಗಲಿ ಜನರ ಅಭಿಮತ ವನ್ನು ಓಟ್ ತೆಗೆದುಕೊಂಡು ತೀರ್ಮಾನ ಮಾಡುವುದ ಕ್ಕಾಗುವುದಿಲ್ಲ. ನಮ್ಮ ಭಾರತದ ರಾಜ್ಯಾಂಗದ ಪ್ರಕಾರ ಹದಿಮೂರು ಭಾಷೆಗಳಿಗೆ ರಕ್ಷಣೆ ಕೊಡ ಬೇಕೆಂದು ಹೇಳಿದ್ದಾರೆ. ಅಂದಮೇಲೆ ಆ ಪ್ರತಿಯೊಂದು ಭಾಷೆಯೂ ಅಭಿವೃದ್ಧಿಗೆ ಬರುವುದಕ್ಕೆ ಪೂರ್ಣ ಅವಕಾಶ ಕೊಡಬೇಕು. ಜನರ ಭಾವನೆಗಳು ತಿಳಿಗನ್ನಡದಲ್ಲಿ ಸುಲಭವಾಗಿ ಹೊರಹೊಮ್ಮಿ ಮೆರೆಯುವಂತಾಗಬೇಕು. ಒಂದು ಮರಕ್ಕೆ ಒಂದು ಎಲೆಯಿದ್ದರೆ ಆಗುವುದಿಲ್ಲ. ಅದಕ್ಕೆ ಕೊಂಬೆಗಳು ರೆಂಬೆಗಳಿದ್ದು ಹೂವು ಕಾಯಿ ಹಣ್ಣು ತುಂಬಿ ಮೆರೆಯುವುದಕ್ಕೆ ಅವಕಾಶವಿರಬೇಕು. ಅಂತೆಯೇ ಭಾಷೆಯೂ ತನ್ನ ಉನ್ನತಿಯನ್ನು ಮುಟ್ಟಲು ಸಾಕಾದಷ್ಟು ಅವಕಾಶ ಹೊಂದಿರಬೇಕು. ಅಂದ ಮಾತ್ರಕ್ಕೆ ಭಾಷಾ ವ್ಯಾಮೋಹಕ್ಕೆ ಹೋಗಕೂಡದು.

ಉತ್ತರ ಕರ್ಣಾಟಕ ನಮ್ಮೊಡನೆ ಸೇರುವುದರಲ್ಲಿ ಆರ್ಥಿಕ ಅಡಚಣೆಗಳನ್ನು ಕೆಲವು ಸದಸ್ಯರು ಮುಂದಿ ಟ್ಟರು. ಅದರಲ್ಲಿ ಕೆಲವರ ವಾದ ಬಹಳ ವಿಚಿತ್ರ ವಾಗಿದೆ. 'If you are rich, you must have sufficient money, so pay taxes and if you are poor you must have saved money, so pay taxes' ಎಂದು ಹೇಳಿ ಯಾವ ರೀತಿ ಯಿಂದಲೇ ಆಗಲಿ ತಮ್ಮ ಉದ್ದೇಶವನ್ನು ಸಾಧಿಸಿ ಕೊಳ್ಳುವುದಕ್ಕೆ ತಕ್ಕಹಾಗೆ ತರ್ಕ ಮಾಡುವುದು ಸರಿ ಯಲ್ಲ. ಕರ್ಣಾಟಕದವರು ಹಿಂದುಳಿದಿದ್ದಾರೆಂದರೆ ಅವರು ನಮ್ಮೊಡನೆ ಬಂದರೆ ನಮಗೆ ಕಷ್ಟವಾಗುತ್ತದೆ, ಆದ್ದರಿಂದ ಬರುವುದು ಬೇಡ ಎನ್ನುವುದೂ, ಕರ್ಣಾಟಕ ದವರು ನಮ್ಮಷ್ಟೇ ಉತ್ತಮ ಸ್ಥಿತಿಯಲ್ಲಿದ್ದಾರೆಂದರೆ, ಅವರು ಬೇರೆಯೇ ಇದ್ದು ಹೀಗೆಯೇ ಸುಖವಾಗಿರ ಬಹುದಲ್ಲಾ ಎಂದು ಹೇಳುವುದೂ ಸರಿಯಾದ ವಾದ ವಲ್ಲ. ಏಕೆಂದರೆ, ಇವತ್ತು ಆ ವಾದವನ್ನೊಪ್ಪಿ ಕೊಂಡರೆ ಭಾರತದಲ್ಲಿ ಎಷ್ಟೋ ಜನರನ್ನು ಹಿಂದುಳಿ ದಿದ್ದಾರೆಂದು ಕೈಬಿಡಬೇಕಾಗುತ್ತದೆ. ಹಾಗಾದರೆ, ಪ್ರಪಂಚದಲ್ಲಿ ಯಾರೂ ತಲೆಯೆತ್ತುವಹಾಗೆಯೇ ಇಲ್ಲ. ಗಾಡಿ ಹೊಡೆಯುವವನಿಗೆ ಎರಡು ಹೋರಿಗಳೂ ಒಂದೇ ಸಮನಾಗಿದ್ದರೆ ಗಾಡಿ ಸರಿಯಾಗಿ ಮುಂದುವರಿದೀತು. ಆದ್ದರಿಂದ ಹಿಂದುಳಿದ ಪ್ರದೇಶಗಳನ್ನು ನಮ್ಮ ಜೊತೆ ಯಲ್ಲಿ ಸೇರಿಸಿಕೊಂಡು ಅಭಿವೃದ್ಧಿಗೆ ತರದೆ ಹೋದರೆ ಭಾರತ ಮುಂದುವರಿಯಲಾರದು.

ಇನ್ನು ಹರಿಜನರು ಮತ್ತು ಕರ್ಣಾಟಕ ಏಕೀಕರಣ ವಿಷಯದಲ್ಲಿ ಮಾತನಾಡುವುದಾದರೆ, ನಾವು ಇಂದಿನ ದಿವಸ ಭಾರತದ ಎಲ್ಲ ಸಮಸ್ಯೆಗಳಲ್ಲಿಯೂ, ಭಾಗವಹಿ ಸಿದ ಹೊರತು ದೇಶ ಮುಂದಕ್ಕೆ ಬರಲಾರದು. ಭಾರತದ ಅನೇಕ ಸಮಸ್ಯೆಗಳಲ್ಲಿ ಹರಿಜನರ ಸಮಸ್ಯೆಯೂ ಇದ್ದೇ ಇದೆ. ಆದ್ದರಿಂದ ನಾವು ಕೈಕೊಳ್ಳುವ ಪ್ರತಿಯೊಂದು ಯೋಜನೆಗಳಲ್ಲಿಯೂ ಹರಿಜನರನ್ನು ಯಾವ ರೀತಿ ಉಪಯೋಗಿಸಿಕೊಳ್ಳ ಬಹುದು ಎಂದು ಮಹಾತ್ಮಾ ಗಾಂಧಿಯವರು ಬಹಳ ಚೆನ್ನಾಗಿ ಹೇಳಿದ್ದಾರೆ. ದೇಶದ ಪ್ರತಿಯೊಂದು ಸಮಸ್ಯೆಗಳಲ್ಲಿಯೂ ಅವರಿಗೆ ಅಭಿರುಚಿಯುಂಟಾಗಿ, ಆ ಅಭಿರುಚಿಯು ನಾಶವಾಗದ ಹಾಗೆ ನೋಡಿಕೊಳ್ಳಬೇಕು ಎಂದು ಹೇಳಿದ್ದಾರೆ. ಆದ್ದರಿಂದ ಈ ವಿಷಯದಲ್ಲಿಯೂ ಹರಿಜನರು ಸಂಪೂರ್ಣವಾಗಿ ಸಹಕರಿಸುವವರಾಗಿ ದ್ದಾರೆ. ದೇಶದಲ್ಲಿ ಇದೇ ರೀತಿ ಅನೇಕ social changes ಆಗಬೇಕಾಗಿವೆ. ನಮ್ಮ ಹರಿಜನರು ಭೂಮಿ ಕೇಳಿದರೆ ನಮ್ಮ ತಂಟೆಗೆ ಬರಬೇಡ ಎನ್ನು ತ್ತಾರೆ. ಆದ್ದರಿಂದ ಈ change ಬಂದರಾದರೂ ಹರಿಜನರಿಗೆ ಅನುಕೂಲವಾಗಬಹುದು. ಈ ದೃಷ್ಟಿ ಯಿಂದ ಒಳ್ಳೆಯದನ್ನೇ ಮಾಡಿದ್ದೇವೆಂದು ಹೇಳ ಬಹುದು. ನಾವೇನೂ ಈ ತೀರ್ಮಾನವನ್ನು ತೆಗೆದು

(ಶ್ರೀ ಕೆ. ಪ್ರಭಾಕರ್.)

ದೆಹಲಿಗೆ ಹೋದಾಗ್ಗೆ ನಮ್ಮ ತಪ್ಪನ್ನು ಅವರು ಮನಸ್ಸಿಗೆ ಹಾಕಿಕೊಳ್ಳದಂತೆ ಮಾಡಬೇಕೆಂದು ತಿಳಿಸುತ್ತೇನೆ. ಅಲ್ಲದೆ ಈಗಲಾದರೂ ಕೂಡ ನಾವೆಲ್ಲರೂ ಒಗ್ಗಟ್ಟಾಗಿ ಸುಮಂಗಲಿಯಾದಂಥ ರೀತಿಯಲ್ಲಿ ಈ ಕರ್ಣಾಟಕ ರಾಜ್ಯವನ್ನು ಕಟ್ಟಿ ಇದನ್ನು ದಕ್ಷತೆಯಿಂದ ನೆರವೇರಿಸಿ ಇಡೀ ಇಂಡಿಯಾ ದೇಶದಲ್ಲೇ ಇದನ್ನು ಛಾಲೆಂಜ್‌ಮಾಡತಕ್ಕ ಮತ್ತೊಂದು ದೇಶ ಇಲ್ಲದಂತೆ ನಡೆಸಲು ನಮಗೆ ಅವಕಾಶವಿದೆ ಎಂದು ಹೇಳುತ್ತೇನೆ. ಕೊಡಗು ಸಂಸ್ಥಾನ ನಮ್ಮ ಮೈಸೂರಿಗೆ ಸೇರಿದರೆ ನಮ್ಮ ಕರ್ಣಾಟಕದ ಹಿರಿಮೆ ಮತ್ತಷ್ಟು ಹೆಚ್ಚುತ್ತದೆ. ಅಖಿಲ ಕರ್ಣಾಟಕವು ಬಹಳ ಸಂಪದ್ಯುಕ್ತವಾದಂಥ ಪ್ರಾಂತ್ಯವಾಗುತ್ತದೆ. ರಾವಣನನ್ನು ರಾಮನು ಕೊಂದ ನಂತರ ರಾಮನು ರಾವಣ ರಾಜ್ಯವನ್ನೇನೂ ಪುನಃ ಕಟ್ಟುವುದಕ್ಕೆ ಹೋಗಲಿಲ್ಲ. ಇದರ ಹಾಗೆಯೇ ಆ ಮಹಿಷಾಸುರನನ್ನು ಮರ್ದನಮಾಡಿದ ಬಳಿಕ ಇದಕ್ಕೆ ಮೈಸೂರೆಂಬ ಹೆಸರು ಬಂತು. ಆದುದರಿಂದ ಈ 'ಮೈಸೂರು' ಎನ್ನತಕ್ಕದ್ದೇನೂ ಅಂಥ ಒಂದು ಅಪ್ಯಾಯಮಾನಕರವಾದಂಥ ತತ್ವದ ಮೇಲೆ ಇಟ್ಟ ಹೆಸರಲ್ಲ. ಮೈಸೂರು ರಾಜ್ಯದ ಹಿರಿಮೆಗೆ ಆ ಹಿಂದಿನ ಬುನಾದಿಗಳ್ಯಾವುವೂ ಕಾರಣವಲ್ಲ. ಈ ಮೈಸೂರಿನ ಹೆಸರನ್ನು ಉಳಿಸಿ-ಬೆಳಸಿಕೊಂಡು ಬಂದಿರತಕ್ಕದ್ದೆಲ್ಲಾ ಈ ದೇಶದಲ್ಲಿರತಕ್ಕಂಥ ಕೆಚ್ಚೆದೆಯ ಜನರಿಗೆ ಸೇರಿದುದಾಗಿದೆ. ಅಷ್ಟೇ ಹೊರತು ಈ ಮೈಸೂರಿನ ಹಿರಿಮೆಯನ್ನು ಆ ಮಹಿಷಾಸುರನಾಗಲಿ ಅಥವಾ ಮೈಸೂರಿನ ಪಕ್ಕದಲ್ಲಿರುವ ಆ ಬೆಟ್ಟವಾಗಲಿ ಉಳಿಸಿಕೊಂಡು ಬಂದಿಲ್ಲ. ಕರ್ಣಾಟಕ ಪ್ರಾಂತ್ಯವನ್ನೊಳಗೊಂಡ ಅಖಂಡ ಭಾರತಕ್ಕೆ ಜಯವಾಗಲಿ ! ಜೈಹಿಂದ್ ! ಜೈ ಕರ್ನಾಟಕ್ !

ಶ್ರೀ ಕೆ. ಹನುಮಂತಯ್ಯ (ಮುಖ್ಯ ಮಂತ್ರಿಗಳು).—ಸ್ವಾಮಿ, ಇಂದಿಗೆ ಮೂರು ದಿವಸಗಳಿಂದಲೂ ಈ ವರದಿಯ ಬಗ್ಗೆ ಬಹಳ ವಿಪುಲವಾಗಿ ಚರ್ಚೆಯಾಗಿದೆ. ಅನೇಕ ಮಾನ್ಯ ಸದಸ್ಯರುಗಳು ಈ ವಿಷಯವನ್ನು ನಿಷ್ಪಕ್ಷಪಾತಭಾವನೆಯಿಂದ ವಿಮರ್ಶಿಸಿದ್ದಾರೆ. ಕೆಲವು ಮಂದಿ ಸದಸ್ಯರು ಆಗ್ರಹಕ್ಕೆ ತುತ್ತಾಗಿ ಮಾತನಾಡಿದ್ದಾರೆ. ಆದರೆ ಈ ಸಭೆಯ ಸೌಭಾಗ್ಯದಿಂದ ಹಾಗೆ ಆಗ್ರಹದಿಂದ ಮಾತನಾಡಿದ ಸದಸ್ಯರುಗಳ ಸಂಖ್ಯೆ ಬಹಳ ಕಡಮೆ. ಆದರೆ, ಆ ಆಗ್ರಹದಲ್ಲೂ ಒಂದು ಅರ್ಥವಿದೆಯೆನ್ನುವುದನ್ನು ತಿಳಿದ ಕೊಳ್ಳುವ ಸಹನೆಯನ್ನು ದೇವರು ನನಗೆ ಕೊಟ್ಟಿದ್ದಾನೆ. ಆ ಆಗ್ರಹದಲ್ಲೂ ಕೂಡ ನಾನು ಈ ದಿವಸ ತಪ್ಪು ಕಾಣತಕ್ಕಂಥವನಲ್ಲ. ಆದರೆ ಪ್ರಜಾಪ್ರಭುತ್ವದಲ್ಲಿ ನಾವು ವಿಚಾರಪರರಾಗಿ ವಾದಿಸಬೇಕೇ ಹೊರತು ಆಗ್ರಹದಿಂದ ವಾದಿಸಿದರೆ, ಅದು ಸಾರ್ಥಕವಾಗುವುದಿಲ್ಲವೆನ್ನುವುದೇ ನನ್ನ ಮನವಿ.

ಎರಡು ಕರ್ಣಾಟಕಗಳಾಗಬೇಕೆಂದು ಹೇಳಿದ ಮಹನೀಯರಲ್ಲಿ ಶ್ರೀಮಾನ್ ವಿ. ವೆಂಕಟಪ್ಪನವರು ಮತ್ತು ಶ್ರೀಮಾನ್ ಎಚ್. ಕೆ. ವೀರಣ್ಣ ಗೌಡರಂಥ ಪ್ರಮುಖರು ಇದ್ದಾರೆ. ಇವರುಗಳ ವಿಷಯದಲ್ಲಿ ನನಗೆ ವಿಶೇಷ ಗೌರವವಿದೆ. ಅವರ ಯೋಗ್ಯತೆಯನ್ನು ಈ ದಿವಸ ಒಂದು ಭಿನ್ನಾಭಿಪ್ರಾಯ ಬಂದಿದ್ದರಿಂದ ಮಾತ್ರ ಅಳೆಯತಕ್ಕಂಥವನು ನಾನು ಅಲ್ಲ. ಮೈಸೂರು ದೇಶದಲ್ಲಿ ಸ್ವಾತಂತ್ರ್ಯ, ಸಂಘಟನೆ ಎಂಬ ಬೀಜಗಳನ್ನು ಬಿತ್ತಿದ ಮಹನೀಯರು ಅವರು. ನಾನು ಬಾಲ್ಯದಿಂದ ಅವರನ್ನು ನೋಡುತ್ತಾ ಇದ್ದೇನೆ. ಅಂತಹವರು ಒಂದು ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದರೆ ಅದಕ್ಕೆ ಮನ್ನಣೆಯನ್ನು ಕೊಟ್ಟು, ಮಥಿಸಿ ನೋಡತಕ್ಕಂಥ ಮನಸ್ಸುಳ್ಳವನಾಗಿದ್ದೇನೆ. ಆದರೆ, ಅವರಿಗೆ ಬಂದಿರುವ ಕಷ್ಟವೇನೆಂದರೆ ರಾಜಕೀಯ ಘಟನೆಗಳು ಧಾವಿಸುತ್ತಿರುವ ವೇಗಕ್ಕೆ ಸಮನಾಗಿ ಅವರ ಮನೋಭಾವದ ಮುಂದೋಟವಿಲ್ಲದೆ ಹೋಗಿದೆ. ಅರಮನೆಯ ಶಿಖರಾಗ್ರದಲ್ಲಿದ್ದ ಸಾರ್ವಭೌಮತ್ವವನ್ನು ಪ್ರಜಾಸಾಮಾನ್ಯರಿಗೆ ದೊರಕಿಸಬೇಕೆಂಬ ದೊಡ್ಡ ಮನಸ್ಸಿನಿಂದ ಅದನ್ನು ಅಲ್ಲಿಂದ ಕೆಳಗೆ ಬರುವಹಾಗೆ ಮಾಡಿದರು. ಆದರೆ, ಬೆಟ್ಟದ ಮೇಲಿರುವ ಬಂಡೆಯನ್ನು ಉರುಳಿಸಿದರೆ ಆ ಬಂಡೆಯು ಮೊದಮೊದಲು ನಿಧಾನವಾಗಿ ಉರುಳುತ್ತ ಅನಂತರ ಅದರ ವೇಗ ಜಾಸ್ತಿಯಾಗುತ್ತದೆ. ಬಂಡೆಯನ್ನು ಉರುಳಿಸಿದವನು ಅದರ ಹಿಂದೆಯೇ ಓಡಬೇಕೆಂದರೆ, ಬಂಡೆಯು ಉರುಳುವ ವೇಗ ಹೆಚ್ಚಿದಹಾಗೆಲ್ಲ ಅವನ ಓಟದ ವೇಗವೂ ಹೆಚ್ಚದೆ ಹೋದರೆ ಅವನು ಹಿಂದೆ ಉಳಿಯುತ್ತಾನೆ.

The speed with which this country is progressing along the lines of democratic republic towards socialistic pattern is too much a speed for them to catch up with.

ಈ ವಿಷಯವನ್ನು ನಾನು ಅವರನ್ನು ಅವಹೇಳನ ಮಾಡುವುದಕ್ಕಾಗಿ ಹೇಳುತ್ತಿಲ್ಲ. ನನಗೂ ಒಂದು ದಿವಸ ಆ ಸ್ಥಿತಿ ಒದಗಬಹುದು. ಯೌವನಕ್ಕೆ ಯಾವ ರೀತಿ ನಿಖರವಾದ ಕಾಲವಿದೆಯೋ ಹಾಗೆಯೇ ಮನಸ್ಸಿನ ಬೆಳವಣಿಗೆಗೂ ಒಂದು ಕಾಲವಿದೆ. ಮನಸ್ಸು ಕಾಲಧರ್ಮ (Time Spirit) ಕ್ಕೆ ಅನುಗುಣವಾಗಿ ಸಮರಸತೆಯಿಂದ ಹೋಗತಕ್ಕಂಥ ಕಾಲ ಒಂದಿರುತ್ತದೆ. ಆದರೆ ಇವೆರಡಕ್ಕೂ ವಿರಸ ಉಂಟಾದಾಗ ಕಾಲಧರ್ಮ ಸರಿಯೇ ? ಅಥವಾ ನಮ್ಮ ಅಭಿಪ್ರಾಯ ಸರಿಯೇ ? ಎನ್ನುವ ಧರ್ಮಸಂಕಟ ಉಂಟಾಗತಕ್ಕದು ಸ್ವಾಭಾವಿಕ.

"ಈ ಪ್ರಶ್ನೆಯನ್ನು ದೇಶದ ಜನರ ಮುಂದೆ ಇಡಿ ; ಓಟುಗಳನ್ನು ತೆಗೆದುಕೊಳ್ಳಿ. ಬಹುಮತ ಬಂದಹಾಗೆ ಮಾಡಿ" ಎಂದು ಹೇಳಿದ್ದಾರೆ. ಅವರಾದರೂ ರಾಜಕೀಯ ಶಾಸ್ತ್ರದಲ್ಲಿ ಅಡಕವಾಗಿರುವ ಒಂದು ತತ್ವವನ್ನೇ ಹೇಳಿದ್ದಾರೆಯೇ ಹೊರತು ಹೊಸದೇನನ್ನೂ ಹೇಳಿಲ್ಲ. ಇದಕ್ಕೆ ರೆಫರೆಂಡಂ (ಸಮಸ್ತ ಪ್ರಜಾಭಿಪ್ರಾಯ) ಎಂದು ರಾಜಕೀಯ ಶಾಸ್ತ್ರದಲ್ಲಿ ಹೇಳಿದೆ. ರಾಜ್ಯಶಾಸ್ತ್ರಜ್ಞರೆಲ್ಲರೂ ಇದನ್ನು ತಿಳಿದುಕೊಂಡಿದ್ದಾರೆ. ಆದರೆ ಈ ಪ್ರಜಾಪ್ರಭುತ್ವಗಳಲ್ಲಿ ಬಗೆಬಗೆಯ ರೀತಿಗಳಿವೆ.

There is what is termed direct democracy and there is also what is termed representative system of democracy.

ಈ ಡೈರೆಕ್ಟ್ ಡೆಮಾಕ್ರಸಿ ಸಹಸ್ರಾರು ವರ್ಷಗಳ ಹಿಂದೆ ಗ್ರೀಕ್ ದೇಶದಲ್ಲಿ ಪೌರ ರಾಜ್ಯಗಳಲ್ಲಿ (City States) ಜಾರಿಯಲ್ಲಿತ್ತು. ಅವು ತುಂಬ ಚಿಕ್ಕವಾಗಿದ್ದುದರಿಂದ ಅಲ್ಲಿರತಕ್ಕ ಜನರನ್ನೆಲ್ಲಾ ಒಂದು ಗೊತ್ತಾದ ಸ್ಥಳಕ್ಕೆ ಬರಮಾಡಿಕೊಂಡು ಅವರ ಅಭಿಪ್ರಾಯ ಪಡೆದು ಅದಕ್ಕನುಸಾರವಾಗಿ ಅಲ್ಲಿನ ಆಡಳಿತಗಳನ್ನು ನಡೆಸುತ್ತಿದ್ದರು. ಆ ರೀತಿ ಪೌರ ರಾಜ್ಯಗಳು (City States) ಡೈರೆಕ್ಟ್ ಡೆಮಾಕ್ರಸಿ ತತ್ವಗಳ ಮೇಲೆ ಹಿಂದೆ ಆಡಳಿತ ನಡೆಸಿಕೊಂಡು ಬರುತ್ತಿದ್ದವು. ಆದರೆ ರಾಜ್ಯಗಳ ವಿಸ್ತರಣೆಯಾದ ಮೇಲೆ ಆ ಡೈರೆಕ್ಟ್ ಡೆಮಾಕ್ರಸಿ ಹೋಗಿ ಪ್ರಪಂಚದ ಎಲ್ಲ ದೇಶಗಳಲ್ಲೂ ರೆಪ್ರೆಸೆಂಟೆಟಿವ್ ಡೆಮಾಕ್ರಸಿ ಜಾರಿಗೆ ಬಂದಿದೆ.

ಕೊಂಡಿರುವುದರಲ್ಲಿ ಯಾರ influence ಸಹ ಇಲ್ಲವೆಂದು ಹೇಳುತ್ತೇನೆ. ಇನ್ನೂ ಇಂಥ ಅನೇಕ ಸಮಸ್ಯೆಗಳು ಬರಲಿಲ್ಲವೆ ? ಆದ್ದರಿಂದ ಇವೊತ್ತು ಅದಕ್ಕೇನೂ ಭಯಪಡಬೇಕಾಗಿಲ್ಲವೆಂದು ಹೇಳುತ್ತೇನೆ.

ಅಲ್ಲದೆ ಮೈಸೂರಿನ ರಾಜಕೀಯಕ್ಕೆ ಕರ್ನಾಟಕ ಏಕೀಕರಣದ ಪ್ರಶ್ನೆ ಬಂದಮೇಲೆ ಏನು ಉಪಕಾರ ವಾಗಿದೆಯೆಂಬುದನ್ನು ನೋಡಬೇಕು. ಈಗಿನ ಕ್ಯಾಬಿನೆಟ್‌ನಲ್ಲಿ ಇದಕ್ಕೆ ಬಹುಮತವಿರುವುದಲ್ಲದೆ ಇದಕ್ಕೆ ಪ್ರಜಾಪಕ್ಷ, ಸೋಷಿಯಲಿಸ್ಟ್ ಪಕ್ಷ, ಹಾಗೂ ಕಮ್ಯೂನಿಸ್ಟ್ ಪಕ್ಷಗಳ ಬಲವಿದೆ. ಹೊರಗಡೆ ಪತ್ರಿಕೆಗಳ ಸಹಕಾರವಿದೆ. ಇಂದಿನ all-India set-up ಇದಕ್ಕೆ ಅನುಕೂಲವಾಗಿದೆ ಎಂದಮೇಲೆ ಇದಕ್ಕೆ ದೈವ ಬಲವಿದೆಯೆಂದೇ ಹೇಳಬೇಕು.

ಕೋಮುವಾರು ಭಾವನೆಯನ್ನು ಈ ಎಸ್.ಆರ್.ಸಿ. ರಿಪೋರ್ಟಿನಲ್ಲಿ ತಂದಿರುವುದು ಉಚಿತವಲ್ಲ. ಆದರೂ ಈ ಒಂದು ಕಾರಣದಿಂದಲೇ ಈ ರಿಪೋರ್ಟನ್ನು ತಿರಸ್ಕರಿಸುವುದು ಸರಿಯಲ್ಲ. ಕೋಮುವಾರು ದೃಷ್ಟಿಯನ್ನಿಟ್ಟುಕೊಂಡು ನಾವಿದನ್ನು ಪರಿಶೀಲಿಸುತ್ತಾ ಹೋದರೆ ನಾವು ಸರಿಯಾದ ತೀರ್ಮಾನಕ್ಕೆ ಬರುವುದು ಕಷ್ಟವಾಗುತ್ತದೆ. Impartial ಆಗಿ ಬೇರೆ ಇದಕ್ಕೆ ಸಂಬಂಧಪಡದಿರುವವರು ಕೊಡುವ ಅಭಿಪ್ರಾಯವನ್ನು ಅಂಗೀಕರಿಸುವುದು ಸಾಧುವಾದ ಮಾರ್ಗ.

ಇನ್ನೊಂದು ವಿಷಯವೇನೆಂದರೆ, ಅಖಂಡ ಕರ್ನಾಟಕ ಮಾಡುವುದೇ ಆಗಲಿ ಅಥವಾ ಇನ್ನಾವ ತರದ ಬದಲಾವಣೆಗಳನ್ನು ಮಾಡುವುದೇ ಆಗಲಿ ಇವೆಲ್ಲಾ ಪ್ರಯೋಜಕವಾದಂಥವುಗಳೆಂದು ರಾಜ ನೀತಿಜ್ಞರು ಹೇಳುತ್ತಾರೆ. ಪ್ರಪಂಚದ ಬೇರೆ ಬೇರೆ ರಾಜ್ಯಭಾರಗಳ ಚರಿತ್ರೆಯನ್ನು ನೋಡುವುದಾದರೆ ಯಾವುದೂ ಒಂದೇ ರೀತಿಯಾಗಿಲ್ಲ. ಕೆಲವು ದಿನ ಮಾನಾರ್ಕಿ ಇರುತ್ತದೆ, ಇನ್ನು ಕೆಲವು ದಿವಸಗಳಾದಮೇಲೆ democracy ಬರುತ್ತದೆ. ಆದ್ದರಿಂದ ಅಖಂಡ ಕರ್ನಾಟಕ ಮಾಡುವುದರಿಂದ ಏನೋ ತೊಂದರೆಯಾಗುತ್ತದೆಂದು ಅದನ್ನು ಪ್ರತಿಭಟಿಸುವುದು ಸರಿಯಲ್ಲ.

Every political student and all politicians know, all forms of Government in the world are formed on experiments.

We wanted you to experiment. We have done and this is bad; we shall retreat.

7 P.M.

ಕಾಡು ಕುರುಬರು ಮದುವೆ ಗೊತ್ತುಮಾಡುವಾಗ ದೂರದಲ್ಲಿ ಹಸು ಕಟ್ಟಿ ಕರುಬಿಡುತ್ತಾರೆ. ಆಗ ಅದು ಬಲಗಡೆಯಿಂದ ಹೋಗಿ ಆ ಮೊಲೆಯನ್ನು ಕಚ್ಚಿದರೆ ಆ ಹೆಣ್ಣು ಆಗಿಬರುತ್ತದೆಂದೂ, ಎಡಗಡೆಯಿಂದ ಹೋಗಿ ಕಚ್ಚಿದರೆ ಆ ಹೆಣ್ಣು ಆಗಿಬರುವುದಿಲ್ಲ ಎಂದೂ ಹೇಳುತ್ತಾರೆ. ಈಗ ಅದೇ ರೀತಿಯಾಗಿ ಈ ಹಿಂದೆ ನಮ್ಮೊಡನೆಯೇ ಇದ್ದು ನಮ್ಮೊಡನೆಯೇ ಬಾಳಿ ಬೆಳೆದಿದ್ದಂಥವರು ಏನೋ ಕಾರಣಾಂತರಗಳಿಂದ ನಮ್ಮಿಂದ ಅಗಲಿ ಹೋಗಿದ್ದಂಥವರು ಈ ದಿವಸ ನಾವು ವಾಪಸ್ಸು ಬರುತ್ತೇವೆ, ನಿಮ್ಮೊಡನೆ ಸೇರಲು ಇಷ್ಟಪಡುತ್ತಿದ್ದೇವೆ, ಎಂದು ಹೇಳುತ್ತಿದ್ದರೆ, ನೀವು ನಮ್ಮ ಮೈಸೂರಿಗೇಕೆ ಬರುತ್ತೀರಿ, ಎಂದು ಕೇಳುವುದು ಸರಿಯಲ್ಲ. ಈ ಪ್ರಾಂತ್ಯಗಳ ಪುನರ್ವಿಂಗಡಣೆ ವಿಚಾರವನ್ನು ಎಲ್ಲರೂ ತೆರೆದ ಮನಸ್ಸಿನಿಂದ ನೋಡಬೇಕೆಂದೂ ಈ ಸಂಬಂಧವಾದ ವಾದಗಳಲ್ಲಿ ಯಾರೂ ಹೆಚ್ಚಿಗೆ ತಮ್ಮ ಮನಸ್ಸು ಕೆರಳತಕ್ಕ ರೀತಿಯಲ್ಲಿ ವರ್ತಿಸಬಾರದೆಂದೂ, ಕೋಮುವಾರು ದೃಷ್ಟಿಯಿಂದ ಈ ಪ್ರಶ್ನೆಯನ್ನು ಯಾರೂ ಪರಿಶೀಲನೆ ಮಾಡಬಾರದೆಂದೂ, ಒಬ್ಬರನೊಬ್ಬರು ಈ ಸಂಬಂಧದಲ್ಲಿ ನಿಂದಿಸುವುದಕ್ಕೆ ಪ್ರಯತ್ನಪಡಬಾರದೆಂದೂ ಈಗಾಗಲೇ ಆ ಪಂಡಿತ ನೆಹರೂರವರು ಸಾರಿ ಸಾರಿ ಹೇಳಿರತಕ್ಕದ್ದನ್ನು ತಾವೆಲ್ಲರೂ ಪತ್ರಿಕೆಗಳ ಮೂಲಕ ತಿಳಿದುಕೊಂಡಿದ್ದೀರಿ. ಅಷ್ಟೆಲ್ಲಾ ತಿಳಿದೂ ತಿಳಿದೂ ಈ ಸಭೆಯಲ್ಲಿ ಮಾತನಾಡುವಾಗ ಸಭೆಯ ಗೌರವ ಘನತೆಗಳನ್ನು ಮೀರಿ ಹೋಗಿ ಮಾತನಾಡಬೇಕೆಂದು ಯಾರೂ ಹೇಳಿಲ್ಲ. ಆದರೆ ಕೆಲವರು ಈ ವೈಯಕ್ತಿಕವಾದಂಥ ಟೀಕೆಗಳನ್ನು ಕಡಮೆಮಾಡಿದ್ದರೆ ಬಹಳ ಚೆನ್ನಾಗಿತ್ತು ಎಂದು ಮಾತ್ರ ಹೇಳುತ್ತೇನೆ. ಕೆಲವರು ತಮ್ಮ ಒಂದು ಉದ್ರೇಕದ ಭಾವನೆಯಲ್ಲಿ ಶ್ರೀ ಹನುಮಂತಯ್ಯನವರಿಗೆ ನಾಲ್ಕು ನಾಲಗೆಗಳಿವೆ ಎಂದೂ ಕೆಲವರು, ಮತ್ತೆ ಕೆಲವರು ಇಲ್ಲ ಐದು ನಾಲಗೆಗಳಿಂದ ಮಾತನಾಡಿದ್ದಾರೆ ಎಂದೂ ಹೇಳಿರುತ್ತಾರೆ. ಆದರೆ ಇದು ಸರಿಯಾದದ್ದಲ್ಲ. ಈ ಬಗ್ಗೆ ನನಗೆ ಒಂದು ಕಥೆ ಜ್ಞಾಪಕಕ್ಕೆ ಬರುತ್ತಿದೆ— ಏತಕ್ಕೆಂದರೆ, ಈ ದಿವಸ ಇಲ್ಲಿ ಪರವಾಗಿ ಮಾತನಾಡತಕ್ಕವರೆಲ್ಲರೂ ಒಂದು ಲೈನಾಗಿರುತ್ತಾರೆ. ವಿರೋಧಿಸತಕ್ಕವರೆಲ್ಲಾ ಇನ್ನೊಂದು ಲೈನಾಗಿರುತ್ತಾರೆ. ದಿ ಮರ್ಚೆಂಟ್ ಆಫ್ ವೇನಿಸ್ ಎನ್ನತಕ್ಕಂಥ ನಾಟಕದಲ್ಲಿ ಯಾರು ಏನೇ ಹೇಳಲಿ ಆ ಷೈಲಾಕ್ ಮಾತ್ರ ಕೊನೆಗೂ ಆ ಒಂದು ಪೌಂಡು ಮಾಂಸದ ವಿಷಯವನ್ನು ಮಾತ್ರ ಬಿಡುವುದಿಲ್ಲ ಎಂದು ಕೊನೆಯತನಕ ಹಟ ಹಿಡಿದನಲ್ಲಾ ಅದೇ ರೀತಿಯಾಗಿ ಇಲ್ಲಿಯೂ ಈಗ ಇವರು ಆ ಷೈಲಾಕನ ಮನೋನಿಯಮದ ನೀತಿಯನ್ನೇ ಹೇಳುತ್ತಿದ್ದಾರೆ.

"If not, it feedeth my revenge."

ಹೀಗೆ ಅವನ ವಾದದ ನಿಷ್ಠೆಯಲ್ಲಿ ಕೇವಲ ಅವನ ಇಷ್ಟಕ್ಕೆ ಉಚಿತವಾಗಿತ್ತೇ ಹೊರತು ಮತ್ತೇನೂ ಇಲ್ಲ. ಆದರೆ ಅಗ ಅಲ್ಲಿ ಸೇರಿದ್ದಂಥ ಜನರಲ್ಲಿ ಕೆಲವರು ಅಯ್ಯೋ ಪಾಪ! ಆ ಮನುಷ್ಯನ ಶರೀರ ತೂತು ಬಿದ್ದುಹೋಗುತ್ತದೆಯಲ್ಲಾ ಎಂದು ಮರುಗುತ್ತಿದ್ದರೆ, ಇನ್ನೊಂದು ಕಡೆಯಲ್ಲಿ ಅಯ್ಯೋ ಪಾಪ! ಆತನು ಹೊರಟೇ ಹೋದನೇ—ಹೋಗಲಿ ಬಿಡಿ. ಆತನ ಹಿಟ್ಟು-ಬಟ್ಟೆಯೆಲ್ಲಾ ನಮಗೇ ಉಳಿಯಿತು! ಎನ್ನುವಂಥ ಒಂದು ವಾದ ಅಲ್ಲಿತ್ತು. ಅದೂ ಒಂದು ವಾದವೇ ಅಲ್ಲವೇ? ಅದೇ ರೀತಿ ಇವೊತ್ತು ಇಲ್ಲಿಯೂ ಒಂದು ವಾದವಿದೆ. ಆದರೆ ಇದರ ಬಗ್ಗೆ ಕೆಲವರು ಆ ರೀತಿ ಮನಸ್ಸನ್ನು ಕೆರಳಿಸಲು ಅವಕಾಶವಿಲ್ಲ. ಕರ್ಣಾಟಕದ ನಿರ್ಮಾಣದಿಂದ ದೇಶಕ್ಕೆ ಕಲ್ಯಾಣವಾಗುತ್ತದೆ. ಈ ಪ್ರಾಂತ್ಯಗಳ ಸರ್ವತೋಮುಖವಾದ ಏಳಿಗೆಗಾಗಿ ವಿಶೇಷ ಹಣವನ್ನು ಖರ್ಚುಮಾಡಲು ಕೇಂದ್ರ ಸರ್ಕಾರದವರು ದೊಡ್ಡ ಮನಸ್ಸು ಮಾಡಿದ್ದಾರೆ. ಭಗವಂತನು ಆ ರೀತಿ ಉದಾರವಾಗಿ ಹಣವನ್ನು ಖರ್ಚುಮಾಡಲು ಅವರಿಗೀಗ ಪ್ರೇರೇಪಿಸಿರುತ್ತಾನೆ. ಇಂಥ ಸಮಯದಲ್ಲಿ ನಾವು ಜಾಣತನದಿಂದ ವರ್ತಿಸುವುದನ್ನು ಬಿಟ್ಟು ಇಂಥ ಮಹತ್ಕಾರ್ಯದ ಬಗ್ಗೆ ಆ ಕಾಂಗ್ರೆಸ್ ಹೈಕಮಾಂಡಿನಿಂದ ಒಂದು ಮ್ಯಾನ್‌ಡೇಟನ್ನು ತರಿಸತಕ್ಕಂಥ ಮಟ್ಟಕ್ಕೆ ಈ ವಿಚಾರವನ್ನು ಬಿಟ್ಟುಕೊಡಬೇಕಾಗಿ ಬಂದುದು ನಮ್ಮಗಳ ದುರ್ದೈವ. ಇದಕ್ಕಾಗಿ ನಾವು ತಲೆ ತಗ್ಗಿಸಬೇಕಾಗಿದೆ. ಆದರೂ ಚಿಂತೆಯಿಲ್ಲ. ನಡೆಯತಕ್ಕ ಮನುಷ್ಯನು ಎಡವಿಯೇ ಎಡುವುತ್ತಾನೆಂಬ ಹಾಗೆ, ನಮ್ಮ ನಾಯಕರು ನಾಳೆ

Direct democracy is based on the principle of referendum. ಆದುದರಿಂದ ಈ ದಿವಸ ಯಾವ ರಾಜ್ಯದಲ್ಲೂ ಇದು ಅನುಷ್ಠಾನದಲ್ಲಿಲ್ಲ. ಏತಕ್ಕೆಂದರೆ ಪ್ರತಿಯೊಂದು ಶಾಸನವನ್ನೂ ಜನರೆಲ್ಲರ ಮುಂದಿಟ್ಟು, ಅವರೆಲ್ಲರ ಒಪ್ಪಿಗೆಯನ್ನು ಪಡೆದುಕೊಂಡು, ಶಾಸನಗಳನ್ನು ಮಾಡುತ್ತಾ ಹೋಗಬೇಕೆಂದರೆ ಆಗ ಪ್ರಜಾಸರ್ಕಾರಗಳೊಂದೂ ಕೆಲಸ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡ.—ಹಾಗಾದರೆ ಕಾಶ್ಮೀರದ ವಿಚಾರವೇನು ?

ಶ್ರೀ ಕೆ. ಹನುಮಂತಯ್ಯ.—ಈ ದೊಡ್ಡ ರಾಜ್ಯದಲ್ಲಿ ನಾವು 36 ಕೋಟಿ ಜನರನ್ನೂ ಸೇರಿಸಿ ಪ್ರತಿಯೊಂದು ಶಾಸನದ ಮೇಲೂ, ಪ್ರತಿಯೊಂದು ನೀತಿಯಮೇಲೂ ಓಟ್ ಮಾಡಿ ಎಂದು ಕೇಳುವುದಾದರೆ ವರ್ಷದ 365 ದಿವಸಗಳೂ ಈ ಚುನಾವಣೆಗಳನ್ನು ನಡೆಸುವುದಕ್ಕೆ ಸಾಲುವುದಿಲ್ಲ. ಇನ್ನು ಸರ್ಕಾರವನ್ನಾಗಲಿ ಶಾಸನ ಸಭೆಯನ್ನಾಗಲಿ ನಡೆಸಲು ಅವಕಾಶವೇ ಇರುವುದಿಲ್ಲ. ಆದುದರಿಂದ ತತ್ವಶಃ ಈ ಪ್ರಜಾಪ್ರಭುತ್ವಗಳನ್ನು ರಚಿಸಿದವರು ಈ ಕಾರಣಗಳನ್ನು ಹೇಳುತ್ತಾರೆ.

The representatives of the people in the assembly in a direct democracy are merely voting agents. In the representative system of democracy, the elected members become the custodians of conscience of the people.

ಯಾವುದು ಸರಿ ಯಾವುದು ತಪ್ಪು ಎಂಬುದನ್ನು ಹೇಗೆ ನಿರ್ಧಾರ ಮಾಡಬೇಕೆಂಬ ಪ್ರಶ್ನೆ ಬರುತ್ತದೆ. ಸದಸ್ಯರು ತಮ್ಮ ವಿವೇಚನೆಯನ್ನು ಪ್ರಯೋಗಿಸಿ ಪ್ರಜೆಗಳಿಗೆ ಯಾವುದು ಒಳ್ಳೆಯದು ಎಂಬುದನ್ನು ನಿರ್ಧರಿಸತಕ್ಕ ಅಧಿಕಾರ ಮತ್ತು ಧರ್ಮದರ್ಶಿತ್ವವನ್ನು ಹೊಂದಿರುತ್ತಾರೆ.

ಜನರ ಮನಸ್ಸು ಹೇಗಿತ್ತು ಎನ್ನುವುದು ಖಚಿತವಾಗಿ ಗೊತ್ತಾಗುವುದಿಲ್ಲ. ಆದುದರಿಂದಲೇ ಈ ದಿವಸ ಓಟ್ ಮಾಡತಕ್ಕ ಸಂಪೂರ್ಣಾಧಿಕಾರವನ್ನು ಆಯಾ ಕ್ಷೇತ್ರದಿಂದ ಆರಿಸಿ ಬಂದಿರತಕ್ಕ ಸದಸ್ಯರಿಗೆ ಕೊಟ್ಟಿರುತ್ತಾರೆ. ಆ ಧರ್ಮದರ್ಶಿತ್ವವನ್ನು ಒಪ್ಪಿಕೊಂಡು ದೇಶಕ್ಕೆ ಯಾವುದು ಒಳ್ಳೆಯದೋ ಅಂಥದಕ್ಕೆ ಓಟ್ ಮಾಡಬೇಕಾದುದು ನ್ಯಾಯವಾದದ್ದು. ಹಾಗೆಯೇ ಈ ಐದು ವರ್ಷಗಳ ಅವಧಿಯು ಮುಗಿದನಂತರ ಜನರು ಯಾರನ್ನು ಚುನಾವಣೆಮಾಡಿ ಇಲ್ಲಿಗೆ ಕಳುಹಿಸಿದ್ದಾರೋ ಅಂಥವರು ಈ ಅವಧಿಯಲ್ಲಿ ಸರಿಯಾಗಿ ಕಾರ್ಯಭಾರಗಳನ್ನು ನಡೆಸಿದ್ದಾರೆಯೇ ಇಲ್ಲವೇ ಎನ್ನುವುದನ್ನು ತೀರ್ಮಾನಮಾಡತಕ್ಕದ್ದು ಆ ಜನಗಳಿಗೆ ಸೇರಿರತಕ್ಕ ವಿಷಯ. ಇಷ್ಟು ಹೊರತಾಗಿ ಪ್ರತಿಯೊಂದು ವಿಷಯದ ಬಗ್ಗೆ ಮತ್ತು ಶಾಸನದ ಬಗ್ಗೆ ಯಾರೂ ಚುನಾವಣೆಗಳನ್ನು ನಡೆಸುವುದಿಲ್ಲ. ಪ್ರಜೆಗಳ ಅಭಿಪ್ರಾಯ ಯಾವ ರೀತಿ ಇದೆ ಎನ್ನುವುದು ಪ್ರತಿನಿಧಿಗಳಿಗೆ ಗೊತ್ತೇ ಇರುತ್ತದೆ. ರಾಜಕೀಯ ಪಕ್ಷಗಳ ನೀತಿ ಏನಿರುತ್ತದೆಂಬುದನ್ನು ನೋಡಿಕೊಂಡು ಇವುಗಳಿಗೆ ಜನರು ತಮ್ಮ ಓಟುಗಳನ್ನು ಕೊಟ್ಟು ಕಳುಹಿಸಿದ್ದಾರೆ. ಆದಕಾರಣ ತಾವುಗಳು ತಮ್ಮ ಅಭಿಪ್ರಾಯವನ್ನು ತಮ್ಮ ಕ್ಷೇತ್ರದ ಲಕ್ಷಾಂತರ ಪ್ರಜೆಗಳ ಧರ್ಮದರ್ಶಿಗಳಾಗಿ ತಿಳಿಸಬೇಕಾಗಿದೆ. ಆದುದರಿಂದ ಈ ರೆಫರೆಂಡಂಅನ್ನು ಪ್ರತಿಪಾದನೆ ಮಾಡತಕ್ಕ ಪದ್ಧತಿ ಅನುಷ್ಠಾನಕ್ಕೆ ಬಾರದೆ ನಿಂತು ಹೋಗಿ ಬಹಳ ಕಾಲ, ವಾಯಿತು. ಎಂತಹ ದೊಡ್ಡ ನೀತಿಯಾದರೂ ಕೂಡ People's representatives in Parliament and in the State Assemblies take the responsibility of implementing it.

ಮಹಾಚುನಾವಣೆಯಲ್ಲಿ ಕರ್ಣಾಟಕ ಏಕೀಕರಣ ಆಗಬೇಕೇ, ಬಿಡಬೇಕೇ ಎನ್ನುವ ಎರಡು ವಿಚಾರಗಳೂ ಕೂಡ ನೇರವಾಗಿ ಪ್ರಜೆಗಳ ಮುಂದೆ ಇರಲಿಲ್ಲ. ಈ ದಿವಸ ಯಾರಾದರೂ ಪ್ರಜೆಗಳು ಇದನ್ನು ಒಪ್ಪಲಿಲ್ಲ ಅದನ್ನು ಒಪ್ಪಲಿಲ್ಲ ಎಂದು ಹೇಳಿದರೆ ಎರಡಕ್ಕೂ ಅರ್ಥವಿಲ್ಲ. ಕರ್ಣಾಟಕ ಏಕೀಕರಣವನ್ನು ಒಪ್ಪಿ ಚುನಾಯಿತರಾಗಿ ಬಂದಿದ್ದೇವೆ ಎಂದು ಹೇಳಿದರೂ ಅರ್ಥವಿಲ್ಲ. ಕರ್ಣಾಟಕ ಏಕೀಕರಣಕ್ಕೆ ವಿರೋಧವಾಗಿ ಆರಿಸಿ ಬಂದಿದ್ದೇವೆ ಎಂದರೂ ಕೂಡ ಅರ್ಥವಿಲ್ಲ. ಈ ಅಂಶವನ್ನು ಮೈಸೂರು ದೇಶದಲ್ಲಿ ಅಷ್ಟು ನೇರವಾಗಿ ಯಾರೂ ಯಾರ ಮುಂದೆಯೂ ಇಡಲಿಲ್ಲ. ಆದರೆ ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆ (Election Manifesto) ಯಲ್ಲಿ ಮಹಾ ಚುನಾವಣೆ ಆದಮೇಲೆ ಭಾಷಾವಾರು ಪ್ರಾಂತದ ಪ್ರಶ್ನೆಯನ್ನು ಪರಿಶೀಲಿಸುತ್ತೇವೆ ಎಂದು ಒಂದು ಬಗೆಯ ಆಶ್ವಾಸನ ಇರುವುದು ಕಂಡುಬರುತ್ತದೆ. ಆದ್ದರಿಂದ ಸಮಗ್ರಭಾರತದ ದೃಷ್ಟಿಯಲ್ಲಿ ಅಖಿಲಭಾರತ ಕಾಂಗ್ರೆಸ್ಸಿನವರು ಹೊರಡಿಸಿದ ಮಹಾ ಚುನಾವಣೆಯ ಪ್ರಣಾಳಿಕೆಯಲ್ಲಿ ಈ ವಿಷಯ ಜನರ ಮುಂದೆ ಇಡಲ್ಪಟ್ಟಿತ್ತು. ಇದನ್ನು ಇಟ್ಟಮಾತ್ರಕ್ಕೆ ಶಾಸ್ತ್ರೀಯವಾಗಿ ಜನರು ಅದಕ್ಕೆ ಓಟು ಮಾಡಿದರು ಎಂದು ಹೇಳಿದರೆ ಒಪ್ಪುವುದಕ್ಕಾಗುವುದಿಲ್ಲ. ಆದು ಒಂದಲ್ಲ ಒಂದು ರೂಪದಲ್ಲಿ ಜನಗಳ ಮುಂದೆ ಇತ್ತು. ಕಾಂಗ್ರೆಸ್ ಸಂಸ್ಥೆಯ ಮುಂದೆಯೂ ಇತ್ತು. ಈ ರೀತಿ ನಿರ್ದಿಷ್ಟವಾಗಿ ಇಲ್ಲದೆ ಇದ್ದರೂ ಕೂಡ, ತಾವಾದರೂ—ಇಲ್ಲಿ ಕುಳಿತಿರತಕ್ಕ ಮುಕ್ಕಾಲುಪಾಲು ಮಂದಿ ಕಾಂಗ್ರೆಸ್ ಸದಸ್ಯರಾದರೂ—ಈ ವಿಷಯ ಮಹಾ ಚುನಾವಣೆ ಆದ ಮೇಲೆ ಬರತಕ್ಕುದಾಗಿದೆ ಎಂದು ಊಹಿಸಬಹುದಾಗಿತ್ತು ಎಂದು ಮಾತ್ರ ನಾನು ಹೇಳುತ್ತೇನೆ. ಈ ಚುನಾವಣೆಯಲ್ಲಿ ಸ್ಥೂಲವಾಗಿ ಒಪ್ಪಿಗೆಯನ್ನು ಭಾಷಾವಾರು ಪ್ರಾಂತಕ್ಕೆ ಜನರು ಕೊಟ್ಟಿದ್ದಾರೆ ಎಂದು ಹೇಳಿದರೆ ಅಷ್ಟು ತಪ್ಪಾಗಲಾರದು. ಅದಕ್ಕಿಂತಲೂ ಮಿಗಿಲಾದ ವಾದ ಒಂದಿದೆ. ದೇಶದ ಮುಂದಿರುವ ಐದು ವರ್ಷಗಳ ಕಾಲದಲ್ಲಿ, ಮಹತ್ಪ್ರಶ್ನೆಗಳಲ್ಲಿ ಯಾವುದನ್ನು ಮಾಡಬೇಕು ಯಾವುದನ್ನು ಬಿಡಬೇಕು ಎಂಬುದನ್ನು ತಮ್ಮ ವಿವೇಚನೆ ಮತ್ತು ತಮ್ಮ ಬುದ್ಧಿವಂತಿಕೆಯಲ್ಲಿ ನಂಬಿಕೆಯಿಟ್ಟು ಮತದಾರರು ತಮ್ಮನ್ನು ವಿಧಾನ ಮಂಡಲಕ್ಕೆ ಕಳುಹಿಸಿದ್ದಾರೆ. ಈ ದೃಷ್ಟಿಯಿಂದ ನಾವು ಮಾತನಾಡಬೇಕು. ಮಹಾತ್ಮಾ ಗಾಂಧಿಯವರು ಇದೇ ವಿಚಾರ ಹೇಳಿದ್ದಾರೆ. ಪಾಕಿಸ್ಥಾನ ಮತ್ತು ಹಿಂದೂಸ್ಥಾನ ಎಂಬುದಾಗಿ ಇಂಡಿಯಾದೇಶ ಎರಡು ಭಾಗವಾದಾಗ, ದೇಶವನ್ನು ಎರಡುಭಾಗ ಮಾಡತಕ್ಕ ಪ್ರಶ್ನೆಯನ್ನು ರೆಫರೆಂಡಂಗೆ ಹಾಕಬೇಕು ಎಂದು ಕೆಲವರು ಹೇಳಿದರು. ಅದಕ್ಕೆ ಮಹಾತ್ಮಾ ಗಾಂಧಿಯವರು 1947ನೇ ಜೂನ್ 15ನೇ ತಾರೀಖಿನ ಹರಿಜನ ಪತ್ರಿಕೆಯಲ್ಲಿ "Referendum is a dangerous method at this time" ಎಂದು ಉತ್ತರ ಕೊಟ್ಟಿದ್ದಾರೆ. "ಈ ಕಾಲದಲ್ಲಿ ರೆಫರೆಂಡಂ ಎನ್ನುವುದು ದೇಶಕ್ಕೆ ಅಪಾಯವನ್ನು ತರತಕ್ಕ ಸಲಹೆ" ಎಂದು ಅವರು ಹೇಳಿದ್ದಾರೆ. ಈಗಲೂ ಕೂಡ ಅದನ್ನೇ ನಾನು ಹೇಳುತ್ತೇನೆ.

ನಾನು ಸೋತುಹೋಗುತ್ತೇನೆಂಬ ಹೆದರಿಕೆಯಿಂದ ಹೇಳುತ್ತಾ ಇಲ್ಲ; ಅಥವಾ ನನ್ನ ನಾಯಕತ್ವ ಇಲ್ಲಿಗೇ ನಿಂತುಹೋಗುತ್ತದೆ ಎಂಬ ಅಪನಂಬಿಕೆಯಿಂದ ಹೇಳುತ್ತಾ ಇಲ್ಲ. ತಾವೇ ಸಾವಧಾನವಾಗಿ

(ಶ್ರೀ ಕೆ. ಹನುಮಂತಯ್ಯ.)

ಯೋಚನೆ ಮಾಡಿನೋಡಿ; ರೆಫರೆಂಡಂ ಹಾದಿಯನ್ನು ಹಿಡಿದರೆ ದೇಶ ಎಷ್ಟು ಅಲ್ಲೋಲಕಲ್ಲೋಲವಾಗುತ್ತದೆ ಎನ್ನುವುದು ತಮಗೇ ಅರಿವಾಗುತ್ತದೆ. ತಾವು ನನ್ನನ್ನು ಬುದ್ಧಿವಂತನೆಂದು ಹೇಳುತ್ತೀರಿ. ನನಗೆ ಸ್ಥಾನ ಬೇಕಾದರೆ ಚಿತ್ರದುರ್ಗಕ್ಕೆ ಹೋಗಿ ಸಂಪಾದಿಸಿಕೊಳ್ಳಬಲ್ಲೆ. ನನಗೆ ಸ್ಥಾನವನ್ನು ಸಂಪಾದಿಸಿಕೊಳ್ಳುವುದು ಅಷ್ಟು ಪ್ರಾಮುಖ್ಯವೇ? ಆ ಮಾರ್ಗವೂ ನನಗೆ ಗೊತ್ತು. ಎಲ್ಲಿ ಚುನಾವಣೆಗೆ ನಿಂತುಕೊಂಡರೂ ಸ್ಥಾನ ತಮಗೂ ಬರುತ್ತದೆ. ಉಭಯತ್ರರೂ ಸ್ಥಾನಗಳ ಹೆದರಿಕೆಗೋಸ್ಕರ ಈರೀತಿ ಒಂದು ನಿಲುವನ್ನು ತೆಗೆದುಕೊಳ್ಳಬೇಕಾಗಿಲ್ಲ. ದೇಶದಲ್ಲಿ ಈ ವಿಷಯದ ಮೇಲೆ ಇಂತಹ ವಾತಾವರಣದಲ್ಲಿ ಚುನಾವಣೆಗೆ ಹೋದರೆ ಬಹುಶಃ ನಾವು ಊಹಿಸದೆ ಇರಬಹುದಾದಷ್ಟು ಅನಾಹುತಗಳು ನಡೆಯುವ ಸಂಭವವಿದೆ. ಆದ್ದರಿಂದ ತಮ್ಮಲ್ಲಿ ನಾನು ಪ್ರಾರ್ಥಿಸಿಕೊಳ್ಳತಕ್ಕದ್ದೇನೆಂದರೆ, "ಪ್ರಜಾಪ್ರಭುತ್ವ ತತ್ವದ ದೃಷ್ಟಿಯಿಂದಲೂ ಲೋಕ ವ್ಯವಹಾರದೃಷ್ಟಿಯಿಂದಲೂ ಈ ದಿವಸ ನಾವು ಈ ವಿಷಯವನ್ನು ಜನಗಳ ಮುಂದೆ ಇಟ್ಟು ಅವರ ಅಭಿಮತವನ್ನು ಪಡೆಯತಕ್ಕದು ಅಷ್ಟು ಸೂಕ್ತವಲ್ಲ" ಎಂದು.

ಇಷ್ಟೇ ಅಲ್ಲದೆ ತಾವುಗಳೇ ಹೇಳುತ್ತೀರಿ ಮೈಸೂರು ದೇಶ ಒಂದು ಸುಸಂಘಟಿತ ರಾಜ್ಯ ಆಗಿದೆ ಎಂದು. ಈಗಿರತಕ್ಕ ಮೈಸೂರುದೇಶ ಹೇಗಿದೆಯೋ ಅದರಲ್ಲಿ ಓಟು ತೆಗೆದುಕೊಂಡರೂ ಕೂಡ ನಿಷ್ಪಕ್ಷಪಾತ ದೃಷ್ಟಿಯಿಂದ ನೋಡಿದರೆ ಯಾರಿಗೆ ಮೆಜಾರಿಟಿ ಓಟು ಬರುತ್ತದೆ ಎಂದು ಧೈರ್ಯವಾಗಿ ಹೇಳುವುದಕ್ಕೆ ಈಗ ಸಾಧ್ಯವಿಲ್ಲ. ಮಂಡ್ಯದಲ್ಲಿ ಒಂದು ಪ್ರಚಂಡ ಚಳವಳಿ ನಡೆದರೆ ಚಿತ್ರದುರ್ಗದ ಜನರು ಅದನ್ನು ಒಪ್ಪುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಚಿತ್ರದುರ್ಗದ ಜನರು ಒಂದು ಅಭಿಪ್ರಾಯಕ್ಕೆ ಬಂದರೆ ಅಥವಾ ಮಂಡ್ಯದ ಜನರು ಒಂದು ಅಭಿಪ್ರಾಯಕ್ಕೆ ಬಂದರೆ "ಹಮಾರಾ ಕುತ್ತಾ ಹಮಾರ ಗಲ್ಲಿಮೆ ಷೇರ್" ಎಂದು ಹೇಳುವುದಕ್ಕಿಂತ ಹೆಚ್ಚಿಗೆ ಆಗುವುದಿಲ್ಲ. ದೇಶದಲ್ಲಿ ಏನು ಸಾರ್ವತ್ರಿಕ ಅಭಿಪ್ರಾಯ ಇದೆಯೋ ಅದನ್ನು ಪರಿಗಣಿಸಬೇಕು. ಒಂದು ಊರಿನಲ್ಲಿ, ಒಂದು ಕೇರಿಯಲ್ಲಿ ಒಂದು ಅಭಿಪ್ರಾಯ ಇದೆ ಎಂದು ಹೇಳಿ ಹುಲಿವೇಷ ಹಾಕಿದರೆ ಅದು ಬರೀ ಹುಲಿವೇಷವಾಗುತ್ತದೆಯೇ ಹೊರತು ನಿಜವಾದ ಹುಲಿಯಾಗುವುದಿಲ್ಲ.

ಮತ್ತೊಂದು ವಾದದಮೇಲೆ ಈ ಸಭೆಯಲ್ಲಿ ಬಹಳವಾಗಿ ಚರ್ಚೆಯಾಯಿತು. ಶ್ರೀಮಾನ್ ರಾಮರಾಯರು ಈ ಸ್ಟೇಟುಗಳ ರಿಆರ್ಗನೈಸೇಷನ್ ಕಮಿಷನ್ ಮೆಂಬರುಗಳನ್ನು ಎಷ್ಟೊಂದು ಹೊಗಳಿದರೋ ಅಷ್ಟು ಹೊಗಳಿಕೆಗೆ ಆಧಾರ ಏನೂ ಇಲ್ಲ. ಅದನ್ನು ನಾನು ಒಪ್ಪುವುದಿಲ್ಲ. ನಾನು ಖಚಿತವಾದ ಅಭಿಪ್ರಾಯವನ್ನು ಈ ದಿವಸ ಹೇಳುತ್ತೇನೆ. ಈ ವರದಿಯನ್ನು ಇನ್ನೂ ಉತ್ತಮ ಮಟ್ಟದಲ್ಲಿ ಬರೆಯಬಹುದಾಗಿತ್ತು; ಮತ್ತು ಅದರಲ್ಲಿ ಇನ್ನೂ ಉತ್ತಮವಾದ ಸಲಹೆಗಳನ್ನು ಮಾಡಬಹುದಾಗಿತ್ತು. ಈಗ ಆರೂವರೆ ಕೋಟಿ ಜನಗಳು ಇರತಕ್ಕ ಒಂದು ಪ್ರಾಂತವನ್ನೂ, 75ಲಕ್ಷ ಜನಗಳು ಇರತಕ್ಕ ಇನ್ನೊಂದು ಪ್ರಾಂತವನ್ನೂ ರಚಿಸಬೇಕೆಂದು ಸಲಹೆ ಕೊಡುವ ಮಹನೀಯರು ಸರ್ವೋತ್ತಮವಾದ ರಿಪೋರ್ಟನ್ನು ಬರೆದಿದ್ದಾರೆ ಎಂದು ಹೇಳಿದರೆ ನಾನು ಒಪ್ಪತಕ್ಕವನಲ್ಲ. ಎರಡನೆಯದು, ಕೋಮುವಾರು ಭೂತವನ್ನು ಎಬ್ಬಿಸಿ ಜನಗಳ ಮನಸ್ಸನ್ನು ಕಲಕಿರುವುದು ಅವರಿಗೆ ತಕ್ಕುದಲ್ಲ. ನಮಗೆ ಆ ವಾದವೇ ಬೇಕಾಗಿರಲಿಲ್ಲ. ಈ ಸಭೆಯಲ್ಲಾಗಲಿ, ಈ ದೇಶದಲ್ಲಾಗಲಿ, ಲಿಂಗಾಯಿತರೇ ಒಂದು ರಾಜಕೀಯ ಪಕ್ಷವಾಗಿಲ್ಲ; ಒಕ್ಕಲಿಗರೇ ಒಂದು ರಾಜಕೀಯ ಪಕ್ಷವಾಗಿಲ್ಲ; ಹಿಂದೆ ಆಗಿಯೂ ಇಲ್ಲ; ಮುಂದೆ ಆಗತಕ್ಕ ಸಂಭವವೂ ಇಲ್ಲ. ಈ ರೀತಿ ಇರತಕ್ಕ ಸನ್ನಿವೇಶವನ್ನು ಯಾರ ಮಾತೋ ಕೇಳಿ ಅಪಾರ್ಥ ಮಾಡಿ ಇಂತಹ ಜವಾಬ್ದಾರಿ ಮನುಷ್ಯರು ಚರಿತ್ರಾರ್ಹವಾದ ವರದಿಯಲ್ಲಿ ಬರೆದಿರತಕ್ಕದ್ದು ಅವರಿಗೆ ಸಲ್ಲತಕ್ಕದ್ದಲ್ಲ ಎಂದು ಸಾವಿರ ಸಾರಿ ಹೇಳುತ್ತೇನೆ. ಆ ರೀತಿ ಅವರು ಹೇಳದೆ ಇದ್ದರೆ ಚೆನ್ನಾಗಿತ್ತು. ಈ ಸಭೆಯಲ್ಲೂ ಕೂಡ ಕೆಲವು ಮಹನೀಯರು ಆರೀತಿ ವಾದ ಮಾಡಿದ್ದಾರೆ. ಲಿಂಗಾಯಿತರ ಪ್ರಾಬಲ್ಯ ಜಾಸ್ತಿಯಾಗುತ್ತದೆ ಎಂದು ಹೆದರಿಕೊಳ್ಳಬೇಡಿ ಎಂದು ಕೆಲವರು ಹೇಳುತ್ತಾರೆ. ಒಕ್ಕಲಿಗರ ಪ್ರಾಬಲ್ಯ ಕಡಮೆಯಾಗುತ್ತದೆ ಎಂಬ ಸಂಶಯಪಡಬೇಕಾಗಿಲ್ಲ ಎಂದು ಕೆಲವರು ಹೇಳುತ್ತಾರೆ. ಮತ್ತೆ ಕೆಲವರು ತಾವೇ ಅಲ್ಪಸಂಖ್ಯಾತರು ಎಂದು ಹೇಳುತ್ತಾರೆ. ಈ ರೀತಿ ಮೂರು ಬಗೆಯ ವಾದಗಳೂ ಒಂದೇ ಮಟ್ಟದವು. ಅಲ್ಪ ಸಂಖ್ಯಾತರು ಬಹಳ ಚೆನ್ನಾಗಿ ಸಭೆಯಲ್ಲಿ ಮಾತನಾಡಿದ್ದೇವೆ ಎಂದು ತಿಳಿದುಕೊಂಡಿದ್ದರೆ, ಯಾರಾದರೂ ಯೋಚನೆ ಮಾಡಿದರೆ, ಅವರೂ ಕೂಡ ಅದೇ ವಾದಸರಣಿಯಲ್ಲಿ ಮಾತನಾಡಿದ್ದಾರೆ ಎಂಬುದು ಅವರಿಗೆ ಹೊಳೆಯುತ್ತದೆ.

ಒಂದೇ ಒಂದು ಮಾತನ್ನು ಹೇಳುತ್ತೇನೆ. ಕೆಲವರು ಜಾತೀಯಭಾವನೆಗಳನ್ನು ಪ್ರಚೋದಿಸಿದ್ದಾರೆ. ಕೆಲವರು "ಇಲ್ಲ, ಕುಲಕ್ಕೆ ಬಾಳಬೇಕು. ಇಲ್ಲ, ಛಲಕ್ಕೆ ಬಾಳಬೇಕು," ಎಂದು ಹೇಳುತ್ತಾರೆ. ಅವರು ಹಾಗೆ ಹೇಳುವಾಗ ಮೈಯೆಲ್ಲಾ ಬೆವರಿ ಬಿಸಿಯಾಗುತ್ತದೆ. ಆದರೆ ತಮಗೆ ಹೇಳುತ್ತೇನೆ, ಎಂದು ಪ್ರಜಾಪ್ರಭುತ್ವ ಸ್ಥಾಪನೆಯಾಯಿತೋ.........

ಶ್ರೀ ಜೆ. ಮಹಮ್ಮದ್ ಇಮಾಂ.—ಆಗ ಕುಲ ಹೋಯಿತು.

ಶ್ರೀ ಕೆ. ಹನುಮಂತಯ್ಯ.—ಹೌದು ತಾವು ಹೇಳಿದ್ದು ನಿಶ್ಚಯ. ಕುಲ ಹೋಯಿತು; ರಾಷ್ಟ್ರೀಯ ಭಾವನೆ ಬಂದಿತು. ಕಾಂಗ್ರೆಸ್ ಸಂಸ್ಥೆ ರಾಷ್ಟ್ರೀಯತನವನ್ನು ಬಿತ್ತಿ, ಬೆಳೆಸಿ, ಒಂದು ಕಲ್ಪವೃಕ್ಷವನ್ನಾಗಿ ಮಾಡಿಕೊಂಡು ಬಂದಿರತಕ್ಕ ಸಂಸ್ಥೆ. ಆ ಸಂಸ್ಥೆಯಲ್ಲಿರತಕ್ಕ ಸದಸ್ಯರು ಯಾರೇ ಆಗಲಿ—ಮೆಜಾರಿಟಿ ಕೋಮು ಆಗಲಿ, ಮೈನಾರಿಟಿ ಕೋಮು ಆಗಲಿ, ಷೆಡ್ಯೂಲ್ಡ್ ವರ್ಗದವರಾಗಲಿ ಚಿಂತೆಯಿಲ್ಲ—ಅವರು ಈ ಜಾತಿ ಅಭಿಮಾನವನ್ನು ಕೆರಳಿಸತಕ್ಕ ಮಾತನ್ನಾಡಿದರೆ, ಆ ದಾರಿಯಲ್ಲಿ ಜನಗಳನ್ನು ಪ್ರಚೋದಿಸಿದರೆ, ನಾವು ಹತ್ತಾರು ವರ್ಷಗಳಿಂದ ಕಷ್ಟಪಟ್ಟುಕೊಂಡು ಯಾವ ಕಲ್ಪವೃಕ್ಷವನ್ನು ಬೆಳೆಸಿದ್ದೇವೋ, ಅದಕ್ಕೆ ಕೊಡಲಿ ಪೆಟ್ಟು ಕೊಟ್ಟಂತಾಗುತ್ತದೆ ಎಂದು ಮಾತ್ರ ನಾನು ಮನವಿಮಾಡಿಕೊಳ್ಳುತ್ತೇನೆ. ರಾಷ್ಟ್ರೀಯ ಭಾವನೆಯನ್ನು ನಾವು ಬೆಳೆಸುತ್ತಾ ಇರುವಾಗ ಜಾತಿ, ಕುಲ, ಮತ ಮುಂತಾದ ಭಾವನೆಗಳಿಗೆ ಅವಕಾಶ ಇರಕೂಡದು.

ಇನ್ನು ಛಲದ ವಿಚಾರ: ಛಲ ಇದ್ದದ್ದು ಛಲದಂಕಮಲ್ಲ ದುರ್ಯೋಧನನ ಕಾಲದಲ್ಲಿ; ಪ್ರಜಾಪ್ರಭುತ್ವದಲ್ಲಲ್ಲ. ಆಗ ಅವರು ಒಂದು ಸೈನ್ಯ, ಇವರು ಒಂದು ಸೈನ್ಯ ಕಟ್ಟಿಕೊಂಡು ಛಲದಮೇಲೆ ಬಡಿದಾಡಿದರು. ಈಗ ಅದೇ ರೀತಿ ಛಲದಮೇಲೆ ರಾಜ್ಯನೀತಿಯನ್ನು ಅನುಸರಿಸಿದರೆ ಕೊನೆಯಲ್ಲಿ ಅದು ಯುದ್ಧದಲ್ಲಿ ಅವಸಾನವಾಗುತ್ತದೆ, ಮತ್ತು ದೇಶಕ್ಕೆ ಅನಾಹುತಗಳಾಗುತ್ತವೆ. ರಾಜರ ಪ್ರಭುತ್ವ ಹೋಗಿ ಪ್ರಜಾಪ್ರಭುತ್ವ

ಸ್ಥಾಪನೆಯಾದರೆ, ಆಗ ಯುದ್ಧದ ಗೊಡವೆಗೆ ಹೋಗದೆ ನಮ್ಮ ನಿಮ್ಮ ಪ್ರಶ್ನೆಗಳನ್ನು ವಾದದಲ್ಲಿ ಪರಿಹರಿಸಿಕೊಳ್ಳಬಹುದು ಎನ್ನುವ ಸಿದ್ಧಾಂತವನ್ನು ರೂಸೋ ಅವರು ಹೇಳಿದರು. He is the father of modern democracy. ಪ್ರಜಾಪ್ರಭುತ್ವದಲ್ಲಿ ವಾದದಿಂದ, ಒಬ್ಬರನ್ನೊಬ್ಬರು ಒಪ್ಪಿಸಿ, ಒಂದು ರಾಜಿಗೆ ಬರಬೇಕಾಗಿದೆಯೇ ಹೊರತು ಛಲಕ್ಕೆ ಅವಕಾಶವಿಲ್ಲ. ಛಲಕ್ಕೆ ಅವಕಾಶ ಕೊಡಲೂ ಕೂಡದು. ಆದ್ದರಿಂದ ಪ್ರಜಾಪ್ರಭುತ್ವವನ್ನು ನಡೆಸಿಕೊಂಡು ಬರತಕ್ಕ ನಮಗೆ ಛಲ ಸಲ್ಲದು ; ರಾಷ್ಟ್ರೀಯತೆಯನ್ನು ಬೆಳೆಸಿಕೊಂಡು ಬಂದಿರುವ ನಮಗೆ ಕುಲ ಸಲ್ಲದು ; ಕುಲಾಭಿಮಾನವಾಗಲಿ, ಛಲಾಭಿಮಾನವಾಗಲಿ ತಕ್ಕುದಲ್ಲ.

ಈ ಬಗೆಯ ದುರಭಿಮಾನಗಳನ್ನು ನಮ್ಮ ಮನಸ್ಸಿನಲ್ಲಿ ಏನಾದರೂ ತಪ್ಪಿ ಬರಮಾಡಿಕೊಂಡಿದ್ದರೆ, ನಾನು ಕೈಮುಗಿದು ಬೇಡಿಕೊಳ್ಳುವುದು, ಆ ಸಾಂಕ್ರಾಮಿಕ ಜಾಡ್ಯಗಳನ್ನು ಆದಷ್ಟು ಜಾಗ್ರತೆ ತೊರೆದುಬಿಡೋಣ ಎಂದು. ಈ ಪ್ರಜಾಪ್ರಭುತ್ವದಲ್ಲಿ, ನಾನು ಮತ್ತೆ ಹೇಳಬೇಕಾದರೆ, ಕೋಪಕ್ಕೂ ತಾಪಕ್ಕೂ ಅವಕಾಶ ಕೊಡಕೂಡದು. ಒಂದುವೇಳೆ ನಾನಾಗಲಿ, ಮತ್ತೊಬ್ಬರಾಗಲಿ ಹಿಂದೆ ಅದಕ್ಕೆ ಅವಕಾಶ ಕೊಟ್ಟಿದ್ದರೂ ಕೂಡ ಅದು ತಪ್ಪೇ ಹೊರತು ಸರಿಯಲ್ಲ.

ಒಬ್ಬ ಸದಸ್ಯರು.—ಹಾಗಾದರೆ ತಾವು ಇನ್ನು ಮುಂದೆ ಕೋಪ ಮಾಡಿಕೊಳ್ಳುವುದಿಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ತಮ್ಮ ದಯದಿಂದ ಇನ್ನು ಮುಂದೆ ಕೋಪಮಾಡಬಾರದು ಎಂದು ಮನಸ್ಸು ಮಾಡಿಕೊಂಡಿದ್ದೇನೆ. ಕೋಪ ನಾನೇ ಮಾಡಿಕೊಳ್ಳಲಿ ನೀವೇ ಮಾಡಿಕೊಳ್ಳಲಿ, ಯಾರೇ ಮಾಡಲಿ, ಅದು ತಪ್ಪೇ.

ಪ್ರಜಾಪ್ರಭುತ್ವದಲ್ಲಿ ನಾವು ವಾದದಿಂದ ಒಲಿಸಿಕೊಳ್ಳಬೇಕಾಗಿದೆಯೇ ಹೊರತು, ದೇಶ ಅನಾಹುತಕ್ಕೆ ಈಡಾಗಿಬಿಡುತ್ತದೆ, ಮುಂದೆ ದೇಶದಲ್ಲಿ ಅಶಾಂತಿ ಉಂಟಾಗಿ ಬಿಡುತ್ತದೆ, ಎನ್ನುವ ಭಯ ಭೀತಿಯನ್ನುಂಟು ಮಾಡತಕ್ಕುದು ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿಲ್ಲ, ಎಂದು ನನ್ನ ಸವಿನಯ ಪ್ರಾರ್ಥನೆ. ಅದಲ್ಲದೆ ಎಂತಹ ಮಹತ್ಪ್ರಶ್ನೆಗಳೇ ಬರಲಿ, ಅಂತಹ ಎಲ್ಲಾ ಮಹತ್ಪ್ರಶ್ನೆಗಳ ವಿಷಯದಲ್ಲೂ ಉಭಯತ್ರರೂ ವಾದ ಮಾಡಿದ ಮೇಲೆ ಒಂದು ರಾಜಿಗೆ ಬರಬೇಕಾಗುತ್ತದೆ. ರಾಜೀ ಇಲ್ಲದೆ ಪ್ರಜಾಪ್ರಭುತ್ವ ನಡೆಯುವುದಿಲ್ಲ. ‘ Life is a series of compromises ’ ಎಂದು ಹೇಗೆ ಹೇಳುತ್ತಾರೋ ಹಾಗೆ Democratic system of Government can run only on lines of compromise. It may be between the treasury benches and the opposition benches ; it may be between one class and another or it may be between one area and another or it may be between one individual and another. ಆದರಿಂದ ಈ ಪ್ರಜಾಪ್ರಭುತ್ವದಲ್ಲಿ “ ನಾನು ಛಲ ಹಿಡಿಯುತ್ತೇನೆ : ನಾನು ರಾಜಿ ಆಗುವುದು ಅವಮಾನ ” ಎಂದು ಯಾರು ಮನಸ್ಸಿನಲ್ಲಿಟ್ಟುಕೊಳ್ಳುತ್ತಾರೋ ಅವರಲ್ಲಿ ಇನ್ನೂ ಪ್ರಜಾಪ್ರಭುತ್ವ ನಡೆಸತಕ್ಕ ಒಂದು ಮನೋವೃತ್ತಿ ಸಾಕಷ್ಟು ಬೆಳೆಯಲಿಲ್ಲವೆಂದು ಹೇಳಬೇಕಾಗಿದೆ.

ವಾದ ಪ್ರಜಾಪ್ರಭುತ್ವದ ಉಸಿರು. ರಾಜಿ ಪ್ರಜಾಪ್ರಭುತ್ವದ ಪ್ರಾಣ. ಇದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ನಾವು ಅನೇಕ ಸಾರಿ ಈ ಸಭೆಯಲ್ಲಿ ಮಹಾತ್ಮಾ ಗಾಂಧಿಯವರು ಹೇಳಿದ ಮಾತುಗಳನ್ನು ಹೇಳುತ್ತಾ ಇದ್ದೇವೆ. ತಾವು ಯಾವ ರೀತಿ ಮಹಾತ್ಮಾ ಗಾಂಧಿಯವರ ಹೆಸರನ್ನೂ, ಅವರು ಮಾಡಿದ ಕೆಲಸವನ್ನೂ ಹೇಳುತ್ತೀರೋ ಅದರಂತೆ ನಾನೂ ಕೂಡ ಅದೇ ವಿಷಯಗಳನ್ನು ಅದೇ ದೃಷ್ಟಿಯಿಂದ ಹೇಳುತ್ತೇನೆ. ಅದಕ್ಕೆ ತಾವು ನನ್ನನ್ನು ಕ್ಷಮಿಸಬೇಕು. Life is a series of compromises ಎನ್ನುವುದಕ್ಕೋಸ್ಕರ ಹೇಳುತ್ತಿದ್ದೇನೆ. ಮಹಾತ್ಮಾ ಗಾಂಧಿಯವರು ಪಾಕೀಸ್ತಾನ ಸ್ಥಾಪನೆಯಾಗುವುದಕ್ಕಿಂತ ಮೊದಲು “ They may cut me to pieces, but they cannot make me to subscribe to something which I consider to be wrong ” ಎಂದು ಹೇಳಿ ಪಾಕಿಸ್ತಾನದ ಸ್ಥಾಪನೆಗೆ ಅವಕಾಶ ಕೊಡುವುದಿಲ್ಲ ಎಂದು ಅಷ್ಟು ಕಠಿಣವಾದ ಮಾತಿನಲ್ಲಿ ಹೇಳಿದರು. ಅನಂತರ, 1947 ನೇ ಇಸವಿ ಜೂನ್ 15ನೇ ತಾರೀಖಿನ “ ಹರಿಜನ ” ಸಂಚಿಕೆಯಲ್ಲಿ ಪಾಕಿಸ್ತಾನ ಸ್ಥಾಪನೆಯಾಗಬೇಕೆಂಬ ತೀರ್ಮಾನವಾದ ಮೇಲೆ ಈ ರೀತಿ ಬರೆದಿರುತ್ತಾರೆ :

“ The feeling against the division of the country is strong. Gandhiji's speeches had revived the hopes that the evil might be averted. Some people asked him whether he would undertake a fast unto death in view of the decision of the Congress Working Committee accepting the division of India. Had not he called the Pakistan a sin in which he could never participate ? Replying to this, Gandhiji said that he would not fast at the dictation of any one. Such fasts could not be lightly undertaken. They could conceivably be wholly undesirable. They could not be undertaken out of anger. Anger was a short madness. He must therefore undertake the fast only when the still small voice within him called for it. He was a servant of the country and therefore of the Congress. Was he to fast because Congress differed from his views ? No. ” That is what he said.

7-30 P.M.

ಅನಂತರ 1947ನೇ ಇಸವಿ ಜೂನ್ 22ನೆಯ ತಾರೀಖಿನ ‘ ಹರಿಜನ’ದಲ್ಲಿ ಹೀಗೆ ಹೇಳುತ್ತಾರೆ :

‘ “ The division of India, ” said Gandhiji, “ was now a certainty so far as man could see.” He asked them not to grieve over it.’

ಮಹಾತ್ಮಾ ಗಾಂಧಿಯವರು ಹಿಂದೆ ಏನು ಕಠಿಣವಾದ ಮಾತನ್ನು ಹೇಳಿ, ಕೊನೆಗೆ ದೇಶದ ಹಿತದೃಷ್ಟಿಯಿಂದ, ಕಾಂಗ್ರೆಸ್ ಸಂಸ್ಥೆಯ ಒಗ್ಗಟ್ಟಿನ ದೃಷ್ಟಿಯಿಂದ ಯಾವ ರೀತಿ ಬದಲಾಯಿಸಿದರು ಎಂಬುದನ್ನು ತೋರಿಸಲು ಉದಾಹರಣೆಯಾಗಿ ಇದನ್ನು ಹೇಳಿದೆ.

1947ನೆಯ ಇಸವಿ ಆಗಸ್ಟ್ 15ನೆಯ ತಾರೀಖು ಸ್ವರಾಜ್ಯ ಬಂತು. ಅದಕ್ಕಿಂತ ಮುಂಚೆ ಜನವರಿ

(ಶ್ರೀ ಕೆ. ಹನುಮಂತಯ್ಯ.)

26ನೆಯ ತಾರೀಖು, ನಾವು ಇಂಡಿಯಾ ದೇಶದಲ್ಲೆಲ್ಲಾ ಸಭೆಗಳನ್ನು ಮಾಡಿ ಸ್ವಾತಂತ್ರ್ಯದ ಪ್ರಮಾಣವಚನವನ್ನು ಸ್ವೀಕರಿಸತಕ್ಕ ಪದ್ಧತಿಯನ್ನು ಇಟ್ಟುಕೊಂಡಿದ್ದೆವು. We used to hold meetings on Independence Day, *i.e.*, January 26th—and take pledge in public meetings. ಇಲ್ಲಿರುವ ಕಾಂಗ್ರೆಸ್ ಸದಸ್ಯರು ಪ್ರತಿಯೊಬ್ಬರೂ ಪ್ರಮಾಣ ವಚನವನ್ನು ಸಾರ್ವಜನಿಕ ಸಭೆಗಳಲ್ಲಿ ವರ್ಷ ವರ್ಷವೂ ತೆಗೆದುಕೊಳ್ಳುತ್ತಿದ್ದರು. ಆದರೂ ಈ ದಿವಸ ನಾವಿನ್ನೂ ಕಾಮನ್‌ವೆಲ್ತ್‌ನಲ್ಲೇ ಇದ್ದೇವೆ. ಇದಕ್ಕೆ ನಾವೇನು ಹೇಳೋಣ? We are not still independent in the sense in which we wanted to be. We are still in the Commonwealth. ಆದರೆ ಆಗಿನ ಅರ್ಥಕ್ಕೂ ಈಗಿನ ಅರ್ಥಕ್ಕೂ ಬದಲಾವಣೆಯಾಗಿದೆ. In practice and in substance we are independent and we do not mind the name. This is also a compromise, a compromise of a very high order.

ಈ ಎರಡು ಉದಾಹರಣೆಗಳನ್ನೂ ಮನಸ್ಸಿನಲ್ಲಿಟ್ಟುಕೊಂಡು ಮಥನ ಮಾಡಿದರೆ, ಎಂಥ ಮಹತ್ ಪ್ರಶ್ನೆ ಬಂದರೂ ಕೂಡ ನಮಗೆ ರಾಜಕೀಯ ಮಾರ್ಗದರ್ಶಿಗಳಾಗಿದ್ದ ಮಹಾತ್ಮಾ ಗಾಂಧಿಯವರು ತೋರಿಸಿಕೊಟ್ಟಿರುವ ದಾರಿಯೇನೆಂದರೆ, ರಾಜಕೀಯದಲ್ಲಿ ವಾದ ವಿವಾದಗಳಾದ ಮೇಲೆ ಸಮರಸವಾಗಿ ಒಂದು ರಾಜಿಗೆ ಬರಬೇಕೆಂಬುದು. ಬ್ರಿಟಿಷ್ ಸಾಮ್ರಾಜ್ಯದಲ್ಲಿ ಅಥವಾ ಕಾಮನ್‌ವೆಲ್ತ್‌ನಲ್ಲಿ ಇರುವುದಿಲ್ಲವೆಂದು ಪ್ರಮಾಣವಚನವನ್ನು ಸ್ವೀಕರಿಸಿದ್ದರೂ ಆ ವಚನವನ್ನು ಬಿಟ್ಟುಕೊಟ್ಟು ಕಾಮನ್‌ವೆಲ್ತ್‌ನಲ್ಲಿರುತ್ತೇವೆಂದು ಒಪ್ಪಂದ ಮಾಡಿಕೊಂಡಿರುತ್ತೇವೆ. ಇದೊಂದು compromise. ಇವೆರಡಕ್ಕಿಂತಲೂ ಮಹತ್ವವಾದ ಪ್ರಶ್ನೆಯೆ ಕರ್ಣಾಟಕ ಏಕೀಕರಣ?

ಒಂದು ಕರ್ಣಾಟಕವಾಗಲಿ, ಎರಡು ಕರ್ಣಾಟಕವಾಗಲಿ, ಇದು ಭಿನ್ನಾಭಿಪ್ರಾಯದ ಮಾತೇ ಹೊರತು ಮನಸ್ಸಾಕ್ಷಿಯ ನುಡಿ ಎಂದು ಪರಿಗಣಿಸಬಾರದೆಂದು ನನ್ನ ಬಿನ್ನಹ.

ಯಾವ ವಿಚಾರ ಅಭಿಪ್ರಾಯ ಭೇದದ ವಿಚಾರ, ಯಾವ ವಿಚಾರ ಆತ್ಮಕ್ಕೆ ಸಂಬಂಧಪಟ್ಟ ವಿಚಾರ ಎಂಬುದನ್ನು ಪರಿಗಣಿಸಿ ನಾವು ಒಂದು ತೀರ್ಮಾನ ಮಾಡಬೇಕು. ಮನಸ್ಸಿನ ಉದ್ವೇಗದಲ್ಲಿ ಉಂಟಾದ ಅಭಿಪ್ರಾಯಗಳೆಲ್ಲವನ್ನೂ ಆತ್ಮಸಾಕ್ಷಿಯ ಮಟ್ಟಕ್ಕೆ ಏರಿಸಬಾರದು. ಮಹಾತ್ಮಾ ಗಾಂಧಿಯವರು ಯಾವ ವಿಷಯವನ್ನು Conscienceನ ಮಟ್ಟಕ್ಕೇರಿಸಿದರು, ಯಾವುದನ್ನು ಏರಿಸಲಿಲ್ಲ ಎನ್ನುವ ಉದಾಹರಣೆಗಳು ತಮಗೆಲ್ಲ ಗೊತ್ತಿವೆ. ಆದುದರಿಂದ ತಮ್ಮಲ್ಲಿ ಈ ದಿವಸ ನಾನು ನಿವೇದಿಸಿಕೊಳ್ಳುವುದೇನೆಂದರೆ, ಒಂದು ಕರ್ಣಾಟಕವಾಗಲಿ, ಎರಡು ಕರ್ಣಾಟಕವಾಗಲಿ, ಯಾವುದೇ ಆಗಲಿ, ಇದು ರಾಜಕೀಯಕ್ಕೆ ಸಂಬಂಧಪಟ್ಟ ಪ್ರಶ್ನೆ, ಒಂದು ಎಲ್ಲೆಗೆ ಸಂಬಂಧಪಟ್ಟ ಪ್ರಶ್ನೆ, ಒಂದು ಸರ್ಕಾರ ಸ್ಥಾಪನೆಯಾಗುವುದಕ್ಕೆ ಸಂಬಂಧಪಟ್ಟ ಪ್ರಶ್ನೆಯೇ ಹೊರತು ಆತ್ಮ ಅಳಿದು ಹೋಗತಕ್ಕ ಅಥವಾ ಉಳಿದು ಹೋಗತಕ್ಕ ವಿಚಾರವಲ್ಲ. ಇದು ರಾಜಕೀಯದಲ್ಲಿ ಭಿನ್ನಾಭಿಪ್ರಾಯವಿರುವ ವಿಚಾರ. ಭಿನ್ನಾಭಿಪ್ರಾಯವನ್ನು ಬಗೆಹರಿಸಿಕೊಳ್ಳಬೇಕಾದುದು ವಾದದಿಂದ ಅಥವಾ ಬಹುಮತದಿಂದ. ಬಹುಮತದಿಂದ ತೀರ್ಮಾನವಾದ ಮೇಲೆ ತಾವು ಯಾವ ಪ್ರಜಾಪ್ರಭುತ್ವವನ್ನು, ಜವಾಬ್ದಾರಿ ಸರ್ಕಾರವನ್ನು ಈ ಸಂಸ್ಥಾನದಲ್ಲಿ ಕಟ್ಟುವುದಕ್ಕೆ ತಮ್ಮ ಸರ್ವಶಕ್ತಿಯನ್ನೂ ಸರ್ವಸ್ವವನ್ನೂ ಹೂಡಿದಿರೋ ಆ ಪ್ರಜಾಪ್ರಭುತ್ವವನ್ನು ತಾವು ಉಳಿಸಿಕೊಳ್ಳುವುದಕ್ಕೆ ರಾಜಿಮನೋಭಾವ ತಮ್ಮಲ್ಲಿ ಉಂಟಾಗಬೇಕೆಂದು ತಮ್ಮನ್ನು ಕೈಮುಗಿದು ಬೇಡಿಕೊಳ್ಳುತ್ತೇನೆ.

ಛಲಬೇಡ, ಹಟಬೇಡ, ನನ್ನ ಅಭಿಪ್ರಾಯವೇ ಸರಿ ಎನ್ನತಕ್ಕಂಥದ್ದೂ ಬೇಡ. ನಾನೇನೋ ಒಬ್ಬ ಕಿರಿಯ ನಾಯಕ. ಅದೂ ತಮ್ಮ ಕೃಪೆಯಿಂದಾಗಿರುವುದು, ನನ್ನ ಸ್ವಂತ ಶಕ್ತಿಯಿಂದಲೇ ಆಗಿಲ್ಲ. ಆದರೆ ನೆಹರೂ ಅವರಂಥ ಮಹಾನಾಯಕರು, ಪ್ರಜೆಗಳ ಶಕ್ತಿಗೆ ಮೀರಿದ ಒಂದು ಶಕ್ತಿಯಿಂದ ನಾಯಕ ಪಟ್ಟಕ್ಕೇರಿದ್ದಾರೆ. ಅವರು ಹೇಳಿದುದನ್ನು ನಾವು ಕೇಳೋಣ ಎಂದು ಮನಸ್ಸು ಮಾಡಿಕೊಂಡರೆ ಒಳ್ಳೆಯದು. ಅನೇಕ ಮಹನೀಯರು ಕೋಪದಿಂದ ನನ್ನನ್ನು ನಾನಾ ಮಾತುಗಳನ್ನಾಡಿದ್ದಾರೆ. ಬಹಳ ಸಂತೋಷ. ಹೀಗೆ ಕೋಪಗೊಂಡಿರುವ ನಾಲ್ಕೈದು ಮಂದಿ ನನ್ನೊಡನೆ ಬಹಳ ಸಹಕಾರಮಾಡಿದ್ದಾರೆ; ಅವರಿಗೆ ಇದುವರೆಗೂ ಪ್ರತಿಫಲವನ್ನೇನೂ ನಾನು ಕೊಟ್ಟಿರಲಿಲ್ಲ. ಈ ದಿವಸ ನನ್ನನ್ನು ಬೈದು ಅವರ ಮನಸ್ಸಿಗೆ ಹಿತವಾಗಿದ್ದರೆ ಅದು ಸ್ವಲ್ಪ ಪ್ರತಿಫಲನಾಯಿತೆಂದು ನನ್ನ ಮನಸ್ಸಿಗೆ ಸಂತೋಷ. (ನಗು !)

ಶ್ರೀಮಾನ್ ವೀರಣ್ಣಗೌಡರು ಹಳ್ಳಿಯ ಜೀವನವನ್ನು ಕುರಿತು ಕತೆಗಳನ್ನು ಚೆನ್ನಾಗಿ ಹೇಳುತ್ತಾರೆ. ನಾನೂ ಒಂದು ಕತೆಯನ್ನು ಹೇಳುತ್ತೇನೆ. ಹಳ್ಳಿಗಳಲ್ಲಿ "ಗೋವುಕಲ್ಲು" ಎಂದು ಊರಬಾಗಿಲಲ್ಲಿ ನೆಡುತ್ತಾರೆ. ದನಕರುಗಳು ಗೋಡೆಗೆ ಮೈ ಉಜ್ಜಿದರೆ ಗೋಡೆಗೆ ಅಪಾಯವಾಗುತ್ತದೆಂದು ಈ ಕಲ್ಲಿಗೆ ಉಜ್ಜಿಕೊಳ್ಳಲಿ ಎಂದು ಹೀಗೆ ಮಾಡಿರುತ್ತಾರೆ. ಇದನ್ನು 'ತುರುಗಲ್ಲು' ಎಂದು ಕರೆಯುತ್ತಾರೆ. ನಾನು ಈ ದಿವಸ ತುರುಗಲ್ಲಿನ ಹಾಗೆ ಇದ್ದೇನೆ. ಮೈ ತೀಟೆಯಾದರೆ ಗೋವುಗಳು ಹೇಗೆ ತುರುಗಲ್ಲನ್ನು ಉಪಯೋಗಿಸುತ್ತವೆಯೋ ಹಾಗೆ ಈ ಮಹನೀಯರು ತಮ್ಮ ನಾಲಗೆ ತೀಟೆಯನ್ನು ನನ್ನ ಮೇಲೆ ತೀರಿಸಿಕೊಳ್ಳುತಿದ್ದಾರೆ. (ನಗು !)

ಇಷ್ಟುಮಾತ್ರ ಹೇಳುತ್ತೇನೆ. ಒಂದುವೇಳೆ ಅವರು ಕೋಪದಲ್ಲಿ ಹೇಳಿರಬಹುದು; ಆಕ್ರೋಶದಲ್ಲಿ ಅಂದಿರಬಹುದು. ನಾನಾದರೂ ಈ ಸಭೆಯಲ್ಲಿ ದೇವರಿದ್ದಾನೆಂಬ ಭಾವನೆಯಿಂದ ಮಾತನಾಡುತ್ತಿದ್ದೇನೆ. ಎಂದೂ ಈ ವಿಷಯದಲ್ಲಿ ನಾನು ಯಾರಿಗೂ ಮೋಸಮಾಡಿದವನಲ್ಲ. ಯಾವ ಹೊತ್ತೂ ಗುಟ್ಟಾಗಿ ನಿಮಗೆ ಎರಡು ಕರ್ಣಾಟಕ ಮಾಡಿಕೊಡುತ್ತೇನೆ, ಒಂದು ಕರ್ಣಾಟಕ ಮಾಡಿಕೊಡುತ್ತೇನೆ ಎಂದು ಹೇಳಿ ಓಟು ಗಳಿಸಿದವನಲ್ಲ. ನೋ ಕಾನ್ಫಿಡೆನ್ಸ್ ಮೋಷನ್ (ಅವಿಶ್ವಾಸ ನಿರ್ಣಯ) ಅಲ್ಲ ಯಾವ ಮೋಷನ್ ಸಂಬಂಧದಲ್ಲಿಯೂ ಹಾಗೆ ಮಾಡಿಲ್ಲ. ಇಷ್ಟು ಜನ ಸದಸ್ಯರಿದ್ದಾರೆ, ಈ ಸಭೆಯಲ್ಲಿ ಲಿಂಗಾಯಿತರೂ ಇದ್ದಾರೆ, ಅವರನ್ನು ಕೇಳಿ; ನಾನು ಒಂದು ಕರ್ಣಾಟಕಮಾಡಿಕೊಡುತ್ತೇನೆ, ಓಟು ಕೊಡಿ ಎಂದು ಕೇಳಿದವನಲ್ಲ; ಎರಡು ಕರ್ಣಾಟಕಮಾಡುತ್ತೇನೆಂದು ಹೇಳಿ ಓಟನ್ನು ಕೇಳಿದವನೂ ಅಲ್ಲ.

ಇನ್ನೊಂದು ವಿಷಯ, ನಾನು ಮಾಡುವ ಕೆಲಸವನ್ನು ಯೋಚನೆಯಿಲ್ಲದೆ ಮಾಡುತ್ತೇನೆಂದು ತಿಳಿದುಕೊಳ್ಳಬೇಡಿ. ಒಂದು ಉದ್ದೇಶವನ್ನಿಟ್ಟುಕೊಂಡು ಮಾಡುತ್ತೇನೆ. ನಾನು ಪರಸ್ಥಳಗಳಿಗೆ ಪ್ರವಾಸ ಹೋಗುವಾಗ ಅನೇಕ ಜನ ಸ್ನೇಹಿತರನ್ನು ನನ್ನ ಜೊತೆಗೆ ಕರೆದುಕೊಂಡು ಹೋಗುತ್ತೇನೆ. ಏಕೆಂದರೆ,

ನಾನು ಮಾಡುವ ಭಾಷಣ ಮತ್ತು ನನ್ನ ನಿಲುವನ್ನು ಅವರು ಚೆನ್ನಾಗಿ ಅರಿತುಕೊಳ್ಳಲಿ ಎಂಬ ಉದ್ದೇಶದಿಂದ. ಬಳ್ಳಾರಿಯಲ್ಲಿ 1953ನೇ ಅಕ್ಟೋಬರ್ 2ನೇ ತಾರೀಖು, ಎರಡು ವರ್ಷಗಳ ಹಿಂದೆ ನಡೆದ ಮೂವತ್ತು ಸಹಸ್ರ ಜನರ ಸಭೆಯಲ್ಲಿ, 'ಬಳ್ಳಾರಿ ಮೈಸೂರಿಗೆ ಸೇರುವುದು ಮುಂದೆ ಬರತಕ್ಕ ಕರ್ಣಾಟಕಕ್ಕೆ ವಿನಾಯಕನ ಪೂಜೆ', ಎಂದು ಹೇಳಿದೆ.

ಪಕ್ಷದ ಮಾಟಿಂಗುಗಳಲ್ಲಿ ಹೇಳಿದ್ದೇನೆ. ಬಡ್ಜೆಟ್ ಭಾಷಣಗಳಲ್ಲಿ ಹೇಳಿದ್ದೇನೆ. ಶ್ರೀಮಾನ್ ಬೈರೇಗೌಡರೂ ನನ್ನ ಜೊತೆಯಲ್ಲಿ ಕರ್ಣಾಟಕಕ್ಕೆ ಪ್ರವಾಸ ಬಂದಿದ್ದರು.

ಶ್ರೀ ಜೆ. ಮಹಮ್ಮದ್ ಇಮಾಂ.—ನಾನೂ ಸಾಕ್ಷಿ.

ಶ್ರೀ ಕೆ. ಹನುಮಂತಯ್ಯ.—ಶ್ರೀ ಇಮಾಂರವರೂ ಬಂದಿದ್ದರು. ಈ ರೀತಿ ಹಿಂದೆ ಅನುಮಾನಾಸ್ಪದವಿಲ್ಲದ ರೀತಿಯಲ್ಲಿ ನನ್ನ ನಿಲುವನ್ನು ಖಚಿತವಾಗಿ ತಿಳಿಸಿದ ಮೇಲೂ ಕೂಡ ನಾನು ಮೋಸಮಾಡಿದ್ದೇನೆಂದು ಹೇಳಿದರೆ, ದಯವಿಟ್ಟು ಆ ಮಾತನ್ನು ಕೇಳಿ ಯಾರೂ ಮೋಸ ಹೋಗಬೇಡಿ ಎಂದು ನಾನು ಪ್ರಾರ್ಥಿಸುತ್ತೇನೆ.

ಈ ದಿವಸ ಯಾವ ಮಹನೀಯರು ಈ ವಿಷಯದಲ್ಲಿ ನನ್ನನ್ನು ತಪ್ಪಾಗಿ ತಿಳಿದುಕೊಂಡಿದ್ದಾರೋ ಅವರು ಉತ್ತರೋತ್ತರ ಸರಿಯಾಗಿ ತಿಳಿದುಕೊಳ್ಳುತ್ತಾರೆಂದು ನಾನು ನಂಬಿದ್ದೇನೆ. ಇಂಥ ಸನ್ನಿವೇಶಗಳು ಮನುಷ್ಯನ ಜೀವನದಲ್ಲಿ ಬರುತ್ತವೆ. ಷೇಕ್ಸ್‌ಪಿಯರ್ ನಾಟಕಗಳನ್ನು ನೀವು ಓದಿರಬಹುದು. ಒಥೆಲೋ ನಾಟಕವಿದೆ. ಒಥೆಲೋ ಡೆಸ್ಡಿಮೋನಳನ್ನು ಪ್ರೀತಿಸಿದುದಕ್ಕಿಂತ ಹೆಚ್ಚಿನ ಪ್ರೀತಿ ಎಲ್ಲೂ ಇರಲಾರದು. ಏನೋ ಸಂಶಯಕ್ಕೆಡೆಗೊಟ್ಟು ಆಕೆಯನ್ನು ಕೊಲ್ಲುವಷ್ಟು ಕ್ರೂರಿಯಾದ ಆ ಒಥೆಲೋ. ಹೀಗೆ ಮನುಷ್ಯನ ಜೀವನದಲ್ಲಿ ಅತಿ ಪ್ರೀತಿ ಅತಿ ಕೋಪಕ್ಕೆಡೆಗೊಡುತ್ತದೆ. ಇದಕ್ಕೆ ಸಂಶಯವೇ ಕಾರಣ. ಆ ಸಂಶಯ ನಿವಾರಣೆಯಾದ ಮೇಲೆ ಒಥೆಲೋ ಪಶ್ಚಾತ್ತಾಪಪಟ್ಟುಕೊಂಡು ತನ್ನ ಪ್ರಾಣವನ್ನು ತಾನೇ ತೆಗೆದುಕೊಂಡನು. ಈ ರೀತಿ ನಾವು ದೊಡ್ಡ ದೊಡ್ಡ ಸಾಹಿತ್ಯವನ್ನು ಓದಿಯೂ ಪುನಃ ತಪ್ಪುಹೆಜ್ಜೆ ಇಡಬಾರದೆಂದು ಇದನ್ನು ಹೇಳಿದೆ. ಓದುವುದು, ಬರೆಯುವುದು ನಮ್ಮ ಸ್ವಾನುಭವದಿಂದ ಒಳ್ಳೆಯ ದಾರಿಯಲ್ಲಿ ಸುರಕ್ಷಿತವಾಗಿ ಹೋಗುವುದಕ್ಕೇ ಹೊರತು, "ಓದಿ ಓದಿ ಮರುಳಾದ ಕೂಚುಭಟ್ಟ" ಎನ್ನುವ ಹಾಗೆ ಆಗುವುದಕ್ಕಲ್ಲ.

ಶ್ರೀಮಾನ್ ತಿಮ್ಮಪ್ಪಗೌಡರು 1949 ರಲ್ಲಿ ಒಂದು ನಿರ್ಣಯವಾಗಿದೆ ಎಂದು ಹೇಳಿದರು; ಇರಬಹುದು; ನನಗೆ ಜ್ಞಾಪಕವಿಲ್ಲ; ಅವರ ಮಾತನ್ನು ನಂಬುತ್ತೇನೆ. ಹಿಂದೆ ಈ ಪ್ರಶ್ನೆ ಬಂದಾಗ, ಇದು ಈಗ ಬೇಡ ಮುಂದೆ ಹೋಗಲಿ ಎಂದು ತೀರ್ಮಾನವಾಯಿತೆಂದು ಹೇಳಿದರು. ಹಾಗಿದ್ದರೆ ಈಗ ಒಪ್ಪಿಕೊಳ್ಳಿ. ಆರು ವರ್ಷ ಕಾದು ಆಯಿತು. ಈ ದಿವಸ ಅದನ್ನ ಒಪ್ಪುವುದಕ್ಕೆ ಸಕಾಲ ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. 'ಹೊಟ್ಟೆಉರಿ' ಎಂಬ ಪದವನ್ನು ಅವರು ಉಪಯೋಗಿಸಿದರು. ಹೊಟ್ಟೆ ಉರಿಯಿಂದ ಯಾವ ಕೆಲಸವನ್ನೂ ಮಾಡಬಾರದು! ಇನ್ನೊಂದು ವಿಷಯವನ್ನು ನಾನು ಹೇಳುತ್ತೇನೆ. ಕರ್ಣಾಟಕ ಏಕೀಕರಣವಾದರೆ, ಮೈಸೂರು ರಾಜ್ಯ ವಿಸ್ತಾರವಾದರೆ, ಇದೇ ಶಾಶ್ವತವಲ್ಲ. ಅಕಸ್ಮಾತ್ ಈ ಜೋಡಣೆಯಿಂದ ದೇಶಕ್ಕೆ ಅಹಿತವುಂಟಾದರೆ, ಸಂಬಂಧಪಟ್ಟ ಜನರಿಗೆ ಅಸಮಾಧಾನವಾದರೆ, ಇದನ್ನು ಹೀಗೆಯೇ ಉಳಿಸುವುದಕ್ಕೆ ಯಾರ ಕೈಲೂ ಆಗುವುದಿಲ್ಲ. ಈ ದಿವಸ ಒಂದು ಶಾಸನಮಾಡಿದ ಮಾತ್ರಕ್ಕೆ ಇದು ಕಾಲಕಾಲಕ್ಕೂ ಶಾಶ್ವತವಾಗಿ ಉಳಿಯುವ ಶಾಸನವಲ್ಲ. ಆದುದರಿಂದ ಸಹನೆ ಇರಲಿ ಎಂದು ಹೇಳುವಾಗ ತಮ್ಮನ್ನು ನಾನು ಕೋರುವುದು ಒಂದು ವಿಷಯ. ಬರುವ ಅಕ್ಟೋಬರ್ ಒಂದನೆಯ ತಾರೀಖು ಈ ಸಂಸ್ಥಾನ ಸ್ಥಾಪನೆಯಾಗುತ್ತದೆ. "ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು" ಎನ್ನುವಹಾಗೆ ಆರಂಭದಲ್ಲೇ ಗಲಾಟೆ ಮಾಡುವುದಕ್ಕೆ ಹೋಗಬಾರದು. ನಿಸ್ಪೃಹತೆಯಿಂದ, ಈ ಹೊಸ ರಾಜ್ಯದ ಕೆಲಸ ಸುಗಮವಾಗಿ ನಡೆಯುವುದಕ್ಕೆ ಅವಕಾಶ ಕೊಟ್ಟು, ಆಮೇಲೂ ಕೆಟ್ಟುಹೋದರೆ ಅದನ್ನು ಬದಲಾಯಿಸುವುದಕ್ಕೆ ನಿಮಗೆ ಅವಕಾಶವಿದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಆಗ ನಿಮಗೆ ಎರಡು ನಾಲಿಗೆಗಳಿವೆಯೆ ಎಂದು ನಮ್ಮನ್ನೇ ಕೇಳುತ್ತೀರಿ! (ನಗು!)

ಶ್ರೀ ಕೆ. ಹನುಮಂತಯ್ಯ.—ಆದುದರಿಂದ ನನಗಾದರೂ ಅನ್ನಿಸುತ್ತದೆ: ನಾನು ತಮ್ಮನ್ನೂ ನೋಡಿದ್ದೇನೆ, ಹೊಸದಾಗಿ ಬರುವವರನ್ನೂ ನೋಡಿದ್ದೇನೆ. ಆ ದೇಶದವರು ನಮ್ಮ ಜೊತೆಗೆ ಬಂದರೆ ಯಾವ ವಿರಸವೂ ಉಂಟಾಗುತ್ತದೆ ಎಂಬ ಅಪನಂಬಿಕೆ ನನಗಿಲ್ಲ. ಕೆಟ್ಟ ಪರಿಣಾಮವಾಗುತ್ತದೆಂಬ ಭಯ ನನಗಿಲ್ಲ. ತಾವೆಲ್ಲ ಸ್ನೇಹವನ್ನು ಬೆಳೆಸುವುದರಲ್ಲಿ ಅದ್ವಿತೀಯರಾಗಿದ್ದೀರಿ. ನನಗಿಂತಲೂ ಹೆಚ್ಚು ಸ್ನೇಹವನ್ನು ತಾವುಗಳನೇಕರು ಅವರಲ್ಲಿ ಬೆಳೆಸಬಹುದು. ಆದ್ದರಿಂದ ಒಟ್ಟಿನಲ್ಲಿ ಸ್ನೇಹ ಸೌಹಾರ್ದದ ಮೇಲೆ ಈ ಹೊಸ ರಾಜ್ಯ ಬಾಳಬೇಕೇ ಅಥವಾ ಅಳಿಯಬೇಕೇ ಹೊರತು ಬರೀ ಒಂದು ನಿರ್ಣಯವನ್ನು ನಾವು ಈ ದಿವಸ ಮಾಡಿದ್ದರಿಂದಲೇ ಇತ್ಯರ್ಥವಾಗುವುದಿಲ್ಲ. ಆ ಸಹನೆ ತಮ್ಮಲ್ಲಿ ಉಂಟಾಗಿ ಈ ಹೊಸ ರಾಜ್ಯ ಸ್ಥಾಪಿಸುವುದನ್ನು ಸ್ವಾಗತಿಸೋಣ.

ಈಗ ಈ ನಿರ್ಣಯದ ವಿಚಾರದಲ್ಲಿ ಒಬ್ಬೊಬ್ಬರು ಕೆಲವು ತಿದ್ದುಪಡಿಗಳನ್ನು ಕಳುಹಿಸಿದ್ದಾರೆ. ಅವುಗಳ ವಿಚಾರದಲ್ಲಿ ಎರಡು ಮಾತುಗಳನ್ನು ಮಾತ್ರ ಹೇಳುತ್ತೇನೆ. "ಎಫ್" ಕ್ಲಾಜಿನಲ್ಲಿ ಹೇಳಿರುವ '(f) such other contiguous areas in which the people have expressed their desire to join the new State' ನಲ್ಲಿ ಇಂಥಿಂಥ ಪ್ರದೇಶಗಳೆಂದೇ ಹೆಸರುಗಳನ್ನು ಕಾಣಿಸಬೇಕೆಂದು ಅನೇಕರು ಅಭಿಪ್ರಾಯಪಟ್ಟಿದ್ದಾರೆ. ಅನೇಕ ಟೆಲಿಗ್ರಾಂಗಳು ಕೂಡ ನನಗೆ ಬರುತ್ತಿವೆ. ಒಂದು ಟೆಲಿಗ್ರಾಂ ಈಗ ತಾನೇ ಬಂದಿದೆ. ಅದರಲ್ಲಿ "Please specifically mention Nilgiri district in Assembly Resolution—Sri Gowder, M.L.A., Bomme Gowda, M.L.A., K. Bokkai Gowder, Ex-M.L.A., Mathayyalingam, Secretary, Karnataka Sangha, Thatha Gowder, Member, Nilgiri District Board," ಎಂದು ಹೇಳಿ ಶ್ರೀ ಅರೀಗೌಡ, ಎಂ.ಎಲ್.ಎ., ಶ್ರೀ ಬೊಮ್ಮೇಗೌಡ, ಎಂ.ಎಲ್.ಎ., ಶ್ರೀ ಬೊಕ್ಕೇಗೌಡ ಮುಂತಾದವರೆಲ್ಲರೂ ರುಜುಮಾಡಿ ಕಳುಹಿಸಿದ್ದಾರೆ. ನಾನಿನ್ನೂ ಅವರನ್ನು ಸಂಧಿಸಿ ಅಥವಾ ಪತ್ರವ್ಯವಹಾರ ನಡೆಸಿ ವಿಶದವಾಗಿ ತಿಳಿದುಕೊಳ್ಳಬೇಕು. ಅದು ಬಿಟ್ಟು ನಮಗೆ ನೀಲಗಿರಿ ಡಿಸ್ಟ್ರಿಕ್ಟು ಬೇಕೆಂದು ಹೇಳಿ ನಿಷ್ಕಾರಣವಾಗಿ ಕೇಳತಕ್ಕಂಥವನು ನಾನಲ್ಲವೆಂಬುದನ್ನು ಸ್ಪಷ್ಟಪಡಿಸುತ್ತೇನೆ. ಒಂದು ಪ್ರದೇಶಬೇಕೆಂದು ಹೇಳಿ ಏನೋ ದಾಹದಿಂದ ಕೇಳತಕ್ಕವರಲ್ಲ ನಾವು. ಅವರಾಗಿ ಅವರು ಬಂದರೆ ಮಾತ್ರ ಸ್ವಾಗತಿಸತಕ್ಕಂಥ ಮನಸ್ಸುಳ್ಳವರು. ನಮ್ಮ ನೀತಿ ನಿರ್ಧಾರವೂ ಅದೇ. ಈ ವಿಷಯದಲ್ಲಿ ಮದರಾಸು

(ಶ್ರೀ ಕೆ. ಹನುಮಂತಯ್ಯ.)

ಸರ್ಕಾರಕ್ಕೂ, ಮೈಸೂರು ಸರ್ಕಾರಕ್ಕೂ ಯಾವ ರೀತಿಯ ವಿರಸವೂ ಉಂಟಾಗಕೂಡದು. ನೀಲಗಿರಿ ಡಿಸ್ಟ್ರಿಕ್ಟು ಮದ್ರಾಸು ಪ್ರಾಂತದಲ್ಲೇ ಉಳಿದರೂ ಸಂತೋಷ ; ಅಥವಾ ಅಲ್ಲಿರತಕ್ಕ ಜನರೆಲ್ಲಾ ಒಪ್ಪಿಕೊಂಡು ಅದನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸಿದರೂ ಕೂಡ ಸಂತೋಷವೇ. ಈ ಮನೋಭಾವದಿಂದ ಈ ವಿಷಯವನ್ನು ಮದರಾಸು ಸರ್ಕಾರದವರೊಡನೆ ಸಾಮರಸ್ಯದಿಂದ ವ್ಯವಹಾರ ನಡೆಸಿ ಇತ್ಯರ್ಥ ಮಾಡಿಕೊಳ್ಳುವುದಕ್ಕೆ ಸಾಧ್ಯವಿದೆಯೆಂಬ ನಂಬಿಕೆಯುಳ್ಳವನಾಗಿದ್ದೇನೆ. ಈಗ ಪತ್ರ ಕಳುಹಿಸಿರತಕ್ಕ ಶ್ರೀ ಅರೀಗೌಡರು, ಬೊಮ್ಮೇಗೌಡರು ಮುಂತಾದ ಎಂ.ಎಲ್.ಎ.ಗಳ ಅಭಿಪ್ರಾಯವನ್ನು ಸಮಯ ಬಂದಾಗ ಪ್ರಸ್ತಾಪಿಸಿ, ಯಾವ ರೀತಿ ಬಗೆಹರಿಸಬೇಕೋ ಹಾಗೆ ಬಗೆಹರಿಸೋಣ. ಏಕೆಂದರೆ ತಮಗೆ ಮೊದಲೇ ಮನವಿಮಾಡಿಕೊಂಡಿರುವಂತೆ ಒಂದು ಜಿಲ್ಲೆಯ ಅಕ್ಕಪಕ್ಕದಲ್ಲಿರುವ ಚಿಕ್ಕಪ್ರದೇಶಗಳ ವಿಚಾರವಾಗಿ ಪುನಃ ಡೆಲ್ಲಿಯಲ್ಲಿ ಒಂದೆರಡು ಸಮ್ಮೇಳನಗಳು ನಡೆದು ತೀರ್ಮಾನವಾಗಬೇಕಾಗಿದೆ. ಆ ಸಮ್ಮೇಳನದಲ್ಲಿ ಎಲ್ಲಾ ಪ್ರದೇಶಗಳ ಮುಖ್ಯ ಮಂತ್ರಿಗಳೂ, ಆಯಾ ಪ್ರದೇಶದ ಪ್ರತಿನಿಧಿಗಳೂ ಮತ್ತು ಇತರರೂ ಸೇರಬಹುದಾಗಿದೆ. ಆಗ ಇವೆಲ್ಲಾ ಒಪ್ಪಂದದ ಮುಖಾಂತರ ಪರಿಹಾರವಾಗುವುದಕ್ಕೆ ಸಾಧ್ಯವಿಲ್ಲದೆ ಹೋದರೆ ಇಂಡಿಯಾ ಸರ್ಕಾರದವರು ಬೌಂಡರಿ ಕಮಿಷನ್ನೋ (ಗಡಿ ನಿರ್ಧಾರ ಸಮಿತಿ) ಅಥವಾ ಇನ್ನಾವುದೋ ಕಮಿಟಿಯನ್ನೋ ನೇಮಕಮಾಡಬೇಕಾಗುತ್ತದೆ. ಅದರಿಂದ ನಿಯಮಿತವಾದ ಕಮಿಟಿ ಅಥವಾ ಕಮಿಷನ್ ತೀರ್ಮಾನವನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಮಡಕಶಿರದ ವಿಚಾರ.

ಶ್ರೀ ಕೆ. ಹನುಮಂತಯ್ಯ.—ಇದುವರೆಗೆ ನನಗೆ ಗೊತ್ತಿರುವ ಹಾಗೆ ಆಲೂರು, ಆದೋನಿ, ರಾಯದುರ್ಗ—ಇವುಗಳ ಕೆಲವು ಪ್ರಮುಖರು ಮನವಿಗಳನ್ನು ಮೈಸೂರು ಸರ್ಕಾರಕ್ಕೆ ಕಳುಹಿಸಿದ್ದಾರೆ. ಅದೇರೀತಿ ಮಡಕಶಿರ ತಾಲ್ಲೂಕು, ಹೊಸೂರು ತಾಲ್ಲೂಕು, ಕೊಳ್ಳೇಗಾಲ ತಾಲ್ಲೂಕಿನ ಪಕ್ಕದಲ್ಲಿರುವ ತಾಳವಾಡಿ-ಗೋಪಿಚೆಟ್ಟಿಪಾಳ್ಯಂ ಪ್ರದೇಶಗಳಿಂದಲೂ ಪತ್ರಗಳು ಬಂದಿವೆ. ಇವುಗಳೆಲ್ಲವನ್ನೂ ಆಗಲೇ ಇಂಡಿಯಾ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಹೀಗೆಯೇ ಮಿಕ್ಕ ಯಾವುದಾದರೂ ಪ್ರದೇಶಗಳವರೂ ತಿಳಿಸಿದರೆ ಅದನ್ನೂ ಪರಿಶೀಲನೆ ಮಾಡೋಣ.

ಈ ಸಂದರ್ಭದಲ್ಲಿ ಒಂದು ವಿಷಯವನ್ನು ನಾನು ವಿಶದಪಡಿಸಬೇಕೆಂದಿದ್ದೇನೆ. ಇದುವರೆಗೂ ಅನೇಕ ಸದಸ್ಯರು ಭಾಷಾವಾರು ಎಂಬ ಶಬ್ದವನ್ನು ಬಹುವಾಗಿ ಉಪಯೋಗಿಸಿದ್ದಾರೆ. ಶ್ರೀಮಾನ್ ಪ್ರಭಾಕರ್ ಅವರು ಇದನ್ನೇ ಹೇಳುತ್ತಾ ಕೊನೆಗೆ "ಕರ್ಣಾಟಕ ಮಾತಾಕಿ ಜೈ" ಎಂದು ಉದ್ಘೋಷಿಸುತ್ತಾ ಕುಳಿತುಕೊಂಡರು. ಆ ವಾದವನ್ನು ಇಂದಿಗೂ ನಾನು ಒಪ್ಪುವುದಿಲ್ಲ. ಭಾಷಾವಾರು ರೀತ್ಯಾ ಪ್ರಾಂತ ಮಾಡತಕ್ಕಂಥ ತತ್ತ್ವವನ್ನು ನಾನು ಸಂಪೂರ್ಣವಾಗಿ ಎಂದಿಗೂ ಒಪ್ಪುವುದಿಲ್ಲ. ಮೈಸೂರು ಸಮ್ಮಿಶ್ರದೇಶ, ತೆಲುಗರು, ತಮಿಳರು ಎಲ್ಲರನ್ನೂ ಒಳಗೊಂಡ ದೇಶ, ಎಂದು ಭಾವಿಸುವ ಸಂಪ್ರದಾಯ ಸಹಸ್ರಾರು ವರ್ಷಗಳಿಂದ ಬಂದಿದೆ. ಆದ್ದರಿಂದ ಆ ಸಮ್ಮಿಶ್ರ ಸಂಪ್ರದಾಯವನ್ನೇ ಇನ್ನುಮುಂದೆಯೂ ಕಾಪಾಡಿಕೊಂಡು ಹೋಗಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. 'ಕರ್ಣಾಟಕ ಮಾತಾಕಿ ಜೈ' ಎಂದ ಕೂಡಲೇ ನಮ್ಮ ನಾರಾಯಣರೆಡ್ಡಿಯವರಿಗೆ ಕೋಪಬರುತ್ತದೆ ; ಅದಕ್ಕೇಕೆ ಅವಕಾಶ ಕೊಡಬೇಕು ? ನಾನು ತಿಳಿದುಕೊಂಡಿರುವ ಮಟ್ಟಿಗೆ ಶ್ರೀಮಾನ್ ಪ್ರಭಾಕರ್ ಅವರು ಆ ಘೋಷಣೆಯನ್ನು ಮಾಡಿದಾಗಲೂ ಅವರನ್ನು ನೋಯಿಸಬೇಕೆಂಬ ಉದ್ದೇಶದಿಂದೇನೂ ಅಲ್ಲ. ಅವರು ಹೇಳಿದ್ದಕ್ಕೆ ಬಹುಶಃ ಕಾರಣ ಇಷ್ಟೆ, ಕರ್ಣಾಟಕವೆಂಬ ಹೆಸರನ್ನು ಮೊಟ್ಟಮೊದಲು ಹೊತ್ತವರು ನಮ್ಮ ದೇಶದ ಆದಿಕರ್ಣಾಟಕರು. ಆ ಅಭಿಮಾನದಿಂದ ಅವರು 'ಕರ್ಣಾಟಕಕ್ಕೆ ಜೈ' ಎಂದು ಹೇಳಿದರೇ ಹೊರತು ಅವರ ಮನಸ್ಸನ್ನು ನೋಯಿಸಬೇಕೆಂದಲ್ಲ (ನಗು). ಈಚೀಚೆಗೆ ಆದಿಕರ್ಣಾಟಕರೆಂಬ ಹೆಸರು ಅಷ್ಟು ಉಪಯೋಗದಲ್ಲಿಲ್ಲದೆ ಮಹಾತ್ಮಾ ಗಾಂಧಿಯವರು ಇಟ್ಟ 'ಹರಿಜನರು' ಎಂಬ ಹೆಸರು ಬಂದಿದೆ. ಹಿಂದೆ 'ಕರ್ಣಾಟಕ ಮಾತಾಕೀ ಜೈ' ಎಂದು ಹೇಳಬೇಕಾದ ಪ್ರಮೇಯವಿತ್ತು. ಅದರಲ್ಲೂ ಉತ್ತರ ಕರ್ಣಾಟಕದಲ್ಲಿ ಅವರ ಆಸೆ ಬಹುಕಾಲದಿಂದಲೂ ಈಡೇರದಿದ್ದುದಕ್ಕಾಗಿ ಅವರಮನಸ್ಸಿನಲ್ಲಿದ್ದ ಉದ್ವೇಗವನ್ನು ಈ ರೀತಿ ಘೋಷಣೆಗಳ ಮೂಲಕ ವ್ಯಕ್ತಪಡಿಸಬೇಕಾಯಿತು, ಅಷ್ಟೆ. ಈಗ ಆ ಆಸೆ ಪೂರ್ತಿಯಾದಮೇಲೆ ಇನ್ನು ಅಂಥ ಘೋಷಣೆಗಳಿಗೆ ಅವಕಾಶವಿಲ್ಲ ; ಆದ್ದರಿಂದ ನನ್ನ ಒಂದು ಪ್ರಾರ್ಥನೆಗೆ, ಬಿನ್ನಪಕ್ಕೆ ಈ ದೇಶ ಮನ್ನಣೆ ಕೊಡುವುದಾದರೆ, ತಾವುಗಳು ಇನ್ನು 'ಕರ್ಣಾಟಕ ಮಾತಾಕೀ ಜೈ' ಇತ್ಯಾದಿ ಘೋಷಣೆಗಳನ್ನು ಮರೆತುಬಿಡಬೇಕು. ಈ ರೀತಿ ಮಾಡದೆ ಒಂದೇ ದೃಷ್ಟಿಯಿಂದ ಅತಿಯಾಗಿ ಭಾಷಾವ್ಯಾಮೋಹವನ್ನೇ ಬೆಳೆಸಿಕೊಂಡು ಹೋದರೆ ಕೊನೆಗೆ ನಮ್ಮ ಕರ್ಣಾಟಕವೇ ಒಡೆದು ಹೋಗುತ್ತದೆ. ಇದಕ್ಕಿಂತ ಹೆಚ್ಚಾದ ಎಚ್ಚರಿಕೆಯನ್ನು ನಾನು ಕೊಡಲಾರೆ. ನಮ್ಮ ದೇಶದಲ್ಲಿ ಎಂದೂ ಭಾಷೆ ವಿರಸಕ್ಕೆ ಅವಕಾಶ ಮಾಡಿಕೊಟ್ಟಿಲ್ಲ. ಇನ್ನೂ ಮತಗಳು, ಆಚಾರಗಳು ಇತ್ಯಾದಿ ಇತ್ಯಾದಿ ವಿಷಯಗಳು ಅದಕ್ಕೆ ಒಂದು ವೇಳೆ ಅವಕಾಶ ಕೊಟ್ಟಿರಬಹುದು. ಭಾಷೆಯು ಮಾತ್ರ ಅವಕಾಶ ಕೊಟ್ಟಿಲ್ಲ. ಕಾರಣಾಂತರದಿಂದ ಈ 10-15 ವರ್ಷಗಳಿಂದ ಮಾತ್ರ ಭಾಷೆಯು ವ್ಯಾಜ್ಯವಿಷಯವಾಗಿ ಪರಿಣಮಿಸಿದೆ, ಅಷ್ಟೆ. ಇದು ತಾತ್ಕಾಲಿಕವಾದದ್ದು. ಪುನರ್ವಿಂಗಡಣೆಯಾದಮೇಲೆ ನಾವು ಭಾಷಾವ್ಯಾಮೋಹವನ್ನು ಉಪಶಮನಮಾಡಿಕೊಳ್ಳಬೇಕು. ಯಾವ ಭಾಷೆ ಆಡುವವರೇ ಆಗಲಿ, ದೇಶದಲ್ಲಿರುವ ಪ್ರತಿಯೊಬ್ಬರೂ ನಮ್ಮ ಸಹೋದರರು ಎಂದು ಪ್ರೀತಿ ವಿಶ್ವಾಸದಿಂದ ನಡೆದುಕೊಳ್ಳದೆ ಹೋದರೆ 'ಒಗ್ಗಟ್ಟು' ಎಂಬುದು ದೇಶದಲ್ಲಿರುವುದಿಲ್ಲ. ಈ ದೃಷ್ಟಿಯಿಂದಲೇ ಅನೇಕಸಾರಿ ಪಂಡಿತ್ ಜವಹರಲಾಲ್ ನೆಹ್ರೂರವರು Casteism (ಜಾತೀಯತೆ), Provincialism (ಪ್ರಾಂತೀಯತೆ). Linguistic fanaticism (ಭಾಷಾವ್ಯಾಮೋಹದ ಅತಿರೇಕ) ಇವುಗಳನ್ನು ಬಿಟ್ಟುಬಿಡಿ ಎಂದು ಹೇಳುತ್ತಿದ್ದಾರೆ. ಅವರು ಹೇಳುವುದರಲ್ಲಿ ಅರ್ಥವಿದೆ. ನಾವೆಲ್ಲರೂ ಮುಂದೆ ಒಂದಾಗಿ ಭಾರತೀಯರಲ್ಲ ಒಂದು ಜನಾಂಗವಾಗಿ ಬಾಳಬೇಕು. ಈ ದೇಶ ಪ್ಲಾನ್‌ಗಳೆಂಬ ಮೆಟ್ಟಲುಗಳ ಮೂಲಕ ಸಂಪತ್ಸೌಧವನ್ನು ಮುಟ್ಟಬೇಕು ಎಂದಿದ್ದರೆ, ಇಂಥ ಭಾಷಾ ವ್ಯಾಮೋಹಗಳನ್ನು ಉಪಶಮನಮಾಡಿಕೊಳ್ಳಬೇಕು. ಮೇಲಾಗಿ ನಾವು ಮೈಸೂರು ರಾಜ್ಯದಲ್ಲೇ ಇದ್ದರೂ ಕೂಡ 'ಭಾರತ ಮಾತಾಕೀ ಜೈ' ಎಂದು ಹೇಳೋಣ. ಮೈಸೂರಿಗೆ ಪ್ರತ್ಯೇಕ ಬಾವುಟ ಬೇಡವೆಂದು, ರಾಷ್ಟ್ರಕ್ಕೆಲ್ಲಾ ಒಂದೇ ಬಾವುಟ ಇರಬೇಕು ಎಂದು, ಯಾವ ದೊಡ್ಡ ಮನಸ್ಸಿನಿಂದ ನಡೆದು

ಕೊಂಡೆವೋ ಅದೇ ರೀತಿಯ ದೊಡ್ಡ ಮನಸ್ಸಿನಿಂದ 'ಕರ್ಣಾಟಕ ಮಾತಾಕೀ ಜೈ' ಎಂಬ ಘೋಷಣೆ ಉಪಶಮನವಾಗಿ "ಭಾರತ ಮಾತಾಕೀ ಜೈ" ಎಂಬ ಒಂದೇ ಘೋಷಣೆಯಿರಬೇಕೆಂದು ಹೇಳಿ ತೃಪ್ತ ರಾಗೋಣ.

(ಕರತಾಡನಗಳು, ಸಭೆಯಲ್ಲಿ ಹರ್ಷಧ್ವನಿಗಳು)

ಸ್ವಾಮಿ, ಈ ಸಭೆಯ ಕಾಲವನ್ನು ನಾನು ಬಹಳ ವಾಗಿ ತೆಗೆದುಕೊಂಡಿದ್ದೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ತಾವು ಭಾಷಣ ವನ್ನು ನಿಲ್ಲಿಸಲೆಂದಲ್ಲ, ನಾವು ಚಪ್ಪಾಳೆ ಹೊಡೆದದ್ದು!

ಶ್ರೀ ಕೆ. ಹನುಮಂತಯ್ಯ.—ಮಾನ್ಯ ವೀರಣ್ಣಗೌಡ ರಿಗೆ ನಾನು ಕೃತಜ್ಞನಾಗಿದ್ದೇನೆ. ಅವರು ನನ್ನ ಮೇಲೆ ಕೃಪೆಯಿಡಬೇಕೆಂದು ಪದೇ ಪದೇ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ ಒಂದು ಮಾತನ್ನು ಭಾರತದಿಂದ ಉದಾಹರಿಸಿ ಹೇಳಿ ಮುಗಿಸುತ್ತೇನೆ. ನನ್ನ ಸಹೋ ದ್ಯೋಗಿಗಳಾದ ಈ ಸಭಾಸದಸ್ಯರು ಕೆಲವರು ಈಗ ಧರ್ಮಸಂಕಟಕ್ಕೆ ಸಿಕ್ಕಿದ್ದಾರೆ. ಏನೆಂದರೆ, "ನಾವು ಎರಡು ಕರ್ಣಾಟಕವಾಗಲಿ ಎಂದು ಹೇಳಿಬಿಟ್ಟಿದ್ದೇವೆ ; ಎಲ್ಲರಿಗೂ ನಮ್ಮ ಅಭಿಪ್ರಾಯ ಹೀಗೆಯೇ ಎಂದು ಗೊತ್ತಾಗಿದೆ. ಈಗ ಅದನ್ನು ಬದಲಾಯಿಸಿಕೊಳ್ಳು ವುದು ಹೇಗೆ?" ಎಂಬುದೇ ಅವರ ನಿಜವಾದ ಸಂಕಟ.

ಮಹಾಭಾರತದಲ್ಲಿ ಇಂಥ ಸನ್ನಿವೇಶಗಳಿಗೆ ಉದಾ ಹರಣೆ ದೊರೆಯುತ್ತದೆ. ಕರ್ಣಪರ್ವದಲ್ಲಿ ಇಂಥದೇ ಒಂದು ಸನ್ನಿವೇಶವಿದೆ. ಧರ್ಮರಾಯನು ಕರ್ಣನ ಮೇಲೆ ಯುದ್ಧಮಾಡಿ ವಿಪರೀತ ಗಾಯಗೊಂಡು ಪಾಳ ಯಕ್ಕೆ ವಾಪಸು ಬಂದಿರುತ್ತಾನೆ. ಇದನ್ನು ಕೇಳಿದ ಅರ್ಜುನನು ಯುದ್ಧ ಮಾಡುತ್ತಿದ್ದಂಥವನು, ಅಣ್ಣನಿಗೆ ಪೆಟ್ಟುಬಿದ್ದಿದೆಯಲ್ಲಾ, ಅವನಿಗೆ ಏನಾಗಿದೆಯೋ ನೋಡಿಕೊಂಡಾದರೂ ಬರೋಣ ಎಂದು ಹೇಳಿ ಸಾರ ಥಿಯಾದ ಕೃಷ್ಣನನ್ನು ರಥವನ್ನು ಹಿಂದಕ್ಕೆ ತಿರುಗಿಸೆಂದು ಹೇಳಿ ಯುದ್ಧರಂಗದಿಂದ ಧರ್ಮರಾಯನ ಬಳಿಗೆ ಬರು ತ್ತಾನೆ. ಧರ್ಮರಾಯನು ಯಾವತ್ತೂ ಶಾಂತಿ ಸಾಗರನೆಂಬುದು ತಮಗೇ ಗೊತ್ತು. ಅಂಥವನು ಅರ್ಜುನನನ್ನು ನೋಡಿದ ಕೂಡಲೇ ಕೋಪಗೊಂಡು ಕಿಡಿಕಿಡಿಯಾಗಿ, "ನಾನು ಏಟು ತಿಂದೆನೆಂದು ಹೇಳಿ, ಹೆದರಿ ಹೇಡಿಯಂತೆ ನೀನೂ ವಾಪಸು ಬಂದೆಯಾ. ನೀನು ಇಂದ್ರನ ಮಗ ಮಹಾ ಶೂರನೆಂದು ಜಂಬ ಹೊಡೆದುಕೊಳ್ಳುತ್ತೀಯಲ್ಲ, ಇದೇ ನಿನ್ನ ಪ್ರತಾಪ!" ಎಂದು ಮುಂತಾಗಿ ಅರ್ಜುನನನ್ನು ಬಯ್ಯುತ್ತಾನೆ. ಅರ್ಜುನನನ್ನು ಹಳಿದು ಮುಖಭಂಗಮಾಡಿ ಅವನನ್ನು ಕುರಿತು ಮತ್ತೆ "ನಿನ್ನಂಥ ಷಂಡನಿಗೆ ಗಾಂಡೀವವೇಕೆ? ಬಿಸುಡು" ಎಂದು ಹೇಳುತ್ತಲೇ, ಅರ್ಜುನನಿಗೂ ಕೋಪ ಬಂದು ಒರೆಯಿಂದ ಕತ್ತಿಯನ್ನು ಹಿರಿದು ಅಣ್ಣನ ತಲೆಯನ್ನು ಕತ್ತರಿಸುವುದಕ್ಕೆ ಹೋಗುತ್ತಾನೆ. ಕೃಷ್ಣನು ಇದನ್ನು ನೋಡಿ "ಅಣ್ಣನನ್ನು ವಧೆಮಾಡುವ ದೌರ್ಜನ್ಯಕ್ಕೆ ತೊಡಗಿರುವೆಯಲ್ಲಾ, ಎಂಥ ಪಾಪಕೃತ್ಯ ವನ್ನೆಸಗುತ್ತಿರುವೆ!" ಎಂದು ಅತನನ್ನು ತಡೆಯು ತ್ತಾನೆ. ಅರ್ಜುನನು ಅದಕ್ಕೆ "ನಾನು ಸತ್ಯಕ್ಕಾಗಿ ಅಣ್ಣನ ತಲೆಯನ್ನಾದರೂ ಕತ್ತರಿಸುತ್ತೇನೆ. ಅಗ್ನಿ ದೇವನು ಗಾಂಡೀವವನ್ನು ನನಗೆ ಕೊಟ್ಟಾಗ ಯಾರು ಇದಕ್ಕೆ ಅವಮಾನ ಮಾಡುತ್ತಾರೋ ಅವರ ತಲೆಯನ್ನು ಕತ್ತರಿಸುತ್ತೇನೆಂದು ಶಪಥ ಮಾಡಿದ್ದೇನೆ ; ಅದಕ್ಕನು ಗುಣವಾಗಿ ಅಣ್ಣನ ತಲೆಯನ್ನಾದರೂ ಕತ್ತರಿಸಲೇ ಬೇಕು" ಎಂದು ಹೇಳುತ್ತಾನೆ. ಆಗ ಕೃಷ್ಣ, ನೀನು "ನುಡಿದ ಮಾರ್ಗದಲರದು ಧರ್ಮದ! ಗೊಡವೆ ತಾನದು ಬೇರೆ ಸತ್ಯವ! ನುಡಿದು ಕೆಟ್ಟವರುಂಟು ಹಿಂಸಾ ಧರ್ಮವೃತ್ತಿಯಲಿ" ಎಂದೂ, "ಗಾಂಡೀವ ವನ್ನು ಪಡೆದಾಗ ಅಗ್ನಿ ದೇವನಾಗಲಿ, ಮತ್ಯಾರಾಗಲಿ ನಿನ್ನನ್ನು ಆ ಶಪಥಮಾಡು ಎಂದೇನೂ ಕೇಳಲಿಲ್ಲ; ನೀನೇ ನಿನಗೆ ಗಾಂಡೀವ ಸಿಕ್ಕಿತಲ್ಲಾ ಎಂದು ಮೈಯುಬ್ಬಿ ಆ ಮಾತು ಆಡಿದೆ; ಈಗ ಆ ಮಾತು ಉಳಿಸಿಕೊಳ್ಳಬೇಕೆಂದು ಅಣ್ಣನ ತಲೆಯನ್ನು ಕತ್ತರಿಸಿ ಮಹಾಪಾಪಕ್ಕೆ ಹೋಗುತ್ತಿದ್ದೀಯಲ್ಲಾ! ಆ ಶಪಥ ವನ್ನು ಮುರಿದ ಪಾಪಕ್ಕಿಂತ ಅಣ್ಣನನ್ನು ಕೊಲೆ ಮಾಡಿದ ಮಹಾಪಾಪವನ್ನು ಹೊತ್ತುಕೊಳ್ಳುತ್ತಿದ್ದೀ ಯಲ್ಲಾ" ಎಂದೂ ಹೇಳುವನು.

ಶ್ರೀ ಎನ್. ಸಿ. ನಾಗಯ್ಯರೆಡ್ಡಿ.—ಈ ಕಥೆಗಳನ್ನು ಹಳ್ಳಿಯವರಿಗೆ ಹೇಳಿ, ಸ್ವಾಮಿ!

ಶ್ರೀ ಕೆ. ಹನುಮಂತಯ್ಯ.—ಸ್ವಾಮಿ, ನಾಗಯ್ಯ ರೆಡ್ಡಿಯವರು ಹಳ್ಳಿಯಲ್ಲಿ ಹೇಳಿ ಎನ್ನುತ್ತಾರೆ. ನಾನೂ ಹಳ್ಳಿಯ ಮನುಷ್ಯ. ಇವರುಗಳು ಹಳ್ಳಿಯ ಪ್ರತಿನಿಧಿ ಗಳು, ಅದಕ್ಕಾಗಿ ಹೇಳುತ್ತಿದ್ದೇನೆ.

ಶ್ರೀಕೃಷ್ಣನು, "ಈ ಎರಡು ಪಾಪಗಳಲ್ಲಿ, ನೀನು ಮೈಯುಬ್ಬಿ ಮಾಡಿದ ಪ್ರತಿಜ್ಞಾಭಂಗದಿಂದ ಎಷ್ಟು ಪಾಪ ಬರುತ್ತದೆ, ಅಣ್ಣನನ್ನು ಕೊಲ್ಲುವುದರಿಂದ ಎಷ್ಟು ಪಾಪ ಬರುತ್ತದೆ, ಎಂಬ ವ್ಯತ್ಯಾಸವನ್ನು ನೋಡಿ ಮುಂದುವರಿ" ಎಂದು ಹೇಳಿದ ಮೇಲೆ ಅರ್ಜುನನು ಮರುಗಿ ಧರ್ಮರಾಯನ ಕಾಲಿಗೆ ಬೀಳು ತ್ತಾನೆ.

8 P.M.

ಹಾಗೆಯೇ ಇಲ್ಲಿರತಕ್ಕ ಮಾನ್ಯ ಸದಸ್ಯರಲ್ಲನೇಕರು ಎರಡು ಕರ್ಣಾಟಕವಾಗಲಿ ಎಂದು ಹೇಳಿರಬಹುದು. ಆದುದರಿಂದ ಅವರು ಅಣ್ಣನಂತಿರುವ ಆ ಕಾಂಗ್ರೆಸ್ ಹೈಕಮ್ಯಾಂಡಿನ ಮಾತನ್ನು ಪಾಲಿಸುವುದು ಧರ್ಮವೇ ಅಥವಾ ತಾವು ಹೇಳಿದ ಮಾತನ್ನೇ ಹಿಡಿದು ಪಾಲಿಸು ವುದು ಧರ್ಮವೇ ಎನ್ನುವುದನ್ನು ಅವರೇ ಪರಿಗಣಿಸಿ, ಯಾವುದು ಸರಿಯಾಗಿದೆಯೋ ಅದಕ್ಕೆ ಅವರೆಲ್ಲರೂ ತಮ್ಮ ಓಟನ್ನು ಕೊಡಬೇಕೆಂದು ನನ್ನ ಪ್ರಾರ್ಥನೆ.

Sri Mulka GOVINDA REDDY.—That should not be addressed to the members of the Assembly ; that should be addressed to the members of his party in a private chamber.

ಶ್ರೀ ಕೆ. ಹನುಮಂತಯ್ಯ.—ನಾನು ಯಾವ ನಿರ್ಣ ಯವನ್ನು ಈಗ ಸಭೆಯ ಮುಂದೆ ಮಂಡಿಸಿದ್ದೇನೋ ಅದು ನಮ್ಮ ಹಿರಿಯ ನಾಯಕರುಗಳ ಶಕ್ತಿಯಿಂದ ಸಂಯೋಜಿತವಾಗಿದೆ. ಎಂ. ಪಿ. ಸಿ. ಸಿ. ಯಂಥ ಒಂದು ದೊಡ್ಡ ಕಾಂಗ್ರೆಸ್ ಸಂಸ್ಥೆಯ ಶಕ್ತಿಯನ್ನೂ ಪಡೆದುಕೊಂಡಿದೆ, ಅಲ್ಲದೆ ಪ್ರತಿಪಕ್ಷದ ನಾಯಕರೂ ಮತ್ತು ಅವರ ಪಕ್ಷದ ಸರ್ವಸದಸ್ಯರೂ ಇಡೀ ದೇಶದ ಹಿತಸಾಧನೆಯ ದೃಷ್ಟಿಯಿಂದ ದೇಶಾಭಿಮಾನದ ಒಂದು ಉದಾತ್ತ ಧ್ಯೇಯದಿಂದ ಅವರ ಪಕ್ಷದ ಬೆಂಬಲವನ್ನೂ ಅದಕ್ಕೆ ಕೊಟ್ಟಿರುತ್ತಾರೆ. ಹೀಗೆ ಎಲ್ಲರ ಅಭಿಪ್ರಾಯ ಗಳನ್ನೂ, ಶಕ್ತಿಯನ್ನೂ ಅಳವಡಿಸಿಕೊಂಡಿರುವ ನಿರ್ಣ ಯವಿದು. ಇಂಥ ನಿರ್ಣಯಕ್ಕೆ ತಾವುಗಳೆಲ್ಲರೂ ತಮ್ಮ ಹೃತ್ಪೂರ್ವಕವಾದ ಸಂಪೂರ್ಣ ಬೆಂಬಲವನ್ನು ನೀಡಿ. ಇದರಿಂದ ತಾವುಗಳೆಲ್ಲರೂ ಸತ್ಕೀರ್ತಿಯನ್ನ ಪಡೆಯು ತ್ತೀರಿ, ದೇಶಕ್ಕೊಂದು ದೊಡ್ಡ ಸೇವೆಯನ್ನು ಸಲ್ಲಿಸಿದ ಪುಣ್ಯಶಾಲಿಗಳಾಗುತ್ತೀರಿ ಎಂದು ನಾನು ತಮ್ಮಲ್ಲಿ ಕೊನೆಯದಾಗಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಸ್ವಾಮಿ, ತಾವೀಗ ಈ ನಿರ್ಣಯದಬಗ್ಗೆ ಓಟ್ ತೆಗೆದುಕೊಳ್ಳುವುದಕ್ಕೆ ಮೊದಲೇ ನಾನು ತಮ್ಮಲ್ಲಿ ಒಂದು ವಿಷಯವನ್ನು ತಿಳಿಸಲು ತಮ್ಮ ಅಪ್ಪಣೆಯನ್ನು ಬೇಡುತ್ತೇನೆ. ಹಿರಿಯಣ್ಣನ ಮಾತಿಗೆ ಗೌರವ ಕೊಡಬೇಕು ಎಂದು ಇದ್ದರೆ, ಎಂದರೆ, ಆ ಕಾಂಗ್ರೆಸ್ ಹೈ ಕಮ್ಯಾಂಡಿನವರ ಬಗ್ಗೆ ಒಂದು ಗೌರವ ಭಾವನೆಯಿದ್ದರೆ ನೀವು ಈ ನಿರ್ಣಯಕ್ಕೆ ಪರವಾಗಿ ಓಟ್‌ಮಾಡಿ ಎಂದು ಈಗತಾನೆ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ತಿಳಿಸಿದರು. ಆದರೆ ಕೆಲವು ಕಾರಣಗಳಿಗಾಗಿ ಈಗ ಕೆಲವರಿಗೆ ವಿರೋಧವಾಗಿ ಓಟುಮಾಡಲು ಅವಕಾಶವಿಲ್ಲ. ಓಟ್ ಮಾಡುವುದಾಗಿದ್ದರೆ—ಪರವಾಗಿ ಮಾಡಬೇಕೇ ಹೊರತು ವಿರೋಧವಾಗಿ ಓಟ್ ಮಾಡುವಹಾಗೇ ಇಲ್ಲ. ಅದಕ್ಕೆ ಅವಕಾಶವಿಲ್ಲ, ಈ ವರದಿಯ ಪರವಾಗಿ ಓಟ್‌ಕೊಡುವುದಕ್ಕೆ ಅವಕಾಶವಿದೆ. ಹಾಗೆ ಪರವಾಗಿ ಓಟ್ ಕೊಡಬಾರದೆಂದಿರತಕ್ಕವರು ತಟಸ್ಥರಾಗಿರಬಹುದು ಎಂತಲೂ ಹೇಳಿದ್ದಾರೆ. ಅದೇ ಪ್ರಕಾರ ಅವರ ಅಪ್ಪಣೆಯನ್ನು ಪರಿಪಾಲಿಸತಕ್ಕ ಬಗ್ಗೆ ನಾವೀಗ ಓಟ್‌ಮಾಡದೆ ತಟಸ್ಥರಾಗಿ ಉಳಿಯುತ್ತೇವೆ. ಆದ್ದರಿಂದ ನಾವೀಗ ಇಲ್ಲದ್ದರೂ ಇರಬಹುದು—ಇಲ್ಲದಿದ್ದರೂ ಪರವಾಗಿಲ್ಲ. ಆದಕಾರಣ ಈಗ ಸಭೆಯಲ್ಲಿ ಓಟ್ ನಡೆಸುವಾಗ ಎಷ್ಟು ಜನರು ಪರವಾಗಿ ಓಟ್‌ಮಾಡುತ್ತಾರೆ. ಎಷ್ಟು ಜನರು ವಿರೋಧವಾಗಿ ಓಟುಮಾಡುತ್ತಾರೆ, ಎಷ್ಟು ಜನರು ನ್ಯೂಟ್ರಲ್ಲಾಗಿ ಇರುತ್ತಾರೆ ಎನ್ನುವ ವಿವರಗಳನ್ನು ನಿರ್ಧರಿಸಿ ತಾವು ನಮಗೆ ತಿಳಿಸುವುದು ಒಳ್ಳೆಯದು. ಮತ್ತೊಂದು ವಿಷಯವೇನೆಂದರೆ—ಈ ನ್ಯೂಟ್ರಲ್ ಆಗಿ ಉಳಿಯತಕ್ಕವರ ಲೆಕ್ಕ ಎಷ್ಟು ಎನ್ನುವುದರ ಅಗತ್ಯ ಅಷ್ಟೇನೂ ಇಲ್ಲದಿದ್ದರೂ ತಾವು ಈ ರೀತಿ ನಿರ್ಧರಿಸತಕ್ಕ ಒಂದು ಅವಕಾಶ ಮಾಡಿಕೊಟ್ಟರೆ ನಾನು ತಮಗೆ ಬಹಳ ಕೃತಜ್ಞನಾಗಿರುತ್ತೇನೆ. ಈ ವರದಿಯ ಬಗ್ಗೆ ಮನಸ್ಸಾಕ್ಷಿಯಾಗಿ ವಿರೋಧವಾಗಿ ಓಟ್‌ಮಾಡಬೇಕೆಂದು ಬಯಸತಕ್ಕವರು ಎಂದರೆ ಕಾಂಗ್ರೆಸ್ ಸಂಸ್ಥೆಯಲ್ಲಿ ತಟಸ್ಥರಾಗಿರತಕ್ಕವರ ಸಂಖ್ಯೆ ನನ್ನಲ್ಲಿದೆ. 35 ಜನರು ಆ ರೀತಿ ರುಜು ಮಾಡಿರತಕ್ಕಂಥ ಒಂದು ಪಟ್ಟಿಯನ್ನು ನನ್ನ ಕಡೆ ಕೊಟ್ಟಿದ್ದಾರೆ. ನಾನೀಗ ಅವರೆಲ್ಲರ ಹೆಸರನ್ನೂ ಬೇಕೆಂದರೆ ಓದಿ ಹೇಳುತ್ತೇನೆ.

Sri J. MOHAMED IMAM.—I have got something to say on that. The procedure pointed out by my friend Sri Veeranna Gowdh is against the rules. None of that is contemplated in any of the provisions or rules.

Sri H. K. VEERANNA GOWDH.—I myself said so.

Sri J. MOHAMED IMAM.—I am appealing to the Chair.

ಅವರು ಏನು ಹೇಳುತ್ತಿದ್ದಾರೋ ಅದಕ್ಕೆ ಈ ಸೆಕ್ಷನ್ 158ರ ಪ್ರಕಾರ ಅವಕಾಶವಿಲ್ಲ. ಅಧ್ಯಕ್ಷರಿಗೆ ಯಾವ ಒಂದು ವಿಷಯದಲ್ಲಾಗಲಿ ಕೊನೆಯ ತೀರ್ಮಾನ ತೆಗೆದುಕೊಳ್ಳತಕ್ಕ ಬಗ್ಗೆ ಆ ವಿಚಾರವನ್ನು ಓಟಿಗೆ ಹಾಕುವ ಅಧಿಕಾರವಿದೆ. ಹಾಗೆ ಸಭೆಯಲ್ಲಿ ಓಟಿಗೆ ಹಾಕಿದ ನಂತರ ಪರವಾಗಿ ಎಷ್ಟು ಮತ್ತೆ ವಿರೋಧವಾಗಿ ಎಷ್ಟು ಓಟುಗಳು ಬಂದಿರುತ್ತವೆ ಎನ್ನುವುದು ಪ್ರಾಮುಖ್ಯವೇ ಹೊರತು ಈ ನ್ಯೂಟ್ರಲ್ ಆಗಿ ಉಳಿಯತಕ್ಕವರು ಎಷ್ಟು ಜನ ಎನ್ನುವ ಒಂದು ಪ್ರಶ್ನೆಯೇ ಇಲ್ಲಿ ಉದ್ಭವಿಸುವುದಿಲ್ಲ. ಅಂಥಾದ್ದಕ್ಕೆ ಅವಕಾಶವಿಲ್ಲ ಕಾನೂನು ಪ್ರಕಾರ. ಈಗ ಆ 35 ಮಾನ್ಯ ಸದಸ್ಯರೇನು ಅರ್ಜಿಕೊಟ್ಟಿದ್ದಾರೆ, ಅವರ ಹೆಸರುಗಳನ್ನು ಹೇಳುತ್ತೇನೆಂದು ಏನು ಒಂದು ಒತ್ತಾಯ ಮಾಡುತ್ತಿದ್ದಾರೋ ಅದಕ್ಕೆ ಕಾನೂನಿನ ಪ್ರಕಾರ ಅವಕಾಶವಿಲ್ಲ. ಅವರು ಹೇಳಿದ ಹೆಸರುಗಳನ್ನು ಈ ಸಭೆಯು ಕೇಳುವುದಕ್ಕೂ ಕೂಡ ಪ್ರಾವಿಜನ್ ಇಲ್ಲ. ಅದೆಲ್ಲವೂ ಆ ಕಾಂಗ್ರೆಸ್ ಸಂಸ್ಥೆಗೂ ಮತ್ತು ಆ ಹೈ ಕಮ್ಯಾಂಡಿಗೂ ಸಂಬಂಧಪಟ್ಟಿರತಕ್ಕಂಥ ವಿಚಾರಗಳು. ಅವುಗಳೇನು ಇದ್ದರೂ ಅವರು ಈ ಸಭೆಯ ಹೊರಗಡೆ ಮಾತನಾಡಿಕೊಳ್ಳಬಹುದೇ ಹೊರತು ಅದಕ್ಕೆಲ್ಲಾ ಈ ಸಭೆಯಲ್ಲಿ ಅವಕಾಶವಿಲ್ಲ.

Mr. SPEAKER.—The Hon'ble Member has made it clear. There is no provision to that effect. I may again bring to the notice of Sri Veeranna Gowdh that according to the Rules of Procedure and also according to the provisions of the Constitution, the speaker can only take decision either by voice or by vote. Therefore, I am sorry I am unable to comply with his request.

Sri D. DEVARAJ URS (Hunsur).—If you will kindly permit me, I want to have one point clarified over this voting affair, because the Chief Minister concluded by saying that voting against would be a kind of sin. I want your ruling in the matter. ಆದುದರಿಂದ ಈಗ ಒಂದು ಮಾತು ಏನು ಬಂತು. ಎಂದರೆ—ಆ ಹೈ ಕಮ್ಯಾಂಡಿನವರ ಆಜ್ಞೆಗೆ ತಲೆಬಾಗಿ ಈ ವರದಿಯ ಬಗ್ಗೆ ಪರವಾಗಿ ಓಟ್ ಮಾಡತಕ್ಕವರು ಈ ಸಭೆಯಲ್ಲಿದ್ದರೆ ಮಾತ್ರ ಪರವಾಇಲ್ಲ. ಆದರೆ ವಿರೋಧವಾಗಿ ಓಟ್‌ಮಾಡತಕ್ಕಂಥವರು ಈ ಸಭೆಯಲ್ಲಿ ಇರಬಾರದೆಂತ ಮಾಡಿದ್ದರೆ ಚೆನ್ನಾಗಿತ್ತೇನೋ? ಆದರೆ ಆ ವಿಚಾರ ಈ ಸಭೆಗೆ ಅನ್ವಯಿಸಿದ್ದಲ್ಲ—ಕಾಂಗ್ರೆಸ್ ಪಾರ್ಟಿಗೆ ಮಾತ್ರ ಅನ್ವಯಿಸಿದ್ದು ಎಂದು . . .

Sri J. MOHAMED IMAM.—I rise to a point of order. He is entering into an argument and discussion which is already closed.

Sri D. DEVARAJ URS.—I want to know from this House and from the Chair whether I would be in proper order if I vote for or against and whether I would be committing a sin if I did not vote for it, because that point is brought in.

Mr. SPEAKER.—I want to bring to the notice of the Hon'ble Member that no sin will be committed. I will now put the Chief Minister's amendment to vote.

Sri Mulka GOVINDA REDDY.—Sri B. V. Narayana Reddy and I have moved amendments. I request those amendments may be put to vote first.

Mr. SPEAKER.—I will put the amendment moved by the Leader of the House to vote, in the first instance.

The question is:

"Having considered the recommendations of the States Reorganisation Commission relating to the formation of a Karnataka State this Assembly is of opinion that the proposed new State should comprise the following areas:

(*a*) the present State of Mysore not excluding any part of the Bellary District;

(*b*) the Districts of Bijapur, Dharwar, North Canara and Belgaum except Chandgad Taluk in Bombay State ;

(*c*) the Districts of Raichur Gulbarga and the contiguous four Taluks of Bidar District in Hyderabad State:—

(*d*) South Canara District except the portion of Kasargod Taluk lying to the South of Chandragiri river, and Kollegal Taluk of Coimbatore District in Madras State ;

(*e*) Coorg State ; and

(*f*) such other contiguous areas in which the people have expressed their desire to join the new State."

"2 This Assembly is further of opinion that in order to preserve its composite character, the new State should continue to be called 'MYSORE STATE'."

The motion was adopted.

***Sri Mulka GOVINDA REDDY.**—I demand a poll.

Sri M. MADIAH.—The Chair announced that the motion is adopted. Afterwards, a member rose and asked for division of the House. If any member is allowed afterwards, to demand a poll, then he will be questioning the decision of the Assembly as announced by the Chair.

Mr. SPEAKER.—I am sorry. It is only after the announcement of the result, any Hon'ble Member can know what the result is. Therefore, only then he can raise his objection. Now I will adopt the procedure that has been adopted previously here and also in some other Legislatures to rise up. I will ask all the Hon'ble Members.......

Sri T. MARIAPPA.—May I draw your attention to rule 158 ? "Votes shall be taken by division, if any member so desires..........."

Mr. SPEAKER.—I know the rules, but I do not want give room for any objection or any misunderstanding. According to the rules given by the previous Speaker of this Assembly, I wlll be guided by the opinion of the House and I do not like to give room for any objection. I will now call upon all those members who support this motion, to rise in their seats.

(57 *members rose*)

Those against the motion ?

(*Three members rose*)

Sri Mulka GOVINDA REDDY.—May I also request the Chair to count those members that are remaining neutral ?

Mr. SPEAKER.—The Hon'ble Member is an experienced Parliamentarian. He knows the procedure.

Sri Mulka GOVINDA REDDY.—Yes, I know it. In many Assemblies it is followed.

Mr. SPEAKER.—57 for and 3 against.

The motion was adopted.

Sri K. PUTTASWAMY.—I want to know whether the names of those persons who rose for or who rose against have been taken.

Mr SPEAKER.—Not necessary.

There are two more amendments, one by Sri Mulka Govinda Reddy and the other by Sri B. V. Narayana Reddy. Rule 143 says :

"(1) An amendment shall be relevant to, and within the scope of, the motion to which it is proposed.

(MR. SPEAKER.)

(2) An amendment shall not be moved which has merely the effect of a negative vote.

(3) An amendment on a question shall not be inconsistent with a previous decision on the same question."

The decision taken already is quite contrary to the amendments that are now sought to be put to vote. Therefore, it is not necessary to put these amendments to vote.

Sri Mulka GOVINDA REDDY.—As a protest, we are walking out.

(As 8-14 P.M. two members, namely, Sriyuts Mulka Govinda Reddy and B. V. Narayana Reddy staged a walk out).

Mr. SPEAKER.—The House will now adjourn *sine die.*

The House adjourned sine die *at Fifteeen Minutes past Eight of the Clock.*